
ರಂಗ ಸಂಪನ್ನರು

# ರಂಗ ಜಂಗಮ ಸದಾನಂದ ಸುವರ್ಣ

ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ



ಕರ್ನಾಟಕ ನಾಟಕ ಅಕಾಡೆಮಿ

ರಂಗ ಸಂಪನ್ನರು

# ರಂಗ ಜಂಗಮ
# ಸದಾನಂದ ಸುವರ್ಣ

ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦ – ೨೨೨೩ ೭೪೮೪

**Sadananda Suvarna**
A Monograph in Kannada by
**Dr. Seethalakshmi Karkikodi**
Published by **B. Manjunatha Aradha,** Registrar,
Karnataka Nataka Academy, Kannada Bhavana,
J.C. Road, Bengaluru-560002 Phone : 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧,೦೦೦ |
| ಪುಟಗಳು | : | ೨೬ + ೧೭೬ |
| ಬೆಲೆ | : | ರೂ. ೬೦/- |

**ಪ್ರಕಾಶಕರು**
**ಬಿ. ಮಂಜುನಾಥ ಆರಾಧ್ಯ,** ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ : ೦೮೦ - ೨೨೨೩೭೪೮೪

ಮುಖಪುಟ ವಿನ್ಯಾಸ :
**ಕೃಷ್ಣ ರಾಯಚೂರು**

ಮುದ್ರಣ :
**ಸುಹಾಸ್ ಗ್ರಾಫಿಕ್ಸ್**
ಬೆಂಗಳೂರು
ಮೊ. : ೯೮೪೫೩ ೫೫೫೫೦೯

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ

ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಸುಹಾಸ್ ಗ್ರಾಫಿಕ್ಸ್, ಮುರಳೀಧರವರಿಗೂ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

– ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

ಶ್ರೀ ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು,
ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

**ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ**

ಶ್ರೀ ಪಿ. ತಿಪ್ಪೇಸ್ವಾಮಿ, ಚಳ್ಳಕೆರೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರು
ಶ್ರೀ ಎಸ್.ಕೆ. ಕೊನೆಸಾಗರ, ಹುನಗುಂದ
ಶ್ರೀ ಎಂ.ಎಸ್. ಗುಣಶೀಲನ್, ಬೆಂಗಳೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ
ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ
ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ
ಶ್ರೀ ಕೆ. ಜಗುಚಂದ್ರ, ಧಾರವಾಡ
ಶ್ರೀ ಉಮೇಶ ಸಾಲಿಯಾನ, ಕಾಸರಗೋಡು
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ
ಶ್ರೀ ಎ.ಎನ್. ಅಕ್ಕಿ, ರಾಯಚೂರು
ಶ್ರೀ ಬಿ.ಎಂ. ರಾಮಚಂದ್ರ, ಮೈಸೂರು
ಶ್ರೀ ಎನ್.ಕೆ. ರಾಮಕೃಷ್ಣ, ಬೆಂಗಳೂರು
ಶ್ರೀಮತಿ ಎ. ವರಲಕ್ಷ್ಮಿ, ಬಳ್ಳಾರಿ

**ಕೋಪ್ಟ್ ಆದ ಸಹಸದಸ್ಯರು**
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಡಾ. ಶ್ರೀಪಾದ ಭಟ್, ಶಿರಸಿ
ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್:
**ಬಿ. ಮಂಜುನಾಥ ಆರಾಧ್ಯ**

ಯೋಜನಾ ಸಹಾಯಕರು:
**ಕೆ. ರೇವಣ್ಣ**

ಕಚೇರಿ ಸಿಬ್ಬಂದಿ:
**ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ**

# ಪ್ರಸ್ತಾವನೆ

ಮುಂಬಯಿಯ ಕನ್ನಡ ರಂಗಭೂಮಿಯಲ್ಲಿ ಹೊಸ ಬೆಳಕು ಹಾಯಿಸಿ ಸಂಚಲನ, ಬೆರಗು ಹುಟ್ಟಿಸಿದವರು ಪ್ರಸಿದ್ಧ ರಂಗಕರ್ಮಿ ಸದಾನಂದ ಸುವರ್ಣ ಅವರು. ಅರಿವಿನ ಅಗಾಧ ಹಸಿವು, ಹೊಸತನ್ನು ರಂಗಕ್ಕೆ ಸಮರ್ಪಿಸಬೇಕು ಅನ್ನುವ ದಾಹ ಉಳ್ಳವರು. ನಿರ್ದೇಶನಕ್ಕೆ ಅನುಪಮತೆಯನ್ನೇ ಅರಸುವ ಕಂಗಳು ಅವರದು. ಆದ್ದರಿಂದಲೇ ಮುಂಬಯಿಯ ಕನ್ನಡ ರಂಗಭೂಮಿಯನ್ನು ಮೇಲ್‌ಸ್ತರಕ್ಕೆ ತಂದು ನಿಲ್ಲಿಸುವಂತೆ ಮಾಡಿದರು. ಅಪೂರ್ವ ಒಳನೋಟ ಕಟ್ಟಿಕೊಡುವ ಸೂಕ್ಷ್ಮಪ್ರಜ್ಞೆಯೊಂದಿಗೆ ರಂಗತಂಡವನ್ನು ಶಿಸ್ತುಬದ್ಧವಾಗಿ ಬಲಿಷ್ಠಗೊಳಿಸುತ್ತ, ರಂಗಭೂಮಿಯನ್ನು ಗಂಭೀರತೆ ಹಾಗೂ ಅಷ್ಟೇ ಜವಾಬ್ದಾರಿಯೊಂದಿಗೆ ವಿಸ್ತಾರಗೊಳಿಸುತ್ತ ಬಂದವರು ಸುವರ್ಣರು.

ರಂಗಭೂಮಿಯೇ ತನ್ನ ಮೊದಲ ಪ್ರೀತಿ ಎಂದು ಅಪ್ಪಿಕೊಂಡು ಬಂದಿರುವ ಸದಾನಂದ ಸುವರ್ಣರು ರಂಗಭೂಮಿಯಲ್ಲೇ ಬದುಕು ಕಂಡವರು. ಬದುಕು–ರಂಗಭೂಮಿ ಎರಡೂ ಒಂದೇ ಸುವರ್ಣರ ಪಾಲಿಗೆ. ರಂಗಭೂಮಿ ಅಗಾಧ ಜೀವನಾನುಭವವನ್ನು ಕಟ್ಟಿಕೊಡುತ್ತದೆ, ಮನರಂಜನೆಯ ಜತೆಗೆ ಮನಸ್ಸನ್ನು ವಿಕಸಿಸುತ್ತದೆ ಎನ್ನುವುದನ್ನು ಬಲವಾಗಿ ಪ್ರತಿಪಾದಿಸುವವರು ಸುವರ್ಣರು. ದೇಹ ಹಾಗೂ ಆತ್ಮ ಎರಡೂ ರಂಗಭೂಮಿಗೆ ಒಪ್ಪಿಸಿಕೊಂಡಾಗಲೇ ರಂಗಕರ್ಮಿಗೆ ಅದಮ್ಯ ಸಂತೋಷ ಹಾಗೂ ಸಾರ್ಥಕ್ಯದ ಭಾವ ಪ್ರಾಪ್ತವಾಗುತ್ತದೆ. ರಂಗದಲ್ಲಿ ತೊಡಗಿಸಿಕೊಂಡ ರಂಗಕರ್ಮಿಗೆ ರಂಗಭೂಮಿಯಲ್ಲಿ ದೊರೆಯುವ ಸುಖವೇ ಆತ್ಯಂತಿಕ ಅನ್ನುವ ನಿಲುವಿನವರು ಸುವರ್ಣರು. ಜನರ ಮುಂದೆಯೇ ಅಭಿನಯಿಸಿ ಅವರಿಂದ ಆಕ್ಷಣಕ್ಕೆ ಪ್ರತಿಕ್ರಿಯೆ ಪಡೆಯುವ ಕಾರಣಕ್ಕೆ ಅಲ್ಲಿ ಲವಲವಿಕೆಯನ್ನು ಕಂಡುಕೊಂಡಿದ್ದಾರೆ. ರಂಗಭೂಮಿ ಹಲವು ಕಲೆಗಳ ಸಂಗಮ ಅನ್ನುವುದನ್ನು ಅನುಭವದ ನೆಲೆಗಟ್ಟಿನಿಂದಲೇ ಒಪ್ಪಿಕೊಂಡಿದ್ದಾರೆ, ಸ್ವತಃ ಬೇರೆ ಬೇರೆ ಕಲೆಗಳ ಕುರಿತು ಉತ್ಸುಕತೆಯಿಂದ ಹಾಗೂ ಕುತೂಹಲದ ಕಂಗಳಿಂದ ಅರಿತುಕೊಳ್ಳುತ್ತ ಬಂದಿದ್ದಾರೆ.

ತಮ್ಮ ಹೊಳಹುಗಳನ್ನು ಸುಂದರ ಶಿಸ್ತಿನೊಂದಿಗೆ ರಂಗಪ್ರಯೋಗಕ್ಕೆ ಒಡ್ಡುತ್ತ ಬಂದ ಸುವರ್ಣರು ರಂಗಭೂಮಿಯಲ್ಲಿ ಅನನ್ಯತೆಯನ್ನು ಪ್ರತಿಬಿಂಬಿಸಿದ್ದಾರೆ. ಅವನ್ನು ಹೊಸ ತಲೆಮಾರಿಗೆ ವರ್ಗಾಯಿಸುತ್ತ ಬಂದಿದ್ದಾರೆ. ಮುಖ್ಯವಾಗಿ ಮುಂಬಯಿ ಮಹಾ ನಗರಿಯೊಳಗೆ

ತಾನು ಕಂಡ ಬಹು ಭಾಷಾ ರಂಗ ಪ್ರಯೋಗಗಳನ್ನು, ತನ್ನನ್ನು ತಟ್ಟಿದ ನಾಟಕಗಳನ್ನು ಕನ್ನಡದ ರಂಗದಲ್ಲಿ ಪ್ರಯೋಗಿಸಬೇಕು, ಆಮೂಲಕ ಕನ್ನಡ ರಂಗಭೂಮಿಯನ್ನು ವಿಸ್ತರಿಸಿ ಬೆಳೆಸಬೇಕು ಅನ್ನುವ ಧ್ಯೇಯವನ್ನು ಅವರು ಸಾಕಾರಗೊಳಿಸುತ್ತ ಬಂದಿದ್ದಾರೆ. ಈ ಸಂದರ್ಭದಲ್ಲಿ ಅವರು ಸ್ವರಚಿತ ನಾಟಕಗಳು, ಇತರ ಕನ್ನಡ ನಾಟಕಕಾರರ ಕೃತಿಗಳು ಹಾಗೂ ಇತರ ಭಾಷೆಗಳ ಪರಿಣಾಮಕಾರಿ ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ; ರಂಗಕ್ಕೊಪ್ಪಿಸಿದ್ದಾರೆ. ಈ ಬದ್ಧತೆ, ಕಳಕಳಿ, ಪ್ರಯೋಗಪ್ರೀತಿ, ನಿಷ್ಠೆ ಎಲ್ಲವೂ ಸುವರ್ಣರನ್ನು ಅನನ್ಯರನ್ನಾಗಿಸುತ್ತದೆ.

ವೈವಿಧ್ಯಮಯ ರಂಗಭೂಮಿಯನ್ನು ಕಣ್ತುಂಬಿಸಿಕೊಳ್ಳುತ್ತ ಏಕಲವ್ಯನ ಏಕಾಗ್ರತೆಯಿಂದ ರಂಗಭೂಮಿಯ ಮಟ್ಟುಗಳನ್ನು ಅರ್ಥೈಸಿಕೊಳ್ಳುತ್ತ ತಾನೂ ನಾಟಕದಲ್ಲಿ ಅಭಿನಯಿಸುತ್ತ, ನಾಟಕಗಳನ್ನು ಬರೆಯುತ್ತ ದಿಗ್ದರ್ಶನವನ್ನೂ ಮಾಡುತ್ತ ಬಂದದ್ದು ಅವರ ವಿಶಿಷ್ಟತೆಯನ್ನು ಬೆಳಕಿಗೊಡ್ಡುತ್ತದೆ. ಸ್ವತಃ ಯುವಕ ಸುವರ್ಣರು ಉತ್ಸಾಹಿ ತರುಣರನ್ನು ಒಟ್ಟುಗೂಡಿಸಿ ತಮ್ಮ ಅನನ್ಯ ಕಲ್ಪನೆ, ಕನಸುಗಳನ್ನು, ಅಪೂರ್ವ ಒಳನೋಟಗಳನ್ನು ರಂಗಕ್ಕೊಪ್ಪಿಸಿ ಮುಂಬಯಿ ರಂಗಭೂಮಿಯನ್ನು ವಿಸ್ತರಿಸಿದ್ದು ಹೆಚ್ಚುಗಾರಿಕೆ.

ಹತ್ತು ವರ್ಷಗಳ ಕಾಲ ರಂಗಭೂಮಿಯಲ್ಲಿ ಹೊಸ ಪ್ರಯೋಗಗಳನ್ನು ನಡೆಸುತ್ತ ಬಂದ ಸುವರ್ಣರು ಬಳಿಕ ರಂಗ ತರಬೇತಿ ಶಾಲೆ, ನಾಟ್ಯ ಅಕಾಡೆಮಿ ಇವುಗಳ ವಿದ್ಯಾರ್ಥಿಯಾಗುವುದು ಅಪಾರ ಕಲಿಕೆಯ ತುಡಿತದಿಂದಲೇ. ಅಲ್ಲಿ ಕಲಿತ ಪಾಠ ಅವರ ಪ್ರಯೋಗಗಳ ವಿಕಸನಕ್ಕೆ, ವಿಸ್ತಾರಕ್ಕೆ, ಗಟ್ಟಿತನಕ್ಕೆ ಪೂರಕವಾಯಿತು. ರಂಗಾಭಿನಯ, ರಂಗ ನಿರ್ದೇಶನ, ಸಂಘಟನೆಗಳ ಅನುಭವ ಶ್ರೀಮಂತಿಕೆ ಅವರನ್ನು ಪರಿಪೂರ್ಣತೆಯತ್ತ ಕರೆದೊಯ್ದಿತು, ರಂಗಾನುಭೂತಿಯನ್ನು ದರ್ಶಿಸಿತು ಹೀಗೆ ರಂಗ ಶಾಲೆಯ ಅಗತ್ಯವನ್ನು ಕಂಡುಕೊಂಡ ಸುವರ್ಣರು ಮುಂದೆ ರಂಗ ತರಬೇತಿ ಕೇಂದ್ರ 'ರಂಗಸ್ಥಳ'ವನ್ನು ಸಂಸ್ಥಾಪಿಸಿದರು; ಮುಂಬಯಿ ಕನ್ನಡ ರಂಗಭೂಮಿಗೆ ಬಹುದೊಡ್ಡ ಕೊಡುಗೆಯಾಗಿಸಿದರು.

ವೈಚಾರಿಕ ಪ್ರಜ್ಞೆಯ ಹೃದಯಕ್ಕೆ ಸುಕುಮಾರ ಶೈಲಿಯ ಆವರಣವನ್ನು ಹೊದೆಸಿ ರಂಗಪ್ರಯೋಗಗಳನ್ನು ನಿರ್ವಹಿಸಿ ಮನರಂಜನೆ ಹಾಗೂ ಗಂಭೀರ ಪ್ರಯೋಗಗಳ ಸಮನ್ವಯತೆ ಸಾಧಿಸಿದ್ದಾರೆ ಸುವರ್ಣರು. ಮನುಷ್ಯಪರವಾದ, ಜೀವಪರವಾದ ಕಾಳಜಿಯನ್ನು ಬಿತ್ತುವ ನಾಟಕಗಳನ್ನು ಪ್ರಯೋಗಕ್ಕೆ ಆಯ್ದುಕೊಳ್ಳುವುದು ಅವರ ಶಿಸ್ತು. ಪ್ರಯೋಗಗಳು ಯಾವತ್ತೂ ಮನೋವಿಕಾಸ ಹಾಗೂ ವಿಶಾಲಹೃದಯವನ್ನು ಪ್ರೇರೇಪಿಸುವ ನಾಟಕಗಳಾಗಿ ಕೊಂಡಾಟಕ್ಕೆ ಪಾತ್ರವಾಗುತ್ತವೆ.

ಸದಾನಂದ ಸುವರ್ಣರಿಗೆ ನಾಟಕ ರಂಗ ಎನ್ನುವುದು ಒಂದು ತಪೋ ಭೂಮಿ, ಸಂಶೋಧನಾ ಕೇಂದ್ರ, ಪ್ರಯೋಗಾಲಯ. ಅವರೊಳಗಿನ ರಂಗ ಪ್ರತಿಭೆ ರಂಗಕ್ಕೆ ವಿಭಿನ್ನತೆ, ವಿಶಿಷ್ಟತೆ ಪ್ರಾಪ್ತಿಸುವ ಬಗ್ಗೆ ಧ್ಯಾನಾಸಕ್ತವಾಗಿರುತ್ತದೆ; ಸದಾ ಮೌಲಿಕವಾದ, ವಿಚಾರ ಪ್ರಚೋದಕವಾದ ಕೊಡುಗೆಗಳನ್ನು ಕೊಡುವುದರ ಕಡೆಗೇ ತುಡಿಯುತ್ತಿರುತ್ತದೆ. ರಂಗ

ಭೂಮಿಗೆ ತನ್ನಿಂದ ಎಷ್ಟೆಲ್ಲ ಹೊಸತು ಸಾಧ್ಯವೋ ಅಷ್ಟನ್ನೂ ಕೊಡುವುದೇ ಎಂಬ ಛಲಗಾರಿಕೆಯ ಸುವರ್ಣರು ತಾನು ಕೈಯಾಡಿಸಿದಲ್ಲೆಲ್ಲ ಸುವರ್ಣ ಲೋಕವನ್ನು ಸೃಷ್ಟಿಸಿದವರು.

ಮುಂಬಯಿ ರಂಗಭೂಮಿಯ ಚಲನಶೀಲತೆಯ ಹಿನ್ನೆಲೆಯಲ್ಲಿ ಸದಾನಂದ ಸುವರ್ಣ ಅವರ ಆರು ದಶಕಗಳ ಪ್ರಯೋಗಗಳೂ ಅಧ್ಯಯನಯೋಗ್ಯವಾದವುಗಳು. ಇದೀಗ ದಶಕದಿಂದ ಮಂಗಳೂರಿನ ರಂಗಭೂಮಿಯಲ್ಲಿ ಉಂಟು ಮಾಡಿದ ಸಂಚಲನ ಹಾಗೂ ಅಲ್ಲಿ ಹುಟ್ಟು ಹಾಕಿದ ಸುವರ್ಣ ಪಥ ರಂಗ ಇತಿಹಾಸದಲ್ಲಿ ಹೊಸಮೈಲಿಗಲ್ಲು. ಕರಾವಳಿಯ ರಂಗ ಚಟುವಟಿಕೆಯ ಹಿನ್ನಲೆಯಲ್ಲಿ ಸುವರ್ಣರ ರಂಗಕ್ರಿಯೆಯನ್ನು ಗಮನಿಸಿದರೆ ಅಲ್ಲಿ ಸೃಜನಶೀಲತೆ, ರಂಗಾನುಭೂತಿಯನ್ನು ಹುಟ್ಟುಹಾಕುವ, ಸದಭಿರುಚಿಯನ್ನು ಬೆಳೆಯಿಸುವ ಧೋರಣೆ ಅಡಗಿದ್ದು ಸುಸ್ಪಷ್ಟವಾಗುತ್ತದೆ. ಒಟ್ಟಾರೆ ಒಂದು ನಾಟಕ ಮಾಡಿದರೆ ಆಯಿತು, ಮುಗಿಯಿತು ಅನ್ನುವ ಲಘು ಧೋರಣೆಯವರಲ್ಲದ ಸುವರ್ಣರು ಅಚ್ಚುಕಟ್ಟುತನ ಹಾಗೂ ಪರಿಣಾಮಕಾರಿ ಪ್ರಸ್ತುತಿಗೇ ಬದ್ಧರಾಗಿರುವುದು ಹೊಸ ಪೀಳಿಗೆಗೆ ಮಾದರಿಯಾಗಿದೆ. ಸುವರ್ಣರ ರಂಗ ಪ್ರೀತಿ ಮುಂಬಯಿ ಹಾಗೂ ಒಳನಾಡಿನ ಕನ್ನಡ, ತುಳು ರಂಗಭೂಮಿಯನ್ನು ಚುರುಕುಗೊಳಿಸಿದೆ. ಅದಕ್ಕೆ ಚಲನಶೀಲತೆಯನ್ನೂ ತಂದುಕೊಟ್ಟಿದೆ. ಸುವರ್ಣರ ರಂಗಪ್ರೀತಿ, ಕಾಳಜಿ, ಪರಿಶ್ರಮದ ಚರಿತ್ರೆ ಸುದೀರ್ಘವಾದದ್ದು.

ಖ್ಯಾತ ವಿದ್ವಾಂಸ ಡಾ. ಜಿ.ಎನ್.ಉಪಾಧ್ಯ ಅವರೆನ್ನುವಂತೆ 'ಸದಾನಂದ ಸುವರ್ಣರು ಪರಿಪೂರ್ಣತೆಗಾಗಿ ಸದಾ ಹಂಬಲಿಸುತ್ತಾ ಬಂದವರು. ರಂಗಕ್ಕೆ ಹೊಸ ಬೆಳಕು ನೀಡಿದ ಅವರ ಸಾಧನೆಗಳು ಸೃಜನಶೀಲ ವ್ಯಕ್ತಿಗಳಿಗೆ ಒಂದು ಸ್ಫೂರ್ತಿ. ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಬದುಕಿಗೆ ಅರ್ಥಪೂರ್ಣ ಚಾಲನೆ ನೀಡಿದ ಸುವರ್ಣರು ವಿನಯ ಸಂಪನ್ನರು.' (ಪುಟ-20, ಕನ್ನಡ ಮನಸ್ಸುಗಳೊಂದಿಗೆ, ಸಂ.ಡಾ.ಜಿ.ಎನ್.ಉಪಾಧ್ಯ ಪ್ರ:ಸುವರ್ಣಗಿರಿ ಪ್ರಕಾಶನ, ಮಂಗಳೂರು).

ಸುವರ್ಣರು ತನ್ನ ಬಾಲ್ಯ ವಿಕಾಸಗೊಳ್ಳುತ್ತ ನಡೆದಂತೆ ನಾಟಕಗಳ ಕುರಿತಾದ ಪ್ರೀತಿಯನ್ನೂ ಬೆಳೆಸಿಕೊಂಡರು. ಈ ಪ್ರೀತಿ ಹಾಗೂ ರಂಗಭೂಮಿ ಸಾಧ್ಯತೆಗಳನ್ನೆಲ್ಲ ಸಾಕ್ಷಾತ್ಕಾರಗೊಳಿಸುವ ಅವರ ಪಣ ಮುಂದೆ ಅವರನ್ನು ಮಹಾ ನಗರದ ಶ್ರೇಷ್ಠ ನಟ, ನಿರ್ದೇಶಕರ ಸಾಲಿನಲ್ಲಿರಿಸಿತು. ಶ್ರದ್ಧಾಪೂರ್ವಕ ಅಭ್ಯಾಸ, ನಿಷ್ಠೆಯ ದುಡಿಮೆ, ಕಲಿಕೆಯಲ್ಲಿನ ತನ್ಮಯತೆ, ನವೀನತೆಗೆ ಮೈ ಬಿಚ್ಚಿಕೊಳ್ಳುವ ಮಡಿರಹಿತತೆ, ರಂಗ ಕೆಲಸಗಳಲ್ಲಿ ಮೇಲು ಕೀಳಿನ ಶ್ರೇಣಿಯನ್ನು ಪರಿಗಣಿಸದ ಸಮಾನತೆ ಇವೆಲ್ಲ ಸುವರ್ಣರ ರಂಗ ಸಾಮರ್ಥ್ಯಕ್ಕೆ ಪುಟಗೊಡಲು ಸಹಕಾರಿಯಾದವು' (ಪು-9, ಅಕ್ಷಯ, ಡಿಸೆಂಬರ್ 1991) ಪ್ರಸಿದ್ಧ ವಿಜ್ಞಾನಿ, ಸಾಹಿತಿ ಡಾ. ವ್ಯಾಸರಾವ್ ನಿಂಜೂರರಿಂದಾದ ಸುವರ್ಣ ಸ್ತುತಿ ಇದು.

'ಮುಂಬಯಿ ಮಾತ್ರವಲ್ಲದೆ ಕನ್ನಡ ರಂಗಭೂಮಿಯ ಮಹತ್ವದ ನಿರ್ದೇಶಕರು ಸದಾನಂದ ಸುವರ್ಣ. ಮುಂಬಯಿ ಕನ್ನಡ ರಂಗಭೂಮಿಯನ್ನು ಕಟ್ಟಿ ಬೆಳೆಸಿ ರಂಗಭೂಮಿಗೆ

ತನ್ನ ಬದುಕನ್ನೇ ಅರ್ಪಿಸಿಕೊಂಡವರು, ರಂಗಭೂಮಿಯನ್ನೇ ಉಸಿರಾಡುತ್ತಿರುವವರು. ಕಳೆದ ಆರು ದಶಕಗಳಿಂದಲೂ ನಿರಂತರ ರಂಗ ಚಟುವಟಿಕೆಯಲ್ಲಿ ನಿರತರಾಗಿರುವ ಮುಂಬಯಿಯ ಏಕೈಕ ರಂಗಕರ್ಮಿ, ಕನ್ನಡ ರಂಗಭೂಮಿಯ ಸೃಜನಶೀಲ ನಿರ್ದೇಶಕ.., (ಪುಟ–43 ಮುಂಬಯಿ ಕನ್ನಡ ರಂಗಭೂಮಿ ಮತ್ತು ಮರಾಠಿ ರಂಗಭೂಮಿ: ತೌಲನಿಕ ಅಧ್ಯಯನ– ಸಂಶೋಧನ ಪ್ರಬಂಧದ ಹಸ್ತಪ್ರತಿ) ಎಂದು ಸುವರ್ಣರ ರಂಗಪ್ರೀತಿಗೆ, ಅನನ್ಯತೆಗೆ ಖ್ಯಾತ ರಂಗ ತಜ್ಞ ಡಾ. ಭರತ್‌ಕುಮಾರ್ ಪೊಲಿಪು ಅಭಿಮಾನದಿಂದ ಶಹಬ್ಬಾಸ್ ಹೇಳುತ್ತಾರೆ.

'ಮುಂಬಯಿಯ ಕನ್ನಡ ಕಲಾರಂಗದಲ್ಲಿ ಸದಾನಂದ ಸುವರ್ಣರದ್ದು ದೊಡ್ಡ ಹೆಸರು. ನಟನಾಗಿ, ನಿರ್ದೇಶಕರಾಗಿ, ನಾಟಕಕಾರರಾಗಿ ರಂಗಭೂಮಿಯಲ್ಲಿ ಅವರದು ನಾಲ್ಕೈದು ದಶಕಗಳ ದುಡಿತ. ಪ್ರತಿ ವರ್ಷ ಒಂದಲ್ಲ ಒಂದು ಒಳ್ಳೆಯ ನಾಟಕ ಕೊಡುತ್ತ ಬಂದಿದ್ದಾರೆ. ಭಾವುಕ ನಟನೆಗೆ ಪ್ರಸಿದ್ಧರಾದ ಸದಾನಂದ ಸುವರ್ಣರು ನೂರಾರು ನಾಟಕಗಳಲ್ಲಿ ನಟಿಸಿದ್ದಾರೆ, ನೂರಾರು ನಾಟಕಗಳಿಗೆ ಯಶಸ್ವೀ ಸ್ಟೇಜ್ ನಿರ್ಮಿಸಿದ್ದಾರೆ...'(ಅಕ್ಷಯ, 1983) ಎಂದು ಖ್ಯಾತ ಪತ್ರಕರ್ತ ಡಾ.ಈಶ್ವರ ಅಲೆವೂರು ಅವರು ಸುವರ್ಣರನ್ನು ಬಿಚ್ಚಿಡುತ್ತಾರೆ.

ಪ್ರೇಕ್ಷಕರನ್ನು ಹಿಡಿದು ಕೂರಿಸಿ ನೋಡಿಸುವ ತಾಕತ್ತಿನ ಬಿಗಿ ಪ್ರಯೋಗಗಳ ಕಡೆಗೇ ಸುವರ್ಣರ ಲಕ್ಷ್ಯ. ಆರೂವರೆ ದಶಕಗಳಿಂದ ಅವರ ಪ್ರಯೋಗಶೀಲತೆ ಪರಿಣಾಮಕಾರಿಯಾಗಿ ಹರಿದುಬಂದಿದೆ; ಒಳಗಣ್ಣು ಅನೇಕ ಸೂಕ್ಷ್ಮಸಂಗತಿಗಳನ್ನು ಬೆಳಕಿಗೊಡ್ಡುತ್ತ ಬಂದಿದೆ. ಸಮಾಜಮುಖಿಯಾದ ವಿಷಯಗಳನ್ನು ಅತ್ಯಂತ ಪ್ರಖರವಾಗಿ ತಲುಪಿಸುವ ನಿಟ್ಟಿನಲ್ಲಿ ಸುವರ್ಣರು ದುಡಿಯುತ್ತಾರೆ. ವಸ್ತು, ತಂತ್ರ, ಅಭಿನಯ, ಸಂವಹನ ಎಲ್ಲವೂ ಉತ್ಕೃಷ್ಟ ರಂಗ ಪ್ರಯೋಗದ ಪ್ರಮುಖ ಅಂಗಗಳೆನ್ನುವುದನ್ನು ಸಮರ್ಥವಾಗಿ ಪ್ರತಿಪಾದಿಸುವ ಸುವರ್ಣರು ಜನಪ್ರಿಯತೆಗಾಗಿ ಅಗ್ಗದ ತಂತ್ರಗಳಿಗೆ ಯಾವತ್ತೂ ಮಾರಿಕೊಂಡವರಲ್ಲ. ಅವರು ರಂಗಭೂಮಿಯನ್ನು ಬದುಕಿನ ನೆಲೆಯಿಂದಲೂ ನೋಡಿದ್ದಾರೆ, ಸೈದ್ಧಾಂತಿಕ ನೆಲೆಯಿಂದಲೂ ಕಂಡಿದ್ದಾರೆ. ಸಮಾಜ ಮತ್ತು ರಂಗಭೂಮಿ ನೆಲೆಯಿಂದಲೂ ವಿಶ್ಲೇಷಿಸಿಕೊಂಡೇ ಪ್ರಯೋಗಗಳಿಗೆ ಒಪ್ಪಿಸಿಕೊಂಡಿದ್ದಾರೆ. ಸೈದ್ಧಾಂತಿಕತೆಯ ಚಲನಶೀಲತೆಯನ್ನೂ, ಸಮಾಜದ ಪರಿವರ್ತನೆಯ ಗತಿಯನ್ನೂ ಸೂಕ್ಷ್ಮವಾಗಿ ಗಮನಿಸುತ್ತಲೇ ಹೊಸತನನ್ನು ಸಾಧಿಸಿದ್ದಾರೆ.

ನಾಟಕದೊಳಗಿನ ವಸ್ತು ಆಶಯಗಳನ್ನು ಆಯಾ ಕಾಲ ಘಟ್ಟದ ಸಾಮಾಜಿಕ ಸ್ಥಿತಿಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನೋಡಿದರೂ ಅವು ಸಾರ್ವಕಾಲಿಕ ಮೌಲ್ಯವುಳ್ಳದ್ದಾಗಿರುವುದನ್ನು ಮನಗಾಣಬಹುದಾಗಿದೆ. ರಂಗಭೂಮಿಯ ಎಲ್ಲ ಹೊಸ ಆವಿಷ್ಕಾರಗಳಿಗೂ ಸಾಕ್ಷಿಯಾದ ಸುವರ್ಣರು ಆ ಎಲ್ಲ ಸಂದರ್ಭಗಳಲ್ಲಿ ತಮ್ಮನ್ನು ತಾವು ಪರಿಷ್ಕರಿಸಿಕೊಳ್ಳುತ್ತ, ಒಳಗೊಳ್ಳುತ್ತ ಸಾಗಿ ಬಂದಿದ್ದಾರೆ. ವಾಸ್ತವ ರಂಗಭೂಮಿಯ ಸಿದ್ಧಾಂತಗಳನ್ನೇ ಅಂತರ್ಗತಮಾಡಿಕೊಂಡಿದ್ದ ಸುವರ್ಣರ ಸ್ವೋಪಜ್ಞತೆ ಮುಂಬಯಿಯ

ಕನ್ನಡ ರಂಗಭೂಮಿಯಲ್ಲಿ ಪ್ರಯೋಗಕ್ಕೊಡ್ಡಿಕೊಳ್ಳುತ್ತ ಒಟ್ಟೂ ಕನ್ನಡ ರಂಗಭೂಮಿಗೆ ಅಪೂರ್ವ ಕೊಡುಗೆಯಾಗಿ ಬಂದಿದೆ.

'ಸದಾನಂದ ಸುವರ್ಣರ ರಂಗ ದಾರಿ ಹಳೆಯದಿರಬಹುದು. ಆದರೆ ಅದು ತನ್ನ ಅಪಾರಶಕ್ತಿ, ರಂಜನೆ, ಚುರುಕುತನ, ಯಶಸ್ಸುಗಳಿಂದ ಇಂದಿನ ನಮ್ಮ ನವ್ಯ ನಾಟಕಗಳ ಕ್ಲೀಷೆಯ ಬಗ್ಗೆ ಯೋಚಿಸುವಂತೆ ಮಾಡಬಲ್ಲುದು. ಹಾಗಾಗಿ ಎಂಬತ್ತರ ವಯಸ್ಸಿನಲ್ಲೂ ಸುವರ್ಣರು ಫ್ರೆಶ್ ಅನ್ನಿಸಿಬಿಡುವುದು! ಕತೆ ಹೇಗಿದೆಯೆಂದರೆ ನಮಗೀಗ ಗೊತ್ತಿರುವುದು ಕನ್ನಡದಲ್ಲಿ ಎರಡೇ ನಾಟಕ ಕ್ರಮ. ಒಂದು ಪುರಾತನ ಕಂಪನಿ ನಾಟಕ ದಾರಿ. ಪಳೆಯುಳಿಕೆಯಂತೆ ಅದು ಈಗಲೂ ಇದೆ. ಇನ್ನೊಂದು ಎನ್‌ಎಸ್‌ಡಿ –ನೀನಾಸಂ ಕ್ರಮ. ಇದರ ಮಧ್ಯೆ ಇನ್ನೊಂದು ಗಂಭೀರ ರಂಗ ಪದ್ಧತಿ ಇತ್ತು. ಅದು ರಾಷ್ಟ್ರೀಯ ನಾಟಕ ಶಾಲೆ ಹುಟ್ಟುವ ಮೊದಲು ಕನ್ನಡದಲ್ಲಿ ಶ್ರೀರಂಗ, ಕೈಲಾಸಂರಂಥವರಿಂದ, ಬಂಗಾಳದಲ್ಲಿ ಶಂಭುಮಿತ್ರ–ಉತ್ಪಲ್‌ದತ್‌ರಂಥವರಿಂದ ಆಗಿತ್ತು. ಮರಾಠಿ, ಗುಜರಾತಿ, ಮಲೆಯಾಳಗಳೂ ಸೇರಿ ಅರಬೀ ಸಮುದ್ರದುದ್ದಕ್ಕೆ ಇತ್ತಲ್ಲಾ–ಅದು? ನಾಟಕವೆಂಬುದು ಮನೋವಿಕಾಸ, ಸಮಾಜ ಶಿಕ್ಷಣವೆಂದು ನಂಬಿದವರೇ ಇವರೆಲ್ಲ. ಕಂಪನಿ ನಾಟಕಗಳ ದಾರಿ ಇವರದ್ದಲ್ಲ. ಸುವರ್ಣರು ಇಲ್ಲಿ ನಿಲ್ಲುತ್ತಾರೆ'(ಪ್ರಜಾವಾಣಿ, ಡಿ.18, 2010) ಎಂದು ಸುವರ್ಣರ ಅನನ್ಯತೆಯನ್ನು ಸ್ಥಾನವನ್ನು ಧೋರಣೆಯನ್ನು ಗೌರವದಿಂದ ಸುಸ್ಪಷ್ಟವಾಗಿಸುವವರು ಮಂಗಳೂರಿನ ಮಹತ್ತ್ವದ ರಂಗವಿಮರ್ಶಕ, ಉಪನ್ಯಾಸಕ ಡಾ. ಮಹಾಲಿಂಗ ಅವರು.

ಮುಖ್ಯವಾಗಿ ಚಲನಶೀಲರಾಗಿರುವ ಸುವರ್ಣರು ಆಯಾ ಕಾಲದ ಹೊಸತನಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ, ಪರಿಣಾಮಕಾರಿ ಪ್ರಯೋಗವಾಗಿಸುವ ನಿಟ್ಟಿನಲ್ಲಿ ಸತತ ತೆರೆದುಕೊಂಡವರು.

'ಮುಂಬಯಿ ಕೋಟೆ ಪ್ರದೇಶದ ಮರಾಠಿ ಲೇನ್‌ನಲ್ಲಿ ಕಟ್ಟಿಗೆಯ ಪಾವಟಿಗೆಯನ್ನೇರಿದರೆ ಮೂರನೇ ಮಜಲಿನಲ್ಲಿ ಸಿಗುವ ಸುವರ್ಣರ ಆಫೀಸು ಹೊಸತಿಗಾಗಿ ತುಡಿಯುವ ಕನ್ನಡ ಕಲಾ ಪ್ರೇಮಿಗಳ ಚಾವಡಿಯಾಗಿತ್ತು. ಬಿ.ಎ.ಆರ್.ಸಿಯಲ್ಲಿ ಅಣು ವಿಜ್ಞಾನಿಯಾಗಿದ್ದ ರಾಮಚಂದ್ರ ರಾವ್, ಆಕಾಶವಾಣಿಯಲ್ಲಿ ನಿರೂಪಕಿಯಾಗಿದ್ದ ಕುಂದಾ ರೇಗೆ, ಕೋಟಿ ಚನ್ನಯದ ವಾಮನ್ ಇವರೆಲ್ಲ ತಮ್ಮ ಕೆಲಸ ಮುಗಿಸಿದ ನಂತರ ರೈಲುಗಳನ್ನು, ಬಸ್ಸುಗಳನ್ನು ಬದಲಿಸಿ ಅದೇ ಕಟ್ಟಡದ ತಳ ಮಜಲಿನ, ಕೋಟ್ಯಾನ್ ಅವರ 'ವಿದ್ಯಾನಿಧಿ ಬುಕ್ ಡಿಪೋ'ದಲ್ಲಿ ಕನ್ನಡ ಪತ್ರಿಕೆ, ಪುಸ್ತಕ ತಗೊಂಡು ಹರಟೆ ಹೊಡೆದು ಈ ಅಡ್ಡಾಕ್ಕೆ ನಾಟಕದ ತಾಲೀಮಿಗೆ ಅಥವಾ ಯಾವುದಾದರೂ ಮುಂಬರುವ ನಾಟಕೋತ್ಸವದ ರೂಪುರೇಷೆಯ ಚರ್ಚೆಗೆ ಬರುತ್ತಿದ್ದರು. ಸದಾನಂದ ಸುವರ್ಣ ಆಗ ಅಪ್ಪಟ ಸಾಹಿತ್ಯ, ನಾಟಕ ಪ್ರೇಮಿ' (ಪು.88, ರೂಪತಾರಾ, ಫೆ.2011 ಸುವರ್ಣರಿಗೆ ಎಂಬತ್ತು ತುಂಬಿದ ಸಂಭ್ರಮಕ್ಕೆ ಬರೆದ ಲೇಖನ) ಎಂದು ನಿತ್ಯ ನೂತನ ಕೊಡುಗೆಯ

ಕನಸು ಹೊತ್ತುಕೊಂಡಿರುವ ಸುವರ್ಣ ಅವರನ್ನು ಪ್ರಸಿದ್ಧ ಸಾಹಿತಿ, ಸಾಧಕರಾದ ಜಯಂತ ಕಾಯ್ಕಿಣಿ ಬೆಳಕಿಗೊಡ್ಡುತ್ತಾರೆ.

ಹಿರಿಯ ಪತ್ರಕರ್ತ, 'ವಿಜಯ ಕರ್ನಾಟಕ' ಮಂಗಳೂರಿನ ಸ್ಥಾನೀಯ ಸಂಪಾದಕ ಯು.ಕೆ.ಕುಮಾರನಾಥ್, ಮುಂಬಯಿಯ 'ಕರ್ನಾಟಕ ಮಲ್ಲ'ದಲ್ಲಿ ದುಡಿಯುತ್ತಿದ್ದ ಸಂದರ್ಭ ಸುವರ್ಣರ ರಂಗ ಚಟುವಟಿಕೆಗಳನ್ನುಹತ್ತಿರದಿಂದ ನೋಡಿದವರು. ಸದಾನಂದರ ಪ್ರಯೋಗಶೀಲತೆಗೆ ಅವರು ಕನ್ನಡಿ ಹಿಡಿಯುವುದು ಹೀಗೆ: 'ಮುಂಬಯಿ ಕನ್ನಡ ರಂಗಭೂಮಿಗೆ ಅಸ್ತಿಭಾರ ಹಾಕಿದವರಲ್ಲಿ ಪ್ರಮುಖವಾಗಿ ನಿಲ್ಲುವ ಹೆಸರು ಸದಾನಂದ ಸುವರ್ಣರದು. ಮುಂಬಯಿ ಕನ್ನಡ ರಂಗಭೂಮಿಗೆ ಎಂತಹ ನಾಟಕಗಳು ಬೇಕು ಎಂಬುದನ್ನು ಮನಗಂಡು ಸ್ವತಃ ನಾಟಕ ರಚನೆಯಲ್ಲೇ ತೊಡಗಿದರು. ಇಲ್ಲಿನ ಸಮಕಾಲೀನ ಹಿಂದಿ, ಮರಾಠಿ ಮತ್ತು ಗುಜರಾತಿ ರಂಗಭೂಮಿಗೆ ಸರಿಸಾಟಿಯಾಗಿ ನಿಲ್ಲಬಲ್ಲಂತಹ ಪ್ರದರ್ಶನ ನೀಡಿದವರು. ರಂಗಭೂಮಿ ಕೇವಲ ಜನಪ್ರಿಯ ಮಾಧ್ಯಮ ಮಾತ್ರವಾಗಿರದೆ ಅದು ಸಮಾಜಮುಖಿಯಾಗಿರಬೇಕು ಎಂಬ ಚಿಂತನೆಯ ಸುವರ್ಣ ತಮ್ಮ ನಾಟಕ ಕೃತಿಗಳಲ್ಲೂ ಅದನ್ನೇ ಸಾದ್ರಶ್ಯಗೊಳಿಸಿದವರು. ಸದಾನಂದ ಸುವರ್ಣ ಓರ್ವ ಸಮರ್ಥ ನಿರ್ದೇಶಕರಾಗಿ ಶಿಸ್ತುಬದ್ಧವಾದ ತಾಂತ್ರಿಕತೆಯಲ್ಲಿ ಶ್ರೀಮಂತವಾದ ರಂಗಕೃತಿಗಳನ್ನು ನೀಡಿದವರು. ಯುವ ರಂಗಕಲಾವಿದರನ್ನು ತರಬೇತುಗೊಳಿಸಿ ಅವರ ನಟನಾ ಕೌಶಲವನ್ನು ವ್ಯಾಪಕವಾಗಿ ದುಡಿಸಿಕೊಂಡವರು ಯಾವುದೇ ಜಾಳುಗಳಿಲ್ಲದ, ಕ್ಲೀಷೆಗಳಿಲ್ಲದ ಪರಿಶುದ್ಧ ಪ್ರದರ್ಶನ ಅವರ ನಿರ್ದೇಶನದ ವೈಶಿಷ್ಟ್ಯ.'

ವಾಸ್ತವವಾದಿ ಸುವರ್ಣರು ವಾಸ್ತವವನ್ನು ಮಾತ್ರವೇ ದರ್ಶಿಸುವವರು. ರಂಗ ಪ್ರಯೋಗ, ಸಿನಿಮಾ, ಧಾರಾವಾಹಿ ಲೋಕದೊಳಗೆ ಇಣುಕಿದರೂ ಅವರು ಕಾಣಿಸಿಕೊಳ್ಳುವುದು ಸತ್ಯದ ಬೆಳಕನ್ನು ದರ್ಶಿಸುವ ಮಹಾ ಬೆಳಕಾಗಿ. ಗಮನಾರ್ಹ ಪತ್ರಕರ್ತ, 'ವಿಜಯ ಕರ್ನಾಟಕ'ದ ಕಿರಿಯ ಸಹಾಯಕ ಸಂಪಾದಕ ಎ. ಕೃಷ್ಣ ಭಟ್ ಅವರೂ ಸದಾನಂದ ಸುವರ್ಣರು ಬಗೆಯುವ ಸತ್ಯವನ್ನು ಹೀಗೆ ವಿಶ್ಲೇಷಿಸುತ್ತಾರೆ, ಸುವರ್ಣರ ನಾಟಕಗಳನ್ನು ನೋಡುವುದಕ್ಕೆ ಸಜ್ಜುಗೊಳಿಸುತ್ತಾರೆ: 'ಸಮಾಜಮುಖಿ ಚಿಂತನೆಯ, ವಾಸ್ತವವಾದಿ ಸುವರ್ಣರು ಸತ್ಯವನ್ನು ಬಗೆಯುವ ಆಸೆ ಹೊತ್ತವರು ಎನ್ನುವುದು ಅವರ ಕೊಡುಗೆಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಅವರು ನಿರ್ದೇಶಿಸಿದ ರಂಗಕೃತಿಗಳು, ವಿಶೇಷವಾಗಿ ಗುಡ್ಡೆದ ಭೂತ, ಈಚೆಗಿನ ಕೋರ್ಟ್‌ಮಾರ್ಷಲ್, ಮಳೆನಿಲ್ಲುವವರೆಗೆ ಪ್ರಯೋಗಗಳು ಕೂಡ ಸತ್ಯವನ್ನು ಬಗೆಯುವ ವಸ್ತುವನ್ನು ಹೊಂದಿದೆ. ಸುವರ್ಣರು ಹುಡುಕಿ ಹೋಗಿ ಇದನ್ನೇ ಆರಿಸಿಕೊಳ್ಳುತ್ತಾರಾ? ಅವೇ ಬಂದು ತೊಡರಿಕೊಳ್ಳುತ್ತವಾ? ಅಂತೂ ಎಲ್ಲದರಲ್ಲೂ ಸುವರ್ಣ ಅವರ ಚಿಂತನೆಗಳೇ ಕಾಣಿಸುತ್ತವೆ. ಸುವರ್ಣರೇ ಕಾಣಿಸುತ್ತಾರೆ.'

ಒಟ್ಟಿನಲ್ಲಿ ಹೆಸರಿಗೆ ತಕ್ಕ ಹಾಗೆ ಸುವರ್ಣ ಕೊಡುಗೆಗಳನ್ನು ನೀಡುತ್ತ, ಸದಾ ಚಿಂತನೆಗೆ ಹಚ್ಚುತ್ತ ಬಂದಿರುವ ಸುವರ್ಣರು ಹಿರಿಯ ಪತ್ರಕರ್ತ ಲೋಕ ಸಮೀಕ್ಷಕರಾದ ಈಶ್ವರ

ದೈತೋಟ ಅವರೆನ್ನುವಂತೆ 'ಮುಂಬಯಿ ವಲಸಿಗ, ದಕ್ಷಿಣ ಕನ್ನಡಿಗ ಸದಾನಂದ ಸುವರ್ಣ ಎಂದರೆ ಕನ್ನಡ ಮತ್ತು ತುಳು ರಂಗಭೂಮಿ ಹಾಗೂ ಕಲಾ ಚಟುವಟಿಕೆಯಲ್ಲೊಂದು ಮೈಲುಗಲ್ಲಾಗಬಹುದಾದ ಹೆಸರು'.

ಹೀಗೆ ಪ್ರಯೋಗಶೀಲತೆಯ ಮೇರುವಾಗಿ, ನಟ, ನಿರ್ದೇಶಕ, ಗಾಯಕ, ನಿರ್ಮಾಪಕ ಎಲ್ಲವುಗಳ ಮೊತ್ತವಾಗಿ ಮೆರೆದ, ಮುಂಬಯಿ ಕನ್ನಡ ರಂಗಭೂಮಿಗೊಂದು ಹೊಸ ಕಳೆ ತಂದುಕೊಡುತ್ತ ಇಡೀ ಕನ್ನಡ ರಂಗಭೂಮಿಗೇ ಗೌರವವಾದ ರಂಗ ತಪಸ್ವಿ ಸದಾನಂದ ಸುವರ್ಣ ಅವರ ಬದುಕು ಹಾಗೂ ರಂಗಭೂಮಿಯಲ್ಲಿನ ಸಾಧನೆ, ಚಿಂತನೆಯ ಮಜಲುಗಳನ್ನು 7 ಅಧ್ಯಾಯಗಳಲ್ಲಿ ಅಕ್ಷರವಾಗಿಸುವುದು ಇಲ್ಲಿನ ಉದ್ದೇಶವಾಗಿದೆ.

## ಬಾಲ್ಯ

ಸದಾನಂದ ಸುವರ್ಣರು ಜನಿಸಿದ್ದು 1931ರ ಡಿ.24ರಂದು ರಾತ್ರಿ 11.30ಕ್ಕೆ ಮೂಲ್ಕಿಯ ಅಜ್ಜನ ಮನೆಯಲ್ಲಿ. ಉಡುಪಿ ಜಿಲ್ಲೆಯ ನಂದಿಕೂರಿನ ರುಕ್ಕ ಟಿ. ಕೋಟ್ಯಾನ್ ಹಾಗೂ ಪೂವಮ್ಮ ದಂಪತಿಯ ಮೊಗದಲ್ಲಿ ಮೊದಲ ಮಗುವಿನ ಆಗಮನದಿಂದ ಸಂತೃಪ್ತ ಭಾವ. ಈ ಸಂಭ್ರಮಕ್ಕೆ ಜಗತ್ತಿನ ಕ್ರಿಸ್ಮಸ್ ಆಚರಣೆಯ ಹರ್ಷವೂ ಜತೆಗೂಡುತ್ತದೆ. ಸದಾ ಆನಂದವನ್ನು ಅನುಭವಿಸಲಿ, ಮತ್ತು ಹಂಚಲಿ ಅನ್ನುವ ಸದಾಶಯದೊಂದಿಗೆ ಮಗುವಿಗೆ ಸದಾನಂದ ಎಂದು ನಾಮಕರಣ ಮಾಡಲಾಯಿತು. ಸದಾನಂದ ಜನಿಸಿದ ಆರೇಳು ವರ್ಷಗಳ ಬಳಿಕ ಜನಿಸಿದವರು ಯಶವಂತ್. ಇಬ್ಬರೂ ಮುಂಬಯಿಲ್ಲೇ ಬದುಕು ಕಟ್ಟಿಕೊಂಡವರು. ನಿವೃತ್ತಿಯ ಬಳಿಕ ಸೋದರ ಯಶವಂತ ದಂಪತಿ ಮಂಗಳೂರಿನಲ್ಲೇ ನೆಲೆಸಿದ್ದಾರೆ. ಸುವರ್ಣರೂ ಇತ್ತೀಚೆಗೆ ಮಂಗಳೂರಿಗೆ ಬಂದು ನೆಲೆಸಿದ್ದಾರೆ. ಕರ್ಮಭೂಮಿ ಮುಂಬಯಿಯ ಸಿಹಿ ನೆನಪುಗಳನ್ನು ಮೆಲುಕು ಹಾಕುತ್ತ ಇನ್ನೂ ಏನೇನೋ ಸಾಧಿಸುವುದರ ಬಗ್ಗೆ ಧ್ಯಾನಿಸುತ್ತ, ಕೆಲವಷ್ಟನ್ನು ಆಗುಗೊಳಿಸುತ್ತ ಮುಂದುವರಿದಿದ್ದಾರೆ.

ಅಪ್ಪ ಮುಂಬಯಿಯ ಬ್ಯಾಂಕ್ ಆಫ್ ಬರೋಡಾದಲ್ಲಿ ಉದ್ಯೋಗಿಯಾಗಿದ್ದರಿಂದ ಅಮ್ಮ ಮುಂಬಯಿಯಲ್ಲಿಯೇ ಇದ್ದರು. ವಿದ್ಯಾಭ್ಯಾಸಕ್ಕಾಗಿ ಮಗ ಸದಾನಂದನನ್ನು ಮೂಲ್ಕಿಯ ಅಜ್ಜನ ಮನೆಯಲ್ಲೇ ಇರಿಸಿದ್ದರು. ಸೋದರ ಮಾವ ಅಣ್ಣು ಮಾಸ್ತರ್ ಮೂಲ್ಕಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಕವನ ಸಂಕಲನವೊಂದನ್ನು ಪ್ರಕಟಿಸಿದ್ದರು. ಅವರಲ್ಲಿದ್ದ ಪುಸ್ತಕ ಸಂಗ್ರಹವೂ ಸುವರ್ಣರಲ್ಲಿದ್ದ ಓದುವ ಆಸೆಗೆ, ಆಸಕ್ತಿಗೆ ಪೂರಕವೇ ಆಯಿತು.

ಮೂಲ್ಕಿಯ ಬೋರ್ಡ್ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಆರಂಭಿಸಿದ ಸುವರ್ಣರಿಗೆ ಕನ್ನಡ ಪಾಠವೆಂದರೆ ಅಚ್ಚುಮೆಚ್ಚು. ಅದೇ ವಿಷಯದಲ್ಲಿ ಹೆಚ್ಚು ಅಂಕ ಗಳಿಸುತ್ತಿದ್ದರು ಕೂಡ.ಇದಕ್ಕೆ ಕಾರಣರಾದವರು ವಿದ್ವಾನ್ ಸುರತ್ಕಲ್ ಸುಬ್ಬರಾವ್. ಅವರ ಪಾಠದ ವೈಖರಿ ಸುವರ್ಣರನ್ನು ಹೆಚ್ಚು ಆಕರ್ಷಿಸಿತ್ತು. ಕನ್ನಡ ಪಾಠದ ಮೇಲೆ ಪ್ರೀತಿ ಹೆಚ್ಚಿಸಿತ್ತು.

ಪಂಪ, ರನ್ನ, ಕುಮಾರವ್ಯಾಸ, ಮುದ್ದಣರನ್ನು ಬಹಳ ಸೊಗಸಾಗಿ ಪರಿಚಯಿಸಿದ್ದರು, ಅವರ ಸಾಹಿತ್ಯವನ್ನು ಮನಮುಟ್ಟಿಸಿದ್ದರು. ಸುವರ್ಣರ ಸ್ವರ ಮಾಧುರ್ಯವನ್ನು ಗಮನಿಸಿದ್ದ ಸುಬ್ಬರಾಯರು ಹಳಗನ್ನಡದ ಪದ್ಯದ ಒಂದು ಚರಣವನ್ನು ಸುವರ್ಣರಿಂದ ಹಾಡಿಸಿಯೇ ತರಗತಿಯನ್ನು ಆರಂಭಿಸುತ್ತಿದ್ದರು!

## ಅಮ್ಮನ ಕನಸು ನನಸು

ಸುವರ್ಣರು ಫುಟ್‌ಬಾಲ್, ಕ್ರಿಕೆಟ್ ಆಡುತ್ತಿದ್ದುದೇನೋ ನಿಜ. ಆದರೆ ಆಟೋಟಗಳಲ್ಲಿ ಪ್ರೀತಿ ಕಡಿಮೆಯೇ. ಓದು ಎಂದರೆ ಅಚ್ಚುಮೆಚ್ಚು. ಮಗ ಓದಿ ಬುದ್ಧಿವಂತನಾಗಬೇಕು, ಜ್ಞಾನ ಸಂಪಾದಿಸಿಕೊಳ್ಳಬೇಕು ಅನ್ನುವ ಕಾರಣಕ್ಕೆ ತಾಯಿಯೂ ಊರಿಗೆ ಬಂದಾಗಲೆಲ್ಲ ತಮ್ಮ ಸೋದರ ಗ್ರಂಥಾಲಯದಿಂದ ತರುತ್ತಿದ್ದ ಪುಸ್ತಕಗಳಲ್ಲಿ ಕೆಲವನ್ನು ಸ್ವತಃ ಆಯ್ದು ತನಗೆ ಓದಲು ಕೊಟ್ಟು ಉತ್ತೇಜಿಸುತ್ತಿದ್ದುದನ್ನೂ ಸುವರ್ಣರು ಹೆಮ್ಮೆಯಿಂದ ಸ್ಮರಿಸುತ್ತಾರೆ.

ಆದಾಗ ಸುವರ್ಣರು ಫಿಫ್ತ್ ಫಾರ್ಮ್‌ನ ವಿದ್ಯಾರ್ಥಿಯಾಗಿದ್ದರು. ಪರೀಕ್ಷೆ ಮುಗಿದಿತ್ತು. ರಜೆ ಬಿದ್ದ ಕೂಡಲೇ ಅಮ್ಮ ಅಪ್ಪ ಇರುವ ಮುಂಬಯಿಗೆ ಹೋಗಿ ಅವರ ಜತೆ ಕೆಲ ದಿನ ಇದ್ದು ಬರಬೇಕು ಅನ್ನುವ ಹುಮ್ಮಸ್ಸಿನಲಿದ್ದರು. ಆದರೆ ಈ ಹಂಬಲ ಈಡೇರುವುದಕ್ಕೆ ವಿಧಿ ಬಿಡಲಿಲ್ಲ! ಅಷ್ಟರಲ್ಲೇ ಅಮ್ಮನ ಆರೋಗ್ಯ ಹದಗೆಟ್ಟಿತ್ತು. ಉಬ್ಬಸ ರೋಗ ಉಲ್ಬಣಿಸಿತ್ತು. ಊರಿಗೆ ಕಳುಹಿಸಿದರೆ ಊರ ಹವೆ ಉಬ್ಬಸವನ್ನು ಕಡಿಮೆ ಮಾಡಬಲ್ಲುದು ಎಂದು ಅಪ್ಪ ನಿರ್ಧರಿಸಿದ್ದರು. ಟೆಲಿಗ್ರಾಂ ಬಿಟ್ಟು ಊರ ಕಡೆಗೆ ಹೊರಟಿದ್ದರು ರೈಲಿನಲ್ಲಿ. ಮುಂಬಯಿಗೆ ಹೋಗದೇನೇ ಅಮ್ಮನನ್ನು ನೋಡುತ್ತೇನಲ್ಲ, ಅಮ್ಮ ಮನೆಗೇ ಬರುತ್ತಿದ್ದಾರಲ್ಲ ಎಂದು ಖುಷಿಗೊಂಡಿದ್ದರು ಸದಾನಂದ. ಅಮ್ಮನನ್ನು ಕಾಣುವ ಕಾತರ ಹೆಚ್ಚಿತ್ತು. ಬೀರೂರು ತಲುಪುವಷ್ಟರಲ್ಲಿ ಅಸೌಖ್ಯ ವಿಪರೀತಕ್ಕೆ ಏರಿ ಅಮ್ಮ ಅಸುನೀಗಿದ್ದರು. ಕಾರು ತರುವಂತೆ ಅಪ್ಪ ಬಿಟ್ಟ ಟೆಲಗ್ರಾಂ ಓದಿ ಮಾವ ಕಾರು ಕೊಂಡೊಯ್ದಿದ್ದರು, ಕಡೂರು ಸ್ಟೇಷನ್‌ಗೆ. ಆದರೆ ಇದ್ಯಾವುದನ್ನೂ ಬಾಲಕ ಸದಾನಂದರಿಗೆ ತಿಳಿಸಿರಲಿಲ್ಲ. ಅಜ್ಜಿ ಅಮ್ಮನಿಗೆ ಸೀರಿಯಸ್ ಇದೆಯಂತೆ ಎಂದಷ್ಟೇ ಹೇಳಿದ್ದರು. ಅಮ್ಮನನ್ನು ಕಾಣಲು ಹಾತೊರೆಯುತ್ತಿದ್ದ ಸುವರ್ಣರು ಕಂಡದ್ದು ಅಮ್ಮನ ಹೆಣವನ್ನು! ಆಘಾತವಾಗದಿದ್ದೀತೇ? ಹಿಂದಿನ ವರ್ಷ ಮುಂಬಯಿಗೆ ಹೊರಟು ನಿಂತಿದ್ದ ಅಮ್ಮ ಸದಾನಂದರ ಯಾವುದೋ ತಪ್ಪಿಗೆ ಸಿಟ್ಟಿನಿಂದ ನಾಲ್ಕೇಟು ಬಿಗಿದಿದ್ದರು. 'ಹೊಡೀರಿ, ಎಷ್ಟು ಬೇಕಾದರೂ ಹೊಡೀರಿ. ಮುಂಬಯಿಗೆ ಹೋಗ್ತೀರಲ್ಲ ಹೇಗೂ. ಇನ್ನು ಹೊಡೀಲಿಕ್ಕಿಲ್ಲವಲ್ಲ' ಎಂದು ಆ ಕ್ಷಣದ ಕೋಪದಿಂದ ಹೇಳಿಬಿಟ್ಟಿದ್ದರು. 'ಇನ್ನು ಎಂದಿಗೂ ಹೊಡೆಯುವುದಕ್ಕೇ ಸಾಧ್ಯವಿಲ್ಲದಷ್ಟು ದೂರ ಹೋಗಿಬಿಟ್ಟರೇ ನನ್ನ ಅಮ್ಮ? ನಾನೆಷ್ಟು ದೊಡ್ಡ ಅಪರಾಧ ಮಾಡಿದೆ' ಎಂದು ಸದಾನಂದ ನೆನೆಯುತ್ತ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಇಂದಿಗೂ ಈ ಮಾತು ಘಟನೆ ಸುವರ್ಣರನ್ನು ಕಾಡುತ್ತಲೇ ಇದೆ. ತಾನು ಸಾಮಾನ್ಯನಂತಾಗಬಾರದು ಅನ್ನುವ ಅಮ್ಮನ ಇಂಗಿತ ಅರ್ಥ ಮಾಡಿಕೊಂಡಿದ್ದ ಸುವರ್ಣರು ಅಂತೆಯೇ ಸಾಧಿಸುತ್ತ ಬಂದಿದ್ದಾರೆ; ಅವರ ಕನಸುಗಳನ್ನು ನನಸಾಗಿಸುತ್ತ ಬಂದಿದ್ದಾರೆ.

## ಕಲಿಕೆಯ ಬೆಟ್ಟ ಹತ್ತಿ...

ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಮಂದಿ ಬದುಕು ಕಟ್ಟಿಕೊಳ್ಳುವುದಕ್ಕಾಗಿ, ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳುವುದಕ್ಕಾಗಿ ಮುಂಬಯಿಗೆ ವಲಸೆ ಹೋದವರು. ಅನ್ಯಾನ್ಯ ರೀತಿಗಳಲ್ಲಿ ಸಾಧಿಸಿ ಗುರುತಿಸಿಕೊಂಡ ಅವರು ಅಲ್ಲಿ ತಮ್ಮ ಅಸ್ತಿತ್ವವನ್ನು, ಅನನ್ಯತೆಯನ್ನು ಕಂಡುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಮೊಗವೀರ ಸಂಘಟನೆಗಳ ಪಾತ್ರ, ಪರಿಶ್ರಮ, ಕಾಣ್ಕೆ ಅಸಾಧಾರಣವಾದದ್ದು. ಅವಿಭಜಿತ ದಕ ಜಿಲ್ಲೆಯ ಬಡ ವಿದ್ಯಾರ್ಥಿಗಳಿಗಾಗಿ ಅಲ್ಲಿ ಐದಾರು ಕಡೆಗಳಲ್ಲಿ ಧರ್ಮಾರ್ಥ ರಾತ್ರಿ ಶಾಲೆಗಳನ್ನು ತೆರೆದು ವಿದ್ಯೆ ಹಾಗೂ ಬದುಕಿಗೆ ಸೇತುವಾದವರು ಮೊಗವೀರ ಬಂಧುಗಳು. ಪೋರ್ಟ್‌ನಲ್ಲಿದ್ದ ಮೊಗವೀರ ರಾತ್ರಿ ಶಾಲೆಗೆ ಸುವರ್ಣರನ್ನು ಅವರ ತಂದೆ ರುಕ್ಕ ಕೋಟ್ಯಾನರು ಸೇರಿಸಿದ್ದರು.

ಮೆಟ್ರಿಕ್ಯುಲೇಷನ್ ಮುಗಿಯಿತು. ಮೊಗವೀರ ರಾತ್ರಿ ಶಾಲೆಯಲ್ಲಿ ಉಚಿತ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳು ಒಂದಷ್ಟು ವರ್ಷಗಳ ಕಾಲ ಗೌರವ ಶಿಕ್ಷಕರಾಗಿ ಉಚಿತ ಸೇವೆ ಸಲ್ಲಿಸಬೇಕು ಅನ್ನುವುದು ಆಡಳಿತದ ಸಲಹೆ. ಸ್ವಲ್ಪ ಮಟ್ಟಿಗಿನ ಋಣ ಸಂದಾಯಕ್ಕೆ ಒದಗಿದ ಈ ಅವಕಾಶವನ್ನು ಸುವರ್ಣರಂತೂ ಮನಸಾರೆ ಹೆಮ್ಮೆಯಿಂದ ನಿರ್ವಹಿಸಿದ್ದಾರೆ. ಈ ಅಧ್ಯಾಪಕತ್ವ ಸುವರ್ಣರ ರಂಗ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕೆ ಕೂಡಾ ಅನುವು ಮಾಡಿಕೊಟ್ಟಿತು.

ಸುವರ್ಣರು ಈ ಕೆಲಸವನ್ನು ಬಹಳ ಕಾಳಜಿ ಹಾಗೂ ಶ್ರದ್ಧೆಯಿಂದ ಐದು ವರ್ಷಗಳ ಕಾಲ ನಿರ್ವಹಿಸಿದ್ದಾರೆ. ಕನ್ನಡವನ್ನು ಬಹಳ ಸೊಗಸಾಗಿ ಪಾಠ ಮಾಡುತ್ತಿದ್ದ ಸುವರ್ಣರು ಮಾದರಿ ಗುರುವಾದರು, ಮಕ್ಕಳ ಮೆಚ್ಚುಗೆಗೂ ಪಾತ್ರರಾದರು. ಶಾಲೆಯ ವಾರ್ಷಿಕೋತ್ಸವಗಳಲ್ಲಿ ಇದೇ ಮೇಷ್ಟ್ರ ನಿರ್ದೇಶನದ ನಾಟಕಗಳಲ್ಲಿ ಭಾಗವಹಿಸುವ ಖುಷಿಯೂ ಅವರೊಳಗಿತ್ತು.

'ಮುಂಬಯಿ ನಾಟ್ಯ ಅಕಾಡೆಮಿ'ಯಲ್ಲಿ ನಾಟಕದ ಬಗ್ಗೆ ಅಧ್ಯಯನ ನಡೆಸಿದ್ದ ಸುವರ್ಣರು ರಂಗಭೂಮಿಯ ಮಜಲುಗಳನ್ನು ಇಲ್ಲಿ ಅರಿತು ಅರಗಿಸಿಕೊಂಡರು. ಸಮೂಹ ಮಾಧ್ಯಮಗಳ ಬಗ್ಗೆಯೂ ಒಲವಿದ್ದ ಅವರು ಭಾರತೀಯ ವಿದ್ಯಾ ಭವನದಲ್ಲಿನ ಮಾಸ್ ಕಮ್ಯೂನಿಕೇಷನ್ ವಿಭಾಗದಲ್ಲಿ ರೇಡಿಯೋ, ಚಲನಚಿತ್ರ, ಟಿ.ವಿ. ರಂಗಗಳ ಬಗ್ಗೆ ಅಭ್ಯಾಸ ಮಾಡಿ ಒಂದು ವರ್ಷದ ಡಿಪ್ಲೊಮಾ ಪೂರ್ಣಗೊಳಿಸಿದರು. ಒಳಗಿದ್ದ ಕಲಾವಿದನಿಗೆ ಈ ಕ್ಷೇತ್ರದಲ್ಲಿ ನಿರ್ಮಾಪಕ, ನಿರ್ದೇಶಕ, ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಇದು ದಾರಿದೀಪವಾಯಿತು; ಕಲಾತ್ಮಕ ಹಾಗೂ ನೂರ್ಕಾಲ ಬಾಳುವಂಥ ಸಿನೆಮಾ, ಧಾರಾವಾಹಿಗಳನ್ನು ಸಮರ್ಪಿಸುವುದಕ್ಕೆ ಸೇತುವಾಯಿತು. ಛಾಯಾಗ್ರಹಣವೆಂದರೂ ಸುವರ್ಣರಿಗೆ ಬಹಳ ಆಸಕ್ತಿ. ಪರಿಣಾಮವಾಗಿ ಸ್ಥಿರ ಛಾಯಾಗ್ರಹಣದಲ್ಲಿ ಡಿಪ್ಲೊಮಾ ಸಂಪಾದಿಸಿದರು. ಕೈಗಾರಿಕೆಗಳ ಬಗೆಗೂ ಕುತೂಹಲ ಹೊಂದಿದ್ದ ಸುವರ್ಣರು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ ಬಗ್ಗೆ ಡಿಪ್ಲೊಮಾ ಪೂರೈಸಿ ಖುಷಿ ಪಟ್ಟಿದ್ದಾರೆ. ಎಫ್‌ಟಿಐಐ

ಫಿಲ್ಮ್ ಅಪ್ರಿಸಿಯೇಷನ್ ಡಿಪ್ಲೊಮಾ ಕೋರ್ಸ್ ಸೇರಿ ಜಗತ್ತಿನ ಕೆಲವು ಶ್ರೇಷ್ಠ ಚಲನಚಿತ್ರಗಳನ್ನು ನೋಡಿ ಚಿತ್ರರಂಗದಲ್ಲಿ ಕಾಲ ಕಾಲಕ್ಕೆ ನಡೆದ ಆವಿಷ್ಕಾರಗಳ ಬಗ್ಗೆ ಜ್ಞಾನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತ ಬಂದಿದ್ದಾರೆ. ಇಲ್ಲಿರುವುದು ಡಿಪ್ಲೊಮಾ, ಪದವಿ ಸಂಪಾದನೆಯ ಆಲೋಚನೆ ಮಾತ್ರ ಅಲ್ಲ, ಕಲಾ ಬದುಕಿನ ವಿಸ್ತಾರಕ್ಕೆ ತಾನು ಎಲ್ಲವನ್ನೂ ತಿಳಿದುಕೊಳ್ಳುತ್ತ ತನ್ನನ್ನು ತಾನು ಪಕ್ವಗೊಳಿಸಿಕೊಳ್ಳುತ್ತ, ಪ್ರಬುದ್ಧ ಕೊಡುಗೆಗಳನ್ನು ನೀಡುತ್ತಿರಬೇಕು ಅನ್ನುವ ತೀವ್ರ ತುಡಿತ. ಈ ವಿದ್ಯಾರ್ಥಿತನದಿಂದಲೇ  ಸುವರ್ಣರು ರಂಗಭೂಮಿಗೆ, ಸಿನಿಮಾ, ಧಾರಾವಾಹಿ ಜಗತ್ತಿಗೆ, ಸಾಕ್ಷ್ಯಚಿತ್ರ, ಸಾಹಿತ್ಯ ಪ್ರಪಂಚಕ್ಕೆ ಮೌಲಿಕ ಕೃತಿಗಳನ್ನು  ಸಲ್ಲಿಸುತ್ತ ಬರುವುದಕ್ಕೆ ಸಾಧ್ಯವಾಗಿದೆ.

'ಕಲಿಕೆ ಎನ್ನುವುದು ನಿರಂತರ ಎನ್ನುವ ಅಭಿಪ್ರಾಯಕ್ಕೆ ಬದ್ಧರಾದ ಸುವರ್ಣರು ಕಲಿಯುವುದು ಮುಗಿದಿದೆ ಎಂದು ಕನಸಲ್ಲೂ ಅಂದುಕೊಂಡವರಲ್ಲ. ರಂಗಭೂಮಿಯ ಬಗ್ಗೆ ಚಲನಚಿತ್ರದ ಬಗ್ಗೆ ಇಂದಿಗೂ ಅವರು ವಿದ್ಯಾರ್ಥಿಯಾಗಿಯೇ ತೆರೆದುಕೊಳ್ಳುತ್ತಾರೆ' ಎಂದು ಸುವರ್ಣರ ಒಡನಾಡಿ, ವಿಜ್ಞಾನಿ ಸಾಹಿತಿ ಡಾ.ನಿಂಜೂರರೂ ಶರಾ ಬರೆಯುತ್ತಾರೆ.

## ಉದ್ಯೋಗದಿಂದ ಉದ್ಯಮದವರೆಗೆ...

ಹತ್ತರ ಪೋರ ಸದಾನಂದ ಸುವರ್ಣರು ಹಣಕಾಸು ಸಂಪಾದಿಸಲು ನೌಕರಿ ಮಾಡುವುದು ಅನಿವಾರ್ಯವಾಗಿತ್ತು. ಹಾಗಂತ ವಿದ್ಯಾಭ್ಯಾಸವೂ ಮುಂದುವರಿಯಬೇಕು. ಅದಕ್ಕಾಗಿ ಅವರು ಆರಿಸಿಕೊಂಡದ್ದು ಹಗಲು ದುಡಿಮೆ, ರಾತ್ರಿ ವಿದ್ಯಾಭ್ಯಾಸ.

ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವ ಮಹತ್ತರವಾದ ಧ್ಯೇಯದೊಂದಿಗೆ ಮೊಗವೀರ ವ್ಯವಸ್ಥಾಪಕ ಮಂಡಳಿ ಧರ್ಮಾರ್ಥ ರಾತ್ರಿ ಶಾಲೆಯನ್ನು ಮುಂಬಯಿಯಲ್ಲಿ ಸಂಸ್ಥಾಪಿಸಿತ್ತು. ಕರಾವಳಿಯಿಂದ ಹೊಟ್ಟೆಪಾಡಿಗಾಗಿ ಮುಂಬಯಿ ತಲುಪುತ್ತಿದ್ದವರಿಗೆಲ್ಲ ಉಚಿತ ವಿದ್ಯಾ ದಾನ ಮಾಡಿ ಸತ್ಪ್ರಜೆಗಳನ್ನಾಗಿಸಿದೆ, ವಿದ್ಯಾವಂತರನ್ನಾಗಿಸಿದೆ, ಆರ್ಥಿಕ ಬಲಾಢ್ಯರನ್ನಾಗಿಸಿದೆ. ಸುವರ್ಣರೂ ಸೇರಿದಂತೆ ಅಸಂಖ್ಯ ಸಂಖ್ಯೆಯ ಕರಾವಳಿಗರು ಈ ರಾತ್ರಿ ಶಾಲೆಯಲ್ಲೇ ವಿದ್ಯೆ ಕಲಿತು ನೆಲೆ ಕಂಡುಕೊಂಡಿದ್ದಾರೆ.

ಸುವರ್ಣರನ್ನು ಅವರ ತಂದೆ ಈ ಶಾಲೆಗೆ ಸೇರಿಸಿದ್ದಾರೆ. ರಾತ್ರಿ ವಿದ್ಯಾಭ್ಯಾಸಕ್ಕೆ ಬಿಟ್ಟುಕೊಟ್ಟಿದ್ದಾರೆ. ಹಗಲು ಸುವರ್ಣರದೇ ಇಷ್ಟದಂತೆ ತಾವು ನೌಕರಿ ಮಾಡುತ್ತಿರುವ ಬ್ಯಾಂಕ್ ಆಫ್ ಬರೋಡಾದಲ್ಲೇ ಉದ್ಯೋಗ ಕೊಡಿಸುತ್ತಾರೆ. ಎಡಲ್ಜಿ ಗಾರ್ಡ್ ಎನ್ನುವ ಪಾರ್ಸಿಯೊಬ್ಬರು ಕ್ಯಾಷಿಯರ್ ಆಗಿದ್ದರು. ಅವರಲ್ಲಿ ಪಿಯೋನ್ ಆಗಿ ಸುವರ್ಣರನ್ನು ನೇಮಿಸುತ್ತಾರೆ. ಗಾರ್ಡ್ ಅವರ ಬಳಿಯಲ್ಲೇ ಬಾಲಕ ಸುವರ್ಣರು ಕುಳಿತಿರಬೇಕು. ಅವರು ಹೇಳುವ ಸಣ್ಣ ಪುಟ್ಟ ಕೆಲಸಗಳನ್ನೆಲ್ಲ ಮಾಡಬೇಕು. ಈ ಕೆಲಸ ಸುವರ್ಣರಿಗೆ ಆರಾಮ  ಅನ್ನಿಸಿದೆ.

ಆದರೆ ಸುವರ್ಣರು ಇಷ್ಟರಲ್ಲೇ ತೃಪ್ತಿ ಕಾಣಲಿಲ್ಲ. ಬೆಳವಣಿಗೆಯ ಹಾದಿಯನ್ನು ಹುಡುಕುವುದು ಅವರ ಸ್ವಭಾವವಾಗಿತ್ತು. ಜ್ಞಾನದಾಹದಿಂದಾಗಿ ಬ್ಯಾಂಕ್‌ಗೆ ಬರುತ್ತಿದ್ದ ಟೈಮ್ಸ್ ಪತ್ರಿಕೆಯನ್ನು ತಪ್ಪದೇ ಓದುತ್ತಿದ್ದರು. ಇಂಗ್ಲಿಷ್ ಭಾಷೆಯ ಹಿಡಿತಕ್ಕಾಗಿ ಕಲಿಕೆಯನ್ನು ಅವರು ಮುಂದುವರಿಸಿದರು, ರೆನ್ ಏಂಡ್ ಮಾರ್ಟಿನ್‌ಗ್ರಾಮರ್ ಪುಸ್ತಕದ ಮೂಲಕ. ವ್ಯಾಕರಣದ ಜತೆಗೆ ಮಾತನಾಡುವುದನ್ನೂ ಕಲಿತರು. ನಿಂತ ನೀರಾಗುವುದರ ಬದಲು ಚಲನಶೀಲತೆಯನ್ನೇ ಜೀವಂತವಾಗಿರಿಸಬೇಕು ಅಂದುಕೊಂಡಿದ್ದರ ಫಲವಾಗಿ ಕ್ಲರ್ಕ್ ಕೆಲಸಕ್ಕೆ ಅರ್ಜಿ ಹಾಕುವುದಕ್ಕೆ ಆರಂಭಿಸುವ ಧೈರ್ಯ ಮಾಡಿದರು. ಬಾಂಬೆ ಫಯರ್ ಇನ್ಶೂರೆನ್ಸ್ ಕಂಪನಿ ಕೈಬೀಸಿ ಕರೆಯಿತು. ಅದು ಬ್ರಿಟಿಷ್ ಆಫೀಸರರ ಹಿಡಿತದಲ್ಲಿದ್ದ ಕಂಪನಿಯಾಗಿತ್ತು. ಅಲ್ಲಿನವರ ಇಂಗ್ಲಿಷ್ ಅರ್ಥಮಾಡಿಕೊಳ್ಳುವುದಕ್ಕೆ ಕಷ್ಟವೇ ಆಗುತ್ತಿತ್ತು. ಅಲ್ಲಿದ್ದ ಸೆಕ್ರೆಟರಿ ಕೇರಿಂಗ್‌ಟನ್ ಟ್ವಿಸ್ ಎಂಬಾಕೆ ಸಹೃದಯಿಯಾಗಿದ್ದರು. ಅವರೊಳಗಿನ ಮಾತೃತ್ವ ಸುವರ್ಣರನ್ನು ಇಂಗ್ಲಿಷ್ ಕಲಿಕೆಗೆ ಉತ್ತೇಜನ ನೀಡಿದೆ. ಮೀಟಿಂಗ್‌ನ ವರದಿಯನ್ನು ಸುವರ್ಣರಿಂದ ಮಾಡಿಸುವ ಜವಾಬ್ದಾರಿಯನ್ನೂ ನೀಡಿದ ಆಕೆ ಅವರನ್ನು ಸಾಕಷ್ಟು ತಿದ್ದಿತೀಡಿದ್ದಾರೆ. ಆರು ತಿಂಗಳ ಬಳಿಕ ಆಕೆ ಇಂಗ್ಲೆಂಡ್‌ಗೆ ತೆರಳಿದಾಗ ಆ ಸ್ಥಾನಕ್ಕೆ ಇನ್ನೊಬ್ಬರ ನೇಮಕವಾಗಿದೆ. ಸುವರ್ಣರ ಕೆಲಸ ಮುಂದುವರಿದಿದೆ ಅವರ ಬಳಿ. ಹೊಸ ಅಧಿಕಾರಿ ಸುವರ್ಣರು ಚಿಕ್ಕ ಹುಡುಗ ಅನ್ನುವುದನ್ನೂ ಲೆಕ್ಕಿಸದೆ ತಪ್ಪುಗಳನ್ನೇ ಬೆಟ್ಟು ಮಾಡಿ ಗದರುತ್ತಿದ್ದುದು ಸುವರ್ಣರಿಗೆ ಹಿಡಿಸಲಿಲ್ಲ. ಸ್ವಾಭಿಮಾನವನ್ನು ರಕ್ತಗತವಾಗಿಯೇ ಪಡೆದು ಬಂದದ್ದರ ಪರಿಣಾಮವಾಗಿ ಸುವರ್ಣರು ಅಧಿಕಾರಿಗೆ ಡೊಗ್ಗು ಸಲಾಮು ಹೊಡೆಯುತ್ತ, ಅಂಜುತ್ತ, ಅಳುಕುತ್ತ ಕೂರಲಿಲ್ಲ. ರಾಜೀನಾಮೆ ಪತ್ರನ್ನು ಕೊಟ್ಟೇಬಿಟ್ಟರು. ಮತ್ತೆ ಕೆಲಸದ ಶೋಧ ಕಾರ್ಯ ಮುಂದುವರಿಸಿದರು. ಅರ್ಜಿ ಮೇಲೆ ಅರ್ಜಿ ಹಾಕುವುದಕ್ಕೆ ಆರಂಭಿಸಿದರು. ತಿಂಗಳು ಎರಡು ಕಳೆದರೂ ಕೆಲಸ ಕೈಗೆಟುಕಲಿಲ್ಲ. ಸಿಡಿದ ಸ್ವಾಭಿಮಾನ ಮನೆಯಿಂದ ಹೊರಕ್ಕೆ ಬರುವಂತೆ ಮಾಡಿದೆ. ಹಾಗೆ ಹೊರ ಬಂದ ಸುವರ್ಣರಿಗೆ ಸ್ನೇಹಿತರು ಆಸರೆಯಾದರು. ಅವರೇ ಹಣ ಒಟ್ಟುಗೂಡಿಸಿ ಸುವರ್ಣರಿಗೆ ನೆರವಾದರು. ಈ ಹಣವನ್ನೂ ಉಳಿಸಿಕೊಂಡ ಸುವರ್ಣರು ಟೈಪಿಂಗ್ ಕಲಿಕೆಗೆ ವಿನಿಯೋಗಿಸಿದರು. ಮತ್ತೊಂದು ತಿಂಗಳ ಬಳಿಕ ಅವರು ಹಾಸಂಬಾಯಿ ಜೇತಾ ಎಂಬ ಕಂಪನಿಯಲ್ಲಿ ತಾತ್ಕಾಲಿಕ ಟೈಪಿಸ್ಟ್ ಆಗಿ ಸೇರಿಕೊಂಡರು. ಒಂದೇ ತಿಂಗಳು ಅಲ್ಲಿ ಕೆಲಸಕ್ಕೆ ಅವಕಾಶವಿದ್ದುದು. ಪುನಃ ಸುವರ್ಣರನ್ನು ನಿರುದ್ಯೋಗ ಆವರಿಸಿಕೊಂಡಿತು. ಬಳಿಕ ಗ್ರೀಟಿಂಗ್ ಕಾರ್ಡ್ ತಯಾರಿಸುವ ಆನಂದ್ ಸ್ಟುಡಿಯೋಸ್ ಎನ್ನುವ ಕಂಪನಿಯೊಂದರಲ್ಲಿ ಕಮಿಷನ್ ಆಧಾರದಲ್ಲಿ ಸೇಲ್ಸ್‌ಮ್ಯಾನ್ ಆಗಿ ನೇಮಕಗೊಳ್ಳುತ್ತಾರೆ. ದೀಪಾವಳಿಯ ಸಮಯವಾದ್ದರಿಂದ ವ್ಯಾಪಾರ ಚೆನ್ನಾಗಿಯೂ ಆಯಿತು. ಆದರೆ ಗ್ರೀಟಿಂಗ್ ಭರಾಟೆ ಮುಗಿದ ಬಳಿಕ ಅಲ್ಲೂ ಕೆಲಸ ಏನಿರುತ್ತದೆ? ಒಟ್ಟು ಮೂರು ತಿಂಗಳು ಇಲ್ಲಿ ದುಡಿದ ಸುವರ್ಣರು ಮತ್ತೆ ನಿರುದ್ಯೋಗಿಯಾಗಿ ಕೆಲಸದ ಹುಡುಕಾಟದಲ್ಲಿ ಮಗ್ನರಾದರು. ಆಗಲೇ ಅವರಿಗೆ ಸಣ್ಣದೊಂದು ಪಬ್ಲಿಸಿಟಿ ಕಂಪನಿಯ ಅಡ್ವರ್ಟೈಸ್‌ಮೆಂಟ್ ಡಿಪಾರ್ಟ್‌ಮೆಂಟಿನ ಇನ್‌ಚಾರ್ಜ್ ಆಗಿ ಸೇರಿಕೊಳ್ಳುವ ಅವಕಾಶ ದೊರೆಯಿತು. ಸಣ್ಣ ಸಂಬಳ ಹಾಗೂ ಅವರು ತಂದ ಜಾಹೀರಾತಿನ ಕಮಿಷನ್

ಕೈ ಸೇರುತ್ತಿತ್ತು. ಒಂದೆರಡು ತಿಂಗಳಲ್ಲಿ ಆ ಕಂಪನಿಯೂ ಬಾಗಿಲು ಮುಚ್ಚಿತ್ತು. ಸುವರ್ಣರಿಗೆ ಮತ್ತೆ ನಿರುದ್ಯೋಗದ ಸ್ವಾಗತ.

ನೌಕರಿಯ ಹುಡುಕಾಟವನ್ನು ಮತ್ತೆ ಮುಂದುವರಿಸಿದ ಸುವರ್ಣರಿಗೆ ದೀಪಕ್ ಜನರಲ್ ಇನ್ಸೂರೆನ್ಸ್ ಕಂಪನಿಯಲ್ಲಿ ಕ್ಲರ್ಕ್ ಹುದ್ದೆಯೊಂದು ಒಲಿಯುತ್ತದೆ. ಎರಡು ವರ್ಷಗಳ ಕಾಲ ಇಲ್ಲಿ ದುಡಿದ ಸುವರ್ಣರು ಒಂದರ್ಥದಲ್ಲಿ ನೆಲೆ ಕಂಡರು. ಇಲ್ಲಿಂದ ಮುಂದೆ ಪ್ರಗತಿ ಅವರನ್ನು ಕೈ ಹಿಡಿಯಿತು, ನಿರುದ್ಯೋಗ ಅನ್ನುವುದು ಪೂರ್ಣವಿರಾಮ ಕಂಡಿತು. ಸುವರ್ಣರೇ ಕಂಪನಿ ಬದಲಾಯಿಸುತ್ತ, ಅನುಭವಗಳಿಸುತ್ತ, ಆರ್ಥಿಕ ಚೈತನ್ಯವನ್ನು ಹೆಚ್ಚಿಸಿಕೊಳ್ಳುತ್ತ ಬಂದರು.

ಈ ಎಲ್ಲ ಅನುಭವದ ಹಿನ್ನೆಲೆಯಲ್ಲಿ ಭಾರತ್ ಮೆಟಲ್ ಏಂಡ್ ಎಂಜಿನಿಯರಿಂಗ್ ವರ್ಕ್ಸ್‌ನಲ್ಲಿ ಟೈಪಿಸ್ಟ್ ಮತ್ತು ಕರೆಸ್ಪೋಂಡೆಂಟ್ ಪತ್ರ ವ್ಯವಹಾರ ಮಾಡುವ ಹುದ್ದೆ ಕೈಬೀಸಿ ಕರೆಯಿತು.

## ಕೈ ಹಿಡಿದ ಬಣ್ಣದ ವ್ಯಾಪಾರ

ಇಲ್ಲಿ ಒಂದು ವರ್ಷ ಪಳಗಿದ ಬಳಿಕ ಇದೇ ಕಂಪನಿಯ ಸಹೋದರ ಸಂಸ್ಥೆ ಸ್ವಸ್ತಿಕ್ ಪೇಯಿಂಟ್ಸ್‌ನಲ್ಲಿ ಸೆಲ್ಫ್ ಕರೆಸ್ಪೋಂಡೆಂಟ್ ಟೈಪಿಸ್ಟ್ ಆಗಿ ನೇಮಕಗೊಂಡರು.

ಎರಡು ವರ್ಷಗಳ ಬಳಿಕ ಅವರು ಭಾಟನ್ಸ್ ಪೇಯಿಂಟ್ ಕಂಪನಿಯಲ್ಲಿ ಸೇಲ್ಸ್ ರೆಪ್ರಸೆಂಟಿಟಿವ್ ಆಗಿ ಸೇರ್ಪಡೆಗೊಂಡರು. ಇಲ್ಲಿನ ಪೇಯಿಂಟ್‌ಗಳನ್ನು ಸುವರ್ಣರು ಮಾರ್ಕೆಟ್‌ಗೆ ಪರಿಚಯಿಸಿ ವ್ಯಾಪಾರಕ್ಕೆ ರಹದಾರಿಯನ್ನು ತೆರೆದು ತೋರಿಸಿ ಕಂಪನಿಗೆ ಲಾಭ ಮಾಡಿಕೊಟ್ಟರು. ಪೇಯಿಂಟ್ ಗ್ರಾಹಕರಲ್ಲಿ ಹಲವರು ಸುವರ್ಣರೇ ಸ್ವತಂತ್ರವಾಗಿ ಪೇಯಿಂಟ್ ವ್ಯಾಪಾರ ಆರಂಭಿಸುವಂತೆ ಹುರಿದುಂಬಿಸತೊಡಗಿದರು. ನೀವು ಅಂಗಡಿ ತೆರೆದದ್ದೇ ಆದರೆ ನಾವು ನಿಮ್ಮಿಂದ ಖರೀದಿಸುತ್ತೇವೆ ಅನ್ನುವ ಭರವಸೆ, ಧೈರ್ಯ ತುಂಬಿದರು. ಸುವರ್ಣರ ದೆಸೆ ಬದಲಾಯಿತು. ಮಾಲೀಕತ್ವದ ಯೋಗದ ಫಲವಾಗಿ ಸುವರ್ಣರು 1960ರಲ್ಲಿ ಪ್ರೀಮಿಯರ್ ಪೇಯಿಂಟ್ ಪ್ರೊಡಕ್ಟ್ ಕಂಪನಿಯನ್ನು ತೆರೆಯುವ ಸಾಹಸ ಮಾಡಿದರು. ಉದ್ಯೋಗ-ನಿರುದ್ಯೋಗಗಳ ಡೊಂಬರಾಟ ಹಾಗೂ ನಿರಾಶೆಯ ನಡುವೆ ಸುವರ್ಣರ ಛಲ, ಆಶಾವಾದ, ಹಟ, ಪರಿಶ್ರಮಗಳಿಗೆ ಬೆಲೆ ಅನ್ನುವಂತೆ ಬ್ಯುಸಿನೆಸ್ ಅವರ ಕೈಹಿಡಿಯಿತು. ಉದ್ಯೋಗದ ಅವಶ್ಯಕತೆ ಇದ್ದ ಸುವರ್ಣರಿಗೆ ಸ್ವತಂತ್ರ ಕಂಪನಿಯ ಒಡೆಯನಾಗುವ ಕನಸು ಇದ್ದಿರಲಾರದು. ಆದರೆ ವಿಧಿ ಅವರ ದುಡಿಮೆಗೆ ಸ್ವಂತ ಕಂಪನಿ ತೆರೆಯುವಂತೆ ಮಾಡಿತು, ವ್ಯಾಪಾರ ವಹಿವಾಟಿನಲ್ಲಿ ನಿರಾಳವಾಗಿ ಮುಂದುವರಿಯುವಂತೆ ಮಾಡಿತು. ಸೃಜನಶೀಲ ಮನಸ್ಸಿನ ಸುವರ್ಣರು ಬಣ್ಣದ ಬಗ್ಗೆ ಬಹಳ ಚೆನ್ನಾಗಿ ಅರಿತುಕೊಂಡಿದ್ದರು. ಬಣ್ಣ ಬಣ್ಣಗಳ ಮಿಶ್ರಣದಿಂದ ಅಪೂರ್ವ ಹಾಗೂ ಕಣ್ಮನ ತಣಿಸುವಂಥ ಇನ್ನೊಂದು ವಿಶಿಷ್ಟ ಹೊಸ ಬಣ್ಣವನ್ನು ಸೃಷ್ಟಿಸುತ್ತಿದ್ದರು. ಈ ಸೃಷ್ಟಿಕ್ರಿಯೆ ಹಾಗೂ ಕ್ರಿಯಾಶೀಲತೆ ಸುವರ್ಣರ ಅಂಗಡಿಯ ಬಣ್ಣಗಳಿಗೆ ಬಹು ಬೇಡಿಕೆಯನ್ನು

ತಂದುಕೊಟ್ಟಿತು. ಮೂವತ್ತು ವರ್ಷಗಳ ಕಾಲ ಸುವರ್ಣರು ಈ ಪೇಯಿಂಟ್ ವ್ಯಾಪಾರ ನಡೆಸಿದರು. ಈ ಅಂಗಡಿಯ ಲಾಭ ನಾಟಕ, ಸಿನೆಮಾ ತಯಾರಿಗೆ ವಿನಿಯೋಗವಾಗುತ್ತಿತ್ತು. ಬದುಕಿಗೂ ನೆರವಾಗುತ್ತಿತ್ತು. 'ಗುಡ್ಡದ ಭೂತ' ಧಾರಾವಾಹಿ ನಿರ್ಮಾಣದ ಸಂದರ್ಭ ಹಣಕಾಸಿನ ಅಡ್ಡಿ ಎದುರಾದಾಗ ಅಂಗಡಿ ಮಾರುವುದು ಅನಿವಾರ್ಯವಾಯಿತು. 1993ರಲ್ಲಿ ಮಾರಿದರು. ಬಣ್ಣದ ಬದುಕಿಗೆ ಬಣ್ಣದ ವ್ಯಾಪಾರ ಕೈಹಿಡಿಯಿತು. ಕಲಾ ಬದುಕಿನ ಸಾರ್ಥಕತೆಯ ಹೆಜ್ಜೆಗೆ ಇದೇ ಪೇಯಿಂಟ್ ಅಂಗಡಿ ಕೈ ಬಿಟ್ಟಿತು.

ಈ ಉದ್ಯೋಗ ಪರ್ವ ನಾನಾ ಹುದ್ದೆಗಳಲ್ಲಿ ಸುವರ್ಣರು ಸೇವೆ ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಅಪಾರ ಅನುಭವ ಕೊಟ್ಟಿದೆ. ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಧೈರ್ಯ ನೀಡಿದೆ. ಹಂಗಿನರಮನೆಯಿಂದ ಸಂಪೂರ್ಣ ಹೊರಗಿದ್ದು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಹೇಳಿಕೊಟ್ಟಿದೆ. ಸರ್ವತೋಮುಖ ಬೆಳವಣಿಗೆಗೆ ನೆರವಾಗಿದೆ. ಈ ನೌಕರಿಗಳು ವ್ಯವಹಾರ ಜ್ಞಾನವನ್ನು ಸುವರ್ಣರಿಗೆ ಧಾರೆ ಎರೆದವು. ಇವತ್ತಿಗೂ ಸುವರ್ಣರು ಪಕ್ಕಾ ಹಾಗೂ ಚೊಕ್ಕ ವ್ಯವಹಾರಸ್ಥರು. ಆದರೆ ಅಶಕ್ತರಿಗೆ ನೆರವಾಗುವುದೆಂದರೆ ಸುವರ್ಣರಿಗೆ ಆತ್ಮತೃಪ್ತಿಯ ಕೆಲಸ. ಸದ್ದಿಲ್ಲದ ದಾನಿಯಾಗಿ ಖುಷಿ ಅನುಭವಿಸುತ್ತಿದ್ದಾರೆ.

## ಮತ್ತೆ ಮಂಗಳೂರಿಗೆ

ಮದುವೆಯಾಗಿ ಒಂದೇ ವರ್ಷದಲ್ಲಿ ವಿರಸ ದಾಂಪತ್ಯದ ಪರಿಣಾಮ ವಿಚ್ಛೇದನದೊಂದಿಗೆ ಏಕಾಂಗಿಯಾದ ಸುವರ್ಣರು ಕಲಾ ಬದುಕನ್ನೇ ಪೂರ್ಣವಾಗಿ ಸ್ವೀಕರಿಸಿದರು. ಏಕಾಂತದ ಬದುಕೇ ಕ್ರಿಯಾಶೀಲ ಸೃಜನಶೀಲ ಸಾಧನೆಗೆ ಪೂರಕವಾಯಿತು ಎಂದುಕೊಂಡು ತಲ್ಲೀನರಾಗಿ ತಮ್ಮನ್ನೊಪ್ಪಿಸಿಕೊಂಡ ಸುವರ್ಣರು 2000ದಿಂದೀಚೆಗೆ ಹುಟ್ಟೂರು ಮಂಗಳೂರಿನಲ್ಲೇ ವಾಸ್ತವ್ಯ ಹೂಡಿದ್ದಾರೆ. 1995ರಲ್ಲಿ ಲಘು ಹೃದಯಾಘಾತಕ್ಕೆ ಬಲಿಯಾದ ಬಳಿಕ ಮುಂಬಯಿಯ ಜನ ನಿಬಿಡ, ವಾಹನ ನಿಬಿಡ ವಾತಾವರಣದಲ್ಲಿ ಕಷ್ಟಪಡುವುದರ ಬದಲಿಗೆ ಊರಿಗೆ ತೆರಳಿ ಮನೆ ಮಾಡುವುದೇ ಸರಿ ಎಂದುಕೊಂಡ ಸುವರ್ಣರು ಕೊಟ್ಟಾರದಲ್ಲಿ ಮನೆಯೊಂದನ್ನು ಕಟ್ಟಿಕೊಂಡು ನೆಲೆಸಿದ್ದಾರೆ. ಮಂಗಳೂರಿನಲ್ಲಿ ಹುಟ್ಟಿಕೊಂಡ ರಂಗಾಸಕ್ತಿಯಿಂದಾಗಿ ಇಲ್ಲಿನ ಕಲಾವಿದರಿಗೆ 'ಉರುಳು' ನಾಟಕವನ್ನು ನಿರ್ದೇಶಿಸಿದ್ದು, ಅದು ಅಪಾರ ಮೆಚ್ಚುಗೆ ಪಡೆದು ಹಲವಾರು ಪ್ರದರ್ಶನ ಕಂಡಿರುವುದರಿಂದ ಇಲ್ಲಿ ರಂಗ ಚಟುವಟಿಕೆ ಮಾಡಬಹುದೆನ್ನುವ ಭರವಸೆ ಹುಟ್ಟಿದೆ. ರಂಗ ಪ್ರಯೋಗಕ್ಕೆ ಎಡೆ ಇರುವಲ್ಲಿ ಸುವರ್ಣರೂ ಇರುತ್ತಾರೆ ಎನ್ನುವುದನ್ನೇ ಇದು ದೃಢಪಡಿಸುತ್ತದೆ. ಆಗೊಮ್ಮೆ ಈಗೊಮ್ಮೆ ಹಾದು ಹೋಗುವ ಏಕಾಂತದ ಬೇಸರ ಕ್ಷಣಮಾತ್ರದ್ದಾಗಿರುತ್ತದೆ, ಕ್ರಿಯಾಶೀಲತೆಯೇ ಅದನ್ನು ಮರೆಯಾಗಿಸಿಬಿಡುತ್ತದೆ.

ಸುವರ್ಣರು ಮಂಗಳೂರಿಗೆ ಬಂದು ರಂಗಚಟುವಟಿಕೆಗಳಲ್ಲಿ ನಿರತರಾಗಿರುವುದನ್ನು, 'ಕೋರ್ಟ್ ಮಾರ್ಷಲ್' ನಾಟಕ ಸೆಟ್ಟೇರಲಿರುವುದನ್ನು ಅರಿತ ಹಿರಿಯ ಪತ್ರಕರ್ತ ಸದಾನಂದ ಹೆಗಡೆ ಹರಗಿ ಅವರು ಸುವರ್ಣರನ್ನು ಸಂದರ್ಶಿಸಿದ್ದಾರೆ. ಸುವರ್ಣರ

ಆಗಮನವನ್ನು ಅವರು ಮಂಗಳೂರಿಗರ ಹಾಗೂ ಜಿಲ್ಲೆಯ ಪರವಾಗಿ 'ಪ್ರಖ್ಯಾತ ನಿರ್ದೇಶಕ, ರಂಗಕರ್ಮಿ ಸದಾನಂದ ಸುವರ್ಣ ಇದೀಗ ಜಿಲ್ಲೆಯ ಜನತೆಗೆ ಲಭ್ಯರಿದ್ದಾರೆ. ಕಳೆದ ಅರುವತ್ತು ವರ್ಷ ಮುಂಬಯಿಯಲ್ಲಿ ರಂಗಭೂಮಿ, ಸಿನಿಮಾ, ಟಿ.ವಿ. ಧಾರಾವಾಹಿ ನಿರ್ಮಾಣಗಳಲ್ಲಿ ತೊಡಗಿಸಿಕೊಂಡಿದ್ದ ಸುವರ್ಣರು ಮಂಗಳೂರಿಗೆ ಬಂದು ಹೊಸ ಜೀವನ ಆರಂಭಿಸಿದ್ದಾರೆ. ಇವರ ನಿರ್ದೇಶನದ 'ಕೋರ್ಟ್ ಮಾರ್ಷಲ್' ರಂಗವೇರುವ ಸಿದ್ಧತೆ ನಡೆಸಿದೆ. 'ಉರುಳು' ನಾಟಕದಿಂದ ಮತ್ತು 'ಘಟಶ್ರಾದ್ಧ' ಸಿನಿಮಾದಿಂದಾಗಿ ಜನಪ್ರಿಯತೆ ಪಡೆದ ಸುವರ್ಣ ಇದೀಗ ಜಿಲ್ಲೆಯ ರಂಗಭೂಮಿಗೆ ಹೊಸ ಆಕರ್ಷಣೆಯಾಗಿದ್ದಾರೆ' (ಕರಾವಳಿ ಅಲೆ, ಸೆ. 16, 2002) ಎಂದು ಸ್ವಾಗತಿಸಿದ್ದಾರೆ. ಆಗಲೇ ಅವರು 'ಮುಂಬಯಿ ಬೇರು ಕಡಿದಿಲ್ಲ, ಅಲ್ಲಿನ ಮನೆ ಖಾಲಿ ಮಾಡಿದ್ದೇನೆ ಅಷ್ಟೇ. ಕಾರಣಾಂತರಗಳಿಂದ ಮಂಗಳೂರಿನಲ್ಲೊಂದು ಮನೆ ಕಟ್ಟಿದ್ದೇನೆ. ಇಲ್ಲಿ ಹೆಚ್ಚು ಕಾಲ ಕಳೆಯೋಣ ಅಂದುಕೊಂಡಿದ್ದೇನೆ' ಎಂದು ಹೇಳಿದಂತೆ ಮಂಗಳೂರಿನಲ್ಲಿ ನಿರ್ದೇಶಿಸಿದ ನಾಟಕಗಳನ್ನು ತಮ್ಮ ಆರು ದಶಕಗಳ ಸುದೀರ್ಘ ಕಾಲದ ಕರ್ಮಭೂಮಿ ಮುಂಬಯಿಯಲ್ಲೂ ಪ್ರದರ್ಶಿಸಿ ತೃಪ್ತಿ ಅನುಭವಿಸುತ್ತಾರೆ. ಜನ್ಮಸ್ಥಾನ ಹಾಗೂ ಕರ್ಮಸ್ಥಾನಗಳ ನಂಟು ಬೆಳೆಸುತ್ತಲೇ ಇದ್ದಾರೆ.

ಹೊಸ ಹೊಸ ನಾಟಕ ಕೃತಿಗಳನ್ನೂ ಖರೀದಿಸಿ ಓದುವ ಸುವರ್ಣರು ಕಾದಂಬರಿ, ಸಣ್ಣ ಕಥೆ, ವಿಮರ್ಶಾ ಸಂಕಲನಗಳನ್ನು ಇಷ್ಟಪಟ್ಟು ಓದುತ್ತಾರೆ, ವಿಮರ್ಶಿಸುತ್ತಾರೆ. ಯಾರೇ ಕಳುಹಿಸಿಕೊಟ್ಟ ಪುಸ್ತಕವನ್ನು ಓದಿಯೇ ಓದುತ್ತಾರೆ. ದಿನಕ್ಕೆ ನಾಲ್ಕು ಪತ್ರಿಕೆಗಳ ಓದಿನೊಂದಿಗೆ ಜ್ಞಾನ ಸಂಪಾದನೆಯಲ್ಲಿ ಕ್ಷಣ ಕ್ಷಣವೂ ತೊಡಗಿಕೊಂಡಿರುವುದು ಮಾದರಿಯಾಗುತ್ತದೆ. ಪತ್ರಿಕೆ, ಅಭಿನಂದನ ಗ್ರಂಥಗಳಿಗೆ ಬಯಸುವ ಲೇಖನಗಳನ್ನು ಅನುಭವದ ನೆಲೆಗಟ್ಟಿನಲ್ಲಿ ಬರೆದುಕೊಡುತ್ತಾರೆ. ವಿದ್ವತ್ಪೂರ್ಣ ಲೇಖನಗಳನ್ನೂ ಬರೆದುಕೊಡುತ್ತಾರೆ. ಸೃಜನಶೀಲತೆ, ಕ್ರಿಯಾಶೀಲತೆ ಹಾಗೂ ಚಲನಶೀಲತೆಗೆ ಅವರು ಸುಂದರ ರೂಪಕವಾಗುತ್ತಾರೆ.

## ಮಾನವತಾವಾದಿ, ಚೈತನ್ಯದ ಚಿಲುಮೆ

ಸುವರ್ಣರನ್ನು ಭೇಟಿಯಾದಾಗ ಎದುರ್ಗೊಳ್ಳುವುದು ಬಿಗಿಯಾದ ಮುಖ ಭಾವ. ಕನ್ನಡಕದೊಳಗಿನ ಜ್ಞಾನದ ಹಸಿವಿನ ತೀಕ್ಷ್ಣಕಣ್ಣುಗಳು. ನೀಳ ಮೂಗು. ವಿಶಾಲ ಹಣೆ, ಈ ವಯಸ್ಸಲ್ಲಿ ಹೆಚ್ಚೇ ಅನ್ನಬಹುದಾದ ಬಾಚಿದ ಕೂದಲು. ಅವರ ಜತೆಗೆ ಒಡನಾಟ ಸಾಧ್ಯವೇ ಇಲ್ಲವೇನೋ ಅನ್ನಿಸಿಬಿಡುತ್ತದೆ ನೋಡಿದ ತಕ್ಷಣ. ಕ್ರಮೇಣ ಅವರೊಳಗಿನ ಮೃದುತ್ವ ಇಣುಕುತ್ತದೆ. ಆತ್ಮೀಯತೆ, ಆದರ ಪ್ರಕಟಗೊಳ್ಳುತ್ತದೆ. ಮತ್ತೆ ಕೆಲವೊಮ್ಮೆ ಎದುರಿದ್ದವರಿಗೆ ನೋವಾದರೂ ಪರವಾ ಇಲ್ಲ, ತಾನು ಹೀಗೇ ಅನ್ನುವ ನಿಲುವು, ಬಿಗುಮಾನ. ಕಾಠಿಣ್ಯ ತೋರುವುದೂ ಇದೆ. ಅದರ ಜತೆಗೆ ಮಗುತನವಿದೆ. ಅಸಹನೆಯ ಹಿಂದೆ ಯಾವುದೋ ನಿಜದ ಅಥವಾ ತಪ್ಪು ಮಾಹಿತಿಯ ಕಾರಣ ಅಡಗಿರುತ್ತದೆ.

ತನ್ನದು ತಪ್ಪು ಗ್ರಹಿಕೆ ಅನ್ನುವುದು ಮನವರಿಕೆಯಾದರೆ ಅದನ್ನು ಒಪ್ಪಿಕೊಳ್ಳುವ ಹಿರಿತನ ಇದೆ. ಸ್ನೇಹಕ್ಕೆ, ವಿಶ್ವಾಸಕ್ಕೆ ಆಯ್ದುಕೊಳ್ಳುವ ಕೆಲವೇ ಮಂದಿಯ ಜತೆಗೆ ಬಿಚ್ಚು ಮನಸ್ಸಿನೊಂದಿಗೆ ಒಡನಾಡುವುದಿದೆ. ಅಪರೂಪಕ್ಕೆ ಎಂಬಂತೆ ಅಚ್ಚರಿ ಮೂಡಿಸುವಂಥ ಮುಗ್ಧ ನಗು ಹೊಮ್ಮುತ್ತದೆ, ಅದು ಆಪ್ತವಾಗಿರುತ್ತದೆ.

ನಿರ್ಮೋಹತ್ವವನ್ನು ಜಯಿಸಿದ ಸುವರ್ಣರು ಮನುಷ್ಯನಿಗೆ ತನ್ನ ಬದುಕಿಗೆಷ್ಟು ಬೇಕೋ ಅಷ್ಟು ಗಳಿಕೆ ಸಾಕು. ಚಿನ್ನ, ದುಡ್ಡಿನ ಮೋಹ ಬೆಳೀತಾ ಹೋದರೆ ಮನುಷ್ಯನ ಮೇಲೆ ಪ್ರೀತಿ ಬರೋದೇ ಇಲ್ವಂತೆ ಎನ್ನುತ್ತಲೇ ಮನುಷ್ಯ ಸಂಬಂಧದ ಗಟ್ಟಿತನಕ್ಕೆ ಸೇತುವಾಗುತ್ತಾರೆ. ಇದ್ದಷ್ಟು ಕಾಲ ಪರಿಸರವನ್ನು ಸುಂದರವಾಗಿರಿಸಬೇಕು, ಸ್ವಸ್ಥ ಸಮಾಜವನ್ನು ಕಟ್ಟಬೇಕು ಅನ್ನುವ ಡಾ. ಶಿವರಾಮ ಕಾರಂತರ ನಿಲುವಿಗೆ ಬದ್ಧರಾದವರು. ಸುವರ್ಣರು ಬದುಕಿದ್ದೂ, ಬದುಕುತ್ತಿರುವುದೂ ಹಾಗೆಯೇ.

ಮಾನವತಾವಾದಿ ಸುವರ್ಣರು ತಮ್ಮ ಸಂಪಾದನೆಯಲ್ಲಿ ಒಂದಂಶವನ್ನು ಅಸಹಾಯಕರಿಗೆ, ರೋಗಿಗಳಿಗೆ ದಾನ ನೀಡಬೇಕು ಅನ್ನುವ ತತ್ವದ ಹಿನ್ನೆಲೆಯಲ್ಲಿ ತೆಗೆದಿಡುತ್ತಿದ್ದವರು. ಈ ಹಣದಿಂದಲೇ ಸುವರ್ಣರು ಕ್ಯಾನ್ಸರ್ ರೋಗಿಗಳ ಶುಶ್ರೂಷೆ ನಿರ್ವಹಿಸುವ 'ಗ್ಲೋಬಲ್ ಕ್ಯಾನ್ಸರ್ ಕನ್ಸರ್ನ್, ಬಡ ವೃದ್ಧರಿಗೆ ಊರುಗೋಲಾಗಿರುವ ಹೆಲ್ಪ್ ಏಜ್ ಇಂಡಿಯಾ, ಬಡ ಮಕ್ಕಳಿಗೆ ವಿದ್ಯೆಯ ಬೆಳಕು ನೀಡುವ ಚೈಲ್ಡ್ ಕೇರ್ ಸಂಸ್ಥೆಗಳಿಗೆ ಪ್ರತಿ ವರ್ಷವೂ ತಲಾ ಐದು ಸಾವಿರ ರೂ.ವನ್ನು ದಾನವಾಗಿ ನೀಡುತ್ತಿದ್ದಾರೆ. ಬಡ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುತ್ತಿರುವ ಮಂಗಳೂರಿನ ಶ್ರೀ ಗುರು ಚಾರಿಟೆಬಲ್ ಟ್ರಸ್ಟ್‌ನ ಕಾರ್ಯವೈಖರಿಯನ್ನು ಮೆಚ್ಚಿ ವರ್ಷಕ್ಕೆ 15,000 ರೂಗಳನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ. ಇವಿಷ್ಟು ಪ್ರತಿ ವರ್ಷದ ದಾನವಾದರೆ ಇದರ ನಡುವೆ ಅತಿವೃಷ್ಟಿ, ಅನಾವೃಷ್ಟಿ, ಭೂಕಂಪಗಳಂಥ ವಿಪತ್ತು ಸಂಭವಿಸಿದಾಗಲೂ ಸುವರ್ಣರು ಸುದ್ದಿ ಮಾಡದೆ ಪ್ರಧಾನಿ ನೆರವಿನ ಫಂಡ್‌ಗೆ ಹಣ ಡಿಡಿ ಮಾಡುತ್ತಾರೆ. ರೋಗಿಗಳಿಗೆ, ವಿದ್ಯೆಗೆ ನೆರವು ಬಯಸಿ ಬಂದವರಿಗೆ, ಇನ್ನೇನೇನೋ ಸಹಾಯ ಅಪೇಕ್ಷಿಸಿದವರಿಗೆ ಸುವರ್ಣರು ನೆರವಾದದ್ದಕ್ಕೆ ಲೆಕ್ಕವಿಲ್ಲ. ಈ ಸೇವೆಯಿಂದ ಅವರು ಖುಷಿ ಪಟ್ಟಿದ್ದಾರೆ. 'ಇದು ನನಗೆ ಜೀವನದಲ್ಲಿ ಒಂದು ರೀತಿಯ ತೃಪ್ತಿ ನೀಡಿದೆ' ಎಂದು ಧನ್ಯತೆ ಅನುಭವಿಸುತ್ತಾರೆ.

### ಕಾರಂತರ ನೆನಪಿಗೆ ಕಾರಂತೋತ್ಸವ

ಕಾರಂತೋತ್ಸವ ಸುವರ್ಣರ ಬದುಕಿನ ಇನ್ನೊಂದು ಮೈಲುಗಲ್ಲು. ಡಾ. ಶಿವರಾಮ ಕಾರಂತರ ಆದರ್ಶಗಳನ್ನು, ಬದುಕನ್ನು ಅಳವಡಿಸಿಕೊಂಡಿರುವ ಸದಾನಂದ ಸುವರ್ಣರು ಅವರ ನೆನಪಿಗಾಗಿ ಮುಂಬಯಿಯಲ್ಲಿ ಕಾರಂತೋತ್ಸವವನ್ನು ನಡೆಸುತ್ತಿದ್ದಾರೆ. ಪ್ರತಿ ವರ್ಷ ಕಾರಂತರ ಹುಟ್ಟು ಹಬ್ಬದಂದು ಕಾರಂತರ ಕುರಿತ ಉಪನ್ಯಾಸ ಕಾರ್ಯಕ್ರಮ, ಅವರ ಸ್ಮರಣಾರ್ಥ ಕನ್ನಡಿಗ ಎಳೆಯ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡುತ್ತವೆ. ವಿಜೇತರಿಗೆ ಬಹುಮಾನ ವಿತರಣೆ ಇದ್ದೇ ಇರುತ್ತದೆ.

ಕನ್ನಡ ರಂಗಭೂಮಿ, ಶಿಕ್ಷಣ ರಂಗದ ಜತೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೆಂಬಲ ನೀಡುತ್ತ ಹೊಸ ಪೀಳಿಗೆಗೆ ಮಾರ್ಗದರ್ಶನ ನೀಡುವುದು ಅವರ ಧ್ಯೇಯವಾಗಿದೆ.

## ಸಾಂಸ್ಕೃತಿಕ ಪ್ರತಿಷ್ಠಾನ ಸ್ಥಾಪನೆ

ಕೆಲವು ಸಂಸ್ಥೆಗಳ ಕಾರ್ಯನಿರ್ವಾಹಕ ಸಮಿತಿಯಲ್ಲಿದ್ದು ದುಡಿಯುತ್ತಿದ್ದಾಗ ಎದುರಾದ ಅನೇಕ ಕಹಿ ಅನುಭವಗಳಿಂದಾಗಿ ಸ್ವತಂತ್ರ ಸಂಸ್ಥೆಯೊಂದನ್ನು ಹುಟ್ಟು ಹಾಕುವುದಕ್ಕೆ ಮುಂದಾಗಿದ್ದಾರೆ. ದಾನ, ಧರ್ಮಕ್ಕೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದಕ್ಕೋಸ್ಕರ 'ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ'ವೊಂದನ್ನು 1996ರಲ್ಲಿ ಅವರು ಹುಟ್ಟುಹಾಕಿದರು. ಇದೊಂದು ಧರ್ಮಾದಾಯಿ ಸಂಸ್ಥೆ. ಸ್ವತಃ ಸುವರ್ಣರು ಮ್ಯಾನೇಜಿಂಗ್ ಟ್ರಸ್ಟಿಯಾಗಿ ಅವರ ಇಬ್ಬರು ಸ್ನೇಹಿತರು ಟ್ರಸ್ಟಿಗಳಾಗಿ ಸಂಸ್ಥೆಯನ್ನು ನಡೆಯಿಸುತ್ತಿದ್ದಾರೆ. ರಂಗಭೂಮಿ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ಪ್ರತಿಷ್ಠಾನ ಅಚ್ಚುಕಟ್ಟಾಗಿ ನಡೆಯಿಸಿಕೊಂಡು ಬರುತ್ತಿದೆ.

## ಸುವರ್ಣಗಿರಿ ಫಿಲ್ಮ್ಂಸ್ / ಪ್ರಕಾಶನದ ಹೆಜ್ಜೆ ಗುರುತು

ನಲವತ್ತು ಐವತ್ತು ವರ್ಷಗಳಷ್ಟು ಹಿಂದೆ ಮುಂಬಯಿಯ ಲೇಖಕರಿಗೆ ಕೃತಿ ಪ್ರಕಟಣೆ ಕಾರ್ಯ ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಖ್ಯಾತನಾಮರ ಕೃತಿಗಳು ಅಚ್ಚಾಗುತ್ತಿದ್ದವು. ಮತ್ತುಳಿದ ಬರಹಗಾರರಿಗೆ ಪ್ರಕಟಣೆ ಅನ್ನುವುದು ಕನಸಾಗಿತ್ತು. ಪ್ರಕಾಶಕರು ಅವರ ಕೈಗೆಟಕುತ್ತಿರಲಿಲ್ಲ. ಸುವರ್ಣರು ಮುಂಬಯಿಯ 'ತಾಯ್ನುಡಿ', 'ಚೇತನ' ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು. ಸಂಸ್ಥೆಗಳ ಮುಖವಾಣಿ 'ಅಕ್ಷಯ', 'ಮೊಗವೀರ' ಪತ್ರಿಕೆಗಳಲ್ಲಿ ತಮ್ಮ ಕಥೆ ಪ್ರಕಟಗೊಂಡಾಗ ಖುಷಿ ಅನುಭವಿಸುತ್ತಿದ್ದರು. ಸುವರ್ಣರಾದರೂ ಮೊದಲು 'ರಂಗರಶ್ಮಿ' ಪ್ರಕಾಶನ ಮೂಲಕ ಆರಂಭಿಕ ನಾಟಕ ಕೃತಿಗಳನ್ನು ಪ್ರಕಟಿಸುತ್ತಿದ್ದರು. ಕ್ಲಾಸ್‌ಮೇಟ್ ರಾಮ ಕಾಮತ್ ಅವರ ಮೂಲ್ಕಿಯ ಪ್ರೆಸ್‌ನಲ್ಲಿ ಅವುಗಳನ್ನು ಮುದ್ರಿಸುತ್ತಿದ್ದರು. ಮಾರಾಟ ವ್ಯವಸ್ಥೆಯ ಕಷ್ಟವನ್ನೂ ಆಗೆಲ್ಲ ಅನುಭವಿಸಿದ್ದರು. ತಾನೂ ಯಾಕೆ ಪ್ರಕಾಶನದ ಮೂಲಕ ತನ್ನ ಹಾಗೂ ಇತರ ಸ್ನೇಹಿತರ, ಹೊಸ ತಲೆಮಾರಿನವರ ಕೃತಿಗಳನ್ನು ಪ್ರಕಟಿಸಬಾರದು ಎಂದು ಯೋಚಿಸಿದರು. ಆ ನಿಟ್ಟಿನಲ್ಲಿ ತೊಡಗಿಸಿಕೊಂಡರು. ಸುವರ್ಣಗಿರಿ ಪ್ರಕಾಶನದ ಹೆಸರಿನಲ್ಲಿ ತಮ್ಮ ಆರ್ಥಿಕ ಮಿತಿಯಲ್ಲಿ ಆ ಕೆಲಸವನ್ನು ಈಗಲೂ ನಿಭಾಯಿಸುತ್ತಿದ್ದಾರೆ. ಸುವರ್ಣಗಿರಿ ಫಿಲ್ಮ್ಸ್ ಹೆಸರಿನಲ್ಲಿ ಸಿನಿಮಾ, ಧಾರಾವಾಹಿಗಳನ್ನೂ ನಿರ್ಮಿಸುತ್ತಿದ್ದ ಸುವರ್ಣರು ಪ್ರಕಾಶನಕ್ಕೂ ಅದೇ ಹೆಸರನ್ನು ಇರಿಸಿಕೊಂಡರು.

## ದತ್ತಿನಿಧಿ

ರಂಗಭೂಮಿಗೆ ಸಂಬಂಧಿಸಿದಂತೆ ಅನೇಕ ಉಪನ್ಯಾಸ, ವಿಚಾರ ಸಂಕಿರಣಗಳು ಅಲ್ಲಲ್ಲಿ ಜರುಗುತ್ತಲೇ ಇರಬೇಕು ಅನ್ನುವ ಕಾರಣಕ್ಕಾಗಿ ಅನೇಕ ದತ್ತಿ ದೇಣಿಗೆ ನೀಡಿದ್ದಾರೆ. ರಂಗಭೂಮಿಯ ಚಲನಶೀಲತೆಗೆ ಈ ಮೂಲಕವೂ ಕೊಡುಗೆ ನೀಡಿದ್ದಾರೆ ಸುವರ್ಣರು.

1. ಮುಂಬಯಿ ಕರ್ನಾಟಕ ಸಂಘಕ್ಕೆ 15,000 ರೂಗಳನ್ನು ದತ್ತಿ ನೀಡಿದ್ದಾರೆ. ರಂಗತಜ್ಞರಿಂದ ಉಪನ್ಯಾಸ ಏರ್ಪಡಿಸಲಾಗುತ್ತಿದೆ.

2. ಕರ್ನಾಟಕ ತುಳು ಅಕಾಡೆಮಿ ಸುವರ್ಣರಿಗೆ ರೂ. 10,000 ಸಮೇತ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿತ್ತು. ಸುವರ್ಣರು ಆ ಹಣಕ್ಕೆ ತನ್ನ ಬಳಿಯಿದ್ದ 5000 ರೂ.ವನ್ನು ಸೇರಿಸಿ ಒಟ್ಟು 15,000ರೂ.ವನ್ನು ಅಕಾಡೆಮಿಗೆ ಮರಳಿಸಿದರು. ಪ್ರತಿ ವರ್ಷ ರಂಗಭೂಮಿ ಕುರಿತು ಉಪನ್ಯಾಸ ನೆರವೇರಿಸಬೇಕು ಎಂದು ವಿನಂತಿಸಿಕೊಂಡರು.

3. ಮುಂಬಯಿಯ ಗೋರೆಗಾಂವ್ ಕರ್ನಾಟಕ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ ದಿನ ಸಂಸ್ಥಾಪಿಸಿದ ಸುವರ್ಣರ ಕನಸಿನ ಕೂಸು ರಂಗಸ್ಥಳ 'ರಂಗ ತರಬೇತಿ ಕೇಂದ್ರ'ದಿಂದ ಪ್ರತಿ ವರ್ಷ ನವೆಂಬರ್ 1 ರಂದು ರಂಗಭೂಮಿ ಕುರಿತು ಉಪನ್ಯಾಸ ಅಥವಾ ನಾಟಕ ವಾಚನ ಕಾರ್ಯಕ್ರಮ ನಡೆಸುವಂತೆ ಆಶಿಸಿ 15,000ರೂ. ದತ್ತಿ ನೀಡಿದ್ದಾರೆ. ತಾವು ಹುಟ್ಟುಹಾಕಿದ ಈ ಸಂಸ್ಥೆ ನಿರಂತರ ಕ್ರಿಯಾಶೀಲವಾಗಿ ಬಾಳಬೇಕು, ಬೆಳೆಯಬೇಕು ಅನ್ನುವುದು ಸುವರ್ಣರ ಕನಸು. ಇದಕ್ಕೆ ಸಂಸ್ಥೆಯನ್ನು ಮುನ್ನಡೆಸುತ್ತಿರುವ ಸದಸ್ಯರು ತುಂಬು ಮನಸ್ಸಿನಿಂದ ಸಾಥ್ ನೀಡುತ್ತಿದ್ದಾರೆ, ಸುವರ್ಣರಿಗೆ ನೆಮ್ಮದಿ ನೀಡಿದ್ದಾರೆ.

## ಪ್ರಶಸ್ತಿಗಳು :

ಸುವರ್ಣರ ಜೀವಮಾನ ಸಾಧನೆಗೆ ದೊರೆತ ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳು ಅಸಂಖ್ಯ. ಸುವರ್ಣರ ಜೀವಮಾನ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ತುಳು ಅಕಾಡೆಮಿ, ನಾಟಕ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ ಕೊಡಮಾಡುವ 'ಕರ್ನಾಟಕ ಶ್ರೀ' ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ನಾರಾಯಣ ಗುರು ಪ್ರಶಸ್ತಿ, ವಿಶುಕುಮಾರ್ ಪ್ರಶಸ್ತಿ, ಸಾಧನಾ ಶಿಬಿರ ಪ್ರಶಸ್ತಿ, ಆತ್ಮಶಕ್ತಿ ಪ್ರಶಸ್ತಿ, ಕಾರಂತ ಹುಟ್ಟೂರ ಪ್ರಶಸ್ತಿ, ಸುವರ್ಣರು ನಿರ್ಮಿಸಿದ ಮೊದಲ ಚಿತ್ರ 'ಘಟಶ್ರಾದ್ಧ' ಸಿನಿಮಾಕ್ಕೆ ಸ್ವರ್ಣ ಕಮಲ ರಾಷ್ಟ್ರೀಯ ಪ್ರಶಸ್ತಿ, 'ಕುಬಿ ಮತ್ತು ಇಯಾಲಾ'ದ ನಿರ್ದೇಶನಕ್ಕೆ ರಾಜ್ಯ ಪ್ರಶಸ್ತಿ, 'ಗುಡ್ಡದಭೂತ' ಧಾರಾವಾಹಿಗೆ ಆರ್ಯಭಟ, ಸಂದೇಶ ಪ್ರಶಸ್ತಿಗಳು ದೊರೆತಿವೆ. ...ಹೀಗೆ ಸದಾನಂದ ಸುವರ್ಣರಿಗೆ ಸಂದ ಸನ್ಮಾನಗಳ ಸುದೀರ್ಘ ಪಟ್ಟಿಯೇ ಇದೆ. ಕನ್ನಡ ಸಂಘವು ನಾಡಿಗೆ ನಮಸ್ಕಾರ ಮಾಲಿಕೆಯ ಮೊದಲ ಕಂತಿನಲ್ಲೇ ಸುವರ್ಣರ ಕುರಿತು 'ರಂಗಕರ್ಮಿ ಸದಾನಂದ ಸುವರ್ಣ' ಕೃತಿ ರಚಿಸಿ ಗೌರವಿಸಿದೆ. ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕದ ವತಿಯಿಂದ 'ಗುಡ್ಡದಭೂತ ಸಾಕ್ಷಾತ್ಕರಿಸಿದ ಸದಾನಂದ ಸುವರ್ಣ' ಹೆಸರಿನ ಅಭಿನಂದನ ಗ್ರಂಥ ಸಮರ್ಪಿಸಿ ಗೌರವಿಸಿದೆ. ಮುಂಬಯಿ ವಿಶ್ವ ವಿದ್ಯಾಲಯವು ಸುವರ್ಣರ ಬದುಕು-ಸಾಧನೆ ಕುರಿತು ಎಂಫಿಲ್ ಅಧ್ಯಯನಕ್ಕೆ ಒಳಪಡಿಸಿದೆ.

****

# ಪರಿವಿಡಿ

ಪ್ರಸ್ತಾವನೆ

ಅಧ್ಯಾಯಗಳು

1 – ರಂಗ ಪ್ರೀತಿ–ಸಾಂಗತ್ಯ 1

2 – ನಿರ್ದೇಶನ ಮಟ್ಟು: ಸಮನ್ವಯತೆಯ ನೆಲೆಗಟ್ಟು 10

3 – ರಂಗಕೃತಿ: ಅನನ್ಯ, ಅನ್ಯಾನ್ಯ 24

4 – ಅಭಿನಯ ಅನುಭಾವ(ವಿ) 67

5 – ರಂಗ ಸಂಘಟನೆ: ಸಮರ್ಥ ನಾಯಕತ್ವ 78

6 – ಸುವರ್ಣ ರಂಗ ಚಿಂತನೆ 95

7 – ಸಾಹಿತ್ಯ, ಬೆಳ್ಳಿ ತೆರೆ: ಹೊಸ ಜಾಡಿನ ಸಂವೇದನೆ 105

ಸಮಾರೋಪ ರಂಗಭೂಮಿಯ ಜಂಗಮ 130

ಆಕರ ಗ್ರಂಥಗಳು 132

ಲೇಖಕರ ವಿವರ 141

ಚಿತ್ರ ಸಂಪುಟ 143

ಅಧ್ಯಾಯ 1

# ರಂಗ ಪ್ರೀತಿ, ಸಾಂಗತ್ಯ

ಸುವರ್ಣರ ರಂಗ ಪಯಣ ಬಹಳ ರೋಚಕವಾದದ್ದು, ಸಾಹಸಪ್ರಧಾನವಾದದ್ದು. ಸವಾಲುಗಳ ನಡುವೆಯೇ ಹೆಜ್ಜೆಯನ್ನೂರುತ್ತ ಗೆಲುವಿನ ಸೋಪಾನವನ್ನು ಒಂದಾದ ಮೇಲೊಂದರಂತೆ ದಾಟುತ್ತ ಹೋದ ಸುವರ್ಣರ ಹೆಜ್ಜೆ ಗುರುತುಗಳನ್ನು (ಆರಂಭದಿಂದ ಇದುವರೆಗಿನ ಕ್ಷಣಗಳನ್ನು) ಮೆಲುಕು ಹಾಕುವುದು ಅಂದರೆ ಅವರ ಸಾಧನೆಯ ಪುಟಗಳನ್ನು ತೆರೆದಿಡುವುದಾಗಿದೆ. ಕಷ್ಟದ ಹಾದಿಯಲ್ಲಿ ಸುಖದ ಹಾಗೂ ಯಶಸ್ಸಿನ ಸುರಿಮಳೆ ಅವರ ಪಾಲಿಗೆ ದಕ್ಕಿದೆ ಎನ್ನುವುದಂತೂ ನಿಜ.

ಸುವರ್ಣರ ತಂದೆಯ ಬಿಡಾರವಿದ್ದದ್ದು ಪೋರ್ಟ್ ಪರಿಸರದಲ್ಲಿ. ಇಲ್ಲಿ ಹೆಚ್ಚಾಗಿ ಕರಾವಳಿ ಕನ್ನಡಿಗರೇ ಸೇರಿದ್ದರಿಂದ ಸಾಂಸ್ಕೃತಿಕ ಚಟುವಟಿಕೆಗಳನ್ನು ಬಹಳವಾಗಿ ನಡೆಸುತ್ತಿದ್ದರು. ಭಾನುವಾರ ರಜಾ ದಿನವಾದದ್ದರಿಂದ ನಾನಾ ಸಭಾಗೃಹಗಳಲ್ಲಿ ಶಾಲೆಗಳ ಹಾಗೂ ವಿವಿಧ ಸಂಘ ಸಂಸ್ಥೆಗಳ ವಾರ್ಷಿಕೋತ್ಸವಗಳು ಏರ್ಪಡುತ್ತಲೇ ಇರುತ್ತಿದ್ದವು. ಮನರಂಜನೆಯ ಕಾರ್ಯಕ್ರಮದಲ್ಲಿ ಕನ್ನಡ ಹಾಗೂ ತುಳು ನಾಟಕಗಳೇ ಪ್ರಧಾನ ಆಕರ್ಷಣೆಯಾಗಿದ್ದವು. ಆಯಾ ಶಾಲೆಗಳ ವಿದ್ಯಾರ್ಥಿಗಳು, ಹಳೆ ವಿದ್ಯಾರ್ಥಿಗಳು, ಅಧ್ಯಾಪಕ ವೃಂದದವರೆಲ್ಲ ಜತೆಯಾಗಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು.

ವಿದ್ಯಾರ್ಥಿ ಸುವರ್ಣರು ತಾವೂ ನಾಟಕದಲ್ಲಿ ಭಾಗವಹಿಸುತ್ತಿದ್ದುದರಿಂದ ನಾನಾ ಶಾಲೆಗಳ ವಾರ್ಷಿಕೋತ್ಸವದ ನಾಟಕಗಳನ್ನು ಇಷ್ಟಪಟ್ಟು, ಕುತೂಹಲದಿಂದಲೇ ನೋಡುತ್ತ ಬಂದರು. ಪತ್ರಿಕೆಗಳಲ್ಲಿ ಗುಜರಾತಿ, ಮರಾಠಿ ಹಾಗೂ ಹಿಂದಿ ಭಾಷೆಗಳ ನಾಟಕಗಳ ಪ್ರದರ್ಶನ ಕುರಿತ ಜಾಹೀರಾತು ಗಮನಿಸಿ ಅವುಗಳನ್ನೂ ನೋಡುವುದಕ್ಕೆ ಮುಂದಾದರು.. ಬೆರಗಾದ ಸುವರ್ಣರಿಗೆ ರಂಗಭೂಮಿ, ಪ್ರಯೋಗಶೀಲತೆಗಳ ಬಗೆಗೆ ಅರಿವಾಯಿತು.

ಇತರ ಭಾಷೆಗಳ ರಂಗ ಶ್ರೀಮಂತಿಕೆ, ಕನ್ನಡ ರಂಗಭೂಮಿಯ ಬಡತನ ಗಮನಕ್ಕೆ ಬಂತು. ಈ ಬಗ್ಗೆ ಬೇಸರವೂ ಆಯಿತು. ಇತರ ಭಾಷೆಗಳ ನಾಟಕಗಳ ವಸ್ತು, ಅಭಿನಯ, ರಂಗ ಸಜ್ಜಿಕೆ, ಬೆಳಕಿನ ಸಂಯೋಜನೆ ಎಲ್ಲದರಲ್ಲೂ ವಿಶಿಷ್ಟತೆಯನ್ನೂ ಕಂಡರು, ವಿಸ್ಮಿತರಾದರು. ರಂಗಭೂಮಿಗೆ ಈ ಬಗೆಯಲ್ಲಿ ಕನ್ನಡ ರಂಗಭೂಮಿಯನ್ನು ಬೆಳೆಯಿಸಬೇಕು ಅನ್ನುವ

ನಿಲುವಿಗೆ ಆಗಲೇ ಬಂದುಬಿಟ್ಟರು. ಕನ್ನಡ ರಂಗಭೂಮಿಯ ಗುಣಮಟ್ಟದ ವಿಕಸನಕ್ಕೆ ಒಳಗೊಳಗೇ ಸಜ್ಜಾದ ಸುವರ್ಣರು ಪಟ್ಟುಬಿಡದೆ ದೂರ ದೂರದ ಸಭಾಗೃಹಗಳಿಗೆ ತೆರಳಿ ಬೇರೆ ಬೇರೆ ಭಾಷೆಯ ನಾಟಕಗಳನ್ನು ನೋಡತೊಡಗಿದರು. ಅಲ್ಲಿನ ರಂಗಪ್ರಯೋಗದ ಎಲ್ಲ ಮಜಲುಗಳನ್ನು, ಹೊಸತುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ತಾನು ಹೇಗೆ ವಿಶಿಷ್ಟ, ವಿಭಿನ್ನ ಹಾಗೂ ಅನನ್ಯ ಆಗಬೇಕು ಅನ್ನುವುದಕ್ಕೂ ದೃಢವಾದ ಚೌಕಟ್ಟು ಹಾಕಿಕೊಂಡಿದ್ದ ಸುವರ್ಣರು ತಮ್ಮ ಪ್ರತಿಭೆಯಿಂದ ಮುಂಬಯಿಯ ಕನ್ನಡ ರಂಗಭೂಮಿಗೆ ಹೊಸ ಜೀವ ಕೊಟ್ಟರು.

ಮುಂಬಯಿ ಮಹಾ ನಗರದೊಳಗೆ ಬೆಳೆದ ಸುವರ್ಣರು ಮುಂಬಯಿಯ ಹೃದಯದೊಳಗೆ ಮರಾಠಿ, ಗುಜರಾತಿ, ಫಾರ್ಸಿ, ಹಿಂದಿ ಹಾಗೂ ಇಂಗ್ಲಿಷ್ ನಾಟಕಗಳ ಶ್ರೀಮಂತಿಕೆಯನ್ನು, ಘನಸ್ತಿಕೆಯನ್ನು ಅವಲೋಕಿಸುತ್ತ ಕನ್ನಡ ರಂಗಭೂಮಿಯೊಂದಿಗೆ ಇರಿಸಿ ತೂಗಿ ನೋಡುತ್ತಿದ್ದರು. ಚೌಪಾಟಿಯ ಭಾರತೀಯ ವಿದ್ಯಾ ಮಂದಿರ ಹಾಗೂ ರವೀಂದ್ರ ನಾಟ್ಯ ಮಂದಿರ, ಕೋಟೆಯೊಳಗಿನ ಜೈಹಿಂದ್ ಕಾಲೇಜುಗಳಲ್ಲಿ ನಡೆಯುತ್ತಿದ್ದ ವೈವಿಧ್ಯಮಯ ನಾಟಕಗಳನ್ನು ಬಿಡದೇ ನೋಡುತ್ತಿದ್ದ ಸುವರ್ಣರು ಅವುಗಳಿಗೆ ಮಾರು ಹೋಗಿದ್ದರು. ಗುಜರಾತಿ ರಂಗಭೂಮಿಯ ನಿರ್ದೇಶಕ ಪ್ರವೀಣ್ ಜೋಶಿ ಅವರ ನಿರ್ದೇಶನದ ಪರಿಣಾಮಕಾರಿ ಪ್ರಯೋಗಗಳು, ಪಾರ್ಸಿ ನಾಟಕಗಳ ನಿರ್ದೇಶಕ ಆದಿ ಮರ್ಜಬಾನ್, ಬುಲಾಬ್ಯಾ ಇನ್‌ಸ್ಟಿಟ್ಯೂಟ್‌ನ ಥಿಯೇಟರ್‌ನಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಸತ್ಯದೇವ್ ದುಬೆ ಅವರ ಥಿಯೇಟರ್ ಯೂನಿಟ್ ನಾಟಕಗಳು, ಎಲಿಕ್ ಪದಮ್‌ಸಿ ಹಾಗೂ ಪರ್ಲ್ ಪದಮ್‌ಸಿ ಅವರ ಥಿಯೇಟರ್ ಗ್ರೂಪ್‌ನ ಇಂಗ್ಲಿಷ್ ನಾಟಕಗಳ ಪ್ರಯೋಗಗಳು, ಮರಾಠಿ ನಾಟಕಗಳು, ವಿದೇಶೀ ತಂಡಗಳ ಪ್ರಯೋಗಗಳನ್ನೆಲ್ಲ ನೋಡುತ್ತ ಗಂಭೀರವಾಗಿಯೇ ಪರಾಮರ್ಶಿಸುತ್ತಿದ್ದರು.

ಮುಂಬಯಿ ಕನ್ನಡ ರಂಗಭೂಮಿಯಲ್ಲಿ ಅಭಿನಯ, ರಂಗಸಜ್ಜಿಕೆ, ಸಂಗೀತ, ಬೆಳಕಿನ ಸಂಯೋಜನೆ ಯಾವುದೂ ಆ ಐವತ್ತರ ದಶಕದಲ್ಲಿ ಉತ್ತಮ ಅನ್ನುವಂತಿರಲಿಲ್ಲ. ಬಾಡಿಗೆಗೆ ದೊರೆಯುವ ಮನೆ, ಉದ್ಯಾನವನ, ರಸ್ತೆ, ದೇವಸ್ಥಾನ, ಅರಮನೆ, ಆಸ್ಥಾನ ಮೊದಲಾದ ಪೇಂಟ್ ಮಾಡಿದ ಪರದೆಗಳನ್ನೇ ಎಲ್ಲ ನಾಟಕಗಳಿಗೂ ಬಳಸಲಾಗುತ್ತಿತ್ತು. ರಂಗಕರ್ಮಿಗಳ ಅನುಭವದ ಕೊರತೆ ಎಲ್ಲ ನೆಲೆಯಿಂದಲೂ ಕಂಡುಬರುತ್ತಿತ್ತು. ಅನ್ಯ ಭಾಷೆಯ ನಾಟಕಗಳನ್ನು ನೋಡುವ, ಅಲ್ಲಿನ ತಂತ್ರಗಳನ್ನು ಸ್ವೀಕರಿಸುವ ಅಥವಾ ಅನುಸರಿಸುವ ಗೋಜಿಗೇ ಹೋಗದ ಕನ್ನಡ ರಂಗ ನಿರ್ದೇಶಕರು ತಾವು ಮಾಡಿದ್ದೇ ಉತ್ಕೃಷ್ಟ ಅನ್ನುವ ಭಾವನೆಯೊಂದಿಗೆ ಚಲನಶೀಲತೆ ಕಳೆದುಕೊಂಡಿದ್ದರು ಅನ್ನುವುದನ್ನು ಸುವರ್ಣರು ಅರ್ಥಮಾಡಿಕೊಂಡಿದ್ದರು. ಕೆ.ಸಿ.ಕಾಲೇಜಿನಲ್ಲಿ ಏರ್ಪಡಿಸಿದ್ದ ನಾಟಕ 'ಶಹಜಹಾನ್' ನೋಡುವುದಕ್ಕೆ ತೆರಳಿದ್ದರು ಸುವರ್ಣರು. ನಾಟಕದ ಆರಂಭಕ್ಕೆ ಮೊದಲು 'ಜನಸಾಮಾನ್ಯರಿಂದ ಆಡಲಾಗದ ಒಂದು ನಾಟಕ ಪ್ರದರ್ಶಿಸುತ್ತಿದ್ದೇವೆ' ಎಂದು ಘೋಷಿಸಿದ್ದು. ಆದರೆ ಆ ಪ್ರಯೋಗ ಹಾಗೆ ಹೇಳಿಕೊಂಡ ಮಟ್ಟದ ಹತ್ತಿರವೂ ತಲುಪದಿದ್ದುದನ್ನು ಕಂಡು ಬಾವಿಯೊಳಗಿನ ಕಪ್ಪೆ

ಅನ್ನುವ ಮಾತು ನಿಜವಾಗುವುದು ಇಂಥ ಸಂದರ್ಭಗಳಿಂದಲೇ ಅನ್ನುವುದನ್ನು ತೀರ್ಮಾನಿಸಿದರು. ಯಾವ ವಿಧದಿಂದಲೂ ಕನ್ನಡ ರಂಗಭೂಮಿ ಇತರ ಭಾಷೆಯ ರಂಗಭೂಮಿಯ ಜತೆಗಿಟ್ಟು ಪರಾಮರ್ಶಿಸುವಂತೆಯೇ ಇಲ್ಲ ಅನ್ನುವುದನ್ನು ಕಂಡುಕೊಂಡರು.

ಕನ್ನಡ ರಂಗಭೂಮಿ ಸೊರಗಿದ್ದೆಲ್ಲಿ ಅನ್ನುವುದನ್ನು, ಬಿಡುವು ಸಿಕ್ಕಾಗೆಲ್ಲ ಪರಾಮರ್ಶಿಸುತ್ತಿದ್ದರು. ಕನ್ನಡ ರಂಗಭೂಮಿಯ ಕಾಯಕಲ್ಪದ ಬಗ್ಗೆ ಈ ನಾಟಕಗಳನ್ನು ನೋಡುತ್ತಲೇ ತಪೋಮಗ್ನರಾದರು. ತಾನು ಇಲ್ಲಿನ ಉತ್ತಮ ಅಂಶಗಳನ್ನು ಹೇಗೆ ಸ್ವೀಕರಿಸಬೇಕು ಮತ್ತು ಇವೆಲ್ಲಕ್ಕಿಂತ ತಾನು ಹೇಗೆ ಭಿನ್ನವಾಗಬೇಕು, ಕನ್ನಡ ರಂಗಭೂಮಿಯನ್ನು ಹೇಗೆ ಊರ್ಧ್ವಮುಖಿಯಾಗಿಸಬೇಕು ಅನ್ನುವ ನಿಟ್ಟಿನಲ್ಲಿ ಬಹಳ ಮುತುವರ್ಜಿಯಿಂದ ತೌಲನಿಕ ಅಧ್ಯಯನ ಮಾಡಿದರು. ರಂಗಭೂಮಿಯ ವಿಸ್ತಾರ–ವಿಕಸನಗಳನ್ನೆಲ್ಲ ರಂಗ ಕಾಳಜಿಯಿಂದಲೇ ಗ್ರಹಿಸುತ್ತ ಬೆಳೆದರು. ಅನ್ಯ ರಂಗಭೂಮಿಯ ಸ್ಟೇಜ್, ಬೆಳಕು, ಸಂಗೀತ ಎಲ್ಲವೂ ಹೃದ್ಯವಾಯಿತು. ನಾಟಕಗಳ ಯಶಸ್ಸಿನ ಹಿಂದೆ ಇವುಗಳ ಮಹತ್ವವನ್ನೂ ಗ್ರಹಿಸಿದರು. ಮರಾಠಿ ರಂಗಭೂಮಿಯ ಕೊಡುಗೆಗಳು ಹಾಗೂ ಮರಾಠಿ ಪ್ರೇಕ್ಷಕರ ಉತ್ತೇಜನವನ್ನು ಆಶ್ಚರ್ಯದಿಂದಲೇ ಸ್ವೀಕರಿಸಿ ಅಭಿಮಾನಿಸುತ್ತಾರೆ. ಆದಿ ಮರ್ಜಬಾನ್‌ರು ರಂಗದಲ್ಲಿ ಸೃಷ್ಟಿಸುವ ನೈಜತೆ ಸುವರ್ಣರನ್ನು ಬಹಳವಾಗಿ ಆಕರ್ಷಿಸಿದೆ. ಬುಲಾಬ್ಯಾ ದೇಸಾಯ್ ಇನ್‌ಸ್ಟಿಟ್ಯೂಟ್ ಪೆಡ್ಡರ್ ರೋಡ್‌ನಲ್ಲಿ ಥಿಯೇಟರ್ ಯುನಿಟ್ ಬ್ಯಾನರ್‌ನಲ್ಲಿ ಸತ್ಯದೇವ್ ದುಬೆ ಅವರ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಅಲ್ಲಿನ ಅವರ ರಂಗನಿಷ್ಠೆ, ಪ್ರಯೋಗಪ್ರೀತಿ ಸುವರ್ಣರಿಗೆ ಸ್ಫೂರ್ತಿಯಾದವು. ಥಿಯೇಟರ್ ಯುನಿಟ್ ಬ್ಯಾನರ್‌ನಲ್ಲಿ ದುಬೆಯವರು ಪ್ರಾಯೋಗಿಕ ಹಿಂದಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು, ಬಳಿಕ ಕರ್ನಾಟಕ ಸಂಘದ ಸಭಾಗೃಹದಲ್ಲೂ ಪ್ರದರ್ಶಿಸಿದ್ದಾರೆ. ಪ್ರೇಕ್ಷಕರ ಸಂಖ್ಯೆ ಅವರಿಗೆ ಮುಖ್ಯವಾಗುತ್ತಿರಲಿಲ್ಲ. ಹತ್ತೇ ಜನರಿದ್ದರೂ ಅದೇ ತಾದಾತ್ಮ್ಯದಿಂದ ಪ್ರದರ್ಶನ ನಡೆಸುತ್ತಿದ್ದುದು ಸುವರ್ಣರಲ್ಲಿ ಅಚ್ಚರಿ ಹುಟ್ಟಿಸಿತ್ತು.

ವಾಸ್ತವ ರಂಗಭೂಮಿಯ ಮೇರು ವ್ಯಕ್ತಿತ್ವ ಪೃಥ್ವಿರಾಜ್ ಕಪೂರ್. ಅವರ ಪ್ರಯೋಗಗಳಲ್ಲಿ ಮುಖ್ಯವಾದ ಗದ್ದಾರ್, ಪಠಾಣ್, ಪೈಸಾ ಆಹುತಿ....ಮತ್ತಿತರ ನಾಟಕಗಳೆಲ್ಲ ಸುವರ್ಣರನ್ನು ವಿಶೇಷವಾಗಿ ತಟ್ಟಿದ್ದವು. ಎಲ್ಲ ಅವಯವಗಳಿಂದಲೂ ಪರಿಪೂರ್ಣ ಅನ್ನುವಂಥ ಸಂಯೋಜನೆ, ನಿರ್ದೇಶನ ಸುವರ್ಣರನ್ನು ಗಾಢವಾಗಿ ತಟ್ಟಿದೆ. ನಾಟಕವೊಂದು ನಾಟಕೀಯಗೊಳ್ಳುವಾಗಲೂ ಕೃತಕತೆಯ ಲವಲೇಶವಿಲ್ಲದೆ ಘಟನೆಯೊಂದು ಸಂಭವಿಸುತ್ತಿದೆ ಅನ್ನುವಷ್ಟು ನೈಜವಾಗಿ ನಡೆಯುತ್ತಿರುವುದು ಅವರಿಗೆ ಅಚ್ಚರಿಯ ಜತೆಗೆ ಅನುಸರಣೀಯ ಅನ್ನಿಸಿತು. ಕಪೂರ್ ಹಿಂದಿ ರಂಗಭೂಮಿಗೆ ಬಹುದೊಡ್ಡ ಕಾಣ್ಕೆ ಎಂದೇ ಸುವರ್ಣರು ಕೊಂಡಾಡುತ್ತಾರೆ. ಅವರ ಮೂವ್‌ಮೆಂಟ್ಸ್, ಚಲನವಲನಗಳನ್ನು ನಿಯಂತ್ರಿಸುವ ರೀತಿ ಸುವರ್ಣರ ಕುತೂಹಲ ಹೆಚ್ಚಿಸಿತ್ತು.

ಕಪೂರರ ತೆರೆಯ ಮೇಲಿನ ಹಾಗೂ ತೆರೆಯ ಹಿಂದಿನ ಎಲ್ಲ ಚಟುವಟಿಕೆಗಳನ್ನೂ ಬಿಡದೇ ಅವಲೋಕಿಸಿ, ಅವರೊಂದಿಗೇ ಚರ್ಚಿಸಿ, ಅವರಲ್ಲಿನ ಶಿಸ್ತನ್ನು ಆವಾಹಿಸಿಕೊಂಡಿದ್ದಾರೆ. ರಂಗತಂಡವೊಂದರ ಯಶಸ್ಸಿನ ಗುಟ್ಟನ್ನೂ ಅವರ ತಂಡವನ್ನು ಗಮನಿಸಿಯೇ ಅರಿತುಕೊಂಡಿದ್ದಾರೆ. ಐವತ್ತರ ದಶಕದಲ್ಲಿ ಅಭಿನಯ, ಪಾತ್ರ ನಿರೂಪಣೆ, ರಂಗಭೂಮಿಯ ವಿವಿಧ ಕಲೆಗಳಾದ ಸಂಗೀತ, ಬೆಳಕಿನ ಸಂಯೋಜನೆಯಲ್ಲಿ ಹೊಸ ವಾತಾವರಣವನ್ನು ಸೃಷ್ಟಿಸುವುದು ಸುವರ್ಣರ ಮೇಲೆ ಪ್ರಭಾವ ಬೀರಿವೆ. ಪೃಥ್ವೀರಾಜ ಕಪೂರರು ಹದಿನೈದು ನಿಮಿಷದಲ್ಲಿ ಬಣ್ಣ ಹಚ್ಚಿ ಮುಗಿಸುತ್ತಿದ್ದ ವೇಗ, ಆರಂಭಕ್ಕೂ ಮುಂಚೆ ಕಂಚಿನ ಕಂಠದಲ್ಲಿ ನಾಟಕದ ಬಗ್ಗೆ ವಿವರಿಸುವ ರೀತಿಯಿಂದ ರೋಮಾಂಚನಗೊಂಡಿದ್ದಾರೆ. ಕತ್ತಲೆಯ ರಂಗದ ಮೇಲೆ ಮೂಡಿದ ಮಿಂಚು ಹುಳದ ಹಾರಾಟ, ಕ್ರಮೇಣ ಜೀರುಂಡೆಗಳ ಸದ್ದು ಕೇಳಿಸಿದೆ. ರಾತ್ರಿಯ ದೃಶ್ಯವಿರಬೇಕು ಅಂದುಕೊಂಡರೆ ತಪ್ಪು! ಬೆಳಗಾಗುತ್ತಿರುವ ದೃಶ್ಯವನ್ನು ಕಾಣಿಸುತ್ತಾರೆ. ನಿಧಾನವಾಗಿ ಬೆಳಗಾಗುವ ಅನುಭವವನ್ನು ಕಟ್ಟಿಕೊಡುತ್ತಾರೆ. ಮನೆ, ಆಕಾಶ, ಅದರ ಹಿಂದೆ ಮರ ಗಿಡಗಳು ಕಾಣಿಸಿಕೊಳ್ಳುತ್ತವೆ. ಹೊಲಕ್ಕೆ ಎತ್ತು ಕೊಂಡೊಯ್ಯುವ ರೈತರ ಕೂಗು, ದನ ಕರುಗಳ ಕೊರಳ ಗಂಟೆಯ ನಾದ, ಕೋಳಿಗಳ ಕೂಗು, ಹಕ್ಕಿಗಳಿಂಚರ, ಹಟ್ಟಿಯ ಕರುವಿನ ಅಂಬಾ ಎಂಬ ದನಿ, ಸೂರ್ಯನ ಕೆಂಬಣ್ಣ ಕರಗಿ ಬೆಳಗಾಗುತ್ತಿದ್ದಂತೆ ಮನೆ ಸ್ಪಷ್ಟವಾಗಿ ಕಾಣಿಸುತ್ತದೆ! ಪ್ರೇಕ್ಷಕನಿಗೆ ನೈಜಾನುಭವ ನೀಡಿ ಪುಳಕಿತರಾಗಿಸುವುದು ಅವರ ನಾಟಕದ ಹೆಚ್ಚುಗಾರಿಕೆಯಾಗಿದೆ.

ಪೃಥ್ವೀರಾಜರು ಪ್ರತಿ ನಾಟಕದಲ್ಲಿ ನಿರ್ವಹಿಸುವ ವಿಭಿನ್ನ ಪಾತ್ರ, ವಿಶಿಷ್ಟ ಧ್ವನಿ, ಅಚ್ಚುಕಟ್ಟು ಪ್ರದರ್ಶನ ಗಮನಾರ್ಹ. ಉತ್ಕೃಷ್ಟ ಪ್ರಯೋಗಕ್ಕೆ ನೆರವಾಗುತ್ತಿದ್ದ ಲೇಖಕರು, ಸಂಗೀತಗಾರರು, ತಾಂತ್ರಿಕ ವರ್ಗದವರು, ಬಡಗಿಗಳು, ಪೈಂಟರ್, ಇಲೆಕ್ಟ್ರೀಷಿಯನ್ಸ್, ಕೂಲಿ ಕೆಲಸದವರು ಹೀಗೆ ಸುಮಾರು ನೂರು ಜನರ ತಂಡವನ್ನು ಪೃಥ್ವೀರಾಜರೂ ಚೆನ್ನಾಗಿಯೇ ನೋಡಿಕೊಂಡಿದ್ದಾರೆ.

ಮರಾಠಿ ರಂಗಭೂಮಿಯನ್ನು ನಲವತ್ತರ ದಶಕದಲ್ಲಿ ಸುವರ್ಣರು ನೋಡಿದ್ದು ಕಡಿಮೆ. ಯಾಕೆಂದರೆ ಕೋಟೆಯೊಳಗೆ ಅವರ ಪ್ರಯೋಗಗಳು ಅಷ್ಟಾಗಿ ಪ್ರದರ್ಶಿತಗೊಳ್ಳುತ್ತಿರಲಿಲ್ಲ. ಆದರೆ ಅರುವತ್ತು ಎಪ್ಪತ್ತರ ದಶಕದಲ್ಲಿ ದಾದರ್‌ನ ನಾಟಕ ಮಂದಿರಗಳಲ್ಲಿ ದಿನಕ್ಕೆ ಮೂರು ಶೋ. ಭಾನುವಾರ ಶನಿವಾರ ನಾಲ್ಕು ಶೋ ಮರಾಠಿ ನಾಟಕ ಪ್ರದರ್ಶನಗಳಿರುತ್ತಿದ್ದವು. ಎಲ್ಲವೂ ಹೌಸ್ ಫುಲ್. ಕನ್ನಡ ರಂಗಾಸಕ್ತರಿಗೆಲ್ಲ ಈ ಬಗ್ಗೆ ಒಂದು ಬಗೆಯ ಅಸೂಯೆ. ಕೌಟುಂಬಿಕ ನಾಟಕಗಳಾದ್ದರಿಂದ ಕುಟುಂಬವರ್ಗದವರೆಲ್ಲ ಜತೆಯಾಗೇ ಬಂದು ನೋಡಿ ಆನಂದಿಸುತ್ತಿದ್ದ ಕಾಲಘಟ್ಟ ಅದು. ನಟ, ನಟಿ, ಲೇಖಕ, ನಿರ್ದೇಶಕ, ಸಂಘಟಕ, ಸಂಸ್ಥೆ ಎಲ್ಲರಿಗೂ ಒಳ್ಳೆಯ ಸಂಪಾದನೆಯಾಗುತ್ತಿತ್ತು. ಕೆಲವು ಡಾಕ್ಟರರಲ್ಲೂ ಪ್ರಾಕ್ಟೀಸ್ ನಿಲ್ಲಿಸಿ ಮರಾಠಿ ರಂಗಭೂಮಿ ಪ್ರವೇಶಿಸಿ ಹೆಸರು, ಹಣ ಸಂಪಾದಿಸಿದವರಿದ್ದಾರೆ. ಡಾ. ಕಾಶೀನಾಥ್ ಘುಣೇಕರ್, ಡಾ. ಶ್ರೀರಾಮಾ ಲಾಗೂ

ಮೊದಲಾದವರನ್ನು ಈ ನೆಲೆಯಲ್ಲಿ ಸುವರ್ಣರು ನೆನಪಿಸಿಕೊಳ್ಳುತ್ತಾರೆ. ಅಲ್ಲಿನ ರಂಗ ವ್ಯವಸ್ಥೆ, ಬೆಳಕು, ಹಿನ್ನೆಲೆ ಸಂಗೀತದ ಸುವ್ಯವಸ್ಥೆಯಿಂದ ಮಾರು ಹೋಗಿದ್ದರು ಸುವರ್ಣರು. ಪರಿಣಾಮವಾಗಿ ಆರಂಭಿಕ ಎರಡು ನಾಟಕಗಳಿಗೆ ಹಳೆ ಪೇಂಟೆಡ್ ಪರದೆ ಬಳಸಿದ್ದ ಸುವರ್ಣರು ಬಳಿಕದ ನಾಟಕಗಳಿಗೆ ಬಾಕ್ಸ್ ಸೆಟ್ ಹಾಕಿಸಿ ತ್ರೀ ಡೈಮನ್ಶನಲ್ ಮನೆಗಳ ದೃಶ್ಯ ಸಂಯೋಜಿಸಿದ್ದಾರೆ.

ಕೋಟೆಯೊಳಗಿನ ಜೈ ಹಿಂದ್ ಕಾಲೇಜಿನ ಸಭಾಗೃಹದಲ್ಲಿ ಐಎನ್‌ಟಿಯ ಗುಜರಾತಿ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಒಂದು ನಾಟಕಕ್ಕೆ ವಿವಿಧ ಬಗೆಯ ರಂಗಸಜ್ಜಿಕೆಯನ್ನು ನಿರ್ಮಿಸುತ್ತಿದ್ದುದು ಅವರಿಗೆ ಆಕರ್ಷಕವಾಗಿತ್ತು. ಸಂಭಾಷಣೆ ಅರ್ಥವಾಗದಿದ್ದರೂ ನಾಟಕದ ಭಾಷೆಯನ್ನು ಅರ್ಥೈಸಿಕೊಂಡು ಖುಷಿಪಡುತ್ತಿದ್ದರು. ಪ್ರವೀಣ್ ಜೋಶಿ ನಿರ್ದೇಶನದ ನಾಟಕಗಳು ಅವರಿಗೆ ಬಹಳ ಇಷ್ಟವಾಗುತ್ತಿದ್ದವು.

ಭಾರತೀಯ ವಿದ್ಯಾಭವನದಲ್ಲಿ ಆದಿಮರ್ಜಬಾನ್ ಗುಜರಾತಿ ನಾಟಕಗಳು ಇನ್ನಷ್ಟು ವಿಶೇಷ ಪ್ರಭಾವ ಬೀರಿದವು ಸುವರ್ಣರ ಮೇಲೆ. ಅಲ್ಲಿನ ಒಂದು ನಾಟಕದಲ್ಲಿ ಸುಸಜ್ಜಿತ ಡ್ರಾಯಿಂಗ್ ರೂಂನ ಮಧ್ಯದ ಗೋಡೆಯಲ್ಲೊಂದು ಕಿಟಕಿ. ಅದರ ಮೂಲಕ ಕಾಣಿಸುವ ಚಂದದ ಹೊರಗಿನ ದೃಶ್ಯ. ಇಳಿಜಾರು ಮಾಡು, ಅದರಾಚೆಗೆ ಆಕಾಶ, ಸಂಜೆಯ ಕಿರಣಗಳು, ಕೇಳಿಸುವ ಪಾರಿವಾಳದ ಗುಟುರುಗಳು, ಕಾಣಿಸುವ ಪಾರಿವಾಳಗಳು ಎಲ್ಲವೂ ರಂಗದಲ್ಲಲ್ಲ, ಅದರಾಚೆಗಿನ ಮಾಡಿನಲ್ಲಿರಬೇಕು ಎಂದು ಭಾವಿಸುವಷ್ಟು ಸಹಜಾತಿಸಹಜವಾಗಿ ಮೈನವಿರೆಬ್ಬಿಸಿದ್ದವು. ಬಳಿಕ ಪಾತ್ರಗಳ ಪ್ರವೇಶವಾಗುತ್ತವೆ. ಇವೆಲ್ಲ ಸುವರ್ಣರನ್ನು ಬಹಳ ಕಾಡುತ್ತಲೇ ಇವೆ.

ಸುವರ್ಣರಿಗೆ ಇಂಗ್ಲಿಷ್ ಭಾಷಾ ನಾಟಕದ ಸವಿ ಪರಿಚಯಿಸಿದವರು ಎಲಿಕ್ ಪದಮ್‌ಸಿ ಅವರು. ನಾಟ್ಯ ಅಕಾಡೆಮಿಯಲ್ಲಿ ಉಪನ್ಯಾಸಕರಾಗಿದ್ದ ಅವರು ಥಿಯೇಟರ್ ಗ್ರೂಪ್‌ನ ನಾಟಕಗಳನ್ನು ನಿರ್ದೇಶಿಸುತ್ತಿದ್ದರು. ಶ್ರೇಷ್ಠ ಸಾಹಿತಿ ಗಿರೀಶ್ ಕಾರ್ನಾಡರ 'ತುಘಲಕ್' ನಾಟಕ ಅಷ್ಟಾಗಿ ಹಿಡಿಸಿಲ್ಲವಾದರೂ ಅಲ್ಲಿನ ಹೊಸ ಆಯಾಮಗಳು ಸುವರ್ಣರನ್ನು ತಟ್ಟಿವೆ. ಈ ಎಲ್ಲ ಪ್ರಭಾವ, ಪ್ರೇರಣೆಗಳೇ ಕನ್ನಡ ರಂಗಭೂಮಿಗೆ ಸಹಜ ಪ್ರತಿಭಾವಂತ ಸುವರ್ಣರ ಮೂಲಕ ವಿಭಿನ್ನ ಹಾಗೂ ವಿಶಿಷ್ಟ ಕೊಡುಗೆಗಳನ್ನು ಕೊಡಿಸಿವೆ.

## ನಾಟ್ಯ ಅಕಾಡೆಮಿಯಲ್ಲಿ ರಂಗ ಶಿಕ್ಷಣ

ಅದಾಗ ಉದಯ ಕಲಾ ನಿಕೇತನದ ದಶಮಾನೋತ್ಸವ ಕಳೆದ ದಿನಗಳು. ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತೊಂದು ಸುವರ್ಣರನ್ನು ವಿಶೇಷವಾಗಿ ಆಕರ್ಷಿಸಿತು. ಮುಂಬಯಿಯ ಪ್ರತಿಷ್ಠಿತ ನಾಟಕ ಶಿಕ್ಷಣ ಕೇಂದ್ರ 'ನಾಟ್ಯ ಅಕಾಡೆಮಿ'ಯ ಒಂದು ವರ್ಷದ ಡಿಪ್ಲೊಮಾ ಕೋರ್ಸಿಗೆ ರಂಗದಲ್ಲಿ ದುಡಿದು ಅನುಭವವುಳ್ಳವರಿಂದ ಅರ್ಜಿ ಆಹ್ವಾನಿಸಲಾಗಿತ್ತು. ಸುವರ್ಣರು ಅರ್ಜಿ ಹಾಕಿದರು, ಸಂದರ್ಶನ ಎದುರಿಸಿದರು. ಸೀಟು

ಸಿಕ್ಕಿತು. ಆಯ್ಕೆಯಾದ ಹದಿನೆಂಟು ಬೇರೆ ಬೇರೆ ಭಾಷೆಯ ವಿದ್ಯಾರ್ಥಿಗಳಲ್ಲಿ ಸುವರ್ಣರೊಬ್ಬರೇ ಕನ್ನಡಿಗರಾಗಿದ್ದರು. ಅನಂತರ ಹತ್ತು ಮಂದಿ ನಾನಾ ಕಾರಣಗಳಿಂದಾಗಿ ಅರ್ಧಕ್ಕೇ ಡಿಪ್ಲೊಮಾ ಮೊಟಕು ಮಾಡಿ ಮನೆಗೆ ವಾಪಸಾದರೆ ಮತ್ತುಳಿದ ಎಂಟು ಮಂದಿ ಮಾತ್ರ ಯಶಸ್ವಿಯಾಗಿ ಕೋರ್ಸ್ ಮುಗಿಸಿದರು. ನಾಟ್ಯ ಅಕಾಡೆಮಿಯಲ್ಲಿ ರಂಗ ಶಿಕ್ಷಣ ತರಬೇತಿ ಪಡೆದ ಏಕೈಕ ಕನ್ನಡದ ವಿದ್ಯಾರ್ಥಿ ಅನ್ನಿಸಿಕೊಂಡರು ಸುವರ್ಣರು. ನಾಟ್ಯ ಅಕಾಡೆಮಿಯು ಯುನೆಸ್ಕೋದ ಅಂಗ ಸಂಸ್ಥೆಯಾಗಿತ್ತು. ಈಗಿನ ದಿಲ್ಲಿಯ ರಾಷ್ಟ್ರೀಯ ನಾಟಕ ಶಾಲೆ ಆಗಿನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಅಲ್ಕಾಜಿಯವರು ನಾಟ್ಯ ಅಕಾಡೆಮಿಯ ಮೊದಲ ನಿರ್ದೇಶಕರಾಗಿ ಬಂದರು. ಸುವರ್ಣರು ಸೇರಿದ ದಿನಗಳಲ್ಲಿ ಹರ್ಬಟ್ ಮಾರ್ಷಲ್ ಎನ್ನುವ ಆಂಗ್ಲ ನಿರ್ದೇಶಕರಿದ್ದರು. ವಾರದಲ್ಲಿ ಐದು ದಿನ ಸಂಜೆ 6ರಿಂದ 8ಗಂಟೆವರೆಗೆ ಕೆ.ಸಿ.ಕಾಲೇಜಿನಲ್ಲಿ ಕ್ಲಾಸ್ ನಡೆಯುತ್ತಿತ್ತು. ಬೇರೆ ಬೇರೆ ಭಾಷೆಯ ರಂಗ ತಜ್ಞರು ರಂಗಭೂಮಿಯ ವಿವಿಧ ಅಂಗಗಳ ಕುರಿತು ಪಾಠ ಮಾಡುತ್ತಿದ್ದರು. ರಂಗಭೂಮಿಯ ಕುರಿತು ವಿವಿಧ ವಿಷಯಗಳ ಮಾಹಿತಿ ಪಡೆಯಲು ದೊಡ್ಡ ಪುಸ್ತಕ ಸಂಗ್ರಹಾಲಯವೇ ಅಲ್ಲಿತ್ತು. ಸುವರ್ಣರಿಗೆ ಬೇಕಿದ್ದುದೂ ಇದೇ ಆಗಿತ್ತಲ್ಲ? ಭಾರತೀಯ ರಂಗಭೂಮಿ, ಪಾಶ್ಚಾತ್ಯ ರಂಗಭೂಮಿ ಮತ್ತು ಜಾಗತಿಕ ರಂಗಭೂಮಿಯ ಬಗ್ಗೆ ಉಪನ್ಯಾಸ ನೀಡಲು ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ಪ್ರಾಧ್ಯಾಪಕರು ಬರುತ್ತಿದ್ದರು.

ಒಂದು ವರ್ಷ ಅಲ್ಲಿ ಕೇಳಿಸಿಕೊಂಡ ಪಾಠ ಸುವರ್ಣರಲ್ಲಿ ಮಹತ್ತ್ವದ ಬದಲಾವಣೆಯನ್ನು ತಂದಿದೆ. ಹತ್ತು ವರ್ಷಗಳ ಕಾಲ ಕನ್ನಡ ರಂಗಭೂಮಿಯಲ್ಲಿ ಸಾಕಷ್ಟು ಪ್ರಯೋಗಗಳನ್ನು ನಿಭಾಯಿಸಿ ಯಶಸ್ಸಿನ ಉತ್ತುಂಗವನ್ನೇ ತಲುಪಿದ್ದ ಸುವರ್ಣರಿಗೆ ಶಿಸ್ತುಬದ್ಧ ರಂಗಭೂಮಿಯ ನಿಜ ದರ್ಶನ ಆದದ್ದು ಅಲ್ಲಿಯೇ. ಪರಿಪೂರ್ಣತೆಯತ್ತ ದಾರಿ ತೋರಿಸಿಕೊಟ್ಟ ಈ ತರಬೇತಿಯ ಬಗ್ಗೆ ಸುವರ್ಣರು 'ಹತ್ತು ವರ್ಷ ಕಾಲ ಕನ್ನಡ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಓರ್ವ ನಿರ್ದೇಶಕನೆಂದು ಬೀಗುತ್ತಿದ್ದ ನನ್ನ ಅಮಲು ಪೂರ್ತಿ ಇಳಿದುಹೋಯಿತು' ಎಂದು ಅನೇಕ ಸಂದರ್ಭಗಳಲ್ಲಿ ಹೇಳಿಕೊಂಡಿದ್ದಾರೆ. ಇದು ಸುವರ್ಣರ ವಿಶೇಷಗುಣವನ್ನು ಬೆಟ್ಟು ಮಾಡುತ್ತದೆ. ಅವರ ಗೆಲುವಿನ ಹಾದಿಯಾದ ವಿದ್ಯಾರ್ಥಿತನವನ್ನು ತೆರೆದಿಡುತ್ತ ಸಾಗುತ್ತದೆ.

'ಮೊದಲು ನಾನು ವಾಚಿಕಕ್ಕೆ ಹೆಚ್ಚು ಮಹತ್ತ್ವ ಕೊಡುತ್ತಿರಲಿಲ್ಲ. ಆದರೆ ನಾಟ್ಯ ಅಕಾಡೆಮಿಯಲ್ಲಿ ನಮಗೆ ಸ್ಪೀಚ್ ಕ್ಲಾಸ್ ತೆಗೆದುಕೊಳ್ಳುತ್ತಿದ್ದ ಬರ್ಕ್ಲೆ ಹಿಲ್ ಎಂಬವರು ಸಂಭಾಷಣೆಯಲ್ಲಿ ಉಚ್ಚಾರ, ಪೌಸ್, ಶಬ್ದಕ್ಕೆ ಒತ್ತುಕೊಡುವುದು, ವಾಕ್ಯವನ್ನು ಎಲ್ಲಿ ತುಂಡರಿಸಬೇಕು, ಧ್ವನಿಯ ಏರಿಳಿತ, ಉಸಿರನ್ನು ಉಪಯೋಗಿಸುವ ಕ್ರಮ ಇತ್ಯಾದಿ ವಿಚಾರಗಳನ್ನು ನಮಗೆ ಮಂದಟ್ಟು ಮಾಡಿದಾಗ ನನಗೆ ವಾಚಿಕದ ಮಹತ್ತ್ವದ ಅರಿವಾಯಿತು. ಆಂಗಿಕ ಅಭಿನಯದಷ್ಟೇ ವಾಚಿಕಾಭಿನಯವೂ ಮುಖ್ಯ. ನಾನು ರಿಹರ್ಸಲ್‌ನಲ್ಲಿ ಮೊದಲ ಹದಿನೈದು ದಿನಗಳನ್ನು ವಾಚಿಕಾಭಿನಯದ ತರಬೇತಿಗೆ ಮೀಸಲಿಡುತ್ತೇನೆ. ಅದು ಸಮಾಧಾನಕರವಾಗಿ ಮೂಡಿ ಬಂದ ಬಳಿಕವಷ್ಟೇ ಆಂಗಿಕ ಅಭಿನಯಕ್ಕೆ ತೊಡಗುತ್ತೇನೆ'

ಎನ್ನುವಲ್ಲಿ ವಾಚಿಕಕ್ಕೆ ಅವರು ನೀಡುವ ಮಹತ್ತ್ವ ಹಾಗೂ ನಾಟಕದಲ್ಲಿ ವಾಚಿಕಕ್ಕೆ ಎಷ್ಟು ಪ್ರಾಧಾನ್ಯವಿದೆ ಅನ್ನುವುದು ಅರಿವಿಗೆ ಬರುತ್ತದೆ.

ಹೌದು. ಸುವರ್ಣರ ನಾಟಕಗಳೆಂದರೆ ಅವುಗಳಲ್ಲಿ ಸಂಭಾಷಣೆ ಬಿಗಿಯಾಗಿರುತ್ತದೆ. ಹೃದಯ ತಟ್ಟುವ ಹಾಗೆ ಇರುತ್ತದೆ. ಅದಕ್ಕೊಂದು ಪವರ್ ಇರುತ್ತದೆ. ಸಂಭಾಷಣೆ ಅತ್ಯಂತ ಶಕ್ತಿಯುತವಾಗಿರುವುದರಿಂದಲೇ ಸುವರ್ಣರ ನಾಟಕಕ್ಕೊಂದು ವಿಶೇಷ ಸೆಳೆತ ಇರುವುದು.

ಸುವರ್ಣರಿಗೊಂದು ವಿಷನ್ ಇದೆ. ವೈವಿಧ್ಯಮಯ ರಂಗಭೂಮಿಯ ಕ್ರಿಯಾಶೀಲತೆ, ಸೃಜನಶೀಲತೆ ಹಾಗೂ ಓದು ಸುವರ್ಣರ ಒಳಗಣ್ಣನ್ನು ಸದಾ ಜಾಗೃತವಾಗಿ ಇರುವ ಹಾಗೆ ಮಾಡಿದೆ, ಹೊಸ ಹೊಳಹನ್ನು ಸ್ಫುರಿಸುವಂತೆ ಮಾಡಿದೆ. ಅವರೊಳಗಿನ ದರ್ಶನಪ್ರಜ್ಞೆ ಅನೇಕ ಹೊಸತುಗಳನ್ನು ಕಟ್ಟಿಕೊಡುವುದಕ್ಕೆ ಹವಣಿಸಿದೆ. ನಾಟ್ಯ ಅಕಾಡೆಮಿಯ ಪಾಠ ಹಾಗೂ ಪ್ರಯೋಗಶೀಲತೆ ಅವನ್ನು ಇನ್ನಷ್ಟು ಪಾಲಿಷ್ ಮಾಡಿದೆ ಅನ್ನುವುದೇ ಹೆಚ್ಚು ಸೂಕ್ತವಾಗುತ್ತದೆ.

'ಸ್ವತಂತ್ರ ಭಾರತದಲ್ಲಿ ಸರಕಾರ ಕಲೆಗಳನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ ಅಕಾಡೆಮಿಗಳನ್ನು ಹುಟ್ಟು ಹಾಕಿತು. ನಾಟಕ ಕಲೆಯ ಅಭಿವೃದ್ಧಿಗಾಗಿ ನಾಟಕ ಅಕಾಡೆಮಿ ಅಲ್ಲದೆ ನಾಟ್ಯ ಶಿಕ್ಷಣವನ್ನೊದಗಿಸಲು ದೆಹಲಿಯಲ್ಲಿ ರಾಷ್ಟ್ರೀಯ ನಾಟಕ ಶಾಲೆಯನ್ನು ಸ್ಥಾಪಿಸಿತು. ಅದಕ್ಕೂ ಮೊದಲು ಮುಂಬಯಿ, ಕೊಲ್ಕೊತ್ತಾ ಮುಂತಾದ ನಗರಗಳಲ್ಲಿ ನಾಟ್ಯ ಅಕಾಡೆಮಿಯಂತಹ ರಂಗ ಶಿಕ್ಷಣ ಕೇಂದ್ರಗಳು ಕೆಲವು ಖಾಸಗಿ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ನಡೆಸಲ್ಪಡುತ್ತಿದ್ದವು. ಈ ಶಿಕ್ಷಣ ಕೇಂದ್ರಗಳಲ್ಲಿ ರಂಗಭೂಮಿಯ ಸಿದ್ಧಾಂತಗಳ ಅಧ್ಯಯನ ನಡೆಸಿ, ತರಬೇತಿ ಪಡೆದು ಹವ್ಯಾಸಿ ರಂಗಭೂಮಿಗೆ ಕಾಲಿರಿಸಿದ ಪದವೀಧರರಿಂದಾಗಿ ವಿಭಿನ್ನ ರೀತಿಯ ಪ್ರಯೋಗಗಳು ನಿರ್ಮಾಣವಾಗಿ ರಂಗಭೂಮಿಯಲ್ಲಿ ಹೊಸ ಅಲೆಗೆ ಕಾರಣವಾಯಿತು. ಹೆಗ್ಗೋಡಿನಲ್ಲಿ ನೀನಾಸಂ, ಮೈಸೂರಿನಲ್ಲಿ ರಂಗಾಯಣ ಮುಂತಾದ ತರಬೇತಿ ಕೇಂದ್ರಗಳಾಗಿ ಶಿಸ್ತುಬದ್ಧ ರಂಗ ತಾಲೀಮಿನಿಂದ ನಿರ್ಮಾಣವಾದ ಕನ್ನಡದ ರಂಗಕೃತಿಗಳು ಒಂದು ರೀತಿಯ ರಂಗ ಕ್ರಾಂತಿಗೆ ಚಾಲನೆ ನೀಡಿದವು. ಇದರೊಂದಿಗೆ ರಂಗಭೂಮಿಯಲ್ಲಿ ನಿರ್ದೇಶಕನ ಸ್ಥಾನ ಉನ್ನತ ಮಟ್ಟಕ್ಕೇರಿತು! ಇಂದು ಸಾಕಷ್ಟು ತಾಲೀಮು ನಡೆಸದೆ ಒಂದು ಪ್ರಾಯೋಗಿಕ ನಾಟಕದ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗುವುದಿಲ್ಲ. ತರಬೇತಿ ಮತ್ತು ತಾಲೀಮು ಇಂದಿನ ಹವ್ಯಾಸಿ ರಂಗಭೂಮಿಯಲ್ಲಿ ಮಹತ್ವಪೂರ್ಣವಾಗಿದೆ. ರಂಗ ತರಬೇತಿ ಪಡೆದ ಕಲಾವಿದರೊಂದಿಗೆ ಸೃಜನಶೀಲ ನಿರ್ದೇಶಕನೊಬ್ಬ ಶಿಸ್ತುಬದ್ಧವಾಗಿ ನಡೆಸುವ ತಾಲೀಮಿನಿಂದಾಗಿ ಒಂದು ಲಿಖಿತ ನಾಟಕ ಅದ್ಭುತವಾದ ಜೀವಂತ ರಂಗಕೃತಿಯಾಗಿ ರೂಪುಗೊಳ್ಳುವುದು ಸಾಧ್ಯವಾಗುತ್ತದೆ!' (ಪು2-3 ರಂಗಾನುಭೂತಿ) ಎಂದು ತರಬೇತಿ ಹಾಗೂ ತಾಲೀಮಿನ ಬಗ್ಗೆ ನಿಖರವಾಗಿ ವಿಶ್ಲೇಷಿಸುತ್ತಾರೆ ಸುವರ್ಣರು.

## ಕೋಡಿಕಲ್ ಮಾಸ್ತರರಿಂದ ಸುವರ್ಣ ಶಿಲ್ಪ

ಹಲವು ಸಾಧಕರ ಅರ್ಥಪೂರ್ಣ ಬದುಕಿಗೆ, ಸಾಧನೆಯ ಹಾದಿಗೆ ಬೆಳಕಾಗುವವರು ವಿದ್ಯಾ ಗುರುಗಳೇ. ಗುರುಗಳು ತಮ್ಮ ಶಿಷ್ಯ ವರ್ಗದ ಪ್ರತಿಭೆಯನ್ನು ಹುಡುಕಿ, ಪೋಷಿಸುವ ನಿಟ್ಟಿನಲ್ಲಿ ತೊಡಗಿಕೊಳ್ಳುತ್ತಾರೆ. ಅವರ ಬೆಳವಣಿಗೆ, ಸಾಧನೆಯಲ್ಲಿ ಖುಷಿಯನ್ನು, ಸಂತೃಪ್ತಿಯನ್ನು ಅನುಭವಿಸುತ್ತಾರೆ. ಸದಾನಂದ ಸುವರ್ಣರ ಬದುಕಿನ ತಿರುವಿಗೆ ಮುಖ್ಯ ಕಾರಣರಾದವರು ಅವರ ವಿದ್ಯಾಗುರುಗಳಾದ ಬಿ.ಎಂ.ಕೋಡಿಕಲ್ ಮಾಸ್ತರರು. ನಾಟಕಕಾರರೂ ಆಗಿದ್ದ ಮೇಷ್ಟ್ರು ಶಾಲಾ ವಾರ್ಷಿಕೋತ್ಸವದಲ್ಲಿ ಸುವರ್ಣರಿಗೊಂದು ಪಾತ್ರ ನೀಡುವ ಮೂಲಕ ರಂಗಭೂಮಿಗೆ ಸುವರ್ಣರನ್ನು ಅಕ್ಷರಶಃ ಸಮರ್ಪಿಸಿದರು. ಬಳಿಕ ನಿರ್ದೇಶನಕ್ಕೂ ಒಪ್ಪಿಸಿದರು. ಹೀಗೆ ಕೋಡಿಕಲ್ ಮಾಸ್ತರರಿಂದ ರಂಗವೇರಿದ ಸುವರ್ಣರು ಕೋಡಿಕಲ್ ಮೇಷ್ಟ್ರೇ ಹೆಮ್ಮೆಪಡುವ ಹಾಗೆ ಪ್ರಯೋಗಶೀಲರಾದರು.

ಶಾಲಾ ವಾರ್ಷಿಕೋತ್ಸವದಲ್ಲಿ ನಾಟಕಕಾರರು, ಗುರುಗಳೂ ಆದ ಬಿ.ಎಂ. ಕೋಡಿಕಲ್ ಅವರು ರಚಿಸಿದ 'ಆತ್ಮಸಮರ್ಪಣೆ' ನಾಟಕದ ರೋಮಿಯೋ ಪಾತ್ರದ ಮೂಲಕ ಮೊದಲ ಬಾರಿಗೆ ರಂಗಪ್ರವೇಶ ಮಾಡಿದ ಸುವರ್ಣರು ಮುಂದೆ ನ್ಯಾಯವಾದಿಯಾಗಿ ಹೆಸರು ಸಂಪಾದಿಸಿದ ದಿವಾಕರ್ (ಸ್ತ್ರೀ ಪಾತ್ರಧಾರಿ) ಅವರೊಂದಿಗೆ ಉದ್ಯಾನವನದಲ್ಲಿ ಡ್ಯುಯೆಟ್ ಹಾಡಿ ಅಭಿನಯಿಸಿದ್ದರು. ತಾಲೀಮಿನಲ್ಲೂ ಸಮರ್ಪಕವಾಗಿ, ನಿಷ್ಠೆಯಿಂದ ತೊಡಗಿಸಿಕೊಂಡ ಸುವರ್ಣರು ರಂಗಾಭಿವ್ಯಕ್ತಿ ರಕ್ತಗತವಾಗೇ ಬಂದಿದೆಯೇನೋ ಅನ್ನುವ ಹಾಗೆ ಲೀಲಾಜಾಲವಾಗಿ, ತನ್ಮಯತೆಯಿಂದ ಅಭಿನಯಿಯಿಸಿದರು, ಜನಮೆಚ್ಚುಗೆ ಗಳಿಸಿದರು. ಈ ಪಾತ್ರಾಭಿನಯ ನೀಡಿದ ಸುಖ, ಖುಷಿ ಹಾಗೂ ಶಹಬ್ಬಾಸ್‌ಗಿರಿ ಸುವರ್ಣರಿಗೆ ತಾನು ರಂಗಭೂಮಿಯಲ್ಲಿ ಮುಂದುವರಿಯಬಲ್ಲೆ ಎನ್ನುವ ಭರವಸೆಯನ್ನು ಹುಟ್ಟಿ ಹಾಕಿತು.

'ಕುರುಡನ ಸಂಗೀತ'ದಲ್ಲೂ ನಾಲ್ಕು ಹಾಡುಗಳನ್ನು ಹಾಡಿದ್ದನ್ನು ಗಮನಿಸಿದ ಕೋಡಿಕಲ್ ಅವರು ತಾವು ರಚಿಸಿದ 'ಚಾಣಕ್ಯ ತಂತ್ರ'ದ ಮುಖ್ಯ ಪಾತ್ರವನ್ನು ಸುವರ್ಣರಿಗೇ ನೀಡಿ ಪ್ರಯೋಗಿಸುವುದಕ್ಕೆ ಅಣಿಯಾದರು. 'ಹಿಂದೆ ಎಸ್.ಕೆ.ಅಮೀನರು ಚೆನ್ನಾಗೇ ಈ ಪಾತ್ರವನ್ನು ನಿರ್ವಹಿಸಿದ್ದಾರೆ. ನೀನು ಅವರಿಗಿಂತಲೂ ಚೆನ್ನಾಗಿ ನಿಭಾಯಿಸುತ್ತೀ' ಎಂದು ಹುರಿದುಂಬಿಸಿ ನಿರ್ದೇಶನಕ್ಕೆ ಅಣಿಯಾದರು. ಭಾಂಗವಾಡಿಯ ಥಿಯೇಟರ್‌ನಲ್ಲಿ ಬಹಳ ಯಶಸ್ವಿಯಾಗಿ ಈ ನಾಟಕ ಪ್ರದರ್ಶನಗೊಂಡಿತು. ಸುವರ್ಣರ ಅಭಿನಯವೂ ಎಲ್ಲರ ಶ್ಲಾಘನೆಗೆ ಒಳಗಾಯಿತು.

ಹೀಗೆ ನಾಟಕ ನೋಡುತ್ತ ನೋಡುತ್ತ ಸುವರ್ಣರೂ ನಾಟಕ ರಚನೆಯಲ್ಲೂ ಆಸ್ಥೆ ತೋರಿಸಿದರು. ಒಳಗಿದ್ದ ಸೃಜನಶೀಲತೆ ಅವರನ್ನು ನಾಟಕಕಾರರನ್ನಾಗಿ ಮಾಡಿತು.

'ಬೇರೆ ಬೇರೆ ಭಾಷೆಯ ವಿಭಿನ್ನ ಶೈಲಿಯ ನಾಟಕಗಳನ್ನು ಕನ್ನಡ ರಂಗಭೂಮಿಯ ಪ್ರೇಕ್ಷಕರಿಗೆ ಪರಿಚಯಿಸಲು ಪ್ರಯತ್ನಪಟ್ಟೆ. ನಾನು ಬೇರೆ ಬೇರೆ ನಾಟಕಗಳನ್ನು

ಕಂಡುಕೊಳ್ಳುವುದು, ಅವುಗಳ ಬಗ್ಗೆ ತಿಳಿದುಕೊಳ್ಳುವುದು, ಕನ್ನಡ ರಂಗಭೂಮಿಗೆ ಆ ಪ್ರಕಾರವನ್ನು ತರುವುದು ನನ್ನ ಮುಖ್ಯ ಉದ್ದೇಶವಾಗಿತ್ತು. ಹಾಗಾಗಿ ನಾನು ಯಾವುದೇ ಇಸಂಗೆ ಬದ್ಧನಾಗಲಿಲ್ಲ. ಎಲ್ಲ ಪ್ರಕಾರಗಳ ನಾಟಕಗಳನ್ನೂ ಪ್ರಯೋಗಿಸುವುದಷ್ಟೇ ನನಗೆ ಮುಖ್ಯವಾಗಿತ್ತು. ನಾಟಕ ಯಾವುದೇ ಭಾಷೆ, ಶೈಲಿಯದ್ದಿರಲಿ ಅದು ನನಗೆ ಅನನ್ಯವೆಂದು ಕಂಡರೆ ಕನ್ನಡ ರಂಗಭೂಮಿಯಲ್ಲಿ ಅದು ಕಾಣಿಸಿಕೊಳ್ಳಬೇಕು ಅನ್ನುವುದು ನನ್ನ ನಿಲುವು. ಈ ನಿಟ್ಟಿನಲ್ಲಿ ಪ್ರಯೋಗಗಳನ್ನು ನಡೆಸುತ್ತಲೇ ಬಂದೆ' ಎಂದು ಸುವರ್ಣರು ಪ್ರಕಟಗೊಳ್ಳುತ್ತಾರೆ. ಕನ್ನಡ ರಂಗಭೂಮಿ ಬೆಳವಣಿಗೆಯ ಕುರಿತು ಅವರಿಗಿದ್ದ ಕಾಳಜಿ ಹೀಗೆ ಬಿಚ್ಚಿಕೊಳ್ಳುತ್ತದೆ.

ತನ್ನೆಲ್ಲ ಸೃಜನಶೀಲ ಸಾಧನೆಗೆ ವೇದಿಕೆಯಾದದ್ದು ಮುಂಬಯಿ ಮಹಾನಗರಿಯೇ ಎಂಬುದಾಗಿ ಸದಾ ಸ್ಮರಿಸುವ ಸುವರ್ಣರು ಆ ಕುರಿತು ಡಾ. ಜಿ.ಎನ್. ಉಪಾಧ್ಯ ಅವರು ನಡೆಸಿದ ಸಂದರ್ಶನವೊಂದರಲ್ಲಿ 'ಮುಂಬಯಿ ಒಂದು ವಿಚಿತ್ರ ನಗರ. ಆರು ದಶಕಗಳಿಂದಲೂ ನಾನೀ ನಗರವಾಸಿಯಾಗಿ ಇಲ್ಲಿನ ಆಗು ಹೋಗುಗಳನ್ನು ನೋಡುತ್ತಲಿದ್ದೇನೆ. ಸೃಷ್ಟಿಶೀಲ ಬುದ್ಧಿ, ಮನಸ್ಸು ಇರುವವರಿಗೆ ಸೃಜನಶೀಲ ಚಟುವಟಿಕೆಗಳನ್ನು ಮಾಡಲು ಪ್ರೇರಣೆ ಇಲ್ಲಿ ದೊರಕುವಷ್ಟು ಬೇರೆಲ್ಲೂ ಸಿಗಲಾರದು. ರಂಗಭೂಮಿ ಮತ್ತು ಚಲನಚಿತ್ರ ರಂಗದಲ್ಲಿ ನಾನು ಸೃಜನಶೀಲ ಕೃತಿಗಳ ನಿರ್ಮಾಣಕ್ಕೆ ಯತ್ನಿಸಲು ಪ್ರೇರಣೆಯೇ ಈ ಮುಂಬಯಿ ನಗರ. ಇಲ್ಲಿ ವಿವಿಧ ಭಾಷೆಗಳ ರಂಗ ಪ್ರಯೋಗಗಳ ವೀಕ್ಷಣೆಯೇ ನನ್ನ ಕನ್ನಡ ಪ್ರಯೋಗಗಳಿಗೆ ಪ್ರೇರಣೆಯಾಯಿತು.....ಪ್ರಾಯಶಃ ಈ ಪ್ರೇರಣೆಗಳೇ ಇಷ್ಟು ದೀರ್ಘ ಕಾಲ ನಾನು ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರಲು ಕಾರಣವೆನ್ನಬಹುದು. ದಿನ ಕಳೆದಂತೆ, ವಯಸ್ಸಾದಂತೆ ಈ ಮುಂಬಯಿಯಲ್ಲಿ ಜೀವನ ಬಹಳ ತ್ರಾಸದಾಯಕವಾಗಿ ಕಂಡು ಬಂದರೂ ಬಿಟ್ಟು ಹೋಗಲು ಮನಸ್ಸು ಬರುವುದಿಲ್ಲ....' (ಪು, 27 ಕನ್ನಡ ಮನಸ್ಸುಗಳೊಂದಿಗೆ, ಸಂ.ಡಾ.ಜಿ.ಎನ್.ಉಪಾಧ್ಯ, ಸುವರ್ಣಗಿರಿ ಪ್ರಕಾಶನ ಮುಂಬಯಿ) ಎಂದು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ.

ಮಂಗಳೂರಿಗೆ ಬಂದ ಬಳಿಕವೂ ಸುವರ್ಣರು ಸಕ್ರಿಯರಾಗಿದ್ದಾರೆ. ಮುಂಬಯಿ-ಮಂಗಳೂರಿನ ನಂಟನ್ನು ಉಳಿಸಿಕೊಂಡಿದ್ದಾರೆ. ತವರೂರು ಮಂಗಳೂರಿನಲ್ಲಿ ಸೃಜಿಸಿದ ಪ್ರಯೋಗಳನ್ನು ತಮ್ಮ ಕರ್ಮಭೂಮಿ ಮುಂಬಯಿಯಲ್ಲೂ ಪ್ರದರ್ಶಿಸುವುದು ಇದ್ದೇ ಇದೆ. ಸುವರ್ಣರು ನಲವತ್ತರ ದಶಕದಿಂದ ಇಂದಿನವರೆಗೂ ಸೃಜನಕ್ರಿಯೆ ಹಾಗೂ ಚಲನಶೀಲತೆಯೊಂದಿಗೆ ಸದಾ ಹೆಜ್ಜೆ ಹಾಕುತ್ತ ಬರುತ್ತಿದ್ದಾರೆ.

ಒಟ್ಟಿನಲ್ಲಿ ಸದಾನಂದ ಸುವರ್ಣರು ಹೊಸ ಆವರಣದೊಳಗೆ ಕನ್ನಡ ರಂಗಭೂಮಿಯನ್ನು ಕಟ್ಟಿ ಬೆಳೆಯಿಸಿ, ಇತರ ರಂಗಭೂಮಿಗೆ ಸರಿಸಮನಾಗಿ ನಿಲ್ಲಿಸಿ ಬಾಳಿಸಿದರು.

****

ಅಧ್ಯಾಯ 2

# ನಿರ್ದೇಶನ ಮಟ್ಟು ; ವಾಸ್ತವವಾದದ ನೆಲೆಗಟ್ಟು

ಯಾವುದೇ ಸಿದ್ಧಾಂತದ ಹಿನ್ನೆಲೆಯಲ್ಲಿ ರಂಗಭೂಮಿಯನ್ನು ಪ್ರವೇಶಿಸದ ಸುವರ್ಣರಿಗೆ ನಾಟ್ಯ ಅಕಾಡೆಮಿಯ ತರಗತಿಗಳಲ್ಲಿ ರಂಗ ಸಿದ್ಧಾಂತಗಳ ಪರಿಚಯವಾಗಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಚಲಿತಕ್ಕೆ ಬಂದ ವಾಸ್ತವವಾದ ಸಿದ್ಧಾಂತ ಅವರನ್ನು ಹೆಚ್ಚು ಆಕರ್ಷಿಸಿದೆ. ಕಾಲ, ಪರಿಸರ, ಬದುಕಿನ ಸಮಸ್ಯೆಗಳ ಸ್ಪಂದನಕ್ಕೆ ಫ್ರೆಂಚ್ ಕ್ರಾಂತಿ ಹೊಸ ಬಗೆಯಲ್ಲಿ ಚಿಂತಿಸುವಂತೆ ಮಾಡಿದೆ. ಸಮಸ್ಯೆಗಳ ಶೋಧ, ಬಗೆಯುವಿಕೆ ಹಾಗೂ ಪರಿಹಾರದ ಹಾದಿಯನ್ನು ಕಂಡುಕೊಳ್ಳುವ ನೆಲೆಯ ಹುಡುಕಾಟ ನಡೆಸುತ್ತ, ಭಾವನಾತ್ಮಕತೆಗಿಂತ ಹೆಚ್ಚು ವಸ್ತು ಸ್ಥಿತಿಯನ್ನು ಪರಿಣಾಮಕಾರಿಯಾಗಿ ವಾಸ್ತವವಾದ ತೋಧಿಸಿತು. ಸದ್ಯತನ ಹಾಗೂ ಸತ್ಯತನವನ್ನು ಮನದಟ್ಟು ಮಾಡಿಸುವ ಧೋರಣೆಯ ವಾಸ್ತವವಾದ ನೈಜತೆಗೆ ಹೆಚ್ಚು ಒತ್ತು ಕೊಟ್ಟಿದೆ. ಈ ಆಶಯಗಳ ಹಿನ್ನೆಲೆಯಲ್ಲಿ ಮೂಡಿದ ಸಾಹಿತ್ಯ–ನಾಟಕಗಳೆಲ್ಲ ಬಹುದೊಡ್ಡ ಪ್ರಮಾಣದಲ್ಲಿ ಜನರನ್ನು ತಟ್ಟಿತು. ವಾಸ್ತವವಾದಕ್ಕೆ ಹತ್ತಿರವಾಗೇ ಬದುಕುತ್ತ ಬಂದ ಸುವರ್ಣರಿಗೆ ಕೂಡ ಈ ಸಿದ್ಧಾಂತದ ರಂಗಕೃತಿಗಳು ಆಪ್ತವಾದವು. ಈ ಬಗೆಯ ಪ್ರಯೋಗಗಳನ್ನು ಕೈಗೆತ್ತಿಕೊಂಡು ಜನರಿಗೆ ಹತ್ತಿರವಾದರು. ಸಮಾಜ ಇರುವ ರೀತಿಯನ್ನು ಹಾಗೂ ಇರಬೇಕಾದ ಬಗೆಯನ್ನು ಜೀವನ ಮೌಲ್ಯವನ್ನು ದಾಟಿಸುವುದಕ್ಕೆ ಇಲ್ಲಿರುವ ಅವಕಾಶವನ್ನು ಸುವರ್ಣರೂ ಕೂಡ ಸಮರ್ಥವಾಗಿಯೇ ಬಳಸಿಕೊಂಡರು.

ವಾಸ್ತವವಾದಿ ರಂಗಭೂಮಿಯ ಪ್ರಮುಖ ಸಿದ್ಧಾಂತಕಾರ ಸ್ತಾನಿಸ್ಲಾವಸ್ಕಿ. ಆತನ ತತ್ವಚಿಂತನೆಗಳನ್ನು ಸುವರ್ಣರು ಅನುಸರಣೀಯವಾಗಿಸಿಕೊಂಡರು. ಆತ ನಾಟಕ ವಾಸ್ತವದ ಕನ್ನಡಿ ಎಂದು ವ್ಯಾಖ್ಯಾನಿಸಿದ್ದು ಸುವರ್ಣರನ್ನು ಗಾಢವಾಗಿ ತಟ್ಟಿತ್ತು. ನಟನಾದವನು ರಂಗದಲ್ಲಿ ಜೀವಿಸಬೇಕು ಅನ್ನುವ ಪರಿಕಲ್ಪನೆಯ ಸಾಕಾರಕ್ಕೆ ಆತ ಬಾಹ್ಯ ಹಾಗೂ ಆಂತರಿಕವಾಗಿ ಸಜ್ಜುಗೊಳ್ಳಬೇಕಾದ ಬಗೆಯನ್ನು ತಿಳಿಸಿದ್ದಾನೆ. ಆತ ಮಾಡಿದ ಮಾರ್ಗದರ್ಶನ, ಹೇಳಿದ ಪಾಠ, ತೆರೆದಿಟ್ಟ ಚಿಂತನೆ, ಮಾಡಿದ ಪ್ರತಿಪಾದನೆಗಳೆಲ್ಲ

ರಂಗಭೂಮಿಯ ಚಲನಶೀಲತೆಗೆ, ಹೊಸ ಪರಂಪರೆಯ ಸೃಷ್ಟಿಗೆ ಕಾರಣವಾಯಿತು. ಆಧುನಿಕ ಪ್ರಜ್ಞೆಯ ರಂಗಭೂಮಿಯ ಬೆಳವಣಿಗೆಗೆ ದಾರಿಯಾಯಿತು. ಇಂದಿಗೂ ಶ್ರೇಷ್ಠ ರಂಗಕೃತಿಗಳೆಲ್ಲ ವಾಸ್ತವವಾದದ ನೆರಳಿನೊಂದಿಗೇ ಮೂಡಿಬರುತ್ತಿದೆ.

ಸ್ತಾನಿಸ್ಲಾವಸ್ಕಿ, ಬ್ರೆಕ್ಟ್, ಗ್ರೊಟೋವಸ್ಕಿಯ ರಂಗ ಸಿದ್ಧಾಂತಗಳನ್ನೆಲ್ಲ ಮನನ ಮಾಡಿಕೊಂಡ ಸುವರ್ಣರಿಗೆ ಬಹಳವಾಗಿ ಪರಿಣಾಮ ಬೀರಿದ್ದು ವಾಸ್ತವವಾದ ಸಿದ್ಧಾಂತವೇ. ವಾಸ್ತವವಾದ ರಂಗಭೂಮಿಯನ್ನು ತಮ್ಮದೇ ಆದ ವಿಶಿಷ್ಟ ನೆಲೆಯಿಂದ ವಿಚಾರಪ್ರಚೋದಕ, ಸಹೃದಯಾತ್ಮಕ ಪ್ರಯೋಗಗಳ ಮೂಲಕ ವಿಸ್ತರಿಸುತ್ತ ಬರುತ್ತಿದ್ದಾರೆ. ಭಾವಜೀವಿಗಳು, ವಿಚಾರವಾದಿಗಳು, ಶ್ರೀಸಾಮಾನ್ಯರನ್ನೆಲ್ಲ ತಟ್ಟುವ ಸದಭಿರುಚಿಯ ನಾಟಕಗಳನ್ನು ಅವರು ಕಟ್ಟಿಕೊಡುತ್ತಿದ್ದಾರೆ.

ಭರತನ ರಸ ಸಿದ್ಧಾಂತದ ಬಗ್ಗೆ ಅರಿವಿದ್ದ ಸುವರ್ಣರಿಗೆ ಇಲ್ಲಿ ಪಾಶ್ಚಾತ್ಯರ ಘರ್ಷಣೆ ಸಿದ್ಧಾಂತದ ಪರಿಚಯವಾಗಿದೆ. ಸಂಘರ್ಷವಿದ್ದರೆ ಏರುಗತಿಗೆ ಹಾಗೂ ಕ್ಲೈಮ್ಯಾಕ್ಸ್‌ಗೆ ಅನುಕೂಲವಾಗುತ್ತದೆ. ಪ್ರೇಕ್ಷಕರ ಕುತೂಹಲದ ಉದ್ದೀಪನೆಗೆ ಸಂಘರ್ಷ ನೆರವಾಗುತ್ತದೆ ಹಾಗೂ ಇದು ವಾಸ್ತವ ರಂಗಭೂಮಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ ಎನ್ನುವ ಸುವರ್ಣರ ನಾಟಕಗಳಲ್ಲೂ ಈ ಬಗೆಯ ತಂತ್ರ ಬಹಳ ಅಚ್ಚುಕಟ್ಟಾಗಿ ಅಳವಡಿಕೆಯಾಗಿರುತ್ತದೆ ಹಾಗೂ ಉತ್ಕೃಷ್ಟವೂ ಆಗಿರುತ್ತದೆ.

ಭರತನ ನಾಟ್ಯ ಶಾಸ್ತ್ರ ಹಾಗೂ ಪಾಶ್ಚಾತ್ಯರ ರಂಗಭೂಮಿಯ ಬಗ್ಗೆ ಅದರಲ್ಲೂ ಶೇಕ್ಸ್‌ಪಿಯರ್‌ನ ನಾಟಕದ ಕುರಿತು ಅಲ್ಲಿ ಬರೋಡಾದ ಪ್ರೊ. ವ್ಯಾಸ್ ಅವರ ಪಾಠ ಕೇಳಿದ್ದಾರೆ. ಸುವರ್ಣರಿಗೆ ಪಾಶ್ಚಾತ್ಯ ರಂಗ ಸಿದ್ಧಾಂತಗಳು ಹೆಚ್ಚು ಪ್ರಿಯವಾಗಿವೆ. ಅಭಿನಯದ ಬಗ್ಗೂ ಅಷ್ಟೇ. ಭರತನ ವಿಸ್ತೃತ ಸಿದ್ಧಾಂತಗಳಿಗಿಂತಲೂ ಸ್ತಾನಿಸ್ಲಾವಸ್ಕಿಯ ಮೆಥಡ್ ಆ್ಯಕ್ಟಿಂಗ್ ಸಿದ್ಧಾಂತ ಹೆಚ್ಚು ಆಕರ್ಷಿಸಿದೆ. ಎಲ್ಲ ಸಿದ್ಧಾಂತಗಳನ್ನು ಕ್ರಮಬದ್ಧವಾಗಿ ಅರ್ಥಮಾಡಿಕೊಳ್ಳುತ್ತ ಬಂದ ಸುವರ್ಣರು ಶಿಸ್ತುಬದ್ಧ, ಪರಿಣಾಮಕಾರಿ ಪ್ರಯೋಗಗಳನ್ನು ರಂಗಕ್ಕೆ ಒಡ್ಡುವ ನಿಟ್ಟಿನಲ್ಲಿ ಜ್ಞಾನ ಸಂಪಾದಿಸಿದರು, ಆ ನಿಟ್ಟಿನಲ್ಲಿ ಜಗತ್ತಿನ ಸಿದ್ಧಾಂತದ ಜತೆಗೆ ಹೆಜ್ಜೆ ಹಾಕುವುದಕ್ಕೆ ಸಿದ್ಧರಾದರು.

ಪ್ರೇಕ್ಷಕರು ರಂಗಭೂಮಿಯ ಬೆಳವಣಿಗೆಯಲ್ಲಿ ಎಷ್ಟು ಮುಖ್ಯ ಅನ್ನುವುದನ್ನು ಇಲ್ಲಿಂದಲೇ ಅರ್ಥೈಸಿಕೊಂಡ ಸುವರ್ಣರು ಬೌದ್ಧಿಕ ವರ್ಗ ಹಾಗೂ ಶ್ರೀ ಸಾಮಾನ್ಯರವರೆಗಿನ ಎಲ್ಲ ವರ್ಗದ ಪ್ರೇಕ್ಷಕರನ್ನೂ ತಲುಪುವ ಬಗ್ಗೆ ಮನನ ಮಾಡಿಕೊಳ್ಳುತ್ತಾರೆ. ಅವರ ಮನಸ್ಸಿನಲ್ಲಿ ತಮ್ಮ ಪ್ರಯೋಗಗಳ ಮೂಲಕ ಬಾಳಿದ್ದಾರೆ.

ಎಲಿಕ್ ಪದಮ್ ಸಿ ಅವರ ಬೋಧನೆಯಂತೆ ರಂಗಕರ್ಮಿಗೆ ಇರಬೇಕಾದ ಸಮಯ ಪ್ರಜ್ಞೆ, ವಾತಾವರಣವೊಂದನ್ನು ಸೃಷ್ಟಿಸುವ, ರಂಗದ ಮೇಲಿನ ಪ್ರಮುಖ ಪಾತ್ರವೇ ಆಗುವ ಬೆಳಕಿನ ವಿನ್ಯಾಸದ ಕುರಿತ ಜ್ಞಾನ, ಸಂಗೀತದ ಸಂಯೋಜನೆ, ನಿರ್ದೇಶಕನ ಕ್ಷಣ ಕ್ಷಣದ ಜವಾಬ್ದಾರಿಗಳೆಲ್ಲವನ್ನೂ ಇಲ್ಲಿಂದಲೇ ಮೈಗೂಡಿಸಿಕೊಂಡ ಸುವರ್ಣರು ಕನ್ನಡ

ಹವ್ಯಾಸಿ ರಂಗಭೂಮಿಯ ಗಂಭೀರತೆ, ಮೌಲಿಕತೆಯನ್ನು ಎತ್ತರಕ್ಕೇರಿಸಿದ್ದಾರೆ. ನಟರನ್ನು ಸಮರ್ಥವಾಗಿ ಬಳಸುತ್ತ, ತಾಂತ್ರಿಕತೆಯನ್ನು, ಹಾಗೂ ರಂಗಭೂಮಿಯ ಎಲ್ಲ ವ್ಯಾಕರಣಗಳನ್ನು ಕರಗತ ಮಾಡಿಕೊಂಡು ಉತ್ಕೃಷ್ಟ ರಂಗಕೃತಿಯನ್ನು ಅರ್ಪಿಸುತ್ತ ಆನಂದವನ್ನು, ಸಂತೃಪ್ತಿಯನ್ನು ಅನುಭವಿಸಿದ್ದಾರೆ. 'ರಂಗಭೂಮಿಯಿಂದ ನಾನು ಹಣವೊಂದನ್ನು ಬಿಟ್ಟು ಮತ್ತೆಲ್ಲ ಪಡೆದಿದ್ದೇನೆ. ಅದು ನನಗೆ ಪ್ರೀತಿ, ಸುಖ, ಸಂತೋಷ, ಹೆಸರು, ಕೀರ್ತಿ ಎಲ್ಲವನ್ನೂ ನೀಡಿದೆ' ಎಂದು ಸುವರ್ಣರು ಆಗಾಗ ಹೇಳಿಕೊಳ್ಳುವುದಿದೆ.

ವಾಸ್ತವವಾದೀ ರಂಗಭೂಮಿಯ ಚೌಕಟ್ಟಿನಲ್ಲೇ ನಾಟಕಗಳನ್ನು ನಿರ್ದೇಶಿಸುತ್ತ ಬಂದಿದ್ದಾರೆ ಎನ್ನುವಾಗಲೂ ಸುವರ್ಣರು ಒಂದಕ್ಕೇ ಕಟ್ಟುಬಿದ್ದಿದ್ದಾರೆ ಅನ್ನಿಸುವುದಿಲ್ಲ. ಭರತನ ರಸ ಸಿದ್ಧಾಂತವನ್ನೂ ಉಳಿಸಿಕೊಂಡು ಪಾಶ್ಚಾತ್ಯರ ಸಂಘರ್ಷವನ್ನೂ ಸ್ವೀಕರಿಸಿಕೊಂಡು, ಗ್ರೋಟೋವಸ್ಕಿಯ ರಿಕ್ತ ರಂಗಭೂಮಿಯ ತತ್ವಗಳನ್ನೂ ಆಧರಿಸಿಕೊಂಡು ತಮ್ಮೆಲ್ಲ ನಾಟಕಗಳನ್ನು ನಿರ್ದೇಶಿಸುತ್ತ ಬಂದಿದ್ದಾರೆ ಎನ್ನಬೇಕು. ಎಲ್ಲ ಸಿದ್ಧಾಂತಗಳನ್ನು ಅರಿತುಕೊಳ್ಳುತ್ತ ಅವೆಲ್ಲವುಗಳ ಸಂಗಮವಾಗುತ್ತ ಬರುತ್ತಿರುವುದು ವಿಶೇಷದ್ದಾಗಿದೆ. ಹೀಗಾಗಿ ಸುವರ್ಣರನ್ನು ಸಮನ್ವಯದ ನಿರ್ದೇಶಕ ಎಂದು ಬಣ್ಣಿಸುವುದು ಹೆಚ್ಚು ಸಮಂಜಸವಾಗುತ್ತದೆ.

ಸುವರ್ಣರು ಪ್ರತಿಯೊಂದು ನಾಟಕವನ್ನೂ ಸವಾಲಾಗಿಯೇ ಸ್ವೀಕರಿಸಿದ್ದಾರೆ. ವೈವಿಧ್ಯಮಯ ಚೌಕಟ್ಟಿನ ವಿಭಿನ್ನ ವಸ್ತುಗಳ, ಬೇರೆ ಬೇರೆ ಶೈಲಿಯ ನಾಟಕಗಳನ್ನು ಪ್ರಯೋಗಕ್ಕೆ ಆಯ್ದುಕೊಳ್ಳುವ ತಾಕತ್ತು ತೋರಿಸಿದ್ದಾರೆ. ಕೆಲವು ನಾಟಕ, ವಸ್ತುಗಳ ಪ್ರದರ್ಶನ ಬಹುದೊಡ್ಡ ಸವಾಲು ಅಂದುಕೊಂಡು ಪ್ರಯೋಗಿಸುವುದಕ್ಕೆ ಮನಸ್ಸಿದ್ದರೂ ನಾನಾ ಕಾರಣಗಳಿಂದ ರಂಗಕ್ಕೆ ತರಲಾಗಿಲ್ಲ ಅನ್ನುವ ಬೇಸರವೂ ಇದೆ. ಗುಣಮಟ್ಟದೊಂದಿಗೆ ರಾಜಿ ಮಾಡಿಕೊಳ್ಳದ ಸುವರ್ಣರು ಪಾತ್ರ ಹಂಚಿಕೆಯಲ್ಲೂ ಮುಲಾಜಿಲ್ಲದವರು. ಇಷ್ಟವಾದ ನಾಟಕ ಪ್ರಯೋಗಕ್ಕೆ ಅಲ್ಲಿನ ಮುಖ್ಯ ಪಾತ್ರವನ್ನು ನಿರ್ವಹಿಸುವುದಕ್ಕೆ ತಮ್ಮ ತಂಡದಲ್ಲಿ ಸೂಕ್ತ ಕಲಾವಿದರು ಇಲ್ಲ ಅಂತಾದರೆ ಸುವರ್ಣರು ಆ ನಾಟಕವನ್ನೇ ಕೈಬಿಟ್ಟವರು.

ಪ್ರತಿಭೆ ಹಾಗೂ ಅಪ್ಪಿಯರೆನ್ಸ್ ಕೂಡ ಅವರಿಗೆ ಬಹಳ ಮುಖ್ಯವಾಗಿರುತ್ತದೆ. ಪಾತ್ರ ಹೇಗಿರಬೇಕು, ಹೇಗೆ ಸ್ಪಂದಿಸಬೇಕು, ಪ್ರತಿಸ್ಪಂದಿಸಬೇಕು ಅನ್ನುವುದರೊಂದಿಗೆ ಘಟನೆ, ಸಂದರ್ಭ, ಸನ್ನಿವೇಶ, ಮಾತು ಮತ್ತು ವರ್ತನೆಯನ್ನೆಲ್ಲ ಬಹಳ ಸೂಕ್ಷ್ಮವಾಗಿ ಒಂದಕ್ಕೊಂದು ಹೊಂದಿಕೆಯಾಗುವಂತೆ ಮಾಡುವ ಕುಸುರಿಗಾರಿಕೆಯನ್ನು ನಿರ್ವಹಿಸುವಲ್ಲಿ ಅನನ್ಯ ರಂಗ ಶಿಲ್ಪಿಯಾಗುತ್ತಾರೆ.

ಸುದೀರ್ಘ ರಂಗಭೂಮಿ ಬದುಕು, ಅಲ್ಲಿನ ಚಟುವಟಿಕೆಗಳಲ್ಲಿ ಸುವರ್ಣರು ಸಂಖ್ಯಾದೃಷ್ಟಿಯಿಂದ ಪ್ರಯೋಗಕ್ಕಿಳಿದವರೇ ಅಲ್ಲ. ಅವರಿಗೆ ಮೊದಲಿನಿಂದಲೂ ಇದ್ದ ಧ್ಯೇಯ ಪ್ರಯೋಗದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಮಾತ್ರವಾಗಿತ್ತು. ಅದನ್ನವರು ಶಿರಸಾ ಪಾಲಿಸುತ್ತ ಬಂದಿದ್ದಾರೆ. ತಾತ್ವಿಕತೆ ಹಾಗೂ ಬದ್ಧತೆಯೊಂದಿಗೆ ರಂಗ ಪಯಣ ಬೆಳೆಸುತ್ತ ಬಂದಿದ್ದಾರೆ.

ಸುವರ್ಣರು ಆಧುನಿಕತೆಯ ಭರಾಟೆ ನಡುವೆ ರಂಗಭೂಮಿಯ ಜೀವಂತಿಕೆಯ ಬಗೆಗೂ ಯೋಚಿಸುತ್ತಾರೆ. ರಂಗಭೂಮಿಯ ಮೂಲ ತತ್ತ್ವ, ಧೋರಣೆಗಳಿಗೆ ಆಧುನಿಕ ಮನೋಭಾವ, ರಂಗಭೂಮಿಯಲ್ಲಿ ಆಧುನಿಕ ತಂತ್ರಜ್ಞಾನದ ಪ್ರವೇಶ ಧಕ್ಕೆ ಉಂಟುಮಾಡಬಾರದು ಅನ್ನುವ ಕಳಕಳಿ ಅವರದ್ದು. ನಾಟಕದಲ್ಲಿ ಆಧುನಿಕತೆ, ತಾಂತ್ರಿಕತೆಗಳನ್ನೆಲ್ಲ ಬಳಸಿಕೊಳ್ಳಬೇಕು. ಆದರೆ ಅವುಗಳೇ ಪ್ರಧಾನವಾಗಿಬಿಡಬಾರದು. ನಾಟಕದ ಆಶಯ ಮತ್ತು ಉದ್ದೇಶ ಇವೆರಡು ಆಧುನಿಕತೆಯ ಸೋಗಿನಲ್ಲಿ ಮರವೆಯಾಗಬಾರದು ಎನ್ನುವ ಕಾಳಜಿ ಅವರದ್ದು.

ಹಿಂದಿನಿಂದಲೂ ರಂಗಭೂಮಿಯ ಬಗ್ಗೆ ಬಹಳ ಗೌರವಾದರವನ್ನಿಟ್ಟುಕೊಂಡೇ ರಂಗದ ಚೌಕಟ್ಟಿಗೆ ಬದ್ಧವಾಗಿಯೇ ಪ್ರಯೋಗಗಳನ್ನು ನಿರ್ವಹಿಸುತ್ತ ಬಂದ ಸುವರ್ಣರು ಮುಂಬಯಿಯ ಹವ್ಯಾಸಿ ಕನ್ನಡ ರಂಗಭೂಮಿಗೆ ಮಹತ್ತ್ವವನ್ನು ತಂದುಕೊಟ್ಟವರು. ಅವರ ಪ್ರಯೋಗಶೀಲತೆ ಹಾಗೂ ಬದ್ಧತೆ ರಂಗಭೂಮಿಯ ಬೆಳವಣಿಗೆಗೆ ಸೇತುವಾಗಿವೆ. ಒಂದು ನಾಟಕದ ಆಯ್ಕೆ, ತಯಾರಿ, ಪ್ರದರ್ಶನ, ವಿಮರ್ಶೆ ಎಲ್ಲವುಗಳಲ್ಲೂ ಸುವರ್ಣತನವೆನ್ನುವುದು ಇರುವುದು ಖಾತ್ರಿಯಾಗಿದೆ.

‘ರಂಗಭೂಮಿ ಕಾಲ ಕಾಲಕ್ಕೆ ಬದಲಾಗುತ್ತಿರುತ್ತದೆ. ಹೊಸ ಆವಿಷ್ಕಾರ ಅಲ್ಲಿ ನಡೆಯುತ್ತಿರುತ್ತದೆ. ರಂಗಭೂಮಿಯಲ್ಲಿ ತೊಡಗಿಸಿಕೊಂಡವರ ಧೋರಣೆ, ಕಾಲಮಾನ, ಸಮಾಜದಲ್ಲಾಗುವ ಪರಿವರ್ತನೆ ರಂಗಭೂಮಿಯಲ್ಲಿ ಯಾವ ವಸ್ತು ಪ್ರಕಟವಾಗುತ್ತದೆ ಎನ್ನುವುದಕ್ಕೆ ಕಾರಣವಾಗುತ್ತದೆ. ಶ್ರೀರಂಗ, ಕೈಲಾಸಂರ ಕಾಲದಲ್ಲಿ ಸಾಮಾಜಿಕ ಸಮಸ್ಯೆಗಳನ್ನೇ ಇಟ್ಟುಕೊಂಡು ನಾಟಕ ಬರೆಯುತ್ತಿದ್ದರು. ಸಮಾಜದ ಸಮಸ್ಯೆಗಳಿಗೆ ಈ ಮಾಧ್ಯಮದ ಮೂಲಕ ಸ್ಪಂದಿಸುವುದು ಅವರ ಉದ್ದೇಶವಾಗಿತ್ತು. ಉಪದೇಶ ಇರುತ್ತಿತ್ತು. ಅನಂತರದ ಕಾಲಘಟ್ಟದಲ್ಲಿ ನಾಟಕಗಳು ಸಾಮಾಜಿಕ ಸಮಸ್ಯೆಗಳನ್ನೇ ಬಿಂಬಿಸಬೇಕು. ಆದರೆ ಉಪದೇಶ, ಪರಿಹಾರವನ್ನೋ ನಾಟಕ ಸೂಚಿಸಬಾರದು. ಪ್ರೇಕ್ಷಕರಲ್ಲಿ ಸಮಸ್ಯೆಗಳ ಬಗ್ಗೆ ಅರಿವನ್ನು, ಜಾಗೃತಿಯನ್ನು ಮೂಡಿಸುವ ಹಾಗಿರಬೇಕು. ಪ್ರೇಕ್ಷಕ ಸಮಸ್ಯೆಗಳ ಬಗ್ಗೆ ಅರಿತುಕೊಂಡು ಚಿಂತಿಸುವ ಹಾಗೆ ಆಡಿದರೆ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎನ್ನುವ ನಿಲುವಿಗೂ ಬರಲಾಯಿತು. ರಂಗಭೂಮಿ ಈಗಿನ ಹಾಗೆ ಮುಂದುವರಿದ ಮಾಧ್ಯಮ ಆಗಿರಲಿಲ್ಲ. ರಂಗಕರ್ಮಿಗಳೂ ಈಗಿನ ಹಾಗೆ ಎಕ್ಸ್‌ಪೋಸ್ ಆಗಿರಲಿಲ್ಲ. ಈಗ ಆಧುನಿಕ ನಾಟಕಗಳು ಎಕ್ಸ್‌ಪೋಸ್ ಆಗುವುದರಿಂದ ಪ್ರಯೋಗಗಳು ಹೆಚ್ಚುತ್ತಿವೆ. ಬೇರೆ ಬೇರೆ ಕಲಾ ಮಾಧ್ಯಮಗಳನ್ನು, ಅಂದರೆ ಯಕ್ಷಗಾನ, ಕೇರಳದ ಕಳರಿಪಯಟ್ಟು, ಕಸರತ್ತು, ನೃತ್ಯ, ಜಿಮ್ನೇಶಿಯಂಗಳನ್ನೂ, ರಂಗಭೂಮಿಗೆ ಸ್ವೀಕರಿಸಿಕೊಂಡಿದ್ದಾರೆ. ಕೆಲವೊಮ್ಮೆ ನಾಟಕಕ್ಕೆ ಅವೆಲ್ಲ ಮುಖ್ಯ ಅಲ್ಲದೇ ಇದ್ದಾಗಲೂ ಎಡೆಕೊಡುವುದರಿಂದ ನಾಟಕದ ಮುಖ್ಯ ಉದ್ದೇಶ ಗೌಣವಾಗಿಬಿಡುತ್ತದೆ.

ನಾಟಕದ ಮುಖ್ಯ ಘಟಕ ಪ್ರೇಕ್ಷಕರು. ಅವರಿಗೆ ನಾಟಕ ತಲುಪಬೇಕು. ಸಂವಹನ ಕ್ರಿಯೆ ಚೆನ್ನಾಗಿರಬೇಕು. ಆಂಗಿಕ, ವಾಚಿಕ, ಅಭಿನಯ, ರಂಗಸಜ್ಜಿಕೆ, ಬೆಳಕು ಎಲ್ಲವೂ ಸೇರಿ ಪ್ರೇಕ್ಷಕರ ಮೇಲೆ ಪರಿಣಾಮ ಬೀರಬೇಕು. ಈ ನಿಟ್ಟಿನಲ್ಲಿ ಹಿಂದೆಲ್ಲ ರಂಗಭೂಮಿ ಪ್ರೇಕ್ಷಕರನ್ನು ಬಹಳವಾಗಿ ಆಕರ್ಷಿಸುತ್ತಿತ್ತು. ಈಗ ಕೆಲವೊಂದು ಅನಗತ್ಯ ಪ್ರಯೋಗಗಳು ಪ್ರೇಕ್ಷಕರಿಂದ ದೂರ ಸರಿಯುವಂತೆ ಮಾಡುವುದೂ ಇದೆ. ಕೆಲವರು ನಾಟಕದ ಫಾರ್ಮ್ ಅನ್ನು ಬದಲಾಯಿಸುತ್ತಾರೆ. ಹಿಂದೆ ಯುನಿಟಿ ಆಫ್ ಟೈಮ್, ಪ್ಲೇಸ್ ಎಂಡ್ ಆ್ಯಕ್ಷನ್ ಮುಖ್ಯ ಆಗಿತ್ತು. ಇದನ್ನೆಲ್ಲ ನಾಟಕ ರಚನಾಕಾರರು ಗಮನದಲ್ಲಿಟ್ಟುಕೊಂಡೇ ನಾಟಕ ಬರೆಯುತ್ತಿದ್ದರು. ಪ್ರೊಸೀನಿಯಂ ಸ್ಟೇಜ್‌ನಲ್ಲಿ ಆ ಸ್ಥಳಾವಕಾಶದಲ್ಲಿ ಆ ಕಾಲವನ್ನು ಹೇಗೆ ತೋರಿಸ್ತೀರಿ ಅನ್ನುವ ದೃಷ್ಟಿಯಿಂದ ಸ್ಟೇಜ್ ನಿರ್ಮಾಣ ಆಗ್ತಾ ಇತ್ತು. ಆದರೆ ಈಗ ಅದಕ್ಕಿಂತ ಭಿನ್ನವಾಗಿ ಸಿನೆಮಾದ ಚಿತ್ರಕತೆಯ ಹಾಗೆ ಕಾಲ, ಸ್ಥಳದ ನಿರ್ಬಂಧಗಳಿಲ್ಲದೆ ಸಿನೆಮಾದ ರೀತಿಯಲ್ಲಿ ಕಾದಂಬರಿಯ ಕತೆ, ಸನ್ನಿವೇಶಗಳನ್ನು ಆಧರಿಸಿ ನಾಟಕ ಪ್ರದರ್ಶಿಸುತ್ತಾರೆ. ಈಗ ಸಿದ್ಧಾಂತದ ಬದಲಾವಣೆ ಮಾಡಲಾಗುತ್ತಿದೆ. ಒಂದು ರೀತಿಯಲ್ಲಿ ಹೊಸ ಆವಿಷ್ಕಾರಗಳಿಂದಾಗಿ ರಂಗಭೂಮಿಯ ಮುಖ್ಯ ಉದ್ದೇಶ ಈಡೇರುತ್ತಿಲ್ಲ' ಎನ್ನುವ ರಂಗ ಪ್ರಯೋಗಗಳ ಕುರಿತ ಸುವರ್ಣರ ಗಂಭೀರ ವಿಶ್ಲೇಷಣೆ ಸರ್ವಸಮ್ಮತವಾಗುವಂಥದ್ದು.

## ಬದ್ಧತೆ, ತಾತ್ವಿಕತೆಗೆ ಅನ್ವರ್ಥ

ರಂಗಭೂಮಿಯಲ್ಲಿ ಬದ್ಧತೆಯಿಂದ ತೊಡಗಿಕೊಂಡ ಸುವರ್ಣರು ಇತರರಲ್ಲೂ ಅದನ್ನೇ ಬಯಸುತ್ತಾರೆ. ಹಾಗಿದ್ದರೆ ಮಾತ್ರ ರಂಗಕೃತಿಯಿಂದ ಥ್ರಿಲ್ ಸಿಗುತ್ತದೆ, ಮತ್ತೆ ಮತ್ತೆ ಪ್ರಯೋಗಗಳನ್ನು ಕೊಡಲು ಮತ್ತು ಕ್ರಿಯಾಶೀಲರಾಗಲು ಸಾಧ್ಯವಾಗುತ್ತದೆ ಎಂದು ಸಮರ್ಥಿಸುತ್ತಾರೆ. ಪ್ರಯೋಗಶೀಲತೆ ಅತ್ಯಗತ್ಯ ಅನ್ನುವುದನ್ನೇ ಅವರು ಮನದಟ್ಟು ಮಾಡಿಸುತ್ತ ಬಂದಿದ್ದಾರೆ. ಐವತ್ತು ವರ್ಷಗಳ ಹಿಂದೆ ಪ್ರದರ್ಶಿಸಿದ ನಾಟಕವನ್ನು ಈ ಕಾಲಕ್ಕೆ ಪ್ರದರ್ಶಿಸುವುದು ಸೂಕ್ತ ಅಲ್ಲ. ನಾಟಕಕಾರ, ರಂಗ ನಿರ್ದೇಶಕ ಪ್ರೇಕ್ಷಕರೆಲ್ಲ ಬೆಳೆದಿರುತ್ತಾರೆ. ಅವರ ಆಲೋಚನಾ ವಿಧಾನ ಬದಲಾಗಿರುತ್ತದೆ, ಸಮಾಜವೂ ಪರಿವರ್ತನೆ ಆಗಿರುತ್ತದೆ ಎನ್ನುವ ಸುವರ್ಣರು ಅರುವತ್ತು ವರ್ಷಗಳ ಹಿಂದಿನಿಂದಲೂ ಸದ್ಯದ ಸ್ಥಿತಿಗತಿಯ ಹಿನ್ನೆಲೆಯಲ್ಲೇ ನಾಟಕವನ್ನು ಪ್ರಯೋಗಕ್ಕೆ ಆಯ್ದುಕೊಳ್ಳುತ್ತ ಬಂದಿದ್ದಾರೆ.ಇದು ಸುವರ್ಣರ ಹೊಸತನದ ಹೆಜ್ಜೆಗುರುತನ್ನು, ಪ್ರಗತಿಯ ಪಥವನ್ನು ತೋರಿಸಿಕೊಡುತ್ತದೆ. ಕಾಲಕ್ಕೆ ತೆರೆದುಕೊಳ್ಳುತ್ತ ಬಂದದ್ದರಿಂದಲೇ ಸುವರ್ಣರಿಗೆ ಉರುಳು, ಕೋರ್ಟ್ ಮಾರ್ಷಲ್‌ನಂಥ ಪ್ರಖರ ಹಾಗೂ ಹೃದಯಸ್ಪರ್ಶಿ ಮೌಲಿಕ ಕೊಡುಗೆಗಳನ್ನು ನೀಡುವುದಕ್ಕೆ ಸಾಧ್ಯವಾಗಿದೆ. ಪ್ರಯೋಗಶೀಲತೆ ಅತ್ಯಗತ್ಯ ಎನ್ನುವುದನ್ನು ಪ್ರತಿಪಾದಿಸುವ ಸುವರ್ಣರು ಉಪದೇಶ ಮಾಡುವ ನಾಟಕಗಳಿಗಿಂತ ವೈಚಾರಿಕ ನಾಟಕಗಳ ಅಗತ್ಯವನ್ನು ಮನಗಂಡಿದ್ದಾರೆ. 'ನಾಟಕ ವಿವಿಧ ಕಲೆಗಳ ಸಂಗಮವಾಗಿರುವುದರಿಂದ ಅದು ಕಲಾತ್ಮಕವೂ ಆಗಿರಬೇಕು. ಗುಣಾತ್ಮಕತೆಯೊಂದಿಗೆ ಜನಪ್ರಿಯತೆ ಗಳಿಸಬೇಕು ಎಂದು ನಾನು ಬಯಸುತ್ತೇನೆ. ನಗಿಸುವುದಕ್ಕೆ ಸೀಮಿತವಾಗಿಬಿಡದೆ ಎಲ್ಲ ವರ್ಗದ ಪ್ರೇಕ್ಷಕರನ್ನೂ ತಲುಪುವಂಥ,

ಇಷ್ಟಪಡುವಂಥ ನಾಟಕಗಳನ್ನು ಕಟ್ಟಿಕೊಡುವುದು ಮುಖ್ಯ ಎನ್ನುವುದು ನನ್ನ ನಿಲುವು' ಇದು ಸುವರ್ಣ ಕಂಡರಣೆ.

ಸುವರ್ಣರು ರಂಗಭೂಮಿಯಲ್ಲಿ ತೊಡಗಿಸಿಕೊಂಡ ದಿನಗಳಲ್ಲಿ ಸಾಮಾಜಿಕ ಸಮಸ್ಯೆಯ ವಸ್ತುಗಳಿರುವ ನಾಟಕಗಳನ್ನು ರಂಗಕ್ಕೆ ಸಂಯೋಜಿಸುವ ನಿಟ್ಟಿನಿಂದ ಬರೆಯುತ್ತಿದ್ದರು. ಸುವರ್ಣರ ಸೃಜನಶೀಲತೆ ಹಾಗೂ ಸಂವೇದನೆ ಕಾಲಕ್ಕೆ ತಕ್ಕ ಹಾಗೆ, ಪ್ರೇಕ್ಷಕರನ್ನು ಖುಷಿಪಡಿಸುವ, ಚಿಂತನೆಗೆ ಹಚ್ಚುವ ನಿಟ್ಟಿನಲ್ಲಿ ಬಹಳ ಶೀಘ್ರವಾಗಿ ನಾಟಕಗಳನ್ನು ಬರೆಯುತ್ತಿದ್ದರು. ರಂಗಕ್ಕೆ ಬೇಕಾದ ಭಾಷೆಯನ್ನು ಕರಗತವಾಗಿಸಿಕೊಂಡ ಸುವರ್ಣರು ಇತರರ ನಾಟಕವನ್ನು ಪ್ರಯೋಗಿಸಲು ನಿರ್ಧರಿಸಿದರೆ ಪ್ರೇಕ್ಷಕನಿಗೆ ಇದು ಹಿಡಿಸಬಹುದೇ? ತಾವೆಷ್ಟು ಚೆನ್ನಾಗಿ ಅಭಿನಯಿಸಬಲ್ಲೆವು ಅನ್ನುವುದನ್ನು ಮೊದಲು ಪರಿಶೀಲಿಸಿಕೊಳ್ಳುತ್ತಾರೆ. ಪ್ರೇಕ್ಷಕರನ್ನು ತಲುಪುವುದು ಮುಖ್ಯ ಅಂದುಕೊಂಡೇ ಅವರಿಗೆ ಮೆಚ್ಚುಗೆಯಾಗುವಂತೆ ಪ್ರಯೋಗಗಳನ್ನು ನೀಡುತ್ತ ಬಂದಿದ್ದಾರೆ. ಜನಪ್ರಿಯ ಹಾಗೂ ವಿಚಾರಪ್ರಿಯ ಪ್ರೇಕ್ಷಕ ವರ್ಗದ ಬಗ್ಗೆಯೂ ಸ್ಪಷ್ಟವಾಗಿ ತಿಳಿದಿರುವ ಸುವರ್ಣರು ಆ ಎರಡೂ ವರ್ಗವನ್ನು ತಲುಪುವ ಹಾಗೆ ನಾಟಕವಾಡಿಸುವ ತಂತ್ರಕ್ಕೆ ಹೆಚ್ಚು ಹತ್ತಿರವಾದವರು. ಗಂಭೀರತೆಯೊಳಗೂ ಸುಕುಮಾರತನವನ್ನು ಪಡಿಮೂಡಿಸುವ ಸಂಭಾಷಣೆಯನ್ನು ಅವರು ನೇಯುತ್ತಾರೆ. ಈ ನೇಯ್ಗೆಗೆ ಏಕಕಾಲಕ್ಕೆ ಎಲ್ಲರಿಗೂ ಇಷ್ಟವಾಗುವ ಹಾಗೆ ಶಕ್ತಿ ತುಂಬುವುದು ಅವರ ಹೆಚ್ಚುಗಾರಿಕೆ. ಅನುಭವದ ಆಧಾರದಲ್ಲಿಯೇ ಅವರು ಪ್ರೇಕ್ಷಕರ ನಾಡಿಯನ್ನು ಅರಿತು ಆ ಮಿಡಿತಕ್ಕೆ ಹದವಾಗಿ ಸ್ಪಂದಿಸುತ್ತ ಬಂದಿದ್ದಾರೆ.

ಇದರ ಜೊತೆಗೆ ರಂಗಭೂಮಿ ವೈಚಾರಿಕತೆಯನ್ನೂ ಬಿತ್ತಬೇಕು, ಮನರಂಜನೆಯನ್ನೂ ನೀಡಬೇಕು, ಪ್ರೇಕ್ಷಕರನ್ನೂ ಕಾಡುತ್ತಿರಬೇಕು ಅನ್ನುವ ನಿಲುವುಳ್ಳವರು ಸುವರ್ಣರು. ಒಂದು ನಾಟಕಕ್ಕೆ ಸಿಗುವ ಪ್ರತಿಕ್ರಿಯೆ ಎಲ್ಲ ಕಡೆ ಒಂದೇ ರೀತಿ ಇರುವುದೂ ಇಲ್ಲ. ಹಾಗಾಗಿ ನಾವು ಯಾವ ಐಕ್ಯೂ ಮಟ್ಟದ ಪ್ರೇಕ್ಷಕರ ಎದುರು ನಾಟಕ ಪ್ರದರ್ಶಿಸುತ್ತೇವೆ ಅನ್ನುವ ಪ್ರಜ್ಞೆ ಇದ್ದರೆ ಒಳ್ಳೆಯದು. ಆದರೆ ಹೆಚ್ಚಿನ ಸಾಮಾನ್ಯರಿಗೆ ಮನರಂಜನೆಯೇ ಇಷ್ಟ, ಹಾಗಾಗಿ ಯಾವುದೇ ವೈಚಾರಿಕತೆ ಬಿತ್ತುವಾಗಲೂ ಅವರಿಗೆ ಅದನ್ನು ತಲುಪಿಸುವ ಇರಾದೆಯೊಂದಿಗೆ ಆರೋಗ್ಯಕರ ಮನರಂಜನೆ ನೀಡುವುದು ಒಳ್ಳೆಯದು. ಮನರಂಜನೆಯೊಡನೆ ಅಶ್ಲೀಲತೆ ಬೆರೆಸುವುದು ರಂಗಭೂಮಿಯ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ನಾಟಕದ ವಸ್ತು ವೈಚಾರಿಕವಾಗಿದ್ದರೆ ಅದು ಚಿಂತನೆಗೆ ಕಾರಣವಾಗಬೇಕು, ಪರಿಣಾಮಕಾರಿಯಾಗಬೇಕು ಎಂದು ಬಯಸುವುದಾದರೆ ಅದು ಪ್ರೇಕ್ಷಕರನ್ನು ಕಾಡುವುದೂ ಮುಖ್ಯ ಎಂದು ನಾಟಕದ ಬಗ್ಗೆ ಸ್ಪಷ್ಟವಾಗುತ್ತಾರೆ.

ಸುವರ್ಣರು ನಡೆಸುವ ಶಕ್ತಿಯುತ ಹಾಗೂ ಅನುಪಮ ತಾಲೀಮೇ ಅವರ ನಾಟಕಗಳ ಶ್ರೇಷ್ಠತೆಗೆ ಮೂಲ ಧಾತುವಾಗಿದೆ.

## ತಿಸ್ತಿಗೆ ರೂಪಕ

ನಾಟಕದ ಆಯ್ಕೆ ರಂಗಪ್ರಯೋಗದಲ್ಲಿ ಬಹಳ ಮುಖ್ಯವಾದ ಪ್ರಕ್ರಿಯೆ. ಯಾಕೆ ಆಡಬೇಕು? ಯಾರಿಗೆ ಆಡಬೇಕು ಅನ್ನುವುದನ್ನು ಬಹಳ ಮುಖ್ಯವಾಗಿ ವಿವೇಚಿಸುವ ನಿರ್ದೇಶಕ ಈ ವಿವೇಚನೆಗೆ ಅನುಗುಣವಾಗಿಯೇ ನಾಟಕಗಳನ್ನು ಆಯ್ದುಕೊಳ್ಳಬೇಕಾಗುತ್ತದೆ. ತಾವೇ ಬರೆದ ಅಥವಾ ಇತರ ನಾಟಕಕಾರರ ಕೃತಿಯನ್ನೇ ಆಯ್ದುಕೊಳ್ಳಲಿ ಮುಖ್ಯವಾಗುವುದು ಪ್ರೇಕ್ಷಕರನ್ನು ಮುದಗೊಳಿಸಬೇಕು, ವಿವೇಚನೆಗೆ ಹಚ್ಚಬೇಕು ಅನ್ನುವುದು. ಸುವರ್ಣರೂ ಈ ನೆಲೆಯಲ್ಲೇ ವಸ್ತುವನ್ನು ಆಯ್ಕೆ ಮಾಡಿಕೊಳ್ಳುತ್ತ ಬಂದಿದ್ದಾರೆ. ಪ್ರಧಾನವಾಗಿ ನಾಟಕದ ವಸ್ತು, ನಿರೂಪಣೆ ಪ್ರೇಕ್ಷಕರನ್ನು ತಟ್ಟುವ ಹಾಗೆ ಇರುತ್ತದೆಯೇ ಎನ್ನುವುದನ್ನು ಗಮನಿಸುತ್ತಾರೆ. ಪ್ರೇಕ್ಷಕರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರಬಲ್ಲುದು ಎಂಬುದು ಖಾತ್ರಿಯಾದ ಬಳಿಕವೇ ಆ ನಾಟಕವನ್ನು ಆಯ್ದುಕೊಳ್ಳುತ್ತಾರೆ. ನಾಟಕದ ವಸ್ತು ಸಮಕಾಲೀನವಾಗಿದ್ದರೆ ಹೆಚ್ಚು ಪ್ರಸ್ತುತವಾಗುತ್ತದೆ ಮತ್ತು ಹೆಚ್ಚು ಉಪಯೋಗಕರವೂ ಆಗಿರುತ್ತದೆ. ಹೆಚ್ಚಿನ ಪ್ರೇಕ್ಷಕರು ಕೂಡ ಸಮಕಾಲೀನ ವಸ್ತು ಹಾಗೂ ನಿರೂಪಣೆಗೆ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ. ಸಾರ್ವಕಾಲಿಕ ಮೌಲ್ಯ ಇದ್ದದ್ದೇ ಆಗಬೇಕು ಅಂತೇನಿಲ್ಲ. ಹಾಗೊಮ್ಮೆ ಆದರೆ ಅದು ಕ್ಲಾಸಿಕಲ್ ಆಗಿ ಪರಿಗಣಿಸಲ್ಪಡುತ್ತದೆ. ಶೇಕ್ಸ್‌ಪಿಯರ್, ಕಾಳಿದಾಸರ ನಾಟಕಗಳು ಸರ್ವಕಾಲಕ್ಕೂ ಪ್ರಸ್ತುತವಾಗಿ ಪ್ರದರ್ಶನಗೊಳ್ಳುತ್ತಿರುತ್ತದೆ ಎನ್ನುವುದು ನಾಟಕದ ವಸ್ತುವಿನ ಕುರಿತ ಸುವರ್ಣರ ಚಿಂತನೆಯಾಗಿದೆ.

ಬಳಿಕ ಅವರು ಈ ನಾಟಕದ ಪ್ರಸ್ತುತಿಗೆ ಅಗತ್ಯವಾಗಿರುವ ಕಲಾವಿದರು ತಮ್ಮ ತಂಡದಲ್ಲಿದ್ದಾರೆಯೇ? ಯಾರು ಹೇಗೆ ಅಭಿನಯಿಸಬಹುದು ಎನ್ನುವುದನ್ನು ಮಥಿಸುತ್ತಾರೆ. ನಾಟಕದ ಫಾರ್ಮ್ ಹಾಕಿಕೊಳ್ಳುತ್ತಾರೆ. ಮನದ ರಂಗಭೂಮಿಯಲ್ಲಿ ತಾವು ಆರಿಸಿಕೊಳ್ಳುವ ನಾಟಕ ಹೇಗೆ ಪಡಿಮೂಡುತ್ತದೆ ಅನ್ನುವುದನ್ನೂ ಗ್ರಹಿಸುತ್ತಾರೆ. ಪ್ರದರ್ಶಿಸುವುದೇ ಆದರೆ ಇದಕ್ಕೆ ತಗಲುವ ಖರ್ಚು ವೆಚ್ಚ ಎಷ್ಟಿರಬಹುದು? ದುಬಾರಿ ವೆಚ್ಚ ವ್ಯಯಿಸಬೇಕಾ ಅಥವಾ ಸರಳ ಖರ್ಚಿನೊಂದಿಗೆ ಪ್ರದರ್ಶಿಸಬಹುದೇ ಎಂದೆಲ್ಲ ಲೆಕ್ಕ ಹಾಕುತ್ತಾರೆ. ತಮ್ಮ ಕಲ್ಪನೆಯನ್ನು ರಂಗಕ್ಕೊಡ್ಡಬಹುದೇ ಎನ್ನುವುದನ್ನು ಮೊದಲಾಗಿ ಖಾತ್ರಿ ಮಾಡಿಕೊಳ್ಳುತ್ತಾರೆ.

ಒಂದು ನಾಟಕ ಕೃತಿಯನ್ನು ರಂಗಕ್ಕೆ ಅಳವಡಿಸುವ ಸಂದರ್ಭ ಅಲ್ಲಿನ ಸಂಭಾಷಣೆ ಓದಿಗೆ ಹಿತವಾಗುತ್ತದೆಯಾದರೂ ಕೆಲವೊಮ್ಮೆ ರಂಗಕ್ಕೆ ಅದು ಅಷ್ಟಾಗಿ ಹಿಡಿಸುವುದಿಲ್ಲ, ಪಾತ್ರದ ಓಘಕ್ಕೆ, ಅಂದಕ್ಕೆ ಒಪ್ಪುತ್ತಿಲ್ಲ ಅಂತಾದರೆ ಅಲ್ಪ ಸ್ವಲ್ಪ ಬದಲಾವಣೆಯನ್ನು ಮಾಡಿಕೊಳ್ಳುತ್ತಾರೆ. ಈ ಸಂದರ್ಭ ಪಾತ್ರ ನಿರ್ವಹಿಸುವ ಕಲಾವಿದನನ್ನೂ ಗಮನದಲ್ಲಿರಿಸಿಕೊಳ್ಳುವುದಿದೆ. ಚಿಕಿತ್ಸಕ ದೃಷ್ಟಿಯ ಮಧ್ಯೆಯೂ ತಿಳಿ ಹಾಸ್ಯ, ವ್ಯಂಗ್ಯ, ವಿಡಂಬನೆಗಳನ್ನೆಲ್ಲ ಸಹಜವಾಗಿ ಹಾಯಿಸಿ ನಾಟಕದ ಗಾಂಭೀರ್ಯವನ್ನು, ಅಂದವನ್ನು ಹೆಚ್ಚಿಸುತ್ತಾರೆ.

ಒಂದು ನಾಟಕ ಆರಂಭಿಸಬೇಕು ಅಂದ ಬಳಿಕ ಅದೇ ಗುಂಗಿನಲ್ಲಿರುವ ಸುವರ್ಣರು ಪಾತ್ರಗಳ ವೇಷ ಭೂಷಣ, ಸಂಗೀತ ಅಳವಡಿಕೆ, ಬೆಳಕಿನ ನಿರ್ವಹಣೆ, ರಂಗಸಜ್ಜಿಕೆಗಳ ಬಗ್ಗೆ ಬಹಳವಾಗಿ ಚಿಂತಿಸುತ್ತಾರೆ. ದೃಶ್ಯ ಸಂಯೋಜನೆಯ ಬಗ್ಗೆ ಆಲೋಚಿಸುತ್ತಲೇ ಇರುತ್ತಾರೆ. ಈ ಎಲ್ಲ ಚಿಂತನೆಗಳಲ್ಲಿ ಹೊಸತನದ ಬಗ್ಗೆ ಶೋಧನೆ ನಡೆಯುತ್ತಿರುತ್ತದೆ. ಉತ್ತಮ ರಂಗಕೃತಿಯೊಂದನ್ನು ಕಟ್ಟಿಕೊಡುವ ಸಾಧ್ಯತೆಗಳ ಬಗ್ಗೆ ಸಾಕಷ್ಟು ಚಿಂತನೆಗಳನ್ನು ನಡೆಸುತ್ತಾರೆ. ತಮ್ಮ ತಂಡದಲ್ಲಿ ಪಾತ್ರಗಳಿಗೆ ನ್ಯಾಯ ಒದಗಿಸುವ ನಟ ನಟಿಯರಿದ್ದಾರೆಯೇ ಅನ್ನುವುದನ್ನೂ ಖಚಿತಪಡಿಸಿಕೊಳ್ಳುತ್ತಾರೆ.

## ಹೃದ್ಯ ಭಾಷೆ

ರಂಗ ಭಾಷೆ ಸಾಹಿತ್ಯ ಭಾಷೆಗಿಂತ ಬಹಳ ಭಿನ್ನವಾಗಿರುತ್ತದೆ. ರಂಗಭಾಷೆ ಸುಲಭವಾಗಿರಬೇಕು, ಸರಳವಾಗಿರಬೇಕು, ಅರ್ಥವಾಗುವಂತೆಯೂ ಇರಬೇಕು. ಕ್ಲಿಷ್ಟಕರ ಶಬ್ದಗಳ ಬಳಕೆ ಇರಬಾರದು. ಯಾಕೆಂದರೆ ನಾಟಕದ ಸಂಭಾಷಣೆ ಎಲ್ಲ ವರ್ಗದವರಿಗೂ ಅರ್ಥವಾಗುವಂತೆ ಇರಬೇಕು. ನಟ ನಟಿಯರೂ ಕೂಡ ಸಂಭಾಷಣೆಯನ್ನು ನಿರರ್ಗಳವಾಗಿ, ಪರಿಣಾಮಕಾರಿಯಾಗಿ ನಿರ್ವಹಿಸುವಂತಿರಬೇಕು ಅನ್ನುವ ಕಾರಣಕ್ಕೇನೇ ಸುವರ್ಣರು ಸಾಮಾಜಿಕ ನಾಟಕಗಳಲ್ಲಿ ಆಡು ಭಾಷೆಯನ್ನೇ ಬಳಸಿಕೊಳ್ಳುತ್ತಾರೆ. ಭಾಷೆ ಆಡಲಿಕ್ಕೆ, ಕೇಳಲಿಕ್ಕೆ ಹಿತವಾಗಿರುವಂತೆ ನೋಡಿಕೊಳ್ಳುತ್ತಾರೆ. ಆದರೆ ಪ್ರಾಂತೀಯ ಭಾಷೆಗಳು ಕೆಲವೊಮ್ಮೆ ಒಂದು ಪ್ರಾಂತದ ಕಲಾವಿದರಿಗೆ ಹೇಳುವುದೇ ಕಷ್ಟವಾಗಿಬಿಡುವುದಿದೆ. ಅದನ್ನು ಗಮನಿಸಿಯೇ ಸುವರ್ಣರು ಧಾರವಾಡದ ಕನ್ನಡದಲ್ಲಿದ್ದ 'ಕದಡಿದ ನೀರು' ನಾಟಕವನ್ನು ತಾವು ಪ್ರಯೋಗಕ್ಕೆ ಎತ್ತಿಕೊಂಡಾಗ ಅಲ್ಲಿನ ಭಾಷೆಯನ್ನಾಡುವುದಕ್ಕೆ ಕಲಾವಿದರು ಪಡುವ ಪಾಡನ್ನು ಕಂಡು ಕೊಂಡರು. ನಾಟಕ ಕೆಟ್ಟು ಹೋಗಬಾರದು ಅನ್ನುವ ಕಾಳಜಿಯಿಂದ ಸುವರ್ಣರು ನಾಟಕಕಾರ ಜಿ.ಬಿ.ಜೋಶಿಯವರನ್ನು ಸಂಪರ್ಕಿಸಿ ಅವರ ಅನುಮತಿ ಪಡೆದು ಧಾರವಾಡ ಭಾಷೆಯ ಸಂಭಾಷಣೆಯನ್ನು ಬೆಂಗಳೂರು ಕನ್ನಡಕ್ಕೆ ಪರಿವರ್ತಿಸಿದರು. ಪ್ರಯೋಗ ಯಶಸ್ವಿ ಆಯಿತು, ಖ್ಯಾತಿಯೂ ಪಡೆಯಿತು. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಸುವರ್ಣರು ಈ ನಾಟಕವನ್ನು ನಿರ್ದೇಶಿಸಿದ್ದರು. ಸಮಾಜ ಸೇವೆಯಲ್ಲಿ ಹೆಸರು ಗಳಿಸಿದ ಕುಸುಮಾ ಸೊರಬ್, ಅರುಣಾರಾಜೆ ಇದರಲ್ಲಿ ಪಾತ್ರ ನಿರ್ವಹಿಸಿದ್ದರು. ಇವರ ಸಹಿತ ಪ್ರತಿಯೊಬ್ಬರೂ ಪಾತ್ರವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು.

## ವಾಚನ ಕಲೆಗೆ ಹೊಸ ಭಾಷ್ಯ

ತಾಲೀಮಿನ ಆರಂಭದಲ್ಲಿ ಸುವರ್ಣರು ನಾಟಕದ ಸಂಭಾಷಣೆಗೆ ಮೊದಲ ಆದ್ಯತೆ ನೀಡುತ್ತಾರೆ. ಸಂಭಾಷಣೆಯೂ ನಾಟಕದ ಬಹುಮುಖ್ಯ ಅಂಗ ಎನ್ನುವುದನ್ನು ಪ್ರತಿಪಾದಿಸುತ್ತಾರೆ. ಸೂಕ್ಷ್ಮ ಸಂಗತಿಗಳಲ್ಲಿಯೂ ಜೀವಂತಿಕೆಯನ್ನು ತುಂಬುವಲ್ಲಿ ಸುವರ್ಣರು ವಿಶೇಷರಾಗುತ್ತಾರೆ. ಸುವರ್ಣರು ಭಿನ್ನರಾಗುವುದೇ ಸಂಭಾಷಣೆಯನ್ನು ಅತ್ಯಂತ ಸಮರ್ಥವಾಗಿ ರಂಗಕ್ಕೊಪ್ಪಿಸುವಲ್ಲಿ. ಧ್ವನಿ ಶಕ್ತಿಯ ಸಾಮರ್ಥ್ಯದ ಬಗ್ಗೆ ಅಪಾರವಾದ

ವಿಶ್ವಾಸವಿರುವ ಸುವರ್ಣರು ಧ್ವನಿಶಕ್ತಿಯನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಅಪಾರವಾಗಿ ಪರಿಶ್ರಮಿಸುವುದಕ್ಕೆ ಪ್ರೇರಣೆಯಾಗುತ್ತಾರೆ. ನಾನಾ ಸನ್ನಿವೇಶಗಳಲ್ಲಿ ಅದನ್ನು ಹೇಗೆ ದುಡಿಸಿಕೊಳ್ಳಬೇಕು ಅನ್ನುವುದನ್ನು ಮನವರಿಕೆ ಮಾಡಿಕೊಡುತ್ತಾರೆ. ನಾಟಕ ನೋಡಿದ ಪ್ರತಿಯೊಬ್ಬರದೂ ಪರಿಣಾಮಕಾರಿ ಸಂಭಾಷಣೆಯ ಬಗ್ಗೆ ಮೆಚ್ಚುಗೆ, ಆಶ್ಚರ್ಯದ ಪ್ರತಿಕ್ರಿಯೆ. ಇದು ಹೇಗೆ ಸಾಧ್ಯ ಎಂದು ಕುತೂಹಲದಿಂದ ಪ್ರಶ್ನಿಸದೇ ಇರುವುದಿಲ್ಲ.

ಈ ಕುರಿತ ಸುವರ್ಣರ ಪಾಠ ಹೀಗಿದೆ: 'ಪಾತ್ರಗಳ ಆಯ್ಕೆ ಮುಗಿದೊಡನೆ ವಾಚಿಕದ ತಾಲೀಮು ಆರಂಭ. ಅಭಿನಯದಲ್ಲಿ ವಾಚಿಕ, ಆಂಗಿಕ, ಮತ್ತು ಸಾತ್ವಿಕವೆಂದು ನಾಲ್ಕು ವಿಧ. (ನಾಟ್ಯ ಶಾಸ್ತ್ರ). ವಾಚಿಕಾಭಿನಯವನ್ನು ಧ್ವನಿ ಮತ್ತು ಉಸಿರಿನ ನಿಯಂತ್ರಣದಿಂದ ಪರಿಣಾಮಕಾರಿಯಾಗಿ ಮಾಡಬೇಕಾಗುತ್ತದೆ. ಅಭಿನಯದಲ್ಲಿ ವಾಚಿಕಾಭಿನಯ ಬಹಳ ಮುಖ್ಯವಾದುದು. ಪಾತ್ರಗಳು ಆಡುವ ಮಾತು ಅದು ಆಕ್ರೋಶದ ಆರ್ಭಟವಿರಲಿ ಅಥವಾ ಪ್ರೀತಿಯ ಪಿಸು ಮಾತಿರಲಿ, ತೀರಾ ಹಿಂದಿನ ಸಾಲಿನಲ್ಲಿ ಕುಳಿತಿರುವ ಪ್ರೇಕ್ಷಕನಿಗೂ ಅದು ಕೇಳುವಂತಿರಬೇಕು, ಅರ್ಥವಾಗುವಂತಿರಬೇಕು. ನಟನ ಧ್ವನಿ ಶಕ್ತಿಶಾಲಿಯಾಗಿ ಇರಬೇಕು, ನಿಯಂತ್ರಣದಲ್ಲಿರಬೇಕು. ಅದಕ್ಕಾಗಿ ಗಂಟಲಿನಿಂದಷ್ಟೇ ಅಲ್ಲ, ಕಿಬ್ಬೊಟ್ಟೆಯಿಂದ ಒತ್ತಿ ಬರುವಂತಾಗಬೇಕು. ಆಗ ಮಾತ್ರ ಧ್ವನಿ ಶಕ್ತಿಶಾಲಿಯಾಗಿರುತ್ತದೆ; ಧ್ವನಿಯನ್ನು ಸಮರ್ಪಕವಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ. ವಾಚಿಕದ ತಾಲೀಮಿನಲ್ಲಿ ಧ್ವನಿಯ ನಿಯಂತ್ರಣದೊಂದಿಗೆ ಭಾಷೆಯ ಸೂಕ್ತ ಬಳಕೆ, ಸ್ಪಷ್ಟ ಉಚ್ಚಾರಣೆ, ಮಾತುಗಳಲ್ಲಿ ಭಾವಾಭಿವ್ಯಕ್ತಿಗೆ ಪೂರಕವಾಗಿ ಏರಿಳಿತ, ಪರಿಣಾಮಕಾರಿ ಸಂವಹನಕ್ಕಾಗಿ ಕೆಲ ಶಬ್ದಗಳಿಗೆ ಒತ್ತು, ಸ್ವರಭಾರ, ಲಯ, ತಡೆ, ಮೌನ ಮುಂತಾದ ಅನೇಕ ವಿಷಯಗಳ ಕುರಿತು ನಟ ನಟಿಯರು ನಿರ್ದೇಶಕನಿಂದ ತರಬೇತಿ ಪಡೆದು ತಾಲೀಮು ನಡೆಸಬೇಕಾಗುತ್ತದೆ.'

'ನಾಟಕ ಕೃತಿ ಲಿಖಿತವಾಗಿರುತ್ತದೆ. ಆದರೆ ಅದು ರಂಗಕೃತಿಯಾಗುವಾಗ ಮೌಖಿಕವಾಗುತ್ತದೆ. ಆದ್ದರಿಂದ ಸಂಭಾಷಣೆ ಮಾತನಾಡಿದಂತಿರಬೇಕು, ಓದಿದಂತಲ್ಲ. ನಾಟಕದ ಆಶಯ ವ್ಯಕ್ತವಾಗುವುದೇ ವಾಚಿಕ ಅಭಿನಯದಲ್ಲಿ. ಒಟ್ಟೂ ತಾಲೀಮಿನಲ್ಲಿ ಕನಿಷ್ಠ ಹತ್ತು ದಿವಸ ಈ ಬಹು ಮುಖ್ಯ ವಾಚಿಕದಲ್ಲಿ ನಟ–ನಟಿಯರನ್ನು ತರಬೇತುಗೊಳಿಸಲು ನಾನು ಪ್ರಯತ್ನಿಸುತ್ತೇನೆ, ಬೇರೆ ಬೇರೆ ನಿರ್ದೇಶಕರ ತಾಲೀಮಿನ ಕ್ರಮ ವಿಭಿನ್ನವಾಗಿರುತ್ತದೆ. ವಾಚಿಕದ ಜತೆ ಆಂಗಿಕ ಅಭಿನಯವನ್ನೂ, ಒಟ್ಟೊಟ್ಟಿಗೆ ತಾಲೀಮು ನಡೆಸುವವರೂ ಇದ್ದಾರೆ. ಆದರೆ ಇವೆರಡನ್ನೂ ಒಟ್ಟಿಗೆ ಮಾಡಿದಾಗ ಕೆಲವು ನಟರಿಗೆ ಗೊಂದಲ ಉಂಟಾಗಿ ತಾಲಿಮು ಕುಂಠಿತಗೊಳ್ಳುವ ಸಾಧ್ಯತೆ ಇದೆ' (ಪುಟ 4–5 ರಂಗ ತಾಲೀಮು: ಒಂದು ಟಿಪ್ಪಣಿ– ರಂಗಾನುಭೂತಿ) ಇದು ಸುವರ್ಣರ ಚಿಕಿತ್ಸಕ ದೃಷ್ಟಿಕೋನ, ಖಚಿತತೆ.

## ತಾಲೀಮಿಗೆ ಸುವರ್ಣ ವ್ಯಾಖ್ಯಾನ

ಶಿಸ್ತುಬದ್ಧ ತಾಲೀಮಿನ ಬಗ್ಗೆಯೂ ಅಧಿಕೃತ ವ್ಯಾಖ್ಯಾನ ನೀಡುವ ಸುವರ್ಣರು ಸ್ಟಾನಿಸ್ಲಾವಸ್ಕಿಯ ನಟನಾ ಸಿದ್ಧಾಂತವನ್ನೇ ಒಪ್ಪಿಕೊಂಡವರು. 'ಅಭಿನಯ ತಂತ್ರಗಳ

ಕುರಿತು ದೀರ್ಘ ವಿವರಣೆಗಳಿಂದ ಕೂಡಿದ ಭರತ ಮುನಿಯ 'ನಾಟ್ಯ ಶಾಸ್ತ್ರ' ರಂಗಭೂಮಿ ಕಲಾವಿದರಿಗೆ ಬಹಳ ಉಪಯುಕ್ತವಾದ ಅಮೂಲ್ಯ ಗ್ರಂಥ. ಆದರೆ ಆಧುನಿಕ ರಂಗಭೂಮಿಯಲ್ಲಿ ವಾಸ್ತವವಾದಿ ನಾಟಕಗಳಿಗೆ ಸಂಸ್ಕೃತ ನಾಟಕಗಳ ಶೈಲೀಕೃತ ಅಭಿನಯ ತಂತ್ರಗಳಿಗಿಂತ ರಷ್ಯಾದ ನಿರ್ದೇಶಕ, ರಂಗತಜ್ಞ ಸ್ಟಾನಿಸ್ಲಾವಸ್ಕಿಯ ನಟನಾ ಸಿದ್ಧಾಂತಗಳೇ ಹೆಚ್ಚು ಸೂಕ್ತವೆನಿಸುತ್ತದೆ' (ಪುಟ 5 ರಂಗ ತಾಲೀಮು: ಒಂದು ಟಿಪ್ಪಣಿ– ರಂಗಾನುಭೂತಿ) ಎಂದು ಸಮರ್ಥಿಸುತ್ತಾರೆ. ಆತನ ಅಂತರಿಕ ಅಭಿನಯ ಸಿದ್ಧಾಂತವನ್ನು ಆತ್ಮಸಾಥ್ ಮಾಡಿಕೊಂಡಿದ್ದಾರೆ, ಅದನ್ನೇ ಅವರು ಹೊಸ ತಲೆಮಾರಿಗೆ ದಾಟಿಸುತ್ತ ಬರುತ್ತಿದ್ದಾರೆ.

ಕಲಾವಿದ ಶ್ರೀನಿವಾಸ ಎನ್. ಪಾಂಗಾಳ ಅವರು ತಾಲೀಮು ಸಂದರ್ಭ ಸುವರ್ಣರು ನಟರನ್ನು ತಿದ್ದುವ ಬಗೆಯನ್ನು ಮನಮುಟ್ಟಿಸುವುದು ಹೀಗೆ: 'ಕುರುಡನ ಸಂಗೀತದಲ್ಲಿ ನನಗೆ ಮಂಗಳೂರಿನ ಪ್ರಖ್ಯಾತ ಪುತ್ತು ಶೇಠ್ ಬೀಡಿ ಸೇದಿ ಹೊಗೆ ಬಿಡುವ ಪಾತ್ರ. ತಾಲೀಮು ಸಂದರ್ಭ ಬೀಡಿ ಸೇದಿ ಹೊಗೆ ಬಿಟ್ಟೆ. ಬೀಡಿ ಯಾ ಸಿಗರೇಟುಗಳ ಬಗ್ಗೆ ನನಗೆ ಮಾಹಿತಿಯೇ ಇರಲಿಲ್ಲ. ಆಗ ನಿರ್ದೇಶಕರಾದ ಸುವರ್ಣರು ಇದೇನು ಸ್ವಾಮೀ, ಮುಂಬಯಿಯಿಂದ ಮಂಗಳೂರಿಗೆ ಸ್ಟೀಮರ್ ಹೋಗುವಾಗ ಹೊಗೆ ಬರುವಂತೆ ನಿನ್ನ ಬೀಡಿಯ ಹೊಗೆ ಬರುತ್ತದೆ? ಹೊಗೆಯನ್ನು ಹೊಟ್ಟೆಯೊಳಗೆ ತಕ್ಕೊಂಡು ಮೂಗಿನಿಂದ ಹೊರಗೆ ಬಿಡೆಂದರು. ಆಗ ಕೆಮ್ಮು ಬರುತ್ತದೆ ಸರ್ ಎಂದೆ. ಚಿಂತಿಲ್ಲ, ಅಭಿನಯ ಜೀವಂತವಾಗಿರುತ್ತದೆ ಎಂದರು. ಅಭ್ಯಾಸ ಮುಗಿಯುವ ವೇಳೆ 4ರಿಂದ 5 ಕಟ್ಟು ಬೀಡಿ ಸೇದಿದ್ದೇನೆ. 'ವಿಷಮ ಘಳಿಗೆ' ನಾಟಕದಲ್ಲಿ ನಾಯಕ ಪ್ರಯಾಣ ಮುಗಿಸಿ ಬರುವಾಗ ಪೆಟ್ಟಿಗೆಯನ್ನು ಹೆಗಲ ಮೇಲೇರಿಸಿಕೊಂಡು ಬರಬೇಕು. ಆಗ ನನಗೆ 18–19 ವರ್ಷ ವಯಸ್ಸು, ಅಭ್ಯಾಸ ಶುರುವಾಯಿತು. ಹನುಮಂತ ಬಂಡೆಕಲ್ಲುಗಳನ್ನು ಸುಲಭದಿಂದ ಎತ್ತಿ ಶ್ರೀರಾಮ ಸೇತುವೆಗೆ ಬಿಸಾಡುವಂತೆ ಪೆಟ್ಟಿಗೆಯನ್ನು ರಭಸದಿಂದ ಹೆಗಲ ಮೇಲೇರಿಸಿ ಲೆಫ್ಟ್ ರೈಟ್ ಹೆಜ್ಜೆ ಹಾಕುತ್ತಾ ಹಿಂದಿನಿಂದ ಬಂದೆ. ಆಗ ಸುವರ್ಣರು ನನ್ನ ಬೆನ್ನಿಗೆ ನಾಲ್ಕು ತಟ್ಟಿ ಸ್ವಾಮೀ, ಪೆಟ್ಟಿಗೆ ಭಾರವಿದೆ ತಾನೇ? ಭಾರವಿರುವ ಪೆಟ್ಟಿಗೆಯನ್ನು ಕಷ್ಟಪಟ್ಟು ಮೇಲಕ್ಕೆತ್ತಿ ಹೆಗಲ ಮೇಲಿರಿಸಿ ಬೆವರನ್ನು ಒರೆಸಿ ಮೆಲ್ಲಗೆ ನಡೆಯುತ್ತಾ ಬರಬೇಕೆಂದರು. ಅವರು ಅಭಿನಯಿಸಿ ತರಬೇತಿ ನೀಡಿದ ರೀತಿ ಇಂದು ಕೂಡ ಸ್ಮೃತಿ ಪಟಲದಲ್ಲಿ ಅಚಲವಾಗಿದೆ' (ಕರ್ನಾಟಕ ಮಲ್ಲ, ನ–9–2008)

ಇದು ಆರಂಭದಿಂದಲೂ ಲಿವಿಂಗ್‌ದ ಕ್ಯಾರೆಕ್ಟರ್ ಅನ್ನು ಪೋಷಿಸುತ್ತ ಬಂದದ್ದನ್ನೇ ನಿರೂಪಿಸುತ್ತದೆ.

## ಪ್ರೊಸೀನಿಯಂ ಸ್ಟೇಜ್

ಸದಾನಂದ ಸುವರ್ಣರು ವಾಸ್ತವವಾದಿ ರಂಗ ಸಜ್ಜಿಕೆಯನ್ನೇ ಇಷ್ಟಪಡುವವರು. ಸಾಂಕೇತಿಕ ಸ್ಟೇಜ್ ಜನಸಾಮಾನ್ಯರನ್ನು ತಟ್ಟುವುದಿಲ್ಲ ಎನ್ನುವುದರ ಬಗ್ಗೆ ಅರಿವಾಗಿದೆ. ವಾಸ್ತವವಾದಿ ಸ್ಟೇಜ್ ನಿಜಜೀವನಕ್ಕೆ ತೀರಾ ಹತ್ತಿರವಾಗಿದೆ. ಆದ್ದರಿಂದ ಜನರಿಗೆ ಇದು

ಇಷ್ಟವಾಗುತ್ತದೆ ಎನ್ನುವುದು ಸುವರ್ಣರ ಅನುಭವದ ನಿಲುವು. ಈ ಕುರಿತ ಚರ್ಚೆಯನ್ನು ನಡೆಸುವುದಕ್ಕೆ ಸುವರ್ಣರು ನಲವತ್ತರ ನಲುಗು ನಾಟಕವನ್ನು ಆಯ್ದುಕೊಳ್ಳುತ್ತಾರೆ. ಇಲ್ಲಿ ನಾಟಕಕಾರ ಹಾಗೂ ನಿರ್ದೇಶಕರ ನಡುವೆ ನಡೆಯುವ ಸಂಭಾಷಣೆಯಲ್ಲಿ ಈ ಚರ್ಚೆ ನಡೆಸುತ್ತಾರೆ. ಜನರನ್ನು ತಟ್ಟುವುದೇ ನಾಟಕದ ಯಶಸ್ಸು ಎಂದು ನಂಬಿರುವ ಸುವರ್ಣರು ಜನರ ಹೃದಯ ತಟ್ಟುವ, ಬುದ್ಧಿಯನ್ನೂ ಚುರುಕುಗೊಳಿಸುವ ನಿಟ್ಟಿನಲ್ಲಿ ಮನರಂಜನೆ ಹಾಗೂ ವಿಚಾರಪ್ರಚೋದಕ ವಸ್ತುಗಳಿರುವ ನಾಟಕಗಳನ್ನು ಪ್ರಯೋಗಕ್ಕೆ ಆಯ್ದುಕೊಳ್ಳುತ್ತಾರೆ. ಜನಸಾಮಾನ್ಯರನ್ನು ಹಾಗೂ ಬುದ್ಧಿವಂತ ವರ್ಗಗಳನ್ನು ಏಕಕಾಲಕ್ಕೆ ಹಿಡಿದಿಟ್ಟುಕೊಳ್ಳುವಲ್ಲಿ ವಾಸ್ತವವಾದಿ ರಂಗಭೂಮಿಯನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಾರೆ.

ಸ್ಟೇಜ್ ಹಾಗೂ ಸೆಟ್ಟಿಂಗ್‌ನ ಅನುಭವಗಳನ್ನು ಸುವರ್ಣರು ಬಿಚ್ಚಿಡುವುದು ಹೀಗೆ: 'ಹಿಂದೆ ಸಾಲು ಸಾಲು ಮನೆಗಳು ಇರುವ ದೃಶ್ಯವಿದ್ದರೆ ಅದಕ್ಕೆ ಉಪಯೋಗಿಸುವ ಪರದೆಯಲ್ಲಿರುವ ಸಾಲಂಕೃತ ಮನೆಗಳ ಕಿಟಕಿಗಳು ಮುಚ್ಚಿರುತ್ತಿದ್ದವು. ಎಲ್ಲ ನಾಟಕಗಳ ಪರದೆಯೂ ಹೀಗೇ ಇರುತ್ತಿದ್ದವು. ಈ ಸಿದ್ಧ ಪರದೆಗಳನ್ನೇ ನೋಡುತ್ತಿದ್ದ ಪ್ರೇಕ್ಷಕರು ಅಲ್ಲಿ ಕರ್ಫ್ಯೂ ವಿಧಿಸಿದ್ದಾರೆ. ಅದಕ್ಕಾಗಿ ಎಲ್ಲ ಮನೆಗಳ ಕಿಟಕಿ ಬಾಗಿಲುಗಳು ಮುಚ್ಚಿಕೊಂಡಿವೆ ಎಂದು ಗೇಲಿ ಮಾಡಿ ನಗುತ್ತಿದ್ದರು. ನಾನು ಸೆಟ್‌ಗಳನ್ನು ಹಾಕಲು ಆರಂಭಿಸಿದ ಮೇಲೆ ಅವುಗಳ ಜೋಡಣೆಯಲ್ಲಿ ವ್ಯತ್ಯಾಸ ಮಾಡಿಕೊಳ್ಳುತ್ತಿದ್ದೆ. ಬೇರೆ ಬೇರೆ ವಿನ್ಯಾಸದಲ್ಲಿ ಜೋಡಿಸುತ್ತಿದ್ದೆ. ನನ್ನ ಬದಲಾವಣೆಗಳನ್ನು ಗಮನಿಸುತ್ತಿದ್ದ, ಸ್ಟೇಜ್ ವಿನ್ಯಾಸದಲ್ಲಿ ನೆರವಾಗುತ್ತಿದ್ದ ದಾರುವಾಲ ಎಂಬಾತ ಬಹಳ ಸೃಜನಶೀಲವಾಗಿ ಸೆಟ್ ಮಾಡಿಸ್ತೀರಿ ಅಂತ ಖುಷಿ ವ್ಯಕ್ತಪಡಿಸುತ್ತಿದ್ದ. ಪ್ರೇಕ್ಷಕರೂ ಮೆಚ್ಚಿಕೊಳ್ಳುತ್ತಿದ್ದರು.

ದೇವಾಡಿಗ ಅಂತಿದ್ರು, ಬ್ಯಾಕ್ ಸ್ಟೇಜ್‌ನಲ್ಲಿ ಒಳ್ಳೆ ಸಹಾಯಕರಾಗಿದ್ದರು. ದಾರುವಾಲನಿಗೆ ನಾನು ಸ್ಟೇಜ್ ಸೆಟ್ಟಿಂಗ್ ಬಗ್ಗೆ ನಿರ್ದೇಶನ ಮಾಡುತ್ತಿದ್ದೆ. ನಾನು ಹೇಳಿದ ಹಾಗೆ ಅವರು ಸಜ್ಜುಗೊಳಿಸುತ್ತಿದ್ದರು. ಬಳಿಕ ದೇವಾಡಿಗರು ಅವರಿಗೆ ವಹಿಸಿಕೊಟ್ಟ ಸೆಟ್ಟಿಂಗ್ ಕೆಲಸವನ್ನು ಮುಂದುವರಿಸುತ್ತಿದ್ದರು. ಅದೊಂದು ದಿನ ನಾನು ಹೇಳಿದಂತೆ ದಾರುವಾಲ ಕಾರ್ನರ್ ಸೆಟ್ ಮಾಡಿ ಜೋಡಿಸುತ್ತಿದ್ದ, ಆ ಹೊತ್ತಿಗೆ ಅಲ್ಲಿಗೆ ಬಂದ ದೇವಾಡಿಗ ಅವರು 'ಕಿಟಕಿ ಅಲ್ಲಿ ಯಾಕೆ ಹಾಕಿದ್ದು, ಇಲ್ಲಿ ಹಾಕಿದ್ರೆ ಚೆನ್ನಾಗಿರ್ತಿತ್ತು...' ಎಂದೆಲ್ಲ ಹೇಳುತ್ತಿದ್ದಂತೆಯೇ ಬಾಯಿ ತೆರೆದ ದಾರುವಾಲ, 'ಸುವರ್ಣ ಸಾಬ್ ಹೇಳಿದ್ದಾರೆ. ಎಷ್ಟು ಚೆನ್ನಾಗಿದೆ ಅವರ ವಿನ್ಯಾಸ! ನೀನು ಗಡ್ಡ ಬೆಳೆಸಿದ್ದಿ. ಅದರ ಬದಲಿಗೆ ಬುದ್ಧಿ ಬೆಳೆಸಿಕೋ ಬುದ್ಧಿ' ಎಂದು ಹೇಳಿದ್ದ. ಅಲ್ಲಿ ಸೇರಿದ್ದವರೆಲ್ಲ ಗೊಳ್ಳೆಂದು ನಕ್ಕುಬಿಟ್ಟಿದ್ದರು. ಬಹಳ ಸಮಯದವರೆಗೂ ತಂಡದ ಸದಸ್ಯರೆಲ್ಲ ದಾರುವಾಲನ ಮಾತನ್ನೇ ನೆನಪಿಸಿಕೊಂಡು ನಗುತ್ತಿದ್ದರು. ದೇವಾಡಿಗ ಒಳ್ಳೆ ವ್ಯಕ್ತಿ. ಯಾವುದೇ ಕೆಲಸ ಹೇಳಿದರೂ ಅತ್ಯಂತ ನಿಷ್ಠೆಯಿಂದ ಅದನ್ನು ಮಾಡಿ ಮುಗಿಸುತ್ತಿದ್ದರು. ನಾಟಕಕ್ಕೆ ಬೇಕಾಗುವ ಮೇಜು-ಕುರ್ಚಿ ಮತ್ತಿತರ ಎಲ್ಲ ಪರಿಕರಗಳನ್ನೂ ಮನೆ ಮನೆಗಳಿಂದ ಸ್ವತಃ ಸಂಗ್ರಹಿಸಿ ಕೈಗಾಡಿಯಲ್ಲಿ ಹಾಕಿಕೊಂಡು ತಾವೇ ದೂಡಿಕೊಂಡು

ಬರುತ್ತಿದ್ದರು. ಅವರು ಒಳ್ಳೆಯ ಉದ್ಯೋಗದಲ್ಲಿದರೂ ರಂಗಭೂಮಿಗಾಗಿ ಮಿಡಿಯುತ್ತಿದ್ದುದು ಹೀಗೆ. ಉದಯಕಲಾನಿಕೇತನ ತಂಡವೇ ಒಂದು ಮನೆಯಂತಿತ್ತು. ಅಲ್ಲಿನ ಸದಸ್ಯರೆಲ್ಲ ನಾಟಕಕ್ಕಾಗಿ ಯಾವ ಕೆಲಸವನ್ನಾದರೂ ಸರಿ ಇಷ್ಟ ಪಟ್ಟು ಮಾಡುತ್ತಿದ್ದರು.

ಆನಂದ ಅಮೀನ್ ಸುಮಾರು ವರ್ಷ ಸ್ಟೇಜ್ ಮ್ಯಾನೇಜರ್ ಆಗಿದ್ದರು. ದಕ್ಷ ಹಾಗೂ ಪ್ರಾಮಾಣಿಕ ಮನುಷ್ಯ ಅವರು. ಯಾವ ಕೆಲಸವನ್ನೇ ಆಗಲಿ ಇಲ್ಲ ಅನ್ನದೆ ತಕ್ಷಣವೇ ಮಾಡಿ ಮುಗಿಸುತ್ತಿದ್ದರು. ಕಷ್ಟ ಅನ್ನುವುದು ಅವರಿಗೆ ತಿಳಿದಿರದ ಪದವಾಗಿತ್ತು. ಅವರ ನಿಧನಾ ನಂತರ ತಂಡ ಸೇರಿಕೊಂಡ ಕೃಷ್ಣರಾವ್ ಅನ್ನುವವರಿದ್ದರು. ಅವರೂ ಅಷ್ಟೇ ನಿಷ್ಠಾವಂತರಾಗಿದ್ದರು. ಎಷ್ಟೋ ಮಂದಿ ಅಭಿನಯಿಸುವುದಕ್ಕೆ ಮಾತ್ರ ಆಸಕ್ತರಿರುತ್ತಾರೆ. ಹಿನ್ನೆಲೆಯಲ್ಲಿ ಕೆಲಸ ಮಾಡುವುದಕ್ಕೆ ಮನಸ್ಸು ಮಾಡುವುದಿಲ್ಲ. ಆದರೆ ಕೃಷ್ಣರಾವ್ ಹಾಗಲ್ಲ. ನೇಪಥ್ಯದಲ್ಲಿ ದುಡಿಯುವುದು ಅವರಿಗೆ ಹೆಚ್ಚು ಇಷ್ಟದ ಕೆಲಸವಾಗಿತ್ತು. ಮೌನಿಯಾಗಿದ್ದರು. ಎಲ್ಲವನ್ನೂ ಸಹಿಸಿಕೊಂಡು ನಟರನ್ನೆಲ್ಲ ಸಮದೂಗಿಸಿಕೊಂಡು ಹೋಗಬೇಕು ಮ್ಯಾನೇಜರ್ ಆದವರು. ಅದನ್ನವರು ಸಮರ್ಥವಾಗಿ ನಿಭಾಯಿಸುತ್ತಿದ್ದರು. ಅದಕ್ಕೆ ಬೇಕಾದ ತಾಳ್ಮೆ ಅವರಲ್ಲಿ ಧಾರಾಳವಾಗಿ ಇತ್ತು. ಅವರನ್ನು ನಾನು ವಿಶೇಷವಾಗಿ ಸ್ಮರಿಸ್ತೇನೆ'. (ಅಕ್ಟೋಬರ್ 15 ರಂದು ನಡೆಸಿದ ಸಂದರ್ಶನದಲ್ಲಿ)

## ಬೆಳಕು, ಸಂಗೀತ, ಧ್ವನಿಯಲ್ಲಿ ನವ ಭಾವ

ಬೆಳಕು, ಸಂಗೀತ, ಧ್ವನಿ ಎಲ್ಲವೂ ಚಲನಶೀಲವಾಗಿರಬೇಕು, ಹೊಸತನ್ನು ಧ್ವನಿಸುತ್ತಿರಬೇಕು, ಪ್ರಯೋಗದ ಯಶಸ್ಸಿಗೆ ಇವೆಲ್ಲ ಪೂರಕವಾಗಿರಬೇಕು ಎಂದೇ ಆ ನೆಲೆಯಲ್ಲಿ ಅಧ್ಯಯನ, ಶೋಧನೆ, ಸಂಯೋಜನೆ ನಡೆಸುತ್ತಿರುತ್ತಾರೆ ಸುವರ್ಣರು. ಪರಿಣಾಮವಾಗಿಯೇ ಮೌಲಿಕ ಕೊಡುಗೆಗಳು ಅವರಿಂದ ಸೃಷ್ಟಿಯಾಗುತ್ತವೆ.

ಬೆಳಕಿನ ಸಂಯೋಜನೆಯಲ್ಲಿ ಸುವರ್ಣರು ನಿಷ್ಣಾತರು. ನಾಟ್ಯ ಅಕಾಡೆಮಿಯಲ್ಲಿ ಈ ನಿಟ್ಟಿನಲ್ಲಿ ವಿಶೇಷವಾದ ಹೊಳಹುಗಳನ್ನು ನೀಡಿದೆ. ಅಲ್ಲಿ ಈ ಕುರಿತು ಪಡೆದ ಘನ ಅನುಭವಗಳನ್ನು ತಮ್ಮ ನಾಟಕಗಳಲ್ಲಿ ಪ್ರಯೋಗಿಸಿ ಅವನ್ನು ವಿಶಿಷ್ಟ ಆಗಿಸುತ್ತಿದ್ದರು. ಬೆಳಕಿನ ವಿನ್ಯಾಸಕ್ಕೆ ಪ್ರೇಕ್ಷಕರು ಮಾರು ಹೋಗುತ್ತಿದ್ದರು. ಬೆಳಕೇ ಸನ್ನಿವೇಶ, ಸಂದರ್ಭ, ಭಾವನೆಗಳನ್ನು ಹೊಮ್ಮಿಸುತ್ತಿತ್ತು. ಇದನ್ನು ಗಮನಿಸಿದ ಕೆ.ಜೆ.ರಾವ್ ಅವರು ತಮ್ಮ ನಿರ್ದೇಶನದ 'ನಂಜಿನ ನಾಲಗೆ' ನಾಟಕದ ಬೆಳಕಿನ ಸಂಯೋಜನೆಗೆ ಸುವರ್ಣರನ್ನೇ ಆಹ್ವಾನಿಸಿದ್ದರು. ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ಫ್ರಂಟ್ ಲೈಟ್‌ಗಳನ್ನೇ ಹೆಚ್ಚಾಗಿ ಬಳಸುತ್ತಿದ್ದ ಅಂದಿನ ಮುಂಬಯಿ ಕನ್ನಡ ನಾಟಕಕ್ಕೆ ಹತ್ತು ಸ್ಪಾಟ್ ಲೈಟ್ ಹಾಗೂ ಡಿಮ್ಮರ್‌ಗಳನ್ನು ದುಡಿಸಿದ ರೀತಿಗೆ ಎಲ್ಲರಿಂದಲೂ ಶಹಬ್ಬಾಸ್‌ಗಿರಿಯನ್ನೇ ಪಡೆದುಕೊಂಡರು ಸುವರ್ಣರು. ಆರ್.ಡಿ. ಕಾಮತ್ ಅವರು ಕೂಡ 'ಹಿಮಾಚಲದ ಹಿಂದೆ' ನಾಟಕಕ್ಕೆ ಸುವರ್ಣರ ಬೆಳಕಿನ ಸಂಯೋಜನೆಯನ್ನೇ ಬಯಸಿದರು.

ಬೆಳಕಿನ ಮೂಲಕವೇ ಸಮಯವನ್ನು ತೋರಿಸಬಹುದು ಎನ್ನುವುದನ್ನು ಸುವರ್ಣರು ಸಾಬೀತುಪಡಿಸಿದರು. ಬೆಳಗ್ಗಿನ ದೃಶ್ಯವನ್ನು ಕಿಟಕಿಯಲ್ಲಿ ಕಾಣಿಸುವ ಹಾಗೆ ಸೈಕ್ಲೋರಾಮ ಹಾಕಿ ಸ್ಕೈ ಇಫೆಕ್ಟ್ ನೀಡಿ ಸೂರ್ಯನ ಕಿರಣ ಒಳಗೆ ಹಾದು ಬರುವಂತೆ ಮಾಡುವುದು, ನಿಧಾನಕ್ಕೆ ಬೆಳಗ್ಗಿನ ಕೆಂಗಿರಣ ಮರೆಯಾಗಿ ಮಧ್ಯಾಹ್ನದ ಬೆಳಕು ಮೂಡುವುದು, ಸಂಜೆಯಾಗುವುದನ್ನು ತೋರಿಸುವುದಕ್ಕೆ ಇನ್ನೊಂದು ಕಿಟಕಿಯಿಂದ ಕಿತ್ತಳೆ ಬಣ್ಣದ ಬೆಳಕು ಹಾಯಿಸುವುದು, ರಾತ್ರಿ ಬೆಳದಿಂಗಳು ಹಾದು ಬರುವಂತೆ ಮಾಡುವುದು ಎಲ್ಲವು ಕಲರ್ ಫಿಲ್ಟರ್‌ನ ಸಾಧ್ಯತೆಗಳನ್ನು ಮುಖಾಮುಖಿಯಾಗಿಸಿವೆ. ಮುಂಬಯಿ ಕನ್ನಡ ರಂಗಭೂಮಿಯಲ್ಲಿ ಬೆಳಕೂ ಪಾತ್ರವಾಗುವುದನ್ನು ತೋರಿಸಿಕೊಟ್ಟರು. ನಾಟ್ಯ ಅಕಾಡೆಮಿಯಿಂದ ಕಲಿತ ಪಾಠವನ್ನು ತಮ್ಮ ನಾಟಕಗಳ ಅನನ್ಯತೆ ಮೂಲಕ ಇನ್ನಷ್ಟು ಕಲಾತ್ಮಕವಾಗಿಸುತ್ತ ಪ್ರಯೋಗಿಸಿದರು.

ಸಂಗೀತ ಸಂಯೋಜನೆಯಲ್ಲಿ ಕಾಲದ ಬದಲಾವಣೆ, ಜನರ ನಾಡಿಮಿಡಿತ ಅರ್ಥೈಸಿಕೊಳ್ಳುತ್ತ ಅದಕ್ಕೆ ಹೊಂದಿಕೊಳ್ಳುತ್ತ ಪ್ರಯೋಗ ನಿರತರಾಗಿದ್ದಾರೆ. ಹಿತಮಿತ ಸಂಗೀತಕ್ಕೇ ಹೆಚ್ಚಿನ ಆದ್ಯತೆ ನೀಡಿದರು. ನಾಟಕದ ಒಟ್ಟಂದಕ್ಕೆ ಅನುಗುಣವಾಗಿ ಅನೇಕ ಸಂಗತಿಗಳನ್ನು ಧ್ವನಿಸುವುದಕ್ಕೆ ಸಂಗೀತವನ್ನು ಸಂಯೋಜಿಸುವ ನಿಟ್ಟಿನಲ್ಲಿ ಬಹಳ ಜಾಗರೂಕರಾಗಿರುತ್ತಾರೆ. ಅಲ್ಲಲ್ಲ ತಮ್ಮ ಪ್ರತಿಭಾ ಛಾಪನ್ನು ಒತ್ತಿದ್ದಾರೆ. ಅವರ ಪ್ರಯೋಗಶೀಲತೆಯನ್ನು ಗಮನಿಸುತ್ತ ಬಂದರೆ ನಲವತ್ತು ಐವತ್ತು ದಶಕಗಳು ನಾಟಕಗಳಲ್ಲಿ ಸಂಗೀತಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದ ಕಾಲಘಟ್ಟ. ಪರಿಣಾಮವಾಗಿ ಸಂಗೀತಕ್ಕೇ ಪ್ರಾಧಾನ್ಯ ನೀಡುವ ನಿಟ್ಟಿನಲ್ಲಿ ಕುರುಡನ ಸಂಗೀತ ನಾಟಕವನ್ನು ಪ್ರಯೋಗಿಸಿದರು. ಸಂಗೀತಗಾರನ ಬದುಕಿನ ಕಥೆಯಾದ್ದರಿಂದ ಸಾಕಷ್ಟು ಹಿನ್ನೆಲೆ ಸಂಗೀತ ಅಳವಡಿಸಿದ್ದರು. ಅಲ್ಲಿ ಹಿಂದಿ ಚಲನಚಿತ್ರದ ಸೆಮಿ ಕ್ಲಾಸಿಕಲ್ ಸಂಗೀತವನ್ನು ಆಯ್ಕೆ ಮಾಡಿಕೊಂಡರು. ಸ್ವತಃ ಸುವರ್ಣರೇ ಹಾಡು ರಚಿಸುತ್ತಿದ್ದರು. 'ಅಭಾಗಿನಿ', 'ವಿಷಮ ಘಳಿಗೆ' ನಾಟಕಗಳಲ್ಲೂ ಸುವರ್ಣರು ಉತ್ತಮ ಸಂಗೀತ ಸಂಯೋಜಿಸಿ ರಂಜಿಸಿದ್ದಾರೆ. ಹಾರ್ಮೋನಿಯಂ, ತಬಲಾ, ಕೊಳಲು, ದಿಲ್‌ರುಭಾ ಮತ್ತಿತರ ಪರಿಕರಗಳನ್ನು ಬಳಸುತ್ತಿದ್ದರು. ಐವತ್ತನೇ ದಶಕದ ಕೊನೆಯ ಹಂತದಲ್ಲಿ ರಂಗಭೂಮಿಯಲ್ಲಿ ಸಂಗೀತದ ಬಳಕೆ ಕೊಂಚ ತಗ್ಗಿತು. ಆದರೆ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಸಂಗೀತ ಪರಿಕರಗಳ ವಾದನಗಳನ್ನು ಸಂಯೋಜಿಸುವುದನ್ನು ಮುಂದುವರಿಸಿದರು. ನಾಟಕದ ವಸ್ತು, ಪಾತ್ರ, ಸನ್ನಿವೇಶಕ್ಕೆ ಎಷ್ಟು ಬೇಕೋ ಅಷ್ಟೇ ಪ್ರಮಾಣದ ಸಂಗೀತ ಬಳಕೆಯಾಗಬಹುದು, ಸಂಗೀತವೇ ಪ್ರಧಾನವಾಗಿಬಿಡಬಾರದು ಅನ್ನುವ ಸಿದ್ಧಾಂತವನ್ನು ಒಪ್ಪಿಕೊಂಡು ಮುಂದುವರಿದರು.

ನಿಷ್ಠೆ, ತಾಳ್ಮೆ, ತ್ಯಾಗ, ಪ್ರಯೋಗಶೀಲತೆ ಎಲ್ಲವುಗಳ ಸಂಗಮದಿಂದ ಉತ್ತಮ ನಾಟಕಗಳನ್ನು ರಂಗಕ್ಕೆ ಅರ್ಪಿಸಬಹುದು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ ಸುವರ್ಣರು.

ಹಿರಿಯ ಪತ್ರಕರ್ತ, ಪ್ರಜಾವಾಣಿಯ ವರದಿಗಾರ ಡಾ. ಗಣೇಶ ಅಮೀನಗಡ ಅವರು ಸುವರ್ಣರ ರಂಗಕೊಡುಗೆಗಳನ್ನು ಗೌರವಿಸುತ್ತ, ಕುತೂಹಲದಿಂದ ಅವರ ಚಟುವಟಿಕೆಗಳನ್ನು ಗಮನಿಸಿ ಹೀಗೆ ಅಭಿಮಾನಿಸುತ್ತಾರೆ: 'ಸದಾನಂದ ಸುವರ್ಣರು ನಾಲ್ಕು ದಶಕಗಳ ಕಾಲ ಮುಂಬಯಿಯಲ್ಲಿದ್ದು ಕನ್ನಡ ನಾಟಕಗಳನ್ನು ರಚಿಸಿ, ನಿರ್ದೇಶಿಸಿ ಮುಂಬಯಿಯಲ್ಲಿ ಕನ್ನಡ ರಂಗಭೂಮಿಯನ್ನು ಬೆಳೆಸಿದವರು. ಎಪ್ಪತ್ತರ ದಶಕದಲ್ಲಿ ಚಲನಚಿತ್ರರಂಗದತ್ತಲೂ ಹೊರಳಿದರು. ಕನ್ನಡ ಚಲನಚಿತ್ರವನ್ನು, ಕಲಾತ್ಮಕ ಚಿತ್ರಗಳನ್ನು ಬೆಳೆಸಿದರು. 'ಸುವರ್ಣ ಕಮಲ'ವೇ ಆದರು. ಇಷ್ಟೆಲ್ಲ ಇದ್ದೂ ಪ್ರಚಾರ ಬಯಸದ ಪ್ರತಿಭಾವಂತ ಸದಾನಂದ ಸುವರ್ಣ. ಪ್ರತಿಭಾವಂತರೂ ಪ್ರಚಾರಕ್ಕಾಗಿ ಅಲೆಯುವ ಈ ದಿನಗಳಲ್ಲಿ ತಮ್ಮ ಪಾಡಿಗೆ ಕೆಲಸ ಮಾಡುತ್ತ ಸಾಧನೆಯಿಂದಲೇ ಗುರುತಿಸಿಕೊಳ್ಳುವಂತಾಗಬೇಕು ಎನ್ನುವ ಹಂಬಲ ಉಳ್ಳವರು. ಯಾವ ಕೆಲಸ ಕೈಗೊಂಡರೂ ಅಚ್ಚುಕಟ್ಟಿನಿಂದ ಪರಿಪೂರ್ಣಗೊಳಿಸುವವರು.

'ಗುಡ್ಡದ ಭೂತ' ಧಾರಾವಾಹಿಯಿಂದ ಹಿಡಿದು 'ಕಾರಂತದರ್ಶನ' ಸಾಕ್ಷ್ಯಚಿತ್ರ ಆಗಿರಬಹುದು, ಈಚೆಗಿನ 'ಕೋರ್ಟ್‌ಮಾರ್ಷಲ್' ನಾಟಕ ಇರಬಹುದು ಅಲ್ಲೆಲ್ಲ ಸುವರ್ಣರು ಸಣ್ಣ ಸಣ್ಣ ಸಂಗತಿಗಳಿಗೂ ಗಮನಕೊಡುವ ರೀತಿ ಗಮನಾರ್ಹ. ಸಣ್ಣತನ ಇಲ್ಲದ, ಘನತೆವೆತ್ತ ವ್ಯಕ್ತಿತ್ವ ಉಳ್ಳ, ಹೆಸರು ಕೆಡಿಸಿಕೊಳ್ಳದ ನಿಜವಾದ 'ಸುವರ್ಣ' ಸದಾನಂದ ಸುವರ್ಣ.

****

ಅಧ್ಯಾಯ 3

# ರಂಗಕೃತಿ : ಅನನ್ಯ, ಅನ್ಯಾನ್ಯ

ಪೌರಾಣಿಕ, ಐತಿಹಾಸಿಕ, ಸಾಮಾಜಿಕ ವಸ್ತುಗಳುಳ್ಳ ದುರಂತ, ನಗೆ ನಾಟಕ ಸಹಿತ ತರಹೇವಾರಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ ಸುವರ್ಣರು. ಚಿಕಿತ್ಸಕ ದೃಷ್ಟಿಕೋನದ, ಸಮಾಜಮುಖಿದ, ಜೀವಪರವಾದ ವಸ್ತುಗಳಿರುವ ನಾಟಕಗಳನ್ನೇ ಪ್ರಯೋಗಕ್ಕೆ ಆಯ್ದುಕೊಳ್ಳುತ್ತಾರೆ. ಗಂಭೀರವಾಗಿ ಚಿಂತಿಸುವ ಆದರೆ ಅವನ್ನು ಸರಳವಾಗಿ ತಲುಪಿಸುವ ನಿರ್ದೇಶನ ತಂತ್ರವನ್ನು ನೆಚ್ಚಿಕೊಂಡಿರುವುದರಿಂದಲೇ ಶಕ್ತ ಪ್ರಯೋಗಗಳನ್ನೇ ನೀಡುತ್ತ ಬಂದಿದ್ದಾರೆ. ಸುವರ್ಣರ ರಂಗ ಪಯಣದ ಹೆಜ್ಜೆ ಗುರುತುಗಳು ಇಲ್ಲಿವೆ.

## ಪೌರಾಣಿಕಕ್ಕೂ ಸೈ

'ಸಿದ್ಧಾರ್ಥ ಕನ್ನಡ ಸಂಘ'ದ ವಾರ್ಷಿಕೋತ್ಸವಕ್ಕೆ 'ಅಹಲ್ಯೋದ್ಧಾರ' ನಾಟಕ ಆಡುವುದೆಂದು ನಿರ್ಧರಿಸಲಾಗಿತ್ತು. ಇದನ್ನು ಪ್ರಾಧ್ಯಾಪಕ ಕೋಡಿಕಲ್ ರಚಿಸಿದ್ದರು. ಸುವರ್ಣರನ್ನು ಈ ನಾಟಕದ ನಿರ್ದೇಶನಕ್ಕೆ ಆಹ್ವಾನಿಸಿದರು. ಸುವರ್ಣರು ಈ ನಾಟಕವನ್ನು ಭಿನ್ನವಾಗಿ ಪೇಂಟೋಮೈಮ್ ರೂಪದಲ್ಲಿ ಪ್ರದರ್ಶಿಸುವ ಸಾಧ್ಯತೆ ಬಗ್ಗೆ ಕೋಡಿಕಲ್ ಮೇಷ್ಟ್ರಲ್ಲಿ ಪ್ರಸ್ತಾಪಿಸಿದರು. ಕನ್ನಡ ವಿದ್ಯಾರ್ಥಿಗಳಿಂದ ಇಂಗ್ಲಿಷಿನಲ್ಲಿ ಪ್ರಯೋಗಿಸುವ ಈ ನಾಟಕ ಪರಿಣಾಮಕಾರಿಯಾಗಬೇಕಾದರೆ ಹಾಗೂ ಬೇರೆ ಬೇರೆ ಭಾಷೆಯ ಪ್ರೇಕ್ಷಕರು ಆಗಮಿಸುವುದರಿಂದ ಎಲ್ಲರಿಗೂ ಇಷ್ಟವಾಗಬೇಕಾದರೆ ರೂಪ ವ್ಯತ್ಯಾಸ ಬೇಕು ಎಂದರು. ಹೇಗೆ ಎಂದು ಮೇಷ್ಟ್ರು ಸುವರ್ಣರನ್ನೇ ಪ್ರಶ್ನಿಸಿದರು ಕುತೂಹಲದಿಂದ. ಪಾತ್ರಗಳೆಲ್ಲ ಪೌರಾಣಿಕ. ಇಂದ್ರ ಮತ್ತು ಗೌತಮ ಎರಡೂ ಪಾತ್ರಗಳ ಸಂಭಾಷಣೆಯನ್ನು ತಾನೇ ಧ್ವನಿ ಬದಲಾಯಿಸಿ ನಿರ್ವಹಿಸುತ್ತೇನೆ ಎಂದರು ಸುವರ್ಣರು. ಸರಿ ನನಗೆ ಭರವಸೆ ಇದೆ, ಆದರೂ ಹೇಗೆ ಮಾಡ್ತೀ ಅನ್ನುವುದನ್ನು ನನಗೀಗ ತೋರಿಸು ಎಂದರು ಮೇಷ್ಟ್ರು. ಸುವರ್ಣರು ಓದಿ ತೋರಿಸಿದರು. ಫೆಂಟಾಸ್ಟಿಕ್ ಎಂದು ಸಂಭ್ರಮಿಸಿದರು ಕೋಡಿಕಲ್‌ರು.

ರಂಗದ ಒಂದು ಬದಿಯಲ್ಲಿ ಗೌತಮನ ಗುಡಿಸಲು, ಅದಕ್ಕೆ ಎದುರಾಗಿ ಇನ್ನೊಂದು ಬದಿಯಲ್ಲಿ ನಿರ್ಮಿಸಿದ ಸಣ್ಣ ಗುಡಿಸಲು. ಪಕ್ಕದಲ್ಲಿ ಕಣ್ಮನ ತಣಿಸುವ ಪೊದೆಗಳ

ಕಟೌಟ್ ನಿಲ್ಲಿಸಲಾಯಿತು. ಮನಸ್ಸು ತಿಳಿಯಾಗಿಸುವ ಆಕಾಶ, ಮೋಡಗಳನ್ನೇ ಕಣ್ಣೆದುರು ತಂದು ನಿಲ್ಲಿಸುವ ಸೈಕ್ಲೋರಾಮ ಎಲ್ಲವನ್ನೂ ಅಳವಡಿಸಿದ್ದರು ಸುವರ್ಣರು. ಒಟ್ಟಿನಲ್ಲಿ ಇಡೀ ರಂಗಸಜ್ಜಿಕೆಯೇ ಆಹ್ಲಾದಕಾರಿಯಾಗಿತ್ತು.

ಗೌತಮ ಮುನಿ, ಇಂದ್ರ, ಅಹಲ್ಯೆಯ ವೇಷಭೂಷಣ, ಆಕರ್ಷಕ ರಂಗಾಭಿನಯವೂ ಮೆಚ್ಚುಗೆ ಗಳಿಸಿತು. ತುಟಿ ಕುಣಿಸುವಿಕೆ ಹಾಗೂ ಹಿನ್ನೆಲೆ ಧ್ವನಿ ಚೆನ್ನಾಗಿ ಸಿಂಕ್ರೊಮೈಸ್ ಆಗಿ ಅದ್ಭುತ ನಾಟಕವಾಗಿ ಮೂಡಿಬಂದು ಭರ್ಜರಿ ಚಪ್ಪಾಳೆ ಗಿಟ್ಟಿಸಿಕೊಂಡಿತು. ಕಾಲೇಜಿಗೆ ಕಾಲೇಜೇ ಈ ಪ್ರದರ್ಶನದ ಬಗ್ಗೆ ಹೆಮ್ಮೆ ಪಟ್ಟುಕೊಂಡಿತು. ಕೋಡಿಕಲ್ ಮೇಷ್ಟ್ರು ಪಟ್ಟ ಸಂತೋಷಕ್ಕೆ ಪಾರವೇ ಇರಲಿಲ್ಲ. ಸುವರ್ಣರನ್ನು ಬಿಗಿದಪ್ಪಿ ಖುಷಿ ಪಟ್ಟು ಅಭಿನಂದಿಸಿ ಹರಸಿದರು.

ಬೇಡಿಕೆ, ಆಹ್ವಾನದ ಮೇರೆಗೆ ಜೈಹಿಂದ್ ಕಾಲೇಜು, ಲಾ ಕಾಲೇಜು ಮತ್ತು ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ಕೂಡ ಪ್ರದರ್ಶನಗೊಂಡ ಈ ನಾಟಕ ಅಲ್ಲಿ ಪ್ರಶಂಸೆಗೆ ಒಳಗಾಯಿತು, ಬೇರೆ ಬೇರೆ ಕಾಲೇಜುಗಳೂ ಸುವರ್ಣರನ್ನು ತಮ್ಮ ವಿದ್ಯಾರ್ಥಿಗಳಿಗೆ ಈ ನಾಟಕ ನಿರ್ದೇಶಿಸುವಂತೆ ಕೇಳಿಕೊಂಡರು. ಎಲ್ಲ ಕಡೆಯೂ ಯಶಸ್ಸು ಸಂಪಾದಿಸಿ ದಾಖಲೆ ಬರೆಯಿತು. ಸುವರ್ಣರು ನಿರ್ದೇಶಿಸಿದ ಇನ್ನೊಂದು ಪೇಂಟೊಮೈಮ್ ನಾಟಕ ಕೋಡಿಕಲ್ ಮೇಷ್ಟ್ರೇ ಬರೆದ 'ಭಸ್ಮಾಸುರ ಮೋಹಿನಿ'. ಇಲ್ಲಿ ಸಂಗೀತ ಅಳವಡಿಕೆ, ನೃತ್ಯ ಸಂಯೋಜನೆಗೆ ಬಹಳ ಅವಕಾಶ ಇತ್ತು. ಈ ಪ್ರಯೋಗದಲ್ಲಿ ಸುವರ್ಣರು ವಿಶೇಷವಾಗಿ ತೊಡಗಿಸಿಕೊಂಡು ಇನ್ನೊಂದೇ ಆದ ಬಗೆಯಲ್ಲಿ ಶ್ಲಾಘನೆ ಗಿಟ್ಟಿಸಿಕೊಂಡರು.

ಐವತ್ತರ ದಶಕದಲ್ಲಿ ಪೌರಾಣಿಕ ನಾಟಕಗಳ ಪ್ರಯೋಗಕ್ಕೆ ಇದ್ದ ತೊಡಕು ಹಣಕಾಸಿನದ್ದು. ಕಾಲ್ಪನಿಕವಾದ ಪೌರಾಣಿಕ ಪಾತ್ರಗಳನ್ನು ರಂಗದ ಮೇಲೆ ತರುವ ಬಗ್ಗೆ ಸುವರ್ಣರಿಗೆ ಅಷ್ಟಾಗಿ ಆಸಕ್ತಿಯೂ ಇರಲಿಲ್ಲ. ಡ್ರೆಸ್, ಕಾಸ್ಟ್ಯೂಮ್, ಮೇಕ್‌ಅಪ್ ಖರ್ಚೂ ಅಧಿಕವಾಗಿರುತ್ತದೆ. ಶೈಲೀಕೃತ ಅಭಿನಯ ಅಪೇಕ್ಷಿಸುವ ಈ ನಾಟಕವನ್ನು ಸಿನಿಮಾ ಬೇಸ್ ಇಟ್ಟುಕೊಂಡು ಮಾಡಬೇಕಾಗುತ್ತದೆ. ಅದರಲ್ಲಿ ಕ್ರಿಯೇಟಿವಿಟಿ ಇರುವುದಿಲ್ಲ ಅನ್ನುವುದರಿಂದಲೂ ಸುವರ್ಣರು ಹಿಂದೆ ಸರಿದರು. ಬಳಿಕ ಶ್ಯಾಮ್ ಬೆನಗಲ್ ಅವರು ಆಧುನಿಕ ನೆಲೆಯಲ್ಲಿ ಪೌರಾಣಿಕ ಪಾತ್ರಗಳನ್ನು ನಿರ್ದೇಶಿಸಿದ್ದನ್ನು ನೋಡಿದಾಗ ಖುಷಿ ಪಟ್ಟಿದ್ದಾರೆ.

## ಐತಿಹಾಸಿಕಕ್ಕೆ ಒಲವು

ವಾಸ್ತವವಾದದ ಪ್ರತಿಪಾದಕ ಸದಾನಂದ ಸುವರ್ಣರು ಐತಿಹಾಸಿಕ ನಾಟಕಗಳ ನಿರ್ದೇಶನ, ಅಭಿನಯದಿಂದ ವಿಶೇಷ ಥ್ರಿಲ್ ಅನುಭವಿಸಿದ್ದಾರೆ. ಇತಿಹಾಸ ಪುರುಷರ ವೀರತ್ವ, ವೇಷಭೂಷಣಗಳನ್ನೆಲ್ಲ ಅಧ್ಯಯನ ಮಾಡಿ ಪರಕಾಯ ಪ್ರವೇಶ ಮಾಡಿದ್ದಾರೆ. ಸೆಟ್ ಹಾಕುವ ಸುವರ್ಣರು ರಂಗದ ಮೇಲೆ ಚರಿತ್ರಾರ್ಹ ಘಟನೆ, ಸನ್ನಿವೇಶಗಳನ್ನು

ಸೃಷ್ಟಿಸಿದ್ದಾರೆ. ಐತಿಹಾಸಿಕ ನಾಟಕ ನಿರ್ವಹಣೆಯ ಸವಾಲಿಗೆ 'ರಜಪೂತ ಪವಾಡ', 'ಧರ್ಮಚಕ್ರ', 'ತುಘಲಕ್', 'ಈಡಿಪಸ್' ನಾಟಕಗಳೇ ಅವರ ಪ್ರಯೋಗಶೀಲ ನೈಪುಣ್ಯಕ್ಕೆ ದಕ್ಷ ಉತ್ತರ ನೀಡಿವೆ.

## ದುರಂತ, ನಗೆ ನಾಟಕಗಳು; ಸಮಾಜಮುಖಿ ನಿಲುವು

ಸಾಮಾಜಿಕ ಸಮಸ್ಯೆಗಳಿಗೆ ಧ್ವನಿಯಾಗುವ ಹಲವಾರು ನಾಟಕಗಳನ್ನು ಸುವರ್ಣರು ರಚಿಸಿದ್ದಾರೆ, ನಿರ್ದೇಶಿಸಿದ್ದಾರೆ. ಸಮಾಜ ಸುಧಾರಣೆ, ಕ್ರಾಂತಿ, ಬಂಡಾಯ ಧೋರಣೆಗಳನ್ನೆಲ್ಲ ಜೀವಪರ ಕಾಳಜಿಯೊಂದಿಗೆ ಕಲಾತ್ಮಕವಾಗಿ, ಧ್ವನಿಪೂರ್ಣವಾಗಿ ರಂಗಕೃತಿಯಾಗಿಸಿದ್ದಾರೆ. ಇಲ್ಲಿ ಅವರು ಸುಕುಮಾರ ಭಾಷೆಯನ್ನೂ ದುಡಿಸಿಕೊಂಡಿದ್ದಾರೆ. ದುರಂತ ಹಾಗೂ ಹಾಸ್ಯ ಪ್ರಧಾನವಾದ ನಾಟಕಗಳು ಸಾಮಾಜಿಕ ಸಮಸ್ಯೆಗಳನ್ನೇ ನಾನಾ ಬಗೆಯಲ್ಲಿ ದರ್ಶಿಸಿವೆ, ವ್ಯವಸ್ಥೆಯ ಮುಖವಾಡಗಳನ್ನು ಪರಿಣಾಮಕಾರಿಯಾಗಿ ಕಳಚಿಡುತ್ತ ಬಂದಿವೆ. ಮನೋ ವೈಜ್ಞಾನಿಕವಾದ ನೆಲೆಯಲ್ಲಿಯೂ ನಾಟಕಗಳನ್ನು ರಂಗಕ್ಕೊಡ್ಡಿದ್ದಾರೆ.

ಪ್ರೇಕ್ಷಕರನ್ನು ರಂಗಭೂಮಿಯ ಪ್ರಧಾನ ಅಂಗ ಎಂದು ಕರೆಯುತ್ತಾರೆ ಸುವರ್ಣರು. ಐವತ್ತರ ದಶಕದಲ್ಲಿ ಕೆಳ ವರ್ಗ, ಮಧ್ಯಮ ವರ್ಗದವರು ಸಾಮಾಜಿಕ ಸಮಸ್ಯೆ ಹಾಗೂ ಅದರ ಪರಿಹಾರದ ಮಾರ್ಗದ ಬಯಕೆಯಿಂದ ಅಂಥ ಆಶಯದ ನಾಟಕಗಳನ್ನು ನೋಡಲು ಮುಂದಿರುತ್ತಿದ್ದರು.

ಅರುವತ್ತರ ದಶಕದಲ್ಲಿ ಮಧ್ಯಮ ವರ್ಗದವರು ಹಾಗೂ ಶ್ರೀಮಂತರು ದೊಡ್ಡ ಪ್ರಮಾಣದಲ್ಲಿ ರಂಗಭೂಮಿಯ ಸೆಳೆತಕ್ಕೆ ಒಳಗಾದರು. ಮನರಂಜನೆಯ ಜತೆಗೆ ಗಂಭೀರ ವಸ್ತು, ವಿಷಯಗಳಿರುವ ನಾಟಕಗಳನ್ನು ನೋಡುವುದಕ್ಕೆ ಇಚ್ಛಿಸುತ್ತಿದ್ದರು. ಮನೋವಿಕಾಸಕ್ಕೆ ಪೂರಕವಾಗುವ ಚಿಂತನಪ್ರಧಾನ ನಾಟಕಗಳನ್ನು ಅಪೇಕ್ಷಿಸುತ್ತಿದ್ದರು. ಹೀಗೆ ಆಯಾ ಕಾಲದ ಪ್ರೇಕ್ಷಕರ ಒಲವು, ನಿಲುವಿಗೆ ತಕ್ಕ ಹಾಗೆ ನಾಟಕ ನಿರ್ದೇಶಿಸುವುದರ ಜತೆಗೆ ಸದಭಿರುಚಿಯ ಪ್ರೇಕ್ಷಕ ವರ್ಗವನ್ನು ಸೃಷ್ಟಿಸುವ ಜವಾಬ್ದಾರಿಯುತ ನೆಲೆಯಿಂದಲೂ ನಾಟಕ ಕೃತಿಯನ್ನು ಆಯ್ದುಕೊಂಡು ರಂಗಕೃತಿಯಾಗಿಸುವ ಸವಾಲು ಸುವರ್ಣರ ಮುಂದಿದ್ದವು. ಅವೆಲ್ಲವನ್ನೂ ಸುವರ್ಣರು ಸುವರ್ಣ ನಾಟಕ ರಚನೆ ಹಾಗೂ ವೈವಿಧ್ಯಮಯ ಪ್ರಯೋಗಗಳ ಮೂಲಕವೇ ಜಯಿಸಿದ್ದಾರೆ. ಎಲ್ಲ ಕಾಲದ ಎಲ್ಲ ಬಗೆಯ ಪ್ರೇಕ್ಷಕರನ್ನು ಗುಣಮಟ್ಟದ ನಾಟಕಗಳ ಮೂಲಕ ಮೆಚ್ಚಿಸುತ್ತಲೇ ಬಂದಿದ್ದಾರೆ.

'ಸಿಡಿಸಿಡಿದು ಮಿಡಿಮಿಡಿಯುತ್ತಲೇ ಸಮಾಜದ ತಲ್ಲಣಗಳಿಗೆ ನಿರಂತರ ಸ್ಪಂದಿಸುತ್ತ ಸುಸಂಗತವಾದ ಸಮಾಜವನ್ನು ಕಟ್ಟುತ್ತ ಆನಂದ ಪಡೆಯುವ ಧನ್ಯತೆಯನ್ನು ರಂಗಭೂಮಿ ಅನುಭವಿಸಬೇಕಿದೆ. ಹೊರಗಿನ ಹಿಡಿತಗಳೆಂಬ ಶತ್ರುಗಳು ಒಳಗೇ ಸೇರಿಕೊಂಡಿರುವುದು ಆತಂಕದ ಸಂಗತಿಯಲ್ಲವೇ? ಅದನ್ನು ಶುದ್ಧೀಕರಿಸಿಕೊಳ್ಳುವುದರ ಅನಿವಾರ್ಯತೆ ಇಂದಿನದ್ದು. ನಗೆ ನಾಟಕವನ್ನೇ ಹೆಚ್ಚು ಆದರಿಸುವ ಜನರು ಗುಣಮಟ್ಟದ ವಸ್ತುನಿಷ್ಠವಾದ, ಜನರನ್ನು

ಹಿಡಿದು ಅಲುಗಾಡಿಸುವ ನಾಟಕದತ್ತ ಜನರ ಒಲವೇಕೆ ಇಲ್ಲ? ತಂತ್ರಜ್ಞಾನವನ್ನು ಸರಿಯಾಗಿ ಅರ್ಥವಾಡಿಕೊಳ್ಳದ್ದರ ಫಲವಾಗಿ ಆದದ್ದೇನು? ಮನಸ್ಸು ಒಡೆದಿದೆ, ಒಡೆದ ಕನ್ನಡಿಗಳಾಗುವಂತಾಗಿದೆ. ಸಮಾಜದೊಳಗಣ ತಹತಹ, ಅಶಾಂತಿ ಹೋಗಲಾಡಿಸಲು ಸಾಮುದಾಯಿಕ ಕ್ರಿಯೆ ಅಗತ್ಯ ಅನ್ನುವ ನೆಲೆಯೇ ಚಳವಳಿಯ ಹುಟ್ಟಿನ ಗುಟ್ಟು. ಯಾವುದೇ ಒಂದು ಉದ್ದೇಶ, ಗುರಿ, ಧ್ಯೇಯದ ಜತೆಗೆ ಸಿಗಬೇಕಾದ ಫಲಿತಾಂಶದತ್ತ ಚಲಿಸುವುದೇ ಚಳುವಳಿ. ಆದರೆ ಈಗ ಯಾಕೆ ಚಳುವಳಿ ನಡೀತಾ ಇಲ್ಲ ಅನ್ನುವ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ನಮ್ಮೊಳಗಿನ ಭ್ರಷ್ಟತನವೇ ಅವನ್ನೆಲ್ಲ ನಿಯಂತ್ರಿಸುತ್ತಿವೆ ಅನ್ನುವ ನಗ್ನ ಸತ್ಯವೂ ಅರಿವಿಗೆ ಬರುತ್ತದೆ' ಎಂದು ಖ್ಯಾತ ಚಿಂತಕ ರಘುನಂದನ ಅವರು ರಂಗಭೂಮಿಯ ಜವಾಬ್ದಾರಿಯನ್ನು ನೆನಪಿಸಿಕೊಡುತ್ತಾರೆ. (ನ.18,2012ರಂದು ಮೂಡಬಿದಿರೆಯಲ್ಲಿ ನಡೆದ ಆಳ್ವಾಸ್ ನುಡಿಸಿರಿಯ ವಿಚಾರಗೋಷ್ಠಿಯಲ್ಲಿ).

ಸುವರ್ಣರು ಆತ್ಮನಿರೀಕ್ಷಣೆಯೊಂದಿಗೇ ನಾಟಕಗಳನ್ನು ನಿರ್ದೇಶಿಸುತ್ತ ಬಂದವರು; ರಂಗಭೂಮಿಯನ್ನು ಚಲನಶೀಲವಾಗಿರಿಸುವುದಕ್ಕೆ ತೊಡಗಿದವರು. ಅವರೊಳಗಿನ ತಣ್ಣನೆಯ ಸಿಡಿತ–ಮಿಡಿತಗಳಿಂದಲೇ ಪ್ರಯೋಗಗಳು ಹುಟ್ಟಿಕೊಳ್ಳುತ್ತ ಬಂದಿವೆ. ಪ್ರೊಸೀನಿಯಂ ರಂಗ ಮಂದಿರದ ಮೂಲಕವೇ ತಮ್ಮ ಪ್ರಯೋಗಗಳ ಪ್ರದರ್ಶನದಿಂದ ಬಂದ ಮೊತ್ತವನ್ನು ಸಂಕಷ್ಟದಲ್ಲಿರುವವರಿಗೆ ನೀಡಿ ಜನರಿಗಾಗಿ ರಂಗಭೂಮಿ ಅನ್ನುವ ಪದದ ಅರ್ಥವನ್ನು ಇನ್ನಷ್ಟು ಹಿಗ್ಗಿಸಿದ್ದಾರೆ. ಅವರ ಈ ಜನಪರತೆ ರಂಗಭೂಮಿ ಇತಿಹಾಸದಲ್ಲಿ ಬಹುಮುಖ್ಯವಾದ ನಡೆಯಾಗಿದೆ.

ವಾಸ್ತವವಾದದಲ್ಲಿ ಜಗತ್ತನ್ನು ಸಹಜವಾಗಿ ಹಿಡಿದುಕೊಡುವ ಪ್ರಯತ್ನವಿದೆ. ಸಮಾಜವೊಂದು ಇರಬೇಕಾದ ರೀತಿಯನ್ನು ಕಟ್ಟಿಕೊಡುವಲ್ಲಿ ಜೀವನ ಮೌಲ್ಯವನ್ನು ದಾಟಿಸುವ ಪ್ರಜ್ಞೆ ದಟ್ಟವಾಗಿರುತ್ತದೆ. ಸತ್ಯತನ ಮತ್ತು ಸಭ್ಯತನವನ್ನು ಮನದಟ್ಟು ಮಾಡಿಸುವುದೇ ವಾಸ್ತವವಾದದ ಪ್ರಧಾನ ಧೋರಣೆ. ಈ ಆಶಯವನ್ನು ಹೊತ್ತುಕೊಂಡ ನಾಟಕ–ಸಾಹಿತ್ಯಗಳೆಲ್ಲ ಜನರ ಮೇಲೆ ತೀವ್ರ ಪರಿಣಾಮ ಬೀರಿವೆ. ಇವತ್ತಿಗೂ ಈ ತತ್ತ್ವ ಒಂದಲ್ಲ ಒಂದು ಬಗೆಯಲ್ಲಿ ಉಳಿದುಕೊಂಡೇ ಬಂದಿದೆ.

ರಂಗಭೂಮಿಗೆ ಸಂಬಂಧಿಸಿ ನೋಡಿದಾಗ ವಾಸ್ತವವಾದದ ಪ್ರಮುಖ ರೂವಾರಿಯಾಗಿ, ಅದರ ವಕ್ತಾರನಾಗಿ ಕಾಣಿಸಿಕೊಳ್ಳುವ ಹೆಸರು ಸ್ತಾನಿಸ್ಲಾವಸ್ಕಿ. ನಾಟಕವೆಂದರೆ ವಾಸ್ತವದ ಪ್ರತಿಕೃತಿ ಅನ್ನುವುದನ್ನು ಪ್ರತಿಪಾದಿಸಿದವನು. ನಾಟಕವೆಂದರೆ ಜೀವಿಸುವುದು. ಅದು ಕೃತಕತೆಯಲ್ಲ ಅನ್ನುವುದನ್ನು ವ್ಯಾಖ್ಯಾನಿಸಿದ ಮತ್ತು ಅನುಷ್ಠಾನಗೊಳಿಸಿದ ಆತ ಹೀಗೆ ರಂಗದಲ್ಲಿ ಜೀವಿಸುವುದು ನಟನೊಬ್ಬನಿಗೆ ಅಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ನಟನಾದವನು ಮಾಡಿಕೊಳ್ಳಬೇಕಾದ ಆಂತರಿಕ ಹಾಗೂ ಬಾಹ್ಯ ಸಿದ್ಧತೆಗಳ ಕುರಿತು ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾನೆ ಸ್ತಾನಿಸ್ಲಾವಸ್ಕಿ. ಆತನ ಮಾರ್ಗದರ್ಶನ, ಪ್ರತಿಪಾದನೆ ರಂಗಭೂಮಿಯಲ್ಲೊಂದು ಹೊಸ ಸಂಚಲವನ್ನು ಉಂಟು ಮಾಡಿದೆ ಮತ್ತು ಒಂದು ಪರಂಪರೆಯನ್ನು ಕಟ್ಟಿಕೊಡುವ

ಮೂಲಕ ಹೊಸತೊಂದು ಇತಿಹಾಸವನ್ನು ಸೃಷ್ಟಿಸಿದೆ. ಈ ಸಿದ್ಧಾಂತದ ನೆರಳು ಇಂದು ಪ್ರದರ್ಶನಗೊಳ್ಳುವ ರಂಗಕೃತಿಗಳ ಮೇಲೂ ಬೀಳುತ್ತಲೇ ಇದೆ ಅನ್ನುವುದು ಪ್ರಯೋಗಗಳಿಂದಲೇ ಶ್ರುತಗೊಳ್ಳುತ್ತಿದೆ.

## ರೂಪಾಂತರದಲ್ಲಿ ರೋಚಕತೆ

ಕನ್ನಡ ರಂಗಭೂಮಿಗೆ ಅಪರೂಪ ಅನ್ನಿಸುವಂಥ ವಸ್ತುಗಳನ್ನು ಹಾಗೂ ತಂತ್ರಗಾರಿಕೆಯ ಕೌಶಲ್ಯವನ್ನು ಪರಿಚಯಿಸುವ ನಿಟ್ಟಿನಲ್ಲಿ ಸುವರ್ಣರು ರೂಪಾಂತರಿತ ನಾಟಕಗಳ ನಿರ್ದೇಶನವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಸುವರ್ಣರು ಭಾರತೀಯ ರಂಗ ಚೌಕಟ್ಟಿನೊಳಗೆ ಕನ್ನಡೇತರ ಭಾಷೆಗಳ ನಾಟಕಗಳನ್ನು ನಿರ್ದೇಶಿಸಿದ್ದರಿಂದ ಇಲ್ಲಿನ ರಂಗಾಸಕ್ತರಿಗೂ ಹೊಸತೆನ್ನಿಸಿದೆ, ಖುಷಿ ಕೊಟ್ಟಿದೆ. ಹೊಸತನ್ನು ನೀಡುತ್ತಿರಬೇಕು ಅನ್ನುವ ಸುವರ್ಣರ ತುಡಿತ ಇಲ್ಲಿ ಮುಖ್ಯವಾಗುತ್ತದೆ. ಈ ನೆಲೆಯಲ್ಲಿ 'ಕುಲಗೌರವ', 'ಅಣ್ಣನ ಮದುವೆ', 'ಚಕ್ರವ್ಯೂಹ', 'ಯಾರು ನನ್ನವರು', ಇತ್ತೀಚಿಗಿನ 'ಉರುಳು' ಹಾಗೂ 'ಮಳೆ ನಿಲ್ಲುವವರೆಗೆ ' ರೂಪಾಂತರಿತ ನಾಟಕಗಳ ಮೂಲಕ ರೋಚಕತೆಯನ್ನು ಹುಟ್ಟು ಹಾಕಿ ಅದ್ಭುತ ಯಶಸ್ಸು ಸಂಪಾದಿಸಿದ್ದಾರೆ.

ಮುಂಬಯಿ ಕನ್ನಡ ರಂಗಭೂಮಿಗೆ ಹೊಸ ಆಯಾಮಗಳನ್ನು ನೀಡುತ್ತ ಅದನ್ನು ಶ್ರೀಮಂತಗೊಳಿಸಿದ ಸಾರ್ಥಕತೆಯನ್ನು ಅನುಭವಿಸಿದ್ದಾರೆ ಸುವರ್ಣರು. ರಂಗಭೂಮಿ ಕಾಲ, ಸಮಾಜ ಹಾಗೂ ಬದುಕಿನೊಂದಿಗೇ ಹೆಜ್ಜೆ ಹಾಕುತ್ತ ಹೊಸತನದೊಂದಿಗೆ ಪರಿಣಾಮಕಾರಿಯಾದ ಪ್ರಯೋಗಗಳನ್ನು ನೀಡುತ್ತಿರಬೇಕು, ಸಮಾಜೋಪಯೋಗಿಯೂ ಆಗಿ ಸ್ಪಂದಿಸುತ್ತಿರಬೇಕು ಅನ್ನುವ ನಿಲುವು ಹಾಗೂ ಬದ್ಧತೆಯೊಂದಿಗೆ ಅವರು ಸದಾ ಪ್ರಯೋಗಶೀಲರಾಗಿರುತ್ತಾರೆ.

'ನಾನು ಬೇರೆ ಬೇರೆ ಭಾಷೆಯ ಭಿನ್ನ ಶೈಲಿಯ ನಾಟಕಗಳನ್ನು ಅನುವಾದ ಮಾಡಿ ಕನ್ನಡ ರಂಗಭೂಮಿಯಲ್ಲಿ ಪ್ರಯೋಗಿಸಿದ್ದೇನೆ. ಇದರರ್ಥ ನಮ್ಮಲ್ಲಿ ನಾಟಕ ಕೃತಿಗಳ ಕೊರತೆ ಇದೆ ಅಂತಲ್ಲ. ಇತರ ಭಾಷೆಗಳ, ವಿಭಿನ್ನವಾದ ಶೈಲಿಯ ಒಳ್ಳೆಯ ನಾಟಕಗಳನ್ನು ಕನ್ನಡ ರಂಗಭೂಮಿಗೆ ಪರಿಚಯಿಸಬೇಕು ಅನ್ನುವ ಹಂಬಲ. ಯಾವ ಇಸಂಗೂ ಅಂಟಿಕೊಳ್ಳದ ನಾನು ಥಿಯೇಟರಿಸಂ ಪ್ರೀತಿಗೆ ಬದ್ಧನಾದವ. ರಂಗಭೂಮಿಯಲ್ಲಿ ಎಲ್ಲ ಭಾಷೆಗಳ, ಎಲ್ಲ ಶೈಲಿಯ ಎಲ್ಲ ವಸ್ತು ತಂತ್ರಗಳ ನಾಟಕಗಳು ಪ್ರದರ್ಶನಗೊಳ್ಳುತ್ತಿರಬೇಕು, ಹೀಗೆ ಕನ್ನಡ ನಾಟಕಗಳನ್ನೂ ಇತರ ಭಾಷೆಯ ರಂಗಭೂಮಿಯವರೂ ಸ್ವೀಕರಿಸುವಂತಾಗಬೇಕು ಎನ್ನುವ ನಿಲುವು ನನ್ನದು'(ಅ.15ರಂದು ನಡೆಸಿದ ಸಂದರ್ಶನದಲ್ಲಿ) ಎಂದು ರೂಪಾಂತರಿತ ನಾಟಕ ಪ್ರಯೋಗಗಳ ಉದ್ದೇಶದ ಬಗ್ಗೆ ತೆರೆದುಕೊಳ್ಳುತ್ತಾರೆ. ಇನ್ನಷ್ಟು, ಮತ್ತಷ್ಟು ತಿಳಿಸಿಕೊಡುತ್ತಾರೆ.

## ತುಳುವಿನಲ್ಲಿ ವಿನೂತನ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ರಂಗಭೂಮಿಯಲ್ಲಿ ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಬಹುತೇಕ ಹೌಸ್‌ಫುಲ್ ಪ್ರದರ್ಶನಗಳೇ ಆಗಿರುತ್ತವೆ. ಆದರೆ ತುಳು ರಂಗಭೂಮಿ ಎಂದರೆ ಲಘು ಹಾಸ್ಯ ಪ್ರಧಾನ ರಂಗಭೂಮಿ ಎಂಬಲ್ಲಿಗೆ ನಿಂತುಬಿಟ್ಟಿದೆ. ಅದು ಒಂದು ವರ್ಗದ ಪ್ರೇಕ್ಷಕರನ್ನು ರಂಜಿಸುತ್ತ ಇದೆ ಅನ್ನುವುದು ರಂಗಾಸಕ್ತರ ಅಭಿಪ್ರಾಯವೂ ಆಗಿದೆ. ಆದರೆ ಸದಾನಂದ ಸುವರ್ಣರು ತುಳು ರಂಗಭೂಮಿಯೂ ಗಂಭೀರ ಪ್ರಯೋಗಗಳಿಂದ ಬಾಳಬೇಕು ಹಾಗೂ ಬೀಗಬೇಕು ಎನ್ನುವ ಆಶಯದಿಂದ ತುಳು ರಂಗಭೂಮಿಗೂ ಗಮನಾರ್ಹ ಕೊಡುಗೆಗಳನ್ನು ನೀಡುತ್ತ ಬಂದಿದ್ದಾರೆ. ನವಿರು ಹಾಸ್ಯ ಹಾಗೂ ವಿಚಾರ ಪ್ರಚೋದಕವಾದ ನೆಲೆಗಟ್ಟಿನ ನಾಟಕವನ್ನು ಸ್ವತಃ ರಚಿಸಿ ತುಳು ರಂಗಭೂಮಿಯಲ್ಲಿ ಹೊಸ ಸಂಚಲನ ಮೂಡಿಸಿದ್ದಾರೆ. ಕಳಪೆ ಗುಣಮಟ್ಟದ ತುಳು ನಾಟಕಗಳಿಗೆ ಸಡ್ಡು ಹೊಡೆದು ಸದಭಿರುಚಿಯ ನಾಟಕ ರಚಿಸಿ ನಿರ್ದೇಶಿಸುವ ಪಯಣವನ್ನು 'ಗುಡ್ಡೆದ ಭೂತ' ನಾಟಕದೊಂದಿಗೆ ಆರಂಭಿಸುತ್ತಾರೆ. ತುಳು ರಂಗಭೂಮಿಯ ಸಮೃದ್ಧಿಗೆ, ಶ್ರೀಮಂತಿಕೆಗೆ ಇದು ಸುವರ್ಣ ಮಾರ್ಗವಾಗುತ್ತದೆ.

ವಿಜಯಕುಮಾರ ಶೆಟ್ಟಿರಂಥ ಮುಂಬಯಿಯ ಹಿರಿಯ ರಂಗ ನಿರ್ದೇಶಕರ ಮೇಲೂ ಈ ನಾಟಕ ವಿಶೇಷವಾಗಿ ಪ್ರಭಾವ ಬೀರುತ್ತದೆ; 'ಭೂತದ ಇಲ್ಲ್', 'ಒರಿಯೆ ಮಗೆ 'ದಂಥ ನಾಟಕ ರಚನೆಗೆ ಪ್ರೇರೇಪಣೆಯನ್ನೂ ನೀಡುತ್ತದೆ ಎನ್ನುವುದು ಈ ನಾಟಕದ ಶಕ್ತಿಯನ್ನು ಬೆಟ್ಟು ಮಾಡುತ್ತದೆ. 'ಗುಡ್ಡೆದ ಭೂತ', 'ಗೋಂದೊಳು', 'ಬಾಲೆ ಬಂಗಾರ್', 'ಕಲಂಕ್‌ದಿ ನೀರ್' ನಾಟಕಗಳನ್ನು ನಿರ್ದೇಶಿಸಿ ತುಳು ರಂಗಭೂಮಿಯ ಮೌಲ್ಯ ಹೆಚ್ಚಿಸಿದ್ದಾರೆ ಸುವರ್ಣರು.

ಈ ಎಲ್ಲ ನೆಲೆಯಲ್ಲಿ ವಿಶೇಷ ಅನ್ನಿಸಿಕೊಳ್ಳುತ್ತ ಸಂಚಲನ ಉಂಟು ಮಾಡಿದ ಸದಾನಂದ ಸುವರ್ಣರ ನಲವತ್ತರ ದಶಕದಿಂದ ಇದುವರೆಗಿನ ರಂಗ ಪ್ರಯೋಗ ಚರಿತ್ರೆಯ ಹೆಜ್ಜೆ ಗುರುತುಗಳನ್ನು ಬಗೆದಿಡುವ ಕಿರು ಪ್ರಯತ್ನ ಇಲ್ಲಿನದು.

## ಹೆಜ್ಜೆ 1 : ವಾರ್ಷಿಕೋತ್ಸವದಿಂದ ಜನಪ್ರೀತಿ

ಸುವರ್ಣರು ಬರೆದು ನಿರ್ದೇಶಿಸಿ ಮುಂಬಯಿ ರಂಗಭೂಮಿಯಲ್ಲಿ ಪ್ರದರ್ಶಿಸಿದ ಮೊದಲ ನಾಟಕ 'ಕುರುಡನ ಸಂಗೀತ'. ತಾವೇ ನಿರ್ದೇಶಿಸಿದ ಈ ನಾಟಕವನ್ನು ಕಾಮಾ ಹಾಲ್‌ನಲ್ಲಿ, ಮೊಗವೀರ ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಪ್ರದರ್ಶಿಸಿದರು. ರಂಗಭೂಮಿಗೆ ತೀರ ಹೊಸಬರನ್ನು ಕಲಾವಿದರನ್ನಾಗಿ ಪರಿವರ್ತಿಸುವುದರೊಂದಿಗೇ ತಾವು ಮುಖ್ಯ ಪಾತ್ರವನ್ನೂ ವಹಿಸಿಕೊಂಡರು ಸುವರ್ಣರು. ತಮ್ಮದೇ ಆದ ನೆಲೆಯಲ್ಲಿ ನಿರ್ದೇಶಿಸಿದ ಈ ನಾಟಕ ಹೊಸದಾಗಿ ಕಾಣಿಸಿಕೊಂಡಿತು, ಯಶಸ್ವೀ ಪ್ರಯೋಗವಾಗಿ ಗೆದ್ದುಬಿಟ್ಟಿತು. ಆದರೆ ಇದಕ್ಕೆ ಮೊದಲು ತಮ್ಮ ಶಾಲೆಯ ಹಳೆ ವಿದ್ಯಾರ್ಥಿಗಳು ಮತ್ತು

ಕೆಲವು ಅಧ್ಯಾಪಕರನ್ನು ಒಟ್ಟು ಸೇರಿಸಿ ಮುಂದೆ ಪ್ರಯೋಗಿಸಬಹುದಾದ ನಾಟಕಕ್ಕೆ ಪೂರ್ವಭಾವಿಯಾಗಿ ಒಂದು ಪ್ರಯೋಗ ಮಾಡಿದ್ದರು. ಇದರ ಉದ್ದೇಶ ರಂಗದಲ್ಲಿ ಅಭಿನಯಿಸಲು ಮತ್ತು ಹಿನ್ನೆಲೆಯಲ್ಲಿ ಕೆಲಸ ಮಾಡಲು ಸಮರ್ಥರಾದವರನ್ನು ಆರಿಸುವ ಪ್ರಯತ್ನ. ಇದಕ್ಕೆ ಅವರು ಆಯ್ಕೆ ಮಾಡಿದ ನಾಟಕ ಬೇಂದ್ರೆಯವರ 'ಸಾಯೋ ಆಟ'. ಇದನ್ನು ಪ್ರೈಮರಿ ಶಾಲೆಯ ಒಂದು ದೊಡ್ಡ ಕೋಣೆಯಲ್ಲಿ ಪ್ರದರ್ಶಿಸಿದ್ದರು. ಕೆಲವೇ ದಿನಗಳ ರಿಹರ್ಸಲ್ ನಡೆಸಿ ವೇಷ ಭೂಷಣ ಇಲ್ಲದೆ ಅಭಿನಯದ ಮೂಲಕವೇ ರಂಗದಲ್ಲಿ ಪಾತ್ರ ಸೃಷ್ಟಿ ಮಾಡುವ ನಿಟ್ಟಿನಲ್ಲಿ ತರಬೇತಿ ನೀಡಿದ್ದರು. ರಂಗದ ಮುಂದೆ ಕೆಲಸ ಮಾಡಲು ಕೆಲವರನ್ನು ಆರಿಸಿ, ತರಬೇತಿ ನೀಡಿ, ಕೆಲವು ಅಧ್ಯಾಪಕರು ಮತ್ತು ಕೆಲವೇ ವಿದ್ಯಾರ್ಥಿಗಳ ಒಂದು ಸಣ್ಣ ಪ್ರೇಕ್ಷಕ ವರ್ಗದ ಮುಂದೆ ಪ್ರದರ್ಶಿಸಿದ ಪ್ರಯೋಗ ಚೆನ್ನಾಗಿಯೇ ಮೂಡಿ ಬಂದಿತ್ತು. ಅಷ್ಟೇ ಅಲ್ಲ, ಮುಂದೆ ರಂಗಭೂಮಿಯಲ್ಲಿ ಧೈರ್ಯದಿಂದ ತೊಡಗಿಸಿಕೊಳ್ಳಲು ಎಲ್ಲರಿಗೂ ತರಬೇತಿ ನೀಡಿದರು.

'ಕುರುಡನ ಸಂಗೀತ' ಇದು ಸುವರ್ಣರೇ ರಚಿಸಿ ನಿರ್ದೇಶಿಸಿದ ಮೊದಲ ನಾಟಕ. ಹಳ್ಳಿಯ ಪ್ರತಿಭಾವಂತ ಯುವಕನೊಬ್ಬನಿಗೆ ಸಂಗೀತಗಾರನಾಗಿ ಹೆಸರು ಪಡೆಯುವ ಅಭಿಲಾಷೆ. ಅದಕ್ಕಾಗಿ ಆತ ನಗರಕ್ಕೆ ಬರುತ್ತಾನೆ. ಈ ನಿಟ್ಟಿನಲ್ಲಿ ಬಹಳಷ್ಟು ಪರಿಶ್ರಮಿಸಿದರೂ ಕನಸು ನನಸಾಗಲಿಲ್ಲ. ಗೆಳೆಯರ ಜತೆ ಕಾರ್ಯಕ್ರಮಗಳಿಗೆಲ್ಲ ತೆರಳಿ ಹಾಡು ಹಾಡಿ ಮೆಚ್ಚುಗೆ ಗಳಿಸಿದರೂ ಆ ಕ್ಷೇತ್ರದಲ್ಲಿ ನಿರೀಕ್ಷಿತ ಸಾಧನೆ ಮಾಡಲಾಗಲಿಲ್ಲ ಅನ್ನುವುದು ಆತನ ವೇದನೆಯಾಯಿತು. ಪ್ರತಿಭೆಯೊಂದೇ ಇದ್ದರೆ ಏನೂ ಪ್ರಯೋಜನವಿಲ್ಲ, ಅದು ಬೆಳಗಬೇಕಾದರೆ ಪ್ರಭಾವ ಅತ್ಯಗತ್ಯ ಎನ್ನುವುದು ಅವನ ಅನುಭವಕ್ಕೆ ಬಂದ ಸತ್ಯ. ಇಲ್ಲಿ ನಿರಾಶಾವಾದವನ್ನೇ ಹೊರುವುದು ಅನಿವಾರ್ಯವಾಗುತ್ತದೆ. ಮುಂಬಯಿಯಂಥ ನಗರದಲ್ಲಿದ್ದು ಪ್ರಯೋಜನವಿಲ್ಲ ಅನ್ನುವುದು ಮನದಟ್ಟಾಗು ಊರಿಗೆ ವಾಪಾಸಾಗುತ್ತಾನೆ.

ಈ ನಾಟಕ ಸುವರ್ಣರ ಸ್ವ ಅನುಭವ ಹಾಗೂ ನೋವಿನ ಪ್ರತಿಧ್ವನಿಯಾಗಿದೆ. ಅನುಭವವೇ ಕಥನವಾದದ್ದರಿಂದ ಈ ನಾಟಕ ವಿಶಿಷ್ಟವಾಯಿತು. ಅಭಿವ್ಯಕ್ತಿಯಲ್ಲೂ ಇಲ್ಲಿ ನೈಜತೆ ಸಾಧ್ಯವಾಯಿತು.

'1953ರಲ್ಲಿ ಬರೆದು ದಿಗ್ದರ್ಶಿಸಿ–ನಾಯಕನಾಗಿ ಅಭಿನಯಿಸಿ ಕಾಮಾ ಹಾಲ್‌ನಲ್ಲಿ ಪ್ರದರ್ಶಿಸಿದ ಪ್ರಥಮ ನಾಟಕ 'ಕುರುಡನ ಸಂಗೀತ' ಯಶಸ್ವಿಯಾಗಿ ಮುಂಬಯಿ ಕನ್ನಡ ತುಳು ರಸಿಕರಿಗೆ ಲೇಖಕ–ನಟ–ನಿರ್ದೇಶಕರಾಗಿ ಪರಿಚಿತರಾದರು. ಕುರುಡನ ಸಂಗೀತದಲ್ಲಿ ಕುರುಡನಾಗಿ, ಕೈಗಳನ್ನು ಹರಡಿಸುತ್ತಾ ಮೆಲ್ಲ ಮೆಲ್ಲನೆ ಹೆಜ್ಜೆ ಇಡುತ್ತಾ ಕಣ್ಣುಗಳನ್ನು ಪಿಳಿ ಪಿಳಿ ಮಾಡಿದ ಅಭಿನಯ ಚಲನಚಿತ್ರದ ಪ್ರಸಿದ್ಧ ನಾಯಕ ದಿಲೀಪ್‌ಕುಮಾರ್‌ನಂತೆ ಭಾಸವಾಗುತ್ತಿತ್ತು. ಕಲಾಕಾರರ, ಕಲಾರಸಿಕರ ವಿಮರ್ಶಕರ ಪ್ರೀತಿ ಗೌರವಗಳಿಗೆ ಪಾತ್ರರಾದರು' (ಕರ್ನಾಟಕ ಮಲ್ಲನ. 9, 2008) ಎಂದು ಇದೇ ನಾಟಕದ ಇನ್ನೋರ್ವ ಪಾತ್ರಧಾರಿ, ಶ್ರೀನಿವಾಸ ಎನ್. ಪಾಂಗಾಳ ತಮ್ಮ ವಿದ್ಯಾ ಹಾಗೂ ರಂಗ ಗುರು ಸುವರ್ಣರ ಅಭಿನಯವನ್ನು ನೆನಪಿಸಿಕೊಳ್ಳುತ್ತಾರೆ, ಹೆಮ್ಮೆ ಪ್ರಕಟಿಸುತ್ತಾರೆ.

ನಾಟಕಾಸಕ್ತರಿಗೆಲ್ಲ ಸುವರ್ಣರ ಪ್ರಯೋಗ ಇಷ್ಟವಾಯಿತು. ಸುವರ್ಣರು ಹವ್ಯಾಸಿ ರಂಗಭೂಮಿಯ ಸಮರ್ಥ ರಂಗಕರ್ಮಿಯಾಗಿ ಹೆಸರು ಗಳಿಸುವುದಕ್ಕೆ ಈ ಪ್ರಯೋಗ ನಾಂದಿ ಹಾಡಿತು. ಸುವರ್ಣರ ಸೃಷ್ಟಿಶೀಲತ್ವ ಹಾಗೂ ಕ್ರಿಯಾಶೀಲತ್ವಕ್ಕೆ ಈ ನಾಟಕ ಸ್ಪಷ್ಟ ನಿದರ್ಶನವಾಯಿತು. ಈ ನಾಟಕ ನೋಡಿದ ಕೋಡಿಕಲ್ ಮಾಸ್ತರರು ತುಂಬು ಹೃದಯದಿಂದ ಕೊಂಡಾಡಿದರು. ಹಿರಿಯ ಸಾಹಿತಿ ರಂ.ಶ್ರೀ.ಮುಗಳಿಯವರ 'ಮನೋರಾಜ್ಯ' ಪುಸ್ತಕವನ್ನು ಉಡುಗೊರೆಯಾಗಿ ನೀಡಿ ಹರಸಿದರು. ಮುಂಬಯಿ ಕನ್ನಡ ರಂಗಭೂಮಿಗೆ ಅದ್ಭುತ ಪ್ರತಿಭೆಯೊಂದರ ಪದಾರ್ಪಣೆಯಾಗಿದೆ ಎಂದು ಭರವಸೆಗೊಂಡ ಅವರು ರಂಗಭೂಮಿಯಿಂದ ಅಂಚಿಗೆ ಸರಿದು ಶಿಷ್ಯೋತ್ತಮ ಸುವರ್ಣರನ್ನು ನಿರ್ದೇಶಕನನ್ನಾಗಿಸಿದರು.

ಈ ಪ್ರೋತ್ಸಾಹ ಸುವರ್ಣರನ್ನು ಹುರಿದುಂಬಿಸಿತು. ತಾವು ಅಧ್ಯಾಪನ ವೃತ್ತಿ ನಿರ್ವಹಿಸುತ್ತಿದ್ದ ಜೈ ಹಿಂದ್, ಸಿದ್ಧಾರ್ಥ ಬೆಳಗ್ಗಿನ ಕಾಲೇಜುಗಳ ವಾರ್ಷಿಕೋತ್ಸವದ ನಾಟಕಗಳ ನಿರ್ದೇಶನಕ್ಕೆ ಮೇಷ್ಟ್ರು ಸುವರ್ಣರನ್ನೇ ಕರೆದೊಯ್ಯುತ್ತಿದ್ದರು. ತಾವು ಬರೆದ ನಾಟಕಗಳನ್ನು ಪ್ರಯೋಗಕ್ಕೆ ಆಯ್ದುಕೊಳ್ಳುತ್ತಿದ್ದರು. ಹೊಸ ಬಗೆಯ ಪ್ರಯೋಗಗಳ ಬಗ್ಗೆ ತಲ್ಲೀನರಾಗಿ ಯೋಚಿಸುತ್ತಲೇ ವಿಶಿಷ್ಟ ಕೊಡುಗೆಗಳನ್ನು ಕೊಡುತ್ತ ಬಂದರು.

ಮೊದಲ ಪ್ರದರ್ಶನದ ಸವಿ ನೆನಪು ಹೀಗಿದೆ: 'ನಾನು ಬೇರೆ ಭಾಷೆಯ ನಾಟಗಳನ್ನು ನೋಡಿ ಕಲಿತ ಅನುಭವದಿಂದ ಪ್ರಯೋಗಿಸಿದ ನನ್ನ ಪ್ರಥಮ ನಾಟಕ 'ಕುರುಡನ ಸಂಗೀತ'ದಲ್ಲಿ ರಂಗದ ಮುನ್ನೆಲೆ ಮತ್ತು ಹಿನ್ನೆಲೆ ಕಲಾವಿದರೆಲ್ಲರೂ ಮೊದಲ ಬಾರಿಗೆ ರಂಗವೇರಿದ್ದರು! ಆದರೆ ಉತ್ಸಾಹದಿಂದ ಮತ್ತು ಪ್ರಾಮಾಣಿಕತೆಯಿಂದ ಸಹಕರಿಸಿದರು. ಅದಕ್ಕೆ ದೊರೆತ ಪ್ರತಿಕ್ರಿಯೆ ಅದ್ಭುತ. ಶಾಲೆಯ ವಿದ್ಯಾರ್ಥಿಗಳು, ಶಾಲೆ ನಡೆಸುವ ಸಂಘಟಕರು, ಅವರ ಕುಟುಂಬದ ಸದಸ್ಯರು ಮತ್ತು ಅಧ್ಯಾಪಕರು ಮತ್ತು ಅವರ ಗೆಳೆಯರಿಂದ ಕೂಡಿದ ಪ್ರೇಕ್ಷಕ ವರ್ಗ ನಾಟಕವನ್ನು ತುಂಬ ಮೆಚ್ಚಿ ದೀರ್ಘ ಕರತಾಡನ ಮಾಡಿದಾಗ ನಮಗೆಲ್ಲ ರೋಮಾಂಚನ!'

'ನನ್ನ ವಿದ್ಯಾಗುರುಗಳು, ರಂಗ ಗುರುಗಳೂ ಆದ ಬಿ.ಎಂ. ಕೋಡಿಕಲ್ ಮಾಸ್ತರರು ತುಂಬು ಮೆಚ್ಚುಗೆಯಿಂದ ಪುಸ್ತಕವೊಂದನ್ನು ಬಹುಮಾನವಾಗಿ ನೀಡಿದಾಗ ಸಾರ್ಥಕತೆಯ ಅನುಭವದ ಜತೆಗೆ ಪ್ರಯೋಗಶೀಲತೆಗೆ ಇನ್ನೂ ಹೆಚ್ಚಿನ ಬಗೆಯಲ್ಲಿ ಒಡ್ಡಿಕೊಳ್ಳಬೇಕು ಅನ್ನುವುದಕ್ಕೆ ಇದು ಮುನ್ನುಡಿ ಅನ್ನುವುದು ಅರಿವಿಗೆ ಬಂತು. ಆ ಕ್ಷಣದಿಂದಲೇ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವುದೇ ನನ್ನ ಮುಂದಿನ ಗುರಿ ಎಂದು ಅಂದು ನಾನು ನಿರ್ಧಾರ ಮಾಡಿಬಿಟ್ಟೆ' (ಅಕ್ಟೋಬರ್ 15ರಂದು ನಡೆಸಿದ ಸಂದರ್ಶನದಲ್ಲಿ) ಎಂದು ರಂಗ ಬದುಕಿಗೆ ಪದಾರ್ಪಣೆ ಮಾಡಿರುವ ಸನ್ನಿವೇಶವನ್ನು ಮುಂದಿಟ್ಟಿದ್ದಾರೆ.

ರಂಗಭೂಮಿಯ ಜೀವಂತಿಕೆಗೆ ಅಂದುಕೊಂಡಂತೆಯೇ ಹೊಸ ರಂಗಕರ್ಮಿಗಳನ್ನು ಸೃಷ್ಟಿಸುತ್ತ, ಪೋಷಿಸುತ್ತ ರಂಗಭೂಮಿಯನ್ನು ಗಟ್ಟಿಯಾಗಿ ಕಟ್ಟಿ ನಿಲ್ಲಿಸುವ ಪ್ರಯತ್ನಶೀಲ ಶಿಲ್ಪಿಯಾಗುತ್ತಾರೆ ಸುವರ್ಣರು.

ಹಗಲು ಕಾಲೇಜಿಗೆ ಸೇರಿ ಮುಂದಿನ ವಿದ್ಯಾಭ್ಯಾಸ ಮಾಡುವ ಅವಕಾಶ ಸುವರ್ಣರ ಮುಂದಿದ್ದರೂ ಅವರು ಆಯ್ದುಕೊಂಡದ್ದು ನೌಕರಿ ಮತ್ತು ಹವ್ಯಾಸಿ ರಂಗಭೂಮಿಯ ಚಟುವಟಿಕೆಗಳನ್ನು! ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ನಿರ್ವಹಿಸುತ್ತ ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತ ರಂಗಭೂಮಿಯನ್ನು ವಿಕಸಿಸುತ್ತ ಬಂದರು. ಒಂದರ್ಥದಲ್ಲಿ ಬದುಕನ್ನೇ ರಂಗಭೂಮಿಗೆ ಒಪ್ಪಿಸಿಕೊಂಡರು.

'ಕುರುಡನ ಸಂಗೀತ' ನಾಟಕದ ಯಶಸ್ಸಿನಿಂದ ಸಂತೋಷಗೊಂಡ ಮೊಗವೀರ ಮಂಡಳಿಯ ಕಾರ್ಯಕಾರಿ ಸಮಿತಿ, ಸಂಸ್ಥೆಯ ವಾರ್ಷಿಕೋತ್ಸವಕ್ಕೆ ಹೊಸತೊಂದು ನಾಟಕವನ್ನು ಬರೆದು ನಿರ್ದೇಶಿಸಬೇಕು ಎಂದು ಸುವರ್ಣರಲ್ಲಿ ಕೇಳಿಕೊಂಡಿತು. ಈ ಕೋರಿಕೆಯ ಮೇರೆಗೆ ಸುವರ್ಣರು ಬರೆದದ್ದು 'ಅಭಾಗಿನಿ' ಎಂಬ ಎರಡಂಕದ ನಾಟಕ. ನಾಟಕಕ್ಕೆ ಅಗತ್ಯವಿದ್ದ ಎರಡು ಸ್ತ್ರೀ ಪಾತ್ರಗಳನ್ನು ಓರ್ವ ಅಧ್ಯಾಪಕರು ಹಾಗೂ ಇನ್ನೋರ್ವ ವಿದ್ಯಾರ್ಥಿಯೇ ಅನಿವಾರ್ಯವಾಗಿ ನಿರ್ವಹಿಸಬೇಕಾಯಿತು. ಅವರಿಬ್ಬರೂ ಚೆನ್ನಾಗಿಯೇ ನಿಭಾಯಿಸಿದರು ಕೂಡ. ಹಿಂದಿನ ನಾಟಕದಲ್ಲಿ ಪಾತ್ರ ನಿರ್ವಹಿಸಿದವರ ಜತೆಗೆ ಇನ್ನೊಂದಷ್ಟು ಮಂದಿ ಹಳೆ ವಿದ್ಯಾರ್ಥಿಗಳೂ ಸಾಥ್ ನೀಡಿದ್ದರಿಂದ ಸುವರ್ಣರ ಬಲ ಹೆಚ್ಚಿತು. ನಟರಿಗೆ ಅಭಿನಯ, ಹಿನ್ನೆಲೆ ಕಲಾವಿದರಿಗೆ ಅವರವರು ವಹಿಸಿಕೊಳ್ಳಬೇಕಾದ ಜವಾಬ್ದಾರಿಯ ಬಗೆಗೆ ತರಬೇತಿ ನೀಡಿದರು. ಒಂದೂವರೆ ತಿಂಗಳ ರಿಹರ್ಸಲ್ ನಡೆಸಿದರು. ಪ್ರದರ್ಶನವೂ ಭರ್ಜರಿ ಯಶಸ್ಸು ಪಡೆಯಿತು. ರಂಗದ ನಡೆಗೆ ಉತ್ತೇಜಿಸಿತು. ವಿಧವೆಯರ ಬಗ್ಗೆ ಇದ್ದ ಮೂಢ ನಂಬಿಕೆಯನ್ನು ವಿಮರ್ಶೆಗೊಡ್ಡುವುದು ನಾಟಕದ ವಸ್ತು. ವಿಧವೆಯರು ಅಮಂಗಳೆಯರು ಎಂದು ನೋಡುವ ದೃಷ್ಟಿಕೋನ ಹಾಗೂ ಕಿರು ಹರೆಯದ ವಿಧವೆಯರು ಎದುರಿಸುವ ಸಂಕಷ್ಟಗಳ ಬಗ್ಗೆ ಮಾನವೀಯ ನೆಲೆಯಿಂದ ಚಿಂತನ ಮಂಥನ ನಡೆಸುವುದಕ್ಕೆ ಹಾದಿ ತೆರೆದಿಡುವ ಮೌಲಿಕ ನಾಟಕವಿದು. ಅಂದಿನ ನಾಟಕಗಳಲ್ಲಿ ಸಾಮಾನ್ಯವಾಗಿದ್ದ ಹತ್ತರಿಂದ ಇಪ್ಪತ್ತು ದೃಶ್ಯಗಳನ್ನು ಇಲ್ಲೂ ಸಂಯೋಜಿಸಿದ್ದಾರೆ.

## ಹೆಜ್ಜೆ 2 : ಉದಯಕಲಾ ನಿಕೇತನ ಮತ್ತು ನಾಟಕಗಳ ಸೃಷ್ಟಿ

ಸುವರ್ಣರು ಶಾಲಾ ವಾರ್ಷಿಕೋತ್ಸವಕ್ಕಾಗಿ ನಾಟಕ ಬರೆಯುತ್ತ, ನಿರ್ದೇಶಿಸುತ್ತ ಖುಷಿ ಪಡುತ್ತಿದ್ದರು ನಿಜ. ಆದರೆ ಈ ಪ್ರಯೋಗಗಳನ್ನು ನೋಡಿದ ರಂಗಸಾಕ್ತರಿಗೆ ಸುವರ್ಣರಿಂದ ತಮ್ಮ ಸಂಸ್ಥೆಯ ವಾರ್ಷಿಕೋತ್ಸವಕ್ಕೂ ನಾಟಕ ಹಾಗೂ ನಿರ್ದೇಶನಗಳಾಗಬೇಕು ಪ್ರದರ್ಶಿಸಬೇಕು ಅನ್ನುವ ಅಭಿಲಾಷೆ ಹುಟ್ಟಿಕೊಂಡಿದೆ. ಹಾಗೆಂದೇ ಸುವರ್ಣರ ತಂಡವನ್ನು ಆಹ್ವಾನಿಸಲಾಗಿದೆ ಕೂಡ. ಹೀಗೆ ಶಾಲಾ ವಾರ್ಷಿಕೋತ್ಸವಕ್ಕೆ ಸೀಮಿತವಾಗುವ ಬದಲಿಗೆ ಹವ್ಯಾಸಿ ನಾಟಕ ಸಂಸ್ಥೆಯೊಂದನ್ನು ಆರಂಭಿಸಿದರೆ ಹೇಗೆ ಎಂದು ಯೋಚಿಸಿದ ಸುವರ್ಣರು ತಂಡದ ಸದಸ್ಯರೊಂದಿಗೆ ಚರ್ಚಿಸಿದಾಗ ಅದೇ ಸರಿ ಎನ್ನುವುದೇ ಎಲ್ಲರ ಅಭಿಮತವೂ ಆಗಿತ್ತು. ಪರಿಣಾಮವಾಗಿ ಹುಟ್ಟುಹಾಕಿದ್ದು 'ಉದಯ ಕಲಾ ನಿಕೇತನ' ಅನ್ನುವ ಸಂಸ್ಥೆಯನ್ನು. ಸುವರ್ಣರು ಸಂಸ್ಥಾಪಿಸಿದ ಈ ರಂಗ ತಂಡಕ್ಕೆ

ಆರಂಭದಲ್ಲಿದ್ದ ಹತ್ತು ಮಂದಿ ಸ್ಥಾಪಕ ಸದಸ್ಯರಾಗಿ ನೋಂದಣಿ ಮಾಡಿಸಿದರು. ಸುವರ್ಣರು ಒಂದಾದ ಮೇಲೆ ಒಂದರಂತೆ ನಾಟಕ ಕೃತಿ ರಚಿಸುತ್ತ ಪ್ರಯೋಗಶೀಲರಾದರು.

ಸುಕುಮಾರ ನಾಟಕ ಬರೆಯುವಂತೆ ಬಂದ ಆಗ್ರಹಕ್ಕೆ ಮಣಿದ ಸುವರ್ಣರು ಎರಡೇ ಎರಡು ದಿನಗಳಲ್ಲಿ 'ವಿಷಮ ಘಳಿಗೆ' ನಾಟಕವನ್ನು ರಚಿಸಿಬಿಟ್ಟರು. ಚಿಕ್ಕಂದಿನಲ್ಲಿ ತಾವು ಕಂಡ ಸಂಗತಿಗಳನ್ನೇ ಇಲ್ಲಿ ವಸ್ತುವಾಗಿಸಿಕೊಂಡರು. ಮುಂಬಯಿಯಲ್ಲಿ ಚಿಕ್ಕದೊಂದು ಕೆಲಸ ನಿರ್ವಹಿಸಿ ಅಷ್ಟೋ ಇಷ್ಟೋ ಸಂಪಾದನೆ ಮಾಡುತ್ತಿದ್ದ ಯುವಕರು ಊರಿಗೆ ಹೋಗುವಾಗ ಯಾರ್ಯಾರದ್ದೋ ವಸ್ತ್ರ, ಚಿನ್ನಾಭರಣ ಎರವಲು ಪಡೆದುಕೊಂಡು ಧರಿಸಿ ಫಾಲ್ಸ್ ಪ್ರೆಸ್ಟೀಜ್ ಮೆರೆಯುವುದನ್ನು ನೋಡಿ ಒಳಗೊಳಗೇ ನಕ್ಕಿದ್ದಾರೆ. ಈ ಪ್ರವೃತ್ತಿಯನ್ನು ಇಲ್ಲಿ ವಿಡಂಬನೆಗೆ ಒಳಗುಮಾಡುತ್ತಾರೆ. ಮದುವೆಗಾಗಿ ಊರಿಗೆ ಬಂದ ಹುಡುಗನ ಈ ಡೋಂಗಿತನವನ್ನು ವಧುವಾಗುವವಳ ಸೋದರ ಬಯಲಿಗೆಳೆದು ಮದುವೆ ತಪ್ಪಿಸುತ್ತಾನೆ ಮತ್ತು ಆತನ ಮಾನ ಹರಾಜಿಗೆ ಹಾಕುತ್ತಾನೆ. ರಸ್ತೆ ಬದಿಯ ಜ್ಯೋತಿಷಿಯ ಸೋಗಲಾಡಿತನವನ್ನೂ ಇಲ್ಲಿ ಪರಿಣಾಮಕಾರಿಯಾಗಿ ಲೇವಡಿಮಾಡಲಾಗುತ್ತದೆ. ನಕ್ಕುನಗಿಸುವ ಈ ನಾಟಕದ ಯಶಸ್ಸು ಸುಕುಮಾರ ಶೈಲಿಯ ನಗೆನಾಟಕಗಳಲ್ಲಿ ಮುಂದುವರಿಯುವ ಭರವಸೆಯನ್ನು ಸುವರ್ಣರಲ್ಲಿ ಹೆಚ್ಚಿಸಿತು.

ನಾಟಕದ ವಸ್ತು, ಚೌಕಟ್ಟು, ಪಾತ್ರ ಪೋಷಣೆ, ರಂಗ ಸಜ್ಜಿಕೆ, ಬೆಳಕು, ಸಂಗೀತ ಎಲ್ಲವೂ ಅದ್ಭುತವಾಗಿ ಜನಮೆಚ್ಚುಗೆಗೆ ಪಾತ್ರವಾಯಿತು. ಬಹುಬೇಡಿಕೆಯ ಈ ನಾಟಕ ಹಲವು ಪ್ರದರ್ಶನವನ್ನು ಕಂಡಿದೆ ಕೂಡ. ಕೆ.ಎಸ್.ಬೋಳಾರ್ ಅವರ ಅಭಿನಯವೂ ಚೆನ್ನಾಗಿತ್ತು. ಇಡೀ ತಂಡದ ಸಹಕಾರ, ತಾದಾತ್ಮ್ಯತೆ ಸುವರ್ಣರ ಬಲ ಹೆಚ್ಚಿಸಿತು. ಮೆಚ್ಚುಗೆಯ ಪ್ರತಿಕ್ರಿಯೆಗಳನ್ನೆಲ್ಲ ಗಮನಿಸುತ್ತ ಪ್ರಯೋಗದಿಂದ ಪ್ರಯೋಗಕ್ಕೆ ಬೆಳೆಯುತ್ತ ಹೋದಂತೆ ನಾಟಕದ ಮೇಲಿನ ವಿಶ್ವಾಸವೂ ಹೆಚ್ಚಾಯಿತು.

ನಾಟಕ ಅತಿ ಪ್ರೀತಿಯ ಹವ್ಯಾಸವಾಯಿತು. ಎಲ್ಲರೂ ಬಹಳ ಉತ್ಸಾಹದಿಂದ ಭಾಗವಹಿಸುತ್ತಿದ್ದ ಕಾರಣ ಸುವರ್ಣರಿಗೆ ನಾಟಕದ ಬಗ್ಗೆ ಇತರ ಸದಸ್ಯರಿಗೆ ತಿಳಿಯಪಡಿಸಿ ತರಬೇತಿ ನೀಡುವುದು ಇಷ್ಟವಾಯಿತು. ಒಬ್ಬರಿಗೊಬ್ಬರು ಸಹಕರಿಸುತ್ತ ರಂಗಕ್ರಿಯೆಯಲ್ಲಿ ತೊಡಗಿಕೊಂಡಿರುವಂತೆ ವೈಯಕ್ತಿಕ ಕೆಲಸ ಕಾರ್ಯಗಳಲ್ಲೂ ಸಹಕರಿಸುತ್ತ ಒಂದು ಕುಟುಂಬದಂತೆ ಇರತೊಡಗಿದರು. ಸಮಾನ ಆಸಕ್ತರಾದ ಕಾರಣ ತಂಡದ ಸದಸ್ಯರ ನಡುವಣ ಸಂಬಂಧ ಗಟ್ಟಿಯಾಗುತ್ತ ಅನ್ಯೋನ್ಯತೆಯಿಂದ ಬೆರೆಯುತ್ತ ರಂಗಭೂಮಿಗೆ ಉತ್ತಮ ಕೊಡುಗೆಗಳನ್ನು ನೀಡುವುದರಲ್ಲಿ ಸಫಲರಾದರು. 'ಇದು ರಂಗಭೂಮಿಯ ಮಹತ್ವ ಮತ್ತು ಪ್ರಭಾವದಿಂದ ಸಾಧ್ಯವಾಯಿತು' ಎನ್ನುವುದು ಸುವರ್ಣರ ಪ್ರತಿಕ್ರಿಯೆ.

ಆರಂಭದ ನಾಟಕಗಳೆಲ್ಲವೂ ಹೀಗೆ ಯಶಸ್ಸಿನ, ಜನಪ್ರಿಯತೆಯ ಹಾದಿ ಹಿಡಿದಾಗ ಸ್ನೇಹಿತರೆಲ್ಲ ಸುವರ್ಣರನ್ನೇ ನಾಟಕ ಬರೆಯುವಂತೆ ಪ್ರೀತಿ, ಅಭಿಮಾನ, ಗೌರವಗಳಿಂದ

ಒತ್ತಾಯಿಸಿದರು. ಸಿದ್ಧ ನಾಟಕಗಳ ಬದಲಿಗೆ ಹೊಸ ನಾಟಕಗಳನ್ನೇ ಬರೆಯುವುದು ಅನಿವಾರ್ಯವಾಯಿತು.

ಅಧ್ಯಾಪಕರೂ ಆಗಿದ್ದರಿಂದ ಸುವರ್ಣರಿಗೆ ಶಾಲೆಯ ಗ್ರಂಥಾಲಯದಲ್ಲಿ ಹೇರಳ ಕೃತಿಗಳು ಲಭ್ಯವಾಗುತ್ತಿದ್ದವು. ಬಗೆ ಬಗೆಯ ನಾಟಕ ಕೃತಿಗಳನ್ನು ಅವರು ಪಡೆದು ಓದುತ್ತಿದ್ದರು. ಶ್ರೀರಂಗ, ಕೈಲಾಸಂ, ಪರ್ವತವಾಣಿ, ದಾಶರಥಿ ದೀಕ್ಷಿತ್, ಕ್ಷೀರಸಾಗರ, ಶಿವರಾಮ ಕಾರಂತ ಅಲ್ಲದೆ ಎ.ಎನ್.ಮೂರ್ತಿ, ಗುಂಡಣ್ಣ ಮೊದಲಾದವರ ನಗೆ ನಾಟಕಗಳನ್ನೂ ಸಾಕಷ್ಟು ಓದುತ್ತಿದ್ದರು. ಓದು ಅವರನ್ನು ಸಾಕಷ್ಟು ವಿಸ್ತರಿಸುತ್ತ ಬಂದಿತ್ತು. ಸೃಜನಶೀಲತೆ ನಾನಾ ಆಯಾಮಗಳಿಂದ ತುಡಿಯತೊಡಗಿತು. ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಥೀಂನೊಂದಿಗೆ ನಾಟಕಗಳನ್ನು ಬರೆಯುತ್ತಲೇ ಬಂದರು. ಪ್ರೇಕ್ಷಕನನ್ನು ತಟ್ಟುವ ಚುರುಕಿನ ಸಂಭಾಷಣೆ, ಮುದಗೊಳಿಸುವ ರಂಗಸಜ್ಜಿಕೆ ಇವರ ಪ್ರಯೋಗಗಳ ಧನಾತ್ಮಕ ಅಂಶಗಳಾದವು. ಅನಂತರ ಬರೆದದ್ದು 'ಕದ್ದವನೆ ಕಳ್ಳ' ನಾಟಕ.

'ಉದಯ ಕಲಾನಿಕೇತನ' ಬೆಳೆಯುತ್ತ ಹೋದ ಹಾಗೆ ಅನುಭವ ವಿಸ್ತರಿಸುತ್ತ ಹೋದಂತೆ ಇನ್ನಷ್ಟು ವೈವಿಧ್ಯಮಯ ನಾಟಕಗಳನ್ನು ಪ್ರಯೋಗಿಸುವುದಕ್ಕೆ ತೊಡಗಿದರು ಸುವರ್ಣರು. ಅವುಗಳಲ್ಲಿ ಮಹತ್ವದ ಪ್ರೊಡಕ್ಷನ್ ಆಗಿ ಶರಚ್ಚಂದ್ರರ ಕಾದಂಬರಿ 'ಚಂದ್ರನಾಥ'ವನ್ನು 'ಕುಲಗೌರವ'ವಾಗಿ ರೂಪಾಂತರಿಸಿದರು.

'ಕದ್ದವನೆ ಕಳ್ಳ' ಸುವರ್ಣರೇ ಬರೆದು ನಿರ್ದೇಶಿಸಿದ ಇನ್ನೊಂದು ನಗೆ ನಾಟಕ. ಮಧ್ಯಮ ವರ್ಗದ ಗುಮಾಸ್ತನೊಬ್ಬ ಸಂಬಳ ದೊರೆತ ದಿನ ಮನೆಗೆ ಬಂದು ದುಡ್ಡು ಎಣಿಸುತ್ತಿರುವಾಗ ಪ್ರತ್ಯಕ್ಷನಾಗುವ ಮಾವನನ್ನು ಕಂಡೊಡನೆಯೇ ನೂರರ ನೋಟೊಂದನ್ನು ಕೈಗೆ ಸಿಕ್ಕಿದ ಅದ್ಯಾವುದೋ ಪುಸ್ತಕದ ಒಳಗೆ ಇಟ್ಟುಬಿಟ್ಟಿದ್ದಾನೆ. ಆದರೆ ಆ ವಿಷಯ ಮರೆತದ್ದರಿಂದ ಕಾಣೆ ಆಯಿತೆಂದು ಗಲಿಬಿಲಿಗೊಂಡು ಹುಡುಕುವ ಸನ್ನಿವೇಶ ಕುತೂಹಲದೊಂದಿಗೆ ನಗೆ ಉಕ್ಕಿಸುತ್ತದೆ.

ಹಾಸ್ಯ ಪಾತ್ರಗಳೆಂದರೆ ಕುರುಡ, ಕುಂಟರೂ ಆಗಿರುವಂತೆ ಪಾತ್ರ ಸಿದ್ಧಪಡಿಸುತ್ತಿದ್ದ ಆಗಿನ ನಾಟಕಗಳಿಗಿಂತ ಇವರು ಭಿನ್ನವಾಗುತ್ತಾರೆ. ಸಾಕಷ್ಟು ಇಂಗ್ಲಿಷ್ ನಾಟಕ ನೋಡಿದ್ದರ, ಹಾಗೂ ಓದಿದ್ದರ ಪರಿಣಾಮವಾಗಿ ಸಂದರ್ಭವೇ ನಗು ಹುಟ್ಟಿಸುವಂತೆ ನೋಡಿಕೊಳ್ಳುತ್ತಾರೆ. ಸಿಚುವೇಷನ್ ಕಾಮೆಡಿಯನ್ನು ಕನ್ನಡ ರಂಗಭೂಮಿಯಲ್ಲಿ ಸೃಷ್ಟಿಸಿದ ಸುವರ್ಣರು ಹೊಸ ಇತಿಹಾಸವನ್ನು ಸೃಷ್ಟಿಸುತ್ತಾರೆ.

ಇದೇ ನಾಟಕದ ಹೊಗೆಸೊಪ್ಪಿನ ವ್ಯಾಪಾರಿ ರಂಗಪ್ಪಯ್ಯನಿಗೆ ಇಂಗ್ಲಿಷ್ ಮಾತನಾಡುವ ವಿಪರೀತ ಹುಚ್ಚು. ನಗು ಉಕ್ಕಿಸುವ ಸಂಭಾಷಣೆಯೂ ನಾಟಕದ ಜನಪ್ರಿಯತೆಗೆ ಕಾರಣವಾಯಿತು. ಈ ಕೃತಿ ಪ್ರಕಟವಾದಾಗ ಕಾದಂಬರಿಕಾರ ವ್ಯಾಸರಾಯ ಬಲ್ಲಾಳರು ಓದಿ ಮೆಚ್ಚಿದರು. ರಂಗಪ್ಪಯ್ಯನ ಪಾತ್ರ 'ಮುಗಿದ ಯುದ್ಧ' ಕಾದಂಬರಿಯ ಜಾಕ್ಸನ್ ಪಾತ್ರವನ್ನು ನೆನಪಿಗೆ ತರುತ್ತದೆ ಎಂದು ಅಭಿನಂದಿಸಿ ಪತ್ರವನ್ನೂ ಬರೆದಿದ್ದರು.

ಈ ನಾಟಕ ಪ್ರದರ್ಶನಗೊಂಡ ಸಂದರ್ಭಗಳನ್ನು ಸುವರ್ಣರು 'ಕದ್ದವನೆ ಕಳ್ಳ' ಕೃತಿಯ ಲೇಖಕನ ಮಾತಿನಲ್ಲಿ ವಿವರಿಸಿದ್ದಾರೆ: 'ಮೊದಲನೇ ಪ್ರಯೋಗವು 1963ರ ಸಪ್ಟೆಂಬರ್ ತಿಂಗಳಲ್ಲಿ ಉದಯ ಕಲಾ ನಿಕೇತನದ ಸಂತೋಷ ಕೂಟದ ಸಂದರ್ಭ ಕೆ.ಸಿ.ಕಾಲೇಜು ಸಭಾ ಭವನದಲ್ಲಿ ಜರುಗಿತು. ಎರಡನೇ ಪ್ರಯೋಗ, ವರ್ಲಿ ನೇಬರ್ ಹುಡ್ ಕರ್ನಾಟಕ ಸಂಘದವರು ಕನ್ನಡದ ವಿಖ್ಯಾತ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ನಾಡಹಬ್ಬ ಉತ್ಸವದ ಸಂದರ್ಭ 17–11–63ರಂದು ಜರುಗಿತು. ಮೂರನೇ ಪ್ರಯೋಗವು ಪ್ರಸಿದ್ಧ ಕಲಾವಿದ ಕವಿ ಹರೀಂದ್ರನಾಥ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆದ ಕೆ.ಸಿ.ಕಾಲೇಜು ಕನ್ನಡ ಸಂಘದ ವಾರ್ಷಿಕೋತ್ಸವ ಮನರಂಜನೆಯ ಅಂಗವಾಗಿ ತಾ. 25–12–65ರಂದು ಕೆ.ಸಿ.ಕಾಲೇಜು ಸಭಾ ಮಂದಿರದಲ್ಲಿ ಜರುಗಿತು.'

ಫ್ಲ್ಯಾಟ್ ಸಂಸ್ಕೃತಿ ಮನುಷ್ಯ ಸಂಬಂಧವನ್ನು ಶಿಥಿಲಗೊಳಿಸುತ್ತಿರುವ ಬಗೆ ಸುವರ್ಣರನ್ನು ಬಹಳವಾಗಿ ಕಾಡಿದೆ. ಅಕ್ಕಪಕ್ಕದ ಮನೆಯವರು ಪರಿಚಯವೇ ಮಾಡಿಕೊಳ್ಳದ, ಸದಾ ಬಾಗಿಲು ಮುಚ್ಚಿಯೇ ಇರುವ ರೀತಿ ಒಳ್ಳೆಯ ಬೆಳವಣಿಗೆ ಅಲ್ಲ ಎಂದೇ ಅದನ್ನೇ ಕಥಾವಸ್ತುವನ್ನಾಗಿಸಿಕೊಂಡು 'ಕಣ್ಣು ತೆರೆಯಿತು' ನಾಟಕ ಬರೆದರು. ಅಕ್ಕ ಪಕ್ಕದ ಮನೆಯವರು ಹೇಗಿರಬೇಕು ಅನ್ನುವುದನ್ನು ಹೃದಯಸ್ಪರ್ಶಿಯಾಗಿ ಈ ನಾಟಕದಲ್ಲಿ ಪ್ರಯೋಗಿಸಿದ್ದಾರೆ.

ಸುವರ್ಣರಲ್ಲಿ ಜಾತಿ ವ್ಯವಸ್ಥೆ ಆಶ್ಚರ್ಯವನ್ನು ಹಾಗೂ ತರಹೇವಾರಿ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ರೂಪಕ್ಕೇ ಆದ್ಯತೆ ನೀಡುವ ಮನೋಭಾವವೂ ಸುವರ್ಣರನ್ನು ನೋಯಿಸಿದೆ. ಕಾಸ್ಮೋಪೊಲಿಟನ್ ಸಿಟಿ ಮುಂಬಯಿಯಲ್ಲಿ ಇಂಥ ಸಣ್ಣತನವಿದೆಯೇ ಎಂದು ಆತಂಕಿತ ರಾಗುತ್ತಾರೆ. ಅದನ್ನು ಬೇರುಸಹಿತ ಕಿತ್ತೊಗೆಯಬೇಕು ಅನ್ನುವ ಮನೋಧರ್ಮದೊಂದಿಗೆ 'ರೂಪದರ್ಶನ' ನಾಟಕವನ್ನು ರಂಗಕ್ಕೇರಿಸುತ್ತಾರೆ.

ಪ್ರಯೋಗದಲ್ಲಿ ಮೂವರು ಪಾತ್ರಧಾರಿಗಳಿದ್ದಾರೆ. ಮುಖ್ಯ ಪಾತ್ರಧಾರಿ ಕುರೂಪಿ. ಮತ್ತೊಬ್ಬ ಆಕೆಯ ಮದುವೆಗಾಗಿ ಪ್ರಯತ್ನಿಸಿ ಕೈಚೆಲ್ಲಿ ಹತಾಶನಾದ ಅಣ್ಣ. ಇನ್ನೊಬ್ಬ ತಾನು ವಿವಾಹವಾಗುತ್ತೇನೆ ಎಂದು ಸಾಂತ್ವನವಾಗುವ ಚೆಲುವ ಹಾಗೂ ಹೃದಯವಂತ. ಆದರೆ ನಾಯಕಿಯೊಳಗಿನ ತಾಕಲಾಟ ಅವನ ಹೊಂದಾಣಿಕೆಗೆ ತಾನು ಕಾರಣವಾಗಬೇಕೆ? ಇದಕ್ಕಿಂತ ಸಾವಿನ ಮನೆಯೇ ಮೇಲು ಎಂದು ನಿರ್ಧರಿಸುವುದು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು ಕಥಾ ವಸ್ತು. ದುರಂತ ಅಂತ್ಯದಲ್ಲಿರುವುದು ವಿವೇಚನೆಯ ಕಿಡಿಯೇ. ಅಂಥ ವ್ಯವಸ್ಥೆಯನ್ನು ಸುಟ್ಟುಬಿಡಬೇಕು ಅನ್ನುವುದು ಮಾರ್ಮಿಕ ಸಂದೇಶವೇ.

ಬೆಂಕಿಹಚ್ಚಿಕೊಂಡ ಸೋದರಿಯನ್ನು ಎತ್ತಿ ತರುವ ಘೋರ ಸನ್ನಿವೇಶ ರಂಗವನ್ನು, ರಂಗ ಮಂದಿರವನ್ನು ಸ್ತಬ್ಧಗೊಳಿಸಿಬಿಡುತ್ತದೆ. ಕಾಣಿಸುವ ಹೊಗೆ ತೀವ್ರತೆಯನ್ನು ರಾಚುತ್ತದೆ. ಕೊನೆಯಲ್ಲಿ ಅಣ್ಣನ ಸುದೀರ್ಘ ಸ್ವಗತ ಸಮಾಜವನ್ನು ತಿವಿಯುತ್ತದೆ. ವಸ್ತುಸ್ಥಿತಿಯನ್ನು ಬೆತ್ತಲುಗೊಳಿಸುತ್ತಲೇ ಹುಚ್ಚನೇ ಆಗಿಬಿಡುವ ಮನಸ್ಸನ್ನು, ಅಲ್ಲಾಡಿಸಿಬಿಡುವ, ಇಲ್ಲ,

ಹೀಗಾಗಲುಬಿಡಬಾರದು ಎಂದು ಒಳಮನಸ್ಸು ಜಾಗೃತಗೊಳ್ಳುತ್ತ ಹುಚ್ಚನಾಗಿಬಿಡುವ ಅಣ್ಣನ ಪಾತ್ರವನ್ನು ಸುವರ್ಣರೇ ನಿರ್ವಹಿಸಿ ಮೆಚ್ಚುಗೆ ಗಳಿಸಿದ್ದರು. ಸ್ನೇಹಿತನಾಗಿ ರಾಬು ಸಾಲ್ಯಾನ್ ಅಭಿನಯಿಸಿದ್ದರು. ಕುರೂಪಿ ಪಾತ್ರಕ್ಕೆ ಹೊಂದಿಕೆಯಾಗುವಂಥ ದೇಹ ಹೊಂದಿದ್ದ ಅಧ್ಯಾಪಕ ಮಡಿಮನ್ ತನ್ಮಯತೆಯಿಂದ ಪಾತ್ರ ನಿರ್ವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಂಟಾಗಿದ್ದ ನೆರೆ ಸಮಸ್ಯೆಗೆ ಪರಿಹಾರ ಧನ ನೀಡುವ ನಿಟ್ಟಿನಲ್ಲಿ ಏರ್ಪಡಿಸಿದ್ದ ಈ ನಾಟಕ ಮುಂಬಯಿ ವಿಶ್ವವಿದ್ಯಾಲಯದ ನಾಟಕೋತ್ಸವದಲ್ಲಿ ಪ್ರಶಸ್ತಿ ಗಳಿಸಿರುವುದು ಪ್ರಯೋಗಶೀಲತೆಯ ಗುಣಮಟ್ಟಕ್ಕೆ ಸಾಕ್ಷಿಯಾಗುತ್ತದೆ.

'ಹಳ್ಳದಿಂದ ಹಾದಿಗೆ' ಸುವರ್ಣರದೇ ಇನ್ನೊಂದು ಕೃತಿ, ರಂಗಕೃತಿ. ಮಹಿಳಾ ಮಂಡಳಿಯಲ್ಲಿ ಅತಿಯಾಗಿ ತೊಡಗಿಸಿಕೊಳ್ಳುವುದರಿಂದಾಗಿ ಸಾಂಸಾರಿಕ ನೆಮ್ಮದಿ ಕೆಡುವುದನ್ನು ತೋರಿಸುವ ನಾಟಕ ಇದು. ಕನ್ನಡ ಭವನದ ಸೊಸೈಟಿ ವಿದ್ಯಾರ್ಥಿನಿಯರಿಗಾಗಿ, ಅಲ್ಲಿನ ವಾರ್ಷಿಕೋತ್ಸವಕ್ಕಾಗಿ ಸಿದ್ಧಗೊಂಡ ನಾಟಕ ಇದು.

ಸಮಾಜಸೇವಕ ವೈದ್ಯ ಎನ್.ಡಿ. ಕಾಂಚನ್‌ರು ಕನ್ನಡ ಮಕ್ಕಳಿಗಾಗಿ ಹಗಲು ಶಾಲೆ ತೆರೆಯುವ ಬಹುದೊಡ್ಡ ಕನಸು ಕಾಣುತ್ತಿದ್ದವರು. ಫಾರ್ಸಿ ವ್ಯಕ್ತಿಯೊಬ್ಬರು ಈ ಉದ್ದೇಶಕ್ಕಾಗಿ ಬಹಳ ಪ್ರೀತಿಯಿಂದ, ಕನ್ನಡದ ಮೇಲಿನ, ಶಿಕ್ಷಣದ ಮೇಲಿನ ಅಭಿಮಾನದಿಂದ ತಮ್ಮ ಕಟ್ಟಡವನ್ನೇ ಉದಾರ ಮನಸ್ಸಿನೊಂದಿಗೆ ಬಿಟ್ಟುಕೊಟ್ಟಿದ್ದರು ಕೂಡ. ಆದರೆ ಶಾಲೆಯ ಅಭಿವೃದ್ಧಿಗೆ ಎದುರಾಗಿದ್ದ ಆರ್ಥಿಕ ಕೊರತೆ ನೀಗಿಸಲು ಈ ವಿಷಯದಲ್ಲಿ ನೆರವಾಗುವುದಕ್ಕೆ, ಶಾಲೆಯ ಪೀಠೋಪಕರಣ ಖರೀದಿ ಧ್ಯೇಯದೊಂದಿಗೆ ಸುವರ್ಣರು ನಾಟಕ ರಚನೆಯಲ್ಲಿ ತೊಡಗುತ್ತಾರೆ, ಆಗಲೇ ಸೃಜಿಸಿದ್ದು 'ಭಗ್ನ ಮಂದಿರ' ನಾಟಕ.

ಸಂದೇಹದ ಮನಸ್ಸು ಅವರನ್ನೇ ಮುಗಿಸುವುದರ ಕುರಿತ ಮನೋವಿಶ್ಲೇಷಣಾತ್ಮಕ ನಾಟಕವಿದು. ಮನೋವಿಪ್ಲವಗಳನ್ನು ರಂಗದಲ್ಲಿ ಎಳೆಎಳೆಯಾಗಿ ಬಿಡಿಸಿಡುವ ಸವಾಲನ್ನು ಸುವರ್ಣರು ಜಯಿಸಿದ್ದರಿಂದಲೇ ತಮ್ಮ ಗುರಿಯನ್ನೂ ಸಾಧಿಸಿ ಸಂತೃಪ್ತಿ ಅನುಭವಿಸಿದ್ದಾರೆ.

ಪ್ರಯೋಗದಿಂದ ಪ್ರಯೋಗಕ್ಕೆ ಬೆಳೆಯುತ್ತ ಹೋದ ಸುವರ್ಣರು ನೀಡಿದ ಮೌಲಿಕ ಕೊಡುಗೆ 'ಕದಡಿದ ನೀರು'. ನಾಟಕಕಾರ ಜಿ.ಬಿ.ಜೋಶಿ ಅವರ ನಾಟಕವನ್ನು ಪ್ರಯೋಗಕ್ಕೆ ಆಯ್ದುಕೊಂಡ ಸಂಸ್ಥೆಗಳಿಂದ ರಂಗ ಪ್ರಯೋಗಕ್ಕೆ ಆಹ್ವಾನಿಸಿದಾಗ ದಾಶರಥಿ ದೀಕ್ಷಿತ್, ಪರ್ವತವಾಣಿ, ಕ್ಷೀರ ಸಾಗರ ಅವರ ನಗೆ ನಾಟಕಗಳನ್ನೂ ನಿರ್ದೇಶಿಸಿ ಪ್ರಯೋಗಿಸುತ್ತಿದ್ದರು. ನಾಟಕದ ಗುಣಮಟ್ಟವನ್ನು ಪ್ರೇಕ್ಷಕ ಮೆಚ್ಚಿಕೊಂಡು ಶ್ಲಾಘಿಸಿದರೆ ಪತ್ರಿಕೆಗಳೂ ಉತ್ತಮ ವಿಮರ್ಶೆ ಬರೆದು ಮುಕ್ತಕಂಠದಿಂದ ಪ್ರಶಂಸಿಸಿವೆ. ಹೀಗೆ ಪ್ರಯೋಗಶೀಲತೆಗೆ ಪ್ರೀತಿಯಿಂದ ಒಪ್ಪಿಸಿಕೊಂಡದ್ದರಿಂದ ಉದಯ ಕಲಾ ನಿಕೇತನ ಒಂದು ಪ್ರತಿಷ್ಠಿತ ಹವ್ಯಾಸಿ ನಾಟಕ ಸಂಸ್ಥೆಯಾಗಿ ಮಾನ್ಯವಾಯಿತು. ಇದೇ ಸಂಸ್ಥೆಯ ನಾಟಕಗಳನ್ನು ಏರ್ಪಡಿಸಿ ಹಲವಾರು ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸಂಘ ಸಂಸ್ಥೆಗಳವರು ನಿಧಿ ಸಂಗ್ರಹಿಸುತ್ತಿದ್ದರು. ಕರಾವಳಿಯ

ನೆರೆ ಸಂತ್ರಸ್ತರ ಪರವಾಗಿ ಸುವರ್ಣರು ತಂಡದೊಂದಿಗೆ ನಾಟಕ ಪ್ರದರ್ಶಿಸಿ ಹಣ ಸಂಗ್ರಹಿಸಿದ್ದಾರೆ. ಕಾರ್ಗಿಲ್ ಯೋಧರ ನೆರವಿಗಾಗಿಯೂ ನಿಧಿ ಸಂಗ್ರಹಿಸಲು ನಾಟಕ ಏರ್ಪಡಿಸಿದ್ದು ರಂಗಭೂಮಿ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ್ದೇ ಆಗಿದೆ.

'ಮೇವಾಡ ಪತನ'ದ ಹಿನ್ನೆಲೆಯಲ್ಲಿ ಸುವರ್ಣರೇ ರಚಿಸಿದ ಐತಿಹಾಸಿಕ ನಾಟಕ 'ರಜಪೂತ ಪವಾಡ' ಹೊಸ ಮೈಲಿಗಲ್ಲಾಗಿದೆ, ಹೆಗ್ಗುರುತಾಗಿದೆ. 'ಮೇವಾಡ ಪತನ' ನಾಟಕದ ವಸ್ತುವನ್ನು ಸುವರ್ಣರು ಬದಲಾಯಿಸಿ 'ರಜಪೂತ ಪವಾಡ'ವನ್ನು ರಚಿಸಿದ್ದಾರೆ. ಸುವರ್ಣರು ನಿರ್ದೇಶಿಸಿದ ದೊಡ್ಡ ಮೊತ್ತ ಅಪೇಕ್ಷಿಸಿದ ಅದ್ದೂರಿ ನಾಟಕ ಇದು. ಇಂಡಿಯನ್ ನ್ಯಾಷನಲ್ ಥಿಯೇಟರ್‌ನವರು ಸೆಟ್ಟಿಂಗ್ ಮಾಡಿದ್ದರು. ಹವ್ಯಾಸಿ ಸಂಗೀತಗಾರ ರಿಸರ್ವ್ ಬ್ಯಾಂಕ್‌ನ ಆಫೀಸರ್ ಎಸ್.ಡಿ.ಹೊಸಂಗಡಿ ಅವರಲ್ಲಿ ಸಂಗೀತ ನಿರ್ದೇಶಿಸಿಸುವಂತೆ ಕೋರಿದ್ದರು. ಅವರು ಹಿಂದಿ ಚಲನಚಿತ್ರ ಜಗತ್ತಿನ ಸಂಗೀತ ನಿರ್ದೇಶಕ ರಾಬಿನ್ ಚಟರ್ಜಿ ಅವರ ನೆರವಿನೊಂದಿಗೆ ಹಿನ್ನೆಲೆ ಸಂಗೀತವನ್ನು ಒದಗಿಸಿದ್ದರು. ಕೋರಸ್ ಗೀತೆಗಳನ್ನೂ ಸುಮಧುರ ಕಂಠದಿಂದ ಹಾಡಿಸಿದ್ದರು. ಭಾರತೀಯ ವಿದ್ಯಾ ಭವನದಲ್ಲಿ ಏರ್ಪಟ್ಟ ಈ ಪ್ರದರ್ಶನ ಅದ್ಭುತ ಮೆಚ್ಚುಗೆ ಪಡೆಯಿತು. ಸುವರ್ಣರು ಹಾಗೂ ತಂಡದವರಿಗೂ ಸಮಾಧಾನ, ಸಂತೃಪ್ತಿಯ ಅನುಭವವನ್ನು ತಂದುಕೊಟ್ಟಿತು. ಇಂಥ ನಾಟಕಗಳನ್ನು ಸವಾಲಾಗಿ ಸ್ವೀಕರಿಸಿ ಇಷ್ಟಪಟ್ಟು ನಿರ್ದೇಶಿಸಬೇಕು ಅನ್ನುವ ಮನಸ್ಸು ಇದ್ದರೂ ಹೆಚ್ಚು ಖರ್ಚು ಬಯಸುವ ನಾಟಕವಾದ್ದರಿಂದ ಸುಲಭಸಾಧ್ಯವಾಗಿರಲಿಲ್ಲ. ಆದರೆ ಕೆಲ ವರ್ಷಗಳ ನಂತರ 'ಧರ್ಮಚಕ್ರ' ನಾಟಕವನ್ನು ಏರ್ಪಡಿಸುವ ನಿಟ್ಟಿನಲ್ಲಿ ಮನಸ್ಸು ಮಾಡಿದರು.

ಈ ನಾಟಕ ಪ್ರದರ್ಶನಗೊಂಡದ್ದು ಅರುವತ್ತರ ದಶಕದಲ್ಲಿ. ಈ ಅದ್ದೂರಿ ಪ್ರದರ್ಶನಕ್ಕೆ ಮೂರು ತಿಂಗಳ ತಾಲೀಮು ನಡೆಸಿದ್ದಾರೆ. ಗುಜರಾತಿ ವ್ಯವಸಾಯಿ ನಾಟಕ ಸಂಸ್ಥೆಯಾದ ಇಂಡಿಯನ್ ನ್ಯಾಷನಲ್ ಥಿಯೇಟರ್ಸ್‌ನವರಿಂದ ಸೆಟ್ ಮಾಡಿಸಿದ್ದರು. ಸಂಗೀತಕ್ಕೆ ಹಿಂದಿ ಚಲನಚಿತ್ರ ನಿರ್ದೇಶಕ ರಾಬಿನ್ ಬ್ಯಾನರ್ಜಿ ಅವರ ಸಹಕಾರ ಪಡೆದಿದ್ದರು. ಬೆಳಕಿನ ಯೋಜನೆಯನ್ನು ಐಎನ್‌ಟಿ ಪ್ರಕಾಶ ಸಂಯೋಜನೆಯ ತಜ್ಞ ಪುಷ್ಪ ಜಾವೇರಿ ಅವರು ನಿರ್ವಹಿಸಿದ್ದರು. ಭಾರತೀಯ ವಿದ್ಯಾಭವನದಲ್ಲಿ ಈ ನಾಟಕ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ವಿಷ್ಣು ಪ್ರಭಾಕರ್ ಅವರು ಕಳಿಂಗ ಯುದ್ಧದ ವಸ್ತುವನ್ನಿರಿಸಿಕೊಂಡು ಬರೆದ 'ಅಶೋಕ' ನಾಟಕವನ್ನು ಸಂಗೀತ ನಿರ್ದೇಶಕ ಬಿ.ಎಂ.ವಸಂತ ಅವರ ಜತೆ ಚರ್ಚಿಸಿ ರಂಗಪ್ರಯೋಗಕ್ಕೆ ಹೊಂದುವಂತೆ ಕೆಲವು ಮಾರ್ಪಾಟುಗಳನ್ನು ಮಾಡಿ 'ಧರ್ಮಚಕ್ರ' ವಾಗಿಸಿದರು. ಕನ್ನಡ ಕಲಾ ಕೇಂದ್ರದ ನಾಟಕೋತ್ಸವದಲ್ಲಿ ಈ ನಾಟಕ ಅದ್ದೂರಿ, ಉತ್ಕೃಷ್ಟ ನಿರ್ದೇಶನ ಹಾಗೂ ಉತ್ತಮ ಸಂಗೀತ ಅಳವಡಿಕೆಯೊಂದಿಗೆ ಪ್ರದರ್ಶನ ಕಂಡಿತು. ಭಲೇ, ಭೇಷ್ ಅನ್ನುವ ಮೆಚ್ಚುಗೆಗೆ ಪಾತ್ರವಾಯಿತು.

ಈ ನಾಟಕ ಪ್ರದರ್ಶನ ಸುವರ್ಣರ ಮನಸ್ಸಿನಲ್ಲಿ ಮರೆಯಲಾರದ ನೆನಪುಗಳನ್ನು ಕಟ್ಟಿಕೊಟ್ಟಿದೆ. ಕಾರಣ ಸುವರ್ಣರ ರೋಲ್ ಮಾಡೆಲ್ ಕೆ.ಶಿವರಾಮ ಕಾರಂತರ ಸಮ್ಮುಖ ಈ ನಾಟಕ ಪ್ರದರ್ಶನಗೊಂಡಿತ್ತು. ಸುವರ್ಣರ ಪಾಲಿಗೆ ಇದು ಹೆಮ್ಮೆಯ ಕ್ಷಣ.

ಕಳಿಂಗ ಯುದ್ಧದ ಬಳಿಕ ಇನ್ನು ಮುಂದೆ ಯುದ್ಧಮಾಡುವುದಿಲ್ಲಎಂದು ಶಪಥ ಮಾಡುವುದು, ಆತನ ಸೋದರಿ ಸಂಗಮಿತ್ರ, ಸೆರೆಯಾದ ಕುಮಾರರ ನಡುವೆ ನಡೆಯುವ ಸಂಭಾಷಣೆಯನ್ನೆಲ್ಲ ಸಮರ್ಥವಾಗಿ ಹಿಡಿದುಕೊಟ್ಟ ಪ್ರೌಢ ನಾಟಕ ಇದು.

**ತಮಾಷೆಯ ಪಲುಕು-ಮೆಲುಕು:** ಬಹಳ ನಿರೀಕ್ಷೆಯ ಈ ಪ್ರಯೋಗದ ಯಶಸ್ಸಿನ ನಿಟ್ಟಿನಲ್ಲಿ ಕಲಾವಿದರ ಏಕಾಗ್ರತೆ ನಿಟ್ಟಿನಿಂದ ಗ್ರೀನ್ ರೂಂಗೆ ಹೊರಗಿನವರ ಪ್ರವೇಶ ನಿರ್ಬಂಧಿಸಬೇಕು ಎನ್ನುವುದನ್ನು ವ್ಯವಸ್ಥಾಪಕ ಅಮೀನರಿಗೆ ಸೂಚಿಸಿದ್ದರು.

ಸುವರ್ಣರು ತಮ್ಮ ಪಾತ್ರದ ಮೇಕಪ್‌ಗಾಗಿ ಕಳಿತಿದ್ದರು. ಹಲವರ ಮೇಕಪ್ ಮುಗಿದಿದೆ. ತಮ್ಮ ಪಾತ್ರದ ಬಗ್ಗೆ ತಲ್ಲೀನರಾಗಿ ನೆನಪಿಸಿಕೊಳ್ಳುತ್ತಿದ್ದಾರೆ. ಅಷ್ಟರಲ್ಲಿ ಕೆಲವರು ಗ್ರೀನ್ ರೂಂಗೆ ಪ್ರವೇಶಿಸಿಬಿಡುತ್ತಾರೆ. ಸುವರ್ಣರಿಗೋ ಸಿಟ್ಟು ಬಂದುಬಿಟ್ಟಿದೆ. ಅಮೀನರಿಗೆ ಅಷ್ಟೆಲ್ಲ ವಿವರಿಸಿದರೂ ಯಾರನ್ನೆಲ್ಲ ಒಳಗೆ ಬಿಟ್ಟರಲ್ಲ ಎಂದು. ಅರೆಕ್ಷಣದಲ್ಲಿ ಅವರ ಹಿಂದೆಯೇ ಓಡಿ ಬಂದ ಅಮೀನರು 'ನಾನು ಗ್ರೀನ್‌ರೂಂಗೆ ಹೋಗಬಾರದು ಎಂದರೂ ಕಣ್ತಪ್ಪಿಸಿ ಬಂದುಬಿಟ್ಟಿರಲ್ಲ? ಹೋಗಿ, ಹೋಗಿ ಪ್ಲೀಸ್, ಕ್ಯಾರೆಕ್ಟರ್ ಇಲ್ಲದವರು ಹೊರಗೆ ಹೋಗಿ. ಇದು ಡೈರೆಕ್ಟರ್‌ರ ಆರ್ಡರ್' ಎಂದು ವಿನಂತಿಸುತ್ತಿದ್ದಾರೆ ಏರು ಧ್ವನಿಯಲ್ಲಿ. ಉಳಿದ ಕಲಾವಿದರು ಸುವರ್ಣರ ಮುಖ ನೋಡಿ ನಗುವುದಕ್ಕೆ ಆರಂಭಿಸಿದರು. ಸುವರ್ಣರು ತಕ್ಷಣ 'ಕ್ಯಾರೆಕ್ಟರ್ ಇಲ್ಲದವರು ಎಂದರೆ ನಾಟಕದಲ್ಲಿ ಪಾತ್ರ ಇಲ್ಲದವರು ಅಂತ ಅಲ್ವಾ ಅಮೀನರೇ' ಎಂದು ಹೇಳಿದ್ದೇ ತಡ ಗಡಿಬಿಡಿಯಲ್ಲಿ ತಾವು ಪ್ರಯೋಗಿಸಿದ ಪದ ಹಾಗೂ ಅಪಾರ್ಥದ ಅರಿವಾಗಿ ತಾವು ನಕ್ಕರು. ಬಂದವರಿಗೆ ಸಾರಿ ಹೇಳುತ್ತ ಅವರನ್ನೆಲ್ಲ ಹೊರಗೆ ಕರೆದೊಯ್ದರು. ನಾಟಕ ಮುಗಿದ ಬಳಿಕ ಈ ಬಗ್ಗೆ ತಂಡ ನೆನಪಿಸಿಕೊಂಡು ಮನಸಾರೆ ನಕ್ಕಿದ್ದು ಮಾತ್ರವಲ್ಲ ಕೆಲವು ಕಾಲ ಜೋಕಾಗಿ ಹಬ್ಬಿತ್ತು.

ಶಾಲೆಯ ಪಠ್ಯದಲ್ಲಿ ಓದಿದ್ದ ಎಂಆರ್‌ಶ್ರೀ ಅವರ 'ನಾಗರಿಕ' ಸುವರ್ಣರನ್ನು ಬಹಳವಾಗಿ ತಟ್ಟಿದ ನಾಟಕ. ಸರಳ ರಗಳೆಯಲ್ಲಿರುವ ಈ ನಾಟಕ ರಂಗ ಪ್ರಯೋಗದ ನೆಲೆಯಿಂದ ಸವಾಲಿನದ್ದೇ. ಸವಾಲನ್ನು ದಾಟುವುದರಲ್ಲಿ ತೃಪ್ತಿ ಅನುಭವಿಸುವ ಸುವರ್ಣರು ಬಹಳ ಇಷ್ಟಪಟ್ಟು ಈ ನಾಟಕವನ್ನು 1956ರಲ್ಲಿ ಪ್ರದರ್ಶನಕ್ಕೆ ಎತ್ತಿಕೊಂಡರು.

ಸಾಂಕೇತಿಕ ರಂಗ ವಿನ್ಯಾಸದೊಂದಿಗೆ ಪ್ರಸ್ತುತಪಡಿಸುವ ನಿಟ್ಟಿನಲ್ಲಿ ಸಜ್ಜಾದ ಸುವರ್ಣರು ವಿಜಯ ನಗರದ ಒಟ್ಟೂ ಚಿತ್ರಣವನ್ನು ರಂಗದಲ್ಲಿ ಕಟ್ಟಿಕೊಟ್ಟಿದ್ದರು. ಇದೊಂದು ಗಂಭೀರ ನಾಟಕವಾಗಿ ನಾಟಕಾಸಕ್ತರ ಮನದಲ್ಲಿ ಬಹುಕಾಲ ನೆನಪಿನಲ್ಲುಳಿಯುವಂಥ ಕೊಡುಗೆಯಾಯಿತು.

ಗಂಭೀರ ನಾಟಕ 'ನಾಗರಿಕ'ದ ಜತೆಗೆ ಗುಂಡಣ್ಣನವರ ನಗೆ ನಾಟಕ 'ಯಾರ ಹೆಂಡ್ತಿ' ಪ್ರದರ್ಶನಕ್ಕೆ ಆಯ್ದುಕೊಂಡರು. ಮನರಂಜಿಸಿದ ಈ ನಾಟಕ ಮುಕ್ತಕಂಠದ ಶ್ಲಾಘನೆಗೆ ಒಳಗಾಯಿತು. ಅಂದಿನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆಕಾಶವಾಣಿ ನಿರ್ದೇಶಕ ಎಸ್.ಆರ್.ಕುಲಕರ್ಣಿ ಬಹಳವಾಗಿ ಮೆಚ್ಚಿಕೊಂಡಿದ್ದರು. ಎರಡೂ ಕ್ಲಾಸ್ ನಾಟಕಗಳೇ ಆದರೂ ಮಾಸ್ ಆದದ್ದು 'ಯಾರ ಹೆಂಡ್ತಿ' ನಾಟಕವೇ. ವಿಶೇಷ ಸಮಯಪ್ರಜ್ಞೆಯೊಂದಿಗೆ ಈ ಪ್ರಯೋಗಗಳನ್ನು ಸಾದರಪಡಿಸಿದ್ದರು ಸುವರ್ಣರು.

ಉದಯ ಕಲಾ ನಿಕೇತನದ ಮೂಲಕ ಪ್ರದರ್ಶನ ಕಂಡ ಸುವರ್ಣರ ನಿರ್ದೇಶನದ ಈ ಎಲ್ಲ ನಾಟಕಗಳು ಮನರಂಜನೆ ಹಾಗೂ ವಿಚಾರಶೀಲತೆ ಎರಡೂ ಮಡುಗಟ್ಟಿದವುಗಳಾಗಿ ಯಶಸ್ವಿಯಾಗಿದ್ದವು.

ಒಂದೊಂದು ನಾಟಕವೂ ವಿಭಿನ್ನವೂ, ವಿಶಿಷ್ಟವೂ ಆಗಿರುವಂತೆ ಸುವರ್ಣರು ನೋಡಿಕೊಳ್ಳುತ್ತಿದ್ದರು. ಭಿನ್ನ ವಸ್ತು, ವಿಭಿನ್ನ ಶೈಲಿಗೆ ಆದ್ಯತೆ ನೀಡುತ್ತಿದ್ದರು. ಪರಿಣಾಮವಾಗಿ ಹತ್ತು ವರ್ಷಗಳಲ್ಲಿ ತನ್ನ ವೈವಿಧ್ಯಮಯ ಹೆಜ್ಜೆ ಗುರುತಿನಿಂದಾಗಿ ಉದಯ ಕಲಾನಿಕೇತನ ಸಂಸ್ಥೆ ಮುಂಬಯಿ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಅನ್ನಿಸಿಕೊಂಡಿತು, ಹೆಸರು ಗಳಿಸಿತು. ರಂಗಕರ್ಮಿಗಳನ್ನು ನಿಜವಾದ ಅರ್ಥದಲ್ಲಿ ಸೃಷ್ಟಿಸಿದ ಕೀರ್ತಿಯೂ ಇದೇ ಸಂಸ್ಥೆಗೆ ಸಲ್ಲುತ್ತದೆ. ಗುಣಮಟ್ಟದ ನಾಟಕವಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸದಭಿರುಚಿಯ ಪ್ರೇಕ್ಷಕ ವರ್ಗವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಿಸಿರುವುದು ಇನ್ನೊಂದು ಹೆಗ್ಗಳಿಕೆ. ಹವ್ಯಾಸಿ ಕನ್ನಡ ರಂಗಭೂಮಿಯನ್ನು ಸಮತೂಕದಿಂದ ಮೇರುಸದೃಶವಾಗಿ ಬೆಳೆಯಿಸಿದ್ದು ಸುವರ್ಣ ಸಾಮರ್ಥ್ಯ.

## ಹೆಜ್ಜೆ 3 : ರಂಗರಶ್ಮಿಯ ಹೊಂಬೆಳಕು

ಉದಯ ಕಲಾನಿಕೇತನದಿಂದ ಹೊರ ಬಂದ ಬಳಿಕ ಸುವರ್ಣರು 'ರಂಗರಶ್ಮಿ' ಬ್ಯಾನರ್‌ನಡಿಯಲ್ಲಿ ರಂಗಕೃತಿ ನಿರ್ಮಿಸಿದ್ದಾರೆ. ಕೈಗೆತ್ತಿಕೊಂಡದ್ದು ಬಂಗಾಲಿಯ ಒಂದು ಫಾರ್ಸ್ ನಾಟಕವನ್ನು, ಪ್ರಹಸನ, ವಿಡಂಬನೆಗಳಿಂದ ಕೂಡಿದ ಹಾಸ್ಯ ನಾಟಕ ಇದು. ಕನ್ನಡದಲ್ಲಿ ನಗೆ ನಾಟಕಗಳಿವೆ. ಆದರೆ ಈ ಬಗೆಯ ನಾಟಕಗಳು ಕಡಿಮೆಯಾಗಿ-ರುವುದರಿಂದಲೇ ಬಂಗಾಲಿ ಮೂಲದ ನಾಟಕವನ್ನು ಆಯ್ಕೆ ಮಾಡಿಕೊಂಡರು.

'ಚೌದಿರ್ ಬಿಯೆ' ಹೆಸರಿನ ನಾಟಕವನ್ನು ಬಂಗಾಲಿಯ ಸ್ನೇಹಿತರೊಬ್ಬರಿಂದ ಇಂಗ್ಲಿಷ್‌ಗೆ ರೂಪಾಂತರಿಸಿದರು. ಸುವರ್ಣರು ಇಂಗ್ಲಿಷ್‌ನಿಂದ ಕನ್ನಡಕ್ಕೆ 'ಅಣ್ಣನ ಮದುವೆ' ಹೆಸರಿನಲ್ಲಿ ಅನುವಾದಿಸಿದರು. 'ರಂಗರಶ್ಮಿ' ಹೆಸರಿನ ಬ್ಯಾನರ್‌ನಲ್ಲಿ ಜೈಹಿಂದ್ ಕಾಲೇಜಿನ ಸಭಾಗೃಹದಲ್ಲಿ ಪ್ರದರ್ಶಿಸಿದರು. ಮಾತು ಕೊಟ್ಟಂತೆ ಉದಯ ಕಲಾನಿಕೇತನದ ಹಳೆ ಕಲಾವಿದರನ್ನು ಅವರಿಚ್ಛೆಯಂತೆ, ಅವರಿಗೆ ಹೊಂದುವ ಪಾತ್ರಗಳ ನಿರ್ವಹಣೆಗಾಗಿ ಆಹ್ವಾನಿಸಿದ್ದಾರೆ. ಇಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ರಂಗಭೂಮಿಗೆ ಹೊಸಬರನ್ನೂ ಒಳಗೊಳಿಸಿಕೊಂಡು

ನಾಟಕ ನಿರ್ದೇಶಿಸಿದರು. ಸುವರ್ಣರ ಅನ್ಯತೆಯಿಂದಾಗಿ ನಾಟಕಗಳೆಲ್ಲವೂ ಯಶಸ್ವಿಯಾಗುತ್ತಲೇ ಹೋದವು, ಜನಮೆಚ್ಚುಗೆಗೂ ಪಾತ್ರವಾದವು.

## ಹೆಜ್ಜೆ4 : ಕನ್ನಡ ಕಲಾಕೇಂದ್ರದಲ್ಲಿ ಪ್ರಯೋಗಶೀಲತೆ

'ಉದಯ ಕಲಾ ನಿಕೇತನ'ವನ್ನು ತೊರೆದ ಬಂದ ಬಳಿಕ ನಾಟ್ಯ ಅಕಾಡೆಮಿಯ ಪದವೀಧರನಾಗಿ ಹೊರ ಬಂದ ಹಿನ್ನೆಲೆಯಿಂದಲೂ ಸುವರ್ಣರನ್ನು ಬೇರೆ ಬೇರೆ ಹವ್ಯಾಸಿ ನಾಟಕ ತಂಡಗಳು ಸಂಪರ್ಕಿಸಿ ತಮ್ಮ ತಂಡದ ನಿರ್ದೇಶಕರಾಗುವಂತೆ ಕೇಳಿಕೊಂಡರು. 'ಕನ್ನಡ ಕಲಾಕೇಂದ್ರದ' ಕೆ.ಜೆ.ರಾಯರು ಬೆನ್ನುಬಿಡದೆ ಕಾಡಿ ಸುವರ್ಣರನ್ನು ಕನ್ನಡ ಕಲಾ ಕೇಂದ್ರದೊಳಕ್ಕೆ ಕರೆ ತಂದರು. 'ಉದಯ ಕಲಾ ನಿಕೇತನ' ಸಂಸ್ಥೆ ಹುಟ್ಟಿಕೊಂಡ ಸಂದರ್ಭದಲ್ಲೇ ಸ್ಥಾಪನೆಗೊಂಡ ಸಂಸ್ಥೆ ಇದಾಗಿತ್ತು. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದ ಮಾಟುಂಗಾದಲ್ಲಿ ಪ್ರತಿಷ್ಠಿತ ಹವ್ಯಾಸಿ ರಂಗ ಸಂಸ್ಥೆಯಾಗಿ ಗುರುತಿಸಿಕೊಂಡಿತ್ತು. ಸುಮಾರು 20 ವರ್ಷಗಳ ಕಾಲ ಸುವರ್ಣರು ಇದೇ ಸಂಸ್ಥೆಯಲ್ಲಿ ತಮ್ಮ ಅನನ್ಯ ಪ್ರಯೋಗಗಳನ್ನು ರಂಗಕ್ಕೆ ಸಲ್ಲಿಸುತ್ತ ಬಂದರು. 'ಈ ಕಾಲಘಟ್ಟದಲ್ಲಿ ಮುಂಬಯಿಯ ಕನ್ನಡ ರಂಗಭೂಮಿ, ಕನ್ನಡದ ಕಲಾವಿದರು, ನಿರ್ದೇಶಕರು, ಪ್ರೇಕ್ಷಕರು ಎಲ್ಲ ಬೆಳವಣಿಗೆಯನ್ನು ಕಂಡ ಕಾಲ. ಅದರಲ್ಲೂ ಎಪ್ಪತ್ತರ ದಶಕ ಮುಂಬಯಿ ಕನ್ನಡ ರಂಗಭೂಮಿಯ ಸುವರ್ಣ ಯುಗವಾಗಿತ್ತು' (ಅ.15ರಂದು ನಡೆಸಿದ ಸಂದರ್ಶನದಲ್ಲಿ) ಎಂದು ಸುವರ್ಣರು ನೆನಪಿಸಿಕೊಳ್ಳುತ್ತಾರೆ.

ಕನ್ನಡ ಕಲಾ ಕೇಂದ್ರವನ್ನು ಸೇರಿದ ಬಳಿಕ ಸುವರ್ಣರ ರಂಗ ಚಟುವಟಿಕೆಯ ವ್ಯಾಪ್ತಿ ಹಿಗ್ಗಿಕೊಳ್ಳುತ್ತ ಸಾಗಿತು. ಕೇಂದ್ರದಲ್ಲಿ ಈ ಮೊದಲೇ ನಿರ್ದೇಶಕರಾಗಿದ್ದ ಕೆ.ಜೆ.ರಾಯರ ಜತೆ ಸುವರ್ಣರೂ ಸೇರಿಕೊಂಡದ್ದರಿಂದ ಸಂಸ್ಥೆಯ ಬಲ ಹೆಚ್ಚಿತು. ತಂಡವೂ ದೊಡ್ಡದಾಯಿತು. ಸುವರ್ಣರ ಆಪ್ತರು, ಉದಯ ಕಲಾ ಸಂಸ್ಥೆಯೊಳಗಿನ ಕಲಾವಿದರೂ ಕನ್ನಡ ಕಲಾ ಕೇಂದ್ರವನ್ನು ಸೇರಿದರು. ನಾಟಕ ಚಟುವಟಿಕೆಗಳೂ ಹೆಚ್ಚಿದವು. ಪ್ರೇಕ್ಷಕ ವರ್ಗವೂ ವಿಸ್ತಾರಗೊಂಡಿತು. ಇಲ್ಲಿ ಸ್ತ್ರೀ ಪಾತ್ರಗಳಿಗೆ ಕೊರತೆ ಇರಲಿಲ್ಲ. ಹಾಗಾಗಿ ನಾಟಕಗಳ ಆಯ್ಕೆಗೂ ಸಾಕಷ್ಟು ಅವಕಾಶಗಳಿದ್ದವು. ಹೊರಗಿನ ಕಲಾವಿದರನ್ನು ಆಯ್ದುಕೊಳ್ಳುವುದಕ್ಕೂ ಅಡ್ಡಿ ಇರಲಿಲ್ಲ.

ಒಂದು ನಾಟಕವನ್ನು ನಿರ್ದೇಶಿಸಬೇಕು ಅನ್ನುವ ಬೇಡಿಕೆ ಮುಂದಿಟ್ಟಾಗ ಅವರು ಪ್ರಯೋಗಕ್ಕೆ ಆಯ್ದುಕೊಂಡದ್ದು ಒಂದು ಫ್ರೆಂಚ್ ನಾಟಕ 'ಟ್ರಾಪ್ ಫಾರ್ ಎ ಲೋನ್ಲಿ ಮ್ಯಾನ್'ನ ಕನ್ನಡ ರೂಪಾಂತರವನ್ನು. ಕೆಲವು ಸಮಯದ ಹಿಂದೆ ಬಾಂಬೇ ವಿಮೆನ್ಸ್ ಕೌನ್ಸಿಲ್ ಎನ್ನುವ ಶ್ರೀಮಂತ ಮಹಿಳೆಯರ ತಂಡ ಈ ನಾಟಕವನ್ನು ತೇಜ್‌ಪಾಲ್ ಸಭಾಗೃಹದಲ್ಲಿ ಪ್ರದರ್ಶಿಸಿದ್ದನ್ನು ಸುವರ್ಣರು ನೋಡಿ ಮೆಚ್ಚಿದ್ದರು. ಇದು ಒಂದು ಸಸ್ಪೆನ್ಸ್ ನಾಟಕ. ಕನ್ನಡ ರಂಗಭೂಮಿಯಲ್ಲಿ ವಿಭಿನ್ನ ಶೈಲಿಯ ನಾಟಕಗಳು ಪ್ರದರ್ಶಿತವಾಗಬೇಕು, ಕನ್ನಡದ ಪ್ರೇಕ್ಷಕರಿಗೆ ಮುಂಬಯಿಯಲ್ಲಿ ವಿಭಿನ್ನ ಶೈಲಿಯ ಉತ್ತಮ ನಾಟಕಗಳು ಪರಿಚಯಗೊಳ್ಳಬೇಕೆಂಬ ಇಚ್ಛೆಯಂತೆ ಈ ನಾಟಕದ ಇಂಗ್ಲಿಷ್ ರೂಪಾಂತರದ

ಪ್ರತಿಯನ್ನು ಪಡೆದು ಸುವರ್ಣರೇ ಸ್ವತಃ ಕನ್ನಡಕ್ಕೆ ಅನುವಾದಿಸಿ 'ಚಕ್ರವ್ಯೂಹ' ಎಂದು ಶೀರ್ಷಿಕೆ ನೀಡಿದರು. ನಾಟಕ ಕೊನೆತನಕವೂ ಸಸ್ಪೆನ್ಸ್‌ನಲ್ಲೇ ಸಾಗಿ ಶಾಕಿಂಗ್ ಅಂತ್ಯವನ್ನು ಕಾಣುತ್ತದೆ. ಬಹಳ ಜನಮೆಚ್ಚುಗೆ ಪಡೆದ ನಾಟಕ ಹಲವು ಪ್ರದರ್ಶನಗಳನ್ನು ಕಂಡಿದೆ.

ಕಥಾ ನಾಯಕ ಮದುವೆಗೆಂದು ಹನಿಮೂನಿಗೆ ಬಂದಿರುತ್ತಾನೆ. ಮರುದಿವಸವೇ ಹೆಂಡತಿ ನಾಪತ್ತೆಯಾದ ಬಗ್ಗೆ ಪೊಲೀಸ್‌ಸ್ಟೇಷನ್‌ನಲ್ಲಿ ದೂರು ನೀಡುತ್ತಾನೆ. ಪೊಲೀಸರು ಪತ್ತೆ ಹಚ್ಚುವುದಕ್ಕೆ ಪ್ರಯತ್ನಿಸುತ್ತಾರೆ. ಮರು ದಿನ ಓರ್ವ ಸನ್ಯಾಸಿಯ ಜತೆ ಹೆಂಡತಿ ಪ್ರತ್ಯಕ್ಷಳಾಗುತ್ತಾಳೆ, ಗಂಡನಲ್ಲಿ ಕ್ಷಮೆ ಕೇಳುತ್ತಾಳೆ. ಆದರೆ ಅವನು ಆಕೆ ತನ್ನ ಪತ್ನಿ ಅಲ್ಲವೆಂದು ನಿರಾಕರಿಸುತ್ತಾನೆ. ಅವಳು ಅವನೇ ತನ್ನ ಗಂಡನೆಂದು ಪಟ್ಟು ಹಿಡಿಯುತ್ತಾಳೆ. ಪೊಲೀಸರೂ ದಂಗಾಗುತ್ತಾರೆ. ಅವರು ರಹಸ್ಯವನ್ನು ಭೇದಿಸಲು ಒಂದು ಜಾಲ ಹೂಡುತ್ತಾರೆ. ಅದರಿಂದಾಗಿ ಕೊನೆಗೆ ರಹಸ್ಯ ಬಯಲಾಗುತ್ತದೆ. ಅವಳು ಅವನ ಹೆಂಡತಿಯಲ್ಲ. ಅವನ ಹೆಂಡತಿ ಹಿಲ್‌ಸ್ಟೇಷನ್‌ನ ಗುಡ್ಡವೊಂದರ ಕೆಳಗೆ ಹೆಣವಾಗಿ ಬಿದ್ದಿದ್ದಾಳೆ. ಅವಳನ್ನು ಕೊಲೆ ಮಾಡಿದವನು ಅವಳ ಗಂಡನೇ ಎಂದು ಪೊಲೀಸರು ವಿವರಣೆ ನೀಡಿದಾಗ ಪ್ರೇಕ್ಷಕರಿಗೆ ಶಾಕ್. ಎಪ್ಪತ್ತರ ದಶಕದಲ್ಲಿ ಮುಂಬಯಿಯ ಕನ್ನಡ ರಂಗಭೂಮಿಯಲ್ಲಿ ಒಂದು ಹೊಸ ಶೈಲಿಯ ನಾಟಕವನ್ನು ಕಂಡು ಪ್ರೇಕ್ಷಕರು ಖುಷಿಪಟ್ಟರು. ಕನ್ನಡ ಕಲಾ ಕೇಂದ್ರದ ಕೀರ್ತಿಯೂ ಇದರಿಂದ ಹೆಚ್ಚಿತು. ನಾಟಕ ನಿರ್ದೇಶಕನಾಗಿ ಮತ್ತು ನಾಯಕ ನಟರಾಗಿ ಸುವರ್ಣರು ಥ್ರಿಲ್ ಅನುಭವಿಸಿದರು. ಹಿಲ್ ಸ್ಟೇಷನ್ ಬಂಗಲೆಯ ಸೆಟ್, ಪೀಠೋಪಕರಣಗಳೆಲ್ಲ ತುಂಬ ಚೆನ್ನಾಗಿದ್ದವು.

ಸಾಹಿತಿ ವ್ಯಾಸರಾಯ ಬಲ್ಲಾಳರು ಪ್ರಯೋಗವನ್ನು ಬಹಳವಾಗಿ ಮೆಚ್ಚಿಕೊಂಡು ತನ್ನ ಬಳಿ ಬಂದು 'ಯು ವೇರ್ ಇನ್ ಯುವರ್ ಎಲಿಮೆಂಟ್ಸ್' ಎಂದು ಶ್ಲಾಘಿಸಿದ್ದನ್ನು ಸುವರ್ಣರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

ತುಳು ರಂಗಭೂಮಿ ಹಾಗೂ ಕನ್ನಡ ಕಿರುತೆರೆಯಲ್ಲಿ ಚಮತ್ಕಾರವನ್ನೇ ಸೃಷ್ಟಿ ಮಾಡಿದ್ದು 'ಗುಡ್ಡದಭೂತ'. ತುಳು ರಂಗಭೂಮಿಗೆ 'ಗುಡ್ಡೆದ ಭೂತ' ನಾಟಕ ಬಹುದೊಡ್ಡ ಕಾಣ್ಕೆಯಾಗಿದೆ. ತುಳು ರಂಗಭೂಮಿಯ ದಿಕ್ಕನ್ನು ಬದಲಾಯಿಸಿದ, ಘನತೆ, ಗಾಂಭೀರ್ಯ, ಶ್ರೀಮಂತಿಕೆ ಹೆಚ್ಚಿಸುವುದಕ್ಕೆ ಹೊಸ ಮಾರ್ಗವೊಂದನ್ನು ತೋರಿಸಿಕೊಟ್ಟ ನಾಟಕ ಇದು ಎಂದು ಪರಿಗಣಿಸಬಹುದಾಗಿದೆ. ತನಗೆ ತಾನೇ ಮೌಲಿಕವಾದ ಈ ನಾಟಕ ತುಳು ರಂಗಭೂಮಿಯ ನೆಲೆ ಬೆಲೆ ಹೆಚ್ಚಿಸಿದೆ. ವಾಸ್ತವವಾದದ ಪ್ರತೀಕವಾದ ಸುವರ್ಣರು ಇಲ್ಲಿ ಬೆಳಕಿನ ಸಂಯೋಜನೆಯನ್ನು ಕಣ್ಸೆಳೆಯುವಂತೆ ನಿರ್ವಹಿಸಿದ್ದಾರೆ. ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಹಂತ ಹಂತದ ಬೆಳಕನ್ನು ಅವರಿಲ್ಲಿ ಹಾಯಿಸಿದ್ದಾರೆ. ಹಕ್ಕಿಗಳಿಂಚರ, ದನಕರುಗಳ ಕೂಗು, ದಿನಚರಿಗಳನ್ನೆಲ್ಲ ಯಥಾವತ್ತು ರಂಗಕ್ಕೇರಿಸಿ ನೈಜತೆಯನ್ನು ಹಿಡಿದಿಟ್ಟಿದ್ದಾರೆ. ತುಳುನಾಡಿನ ಸಂಸ್ಕೃತಿ, ಆಚಾರವಿಚಾರ, ಬದುಕನ್ನು, ಕಲೆಯನ್ನು ಕಟ್ಟಿಕೊಟ್ಟದ್ದರಿಂದ ತುಳುವರನ್ನಂತೂ ಬಹಳ ಸೆಳೆದಿತ್ತು. ಭೂತದರ್ಶನ, ಮಾದಿರ ಕುಣಿತಗಳೂ

ರಂಗಪ್ರವೇಶ ಮಾಡಿದ್ದವು. ವೈಚಾರಿಕ, ಚಿಕಿತ್ಸಕ ದೃಷ್ಟಿಕೋನದೊಂದಿಗೆ ಸತ್ಯ ಹಾಗೂ ಮಿಥ್ಯವನ್ನು ಮುಖಾಮುಖಿಯಾಗಿಸಿದ್ದಾರೆ. ಮನುಷ್ಯನೊಬ್ಬನ ಸ್ವಾರ್ಥ, ದುಷ್ಟತನ, ಅತಿ ಆಸೆ ಅನ್ನುವುದು ಇನ್ನೊಬ್ಬರ ನೆಮ್ಮದಿ ಕೆಡಿಸುವ ಸಂದರ್ಭ, ಅಂಧಶ್ರದ್ಧೆ ಹಾಗೂ ವಾಸ್ತವದ ನಡುವಣ ಸಂಘರ್ಷದಲ್ಲಿ ಸತ್ಯವೇ ಬಾಳುವುದನ್ನು ತೋರಿಸಿಕೊಡುತ್ತಾರೆ. ಭೂತದ ಹೆಸರಿನಲ್ಲಿ ಹೆದರಿಸುವ ಮಂದಿಗಳನ್ನೂ ಅವರಿಲ್ಲಿ ಬೆತ್ತಲಾಗಿಸಿದ್ದಾರೆ. ಕಥಾ ವಸ್ತುವಿನೊಂದಿಗೆ ರಂಗ ತಂತ್ರದ ಸೂಕ್ಷ್ಮ ಸಂಯೋಜನೆ ಜನಮಾನಸವನ್ನು ಹಿಡಿದಿಟ್ಟದೆ ಮತ್ತು ರಂಗಚರಿತ್ರೆಯಲ್ಲಿ ಹೊಸ ಮೈಲುಗಲ್ಲನ್ನು ಇದು ಸಂಸ್ಥಾಪಿಸಿದೆ.

## ಸೆನ್ಸಾರ್ ಬೋರ್ಡ್‌ನ ಸದಸ್ಯತ್ವ

'ಗುಡ್ಡೆದ ಭೂತ' ನಾಟಕ ರಚನೆಗೆ ಸುಸಂದರ್ಭ ಒದಗಿದ್ದರ ಹಿಂದೆ ಒಂದು ಸಣ್ಣ ಕಥೆ ಇದೆ. ಮುಂಬಯಿಯಲ್ಲಿ ಯಾವುದೇ ನಾಟಕವೊಂದು ರಂಗದಲ್ಲಿ ಪ್ರದರ್ಶನಗೊಳ್ಳುವ ಮೊದಲು ಸೆನ್ಸಾರ್ ಮಂಡಳಿಯ ಅನುಮೋದನೆ ಪಡೆಯುವುದು ನಿಯಮ. ಇಲ್ಲಿ ಪಾಸ್ ಆಗದಿದ್ದರೆ ಟಿಕೆಟ್ ಸೆಲ್ಲಿಂಗ್ ಅಥವಾ ಪರ್‌ಫಾರ್ಮೆನ್ಸ್ ಲೈಸೆನ್ಸ್ ಕೊಡುತ್ತಿರಲಿಲ್ಲ. ಇದು ಈಗಲೂ ಮುಂದುವರಿದುಕೊಂಡುಬಂದಿದೆ. ಆಗ ಸುವರ್ಣರು ಕನ್ನಡ ಹಾಗೂ ತುಳು ನಾಟಕಗಳ ಸೆನ್ಸಾರ್ ಬೋರ್ಡ್‌ನ ಸದಸ್ಯರಾಗಿ ನೇಮಕಗೊಂಡಿದ್ದರು. ನಾಟಕಗಳ ಸ್ಕ್ರಿಪ್ಟ್‌ನಲ್ಲಿ ಆಕ್ಷೇಪಾರ್ಹ ವಿಷಯಗಳಿದ್ದರೆ, ರಾಜಕೀಯ ಅಥವಾ ಸಾಮಾಜಿಕವಾಗಿ ಯಾರಿಗಾದರೂ ನಿಂದನೆ ಅಲ್ಲದೆ ಸಮಾಜದಲ್ಲಿ ಗೊಂದಲ ಸೃಷ್ಟಿಸುವಂಥ ವಿಷಯಗಳಿದ್ದರೆ ಸದಸ್ಯರು ಆ ನಾಟಕಗಳನ್ನು ತಿರಸ್ಕರಿಸಬೇಕಿತ್ತು. ನಾಟಕಗಳನ್ನು ಓದಿ ಸದಸ್ಯರು ನೀಡಿದ ಶಿಫಾರಸಿನ ಬಳಿಕ ಪ್ರಮಾಣ ಪತ್ರ ಕೊಡಬೇಕಿತ್ತು. ಹಾಗೆ ಬಂದ ನಾಟಕಗಳನ್ನು ಓದುತ್ತಿದ್ದ ಸುವರ್ಣರಿಗೆ ತುಳು ನಾಟಕಗಳು ಬಹಳ ನಿರಾಸೆ ಉಂಟು ಮಾಡಿದ್ದವು.

ಯುವ ಲೇಖಕರು ಹಿಂದಿ ಸಿನೆಮಾಗಳನ್ನು ನೋಡಿ ಆ ಕಥೆಗಳನ್ನು ಅಲ್ಲಲ್ಲಿ ಬದಲಾಯಿಸಿ ಬರೆದು ಕಳುಹಿಸುತ್ತಿದ್ದರು. ಅದರಲ್ಲಿ ರೇಪ್, ಫೈಟ್, ಅಗ್ಗದ ಹಾಸ್ಯ ಸಂಭಾಷಣೆಗಳೇ ತುಂಬಿರುತ್ತಿದ್ದವು. ಆದರೆ ಅವುಗಳನ್ನು ರಿಜೆಕ್ಟ್ ಮಾಡುವ ಹಾಗಿರಲಿಲ್ಲ. ಅದರೊಳಗಿದ್ದ ಆಕ್ಷೇಪಾರ್ಹ ಸಂಗತಿಗಳನ್ನಷ್ಟೇ ಪರಿಶೀಲಿಸಬೇಕಿತ್ತಷ್ಟೇ. ಆದರೆ ಹತಾಶೆಯನ್ನು ಸುವರ್ಣರು ಕನ್ನಡ ಕಲಾ ಕೇಂದ್ರದ ಮೀಟಿಂಗ್‌ನಲ್ಲಿ ನಾಟಕದ ವಿಷಯ ಮಾತನಾಡುವಾಗ ಈ ಬಗ್ಗೆ ಹೀಗೇ ಪ್ರಸ್ತಾಪಿಸಿದ್ದರು. ಆಗ 'ತಾವೇ ಒಂದು ತುಳು ನಾಟಕವನ್ನು ಬರೆಯಬಾರದೇಕೆ? ತಮ್ಮಿಂದ ಒಂದೊಳ್ಳೆ ತುಳು ನಾಟಕ ರಚನೆ ಕಂಡಿತಕ್ಕೂ ಸಾಧ್ಯ ಇದೆ. ಕನ್ನಡ ಕಲಾ ಕೇಂದ್ರದಿಂದ ಒಂದೊಳ್ಳೆ ತುಳು ನಾಟಕವನ್ನೂ ಪ್ರದರ್ಶಿಸೋಣ. ಈ ಬಗ್ಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಠರಾವು ಮಂಡಿಸಿ ಪಾಸು ಮಾಡಿಸೋಣ. ನೀವು ಒಂದೊಳ್ಳೆ ತುಳು ನಾಟಕ ಬರಿಯಲೇಬೇಕು' ಎನ್ನುವುದು ಕೆ.ಜೆ.ರಾಯರ ಒತ್ತಾಯ. ಪ್ರೀತಿಯ ಒತ್ತಾಸೆಗೆ ಮಣಿದ ಸುವರ್ಣರು ನಾಟಕ ರಚಿಸುವ ನಿರ್ಧಾರಕ್ಕೆ ಬಂದಿದ್ದರು. ಅದೊಮ್ಮೆ ಬೆಂಗಳೂರಿಗೆ ಬಂದಿದ್ದರು. ಎಂದಿನಂತೆ ಎನ್‌ಎಂಎಚ್ ಹೊಟೇಲಿನಲ್ಲಿ

ತಂಗಿದ್ದರು. ರಾತ್ರಿ ನಿದ್ರಿಸಿದ್ದ ಸುವರ್ಣರಿಗೆ ಥಕ್ಕನೆ ಎಚ್ಚರವಾಗುತ್ತದೆ. ಅದ್ಯಾವುದೋ ಆಕೃತಿಯೊಂದು ಹತ್ತಿರವೇ ಸುಳಿದಾಡಿದಂತೆ ಕಾಣಿಸುತ್ತದೆ. ಸುವರ್ಣರಿಗೆ ಭಯವಾಗಿಲ್ಲ. ಆದರೆ ಊರಲ್ಲಿ ಅಜ್ಜಿ ಹೇಳುತ್ತಿದ್ದ ಭೂತದ ಕಥೆಗಳು ನೆನಪಿಗೆ ಬಂದವು. ಸತ್ಯ ತಲಾಷೆಯ ಪತ್ತೇದಾರಿ ಮನಸ್ಸಿನ ಸುವರ್ಣರು ಮೆಲ್ಲನೆ ಎದ್ದು ಬಂದು ಕಿಟಕಿ ಬಳಿಗೆ ಬಂದರೆ ತಿಂಗಳ ಬೆಳಕಿನಲ್ಲಿ ಅಲ್ಲೇ ಇದ್ದ ದೊಡ್ಡ ಮರದ ನೆರಳು ಕಿಟಕಿಯಾಚೆ ಹಾದು ಬರುತ್ತಿರುವುದನ್ನು ಕಂಡುಹಿಡಿದುಬಿಟ್ಟರು. ಆಗಲೇ ಅವರಿಗೆ ಹೊಳೆಯಿತು, ಭೂತದ ಹೆಸರಿನಲ್ಲಿ ಮಾಡುವ ಮೋಸದ ಜಾಡಿನಲ್ಲಿ ಯಾಕೆ ನಾಟಕ ರಚಿಸಬಾರದು ಎಂದು. ಆ ಕ್ಷಣವೇ ಬರೆಯುವುದಕ್ಕೆ ತೊಡಗಿದರು. ಎರಡೇ ದಿನಗಳಲ್ಲಿ 'ಗುಡ್ಡೆದ ಭೂತ' ನಾಟಕ ಸಿದ್ಧಗೊಂಡಿತ್ತು. ಅನಂತರದ್ದು ಇತಿಹಾಸ. ಪರೋಕ್ಷವಾಗಿ ಸೆನ್ಸಾರ್ ಬೋರ್ಡ್ ಸದಸ್ಯತ್ವ ಸುವರ್ಣರಿಂದ ಒಂದೊಳ್ಳೆ ತುಳು ನಾಟಕವನ್ನು ಬರೆಯಿಸಿತು !

ಅನಂತರ ಸುವರ್ಣರು ಚಿತ್ತ ಹಾಯಿಸಿದ್ದು ಮರಾಠಿ ರಂಗ ಪ್ರಯೋಗವನ್ನು ಕನ್ನಡದ ರಂಗದಲ್ಲಿ ಪರಿಚಯಿಸುವ ಬಗ್ಗೆ. ಮರಾಠಿ ರಂಗಭೂಮಿಯಲ್ಲಿ ಉತ್ತಮ ವಸ್ತುಗಳನ್ನೊಳಗೊಂಡ ವಿಶಿಷ್ಟ ನಾಟಕಗಳು ಪ್ರಯೋಗವಾಗುತ್ತಿದ್ದ ಕಾಲ ಅದು. ಮರಾಠಿಗರು ಮರಾಠಿ ನಾಟಕ ಪ್ರಿಯರು. ಮುಂಬಯಿಯ ದಾದರ್‌ನಲ್ಲಿ ಮರಾಠಿ ನಾಟಕ ಪ್ರಯೋಗಕ್ಕೆಂದೇ ನಿರ್ಮಿತವಾದ ಸುಸಜ್ಜಿತ ಸಭಾಗೃಹಗಳಿವೆ. ಅಲ್ಲಿ ಪ್ರತಿ ದಿನ ಸಂಜೆ, ರಾತ್ರಿ ಮರಾಠಿ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಭಾನುವಾರ ಹಾಗೂ ರಜಾ ದಿನಗಳಲ್ಲಿ ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಹೀಗೆ ಮೂರು ಹೊತ್ತು ತುಂಬಿದ ಸಭಾಂಗಣದಲ್ಲಿ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಕೆಲವೊಮ್ಮೆ ರಜೆಯಿಲ್ಲದ ವಾರದ ಮಧ್ಯೆ ಒಂದು ದಿನ ಮಧ್ಯಾಹ್ನ ಶೋವನ್ನು ಮಹಿಳೆಯರಿಗಾಗಿಯೇ ಏರ್ಪಡಿಸುವುದೂ ಇತ್ತು. ಮನೆ ಕೆಲಸವನ್ನೆಲ್ಲ ಮುಗಿಸಿ ಹೆಂಗಸರು ತಮ್ಮ ಮಕ್ಕಳೊಂದಿಗೆ ಬಹಳ ಉಮೇದಿಯಿಂದ ಆಗಮಿಸುತ್ತಿದ್ದರು. ಪರಿಣಾಮವಾಗಿ ಅದೂ ಹೌಸ್ ಫುಲ್ ಆಗಿರುತ್ತಿತ್ತು ಕೂಡ. ಇದಕ್ಕೆ ಜನಾನ ಶೋ ಅನ್ನುವ ಹೆಸರನ್ನೂ ಕೊಟ್ಟಿದ್ದರು. ಕನ್ನಡಿಗರನ್ನೂ ಮರಾಠಿ ನಾಟಕಗಳು ಹಿಡಿದಿಡುತ್ತವೆ ಅನ್ನುವುದನ್ನು 'ಸತ್ಯಂ ವದ ಧರ್ಮಂ ಚರ' ನಾಟಕದ ಯಶಸ್ಸಿನ ಮೂಲಕ ಕಂಡುಕೊಂಡಿದ್ದ ಸುವರ್ಣರು ಇನ್ನೊಮ್ಮೆ ಮರಾಠಿ ಪ್ರಯೋಗಗಳನ್ನು ಕನ್ನಡಕ್ಕೆ ರೂಪಾಂತರಿಸಿ ಕನ್ನಡ ರಂಗಭೂಮಿಯನ್ನು ಮತ್ತಷ್ಟು ಕ್ರಿಯಾಶೀಲವಾಗಿಸಿದರೆ ಹೇಗೆ ಎಂದು ಯೋಚಿಸತೊಡಗಿದರು. ಕೇಂದ್ರದ ಕಾರ್ಯಕಾರಿಣಿಯ ಮುಂದಿಟ್ಟಾಗ ಅಲ್ಲಿಂದ ಸಮ್ಮತಿಯೂ ದೊರೆಯಿತು. ತಂಡದ ಸದಸ್ಯರೊಬ್ಬರಿಂದ ಜನಪ್ರಿಯ ಮರಾಠಿ ನಾಟಕ 'ಮಾಝಾ ಕುಣ್ಹಾ ಮಣೂ ಮೀ' ಯನ್ನು ಕನ್ನಡಕ್ಕೆ ರೂಪಾಂತರಿಸುವುದಕ್ಕೆ ಕೇಳಿಕೊಂಡರು. 'ಯಾರು ನನ್ನವರು' ಹೆಸರಿನೊಂದಿಗೆ ಈ ನಾಟಕವನ್ನು ರಂಗಕ್ಕೆ ಇಳಿಸುವ ಬಗ್ಗೆ ಯೋಚಿಸಿದರು ಸುವರ್ಣರು. ಮೂಲ ನಾಟಕಕ್ಕಿಂತ ತುಸು ಭಿನ್ನವಾಗಿ ನಾಟಕದ ಆಶಯಕ್ಕೆ ಕುಂದು ಬಾರದಂತೆ ನಿರ್ದೇಶಿಸಿದ್ದರು. ಮರಾಠಿಯಲ್ಲಿ ಅದು ಪಕ್ಕಾ ಮೆಲೋಡ್ರಾಮಾ. ಇಲ್ಲಿನ ತೀರಾ ಹಾಸ್ಯ ಪಾತ್ರವೊಂದಕ್ಕೆ ಗಂಭೀರತೆಯ ಟಚ್ ಕೊಟ್ಟು ಹೃದಯತಟ್ಟುವ ಹಾಗೆ ಮಾಡಿದ್ದರು ಸುವರ್ಣರು. ತಾವು ಮಾಡಿದ ಬದಲಾವಣೆಯನ್ನು ಮೂಲ ನಾಟಕಕಾರ ದತ್ತಾ ಕೇಶವ್

ಅವರಲ್ಲಿ ಪ್ರಸ್ತಾಪಿಸಿ ತಾವು ಒಮ್ಮೆ ಈ ನಾಟಕವನ್ನು ಅವಶ್ಯವಾಗಿ ನೋಡಬೇಕು ಎಂದು ವಿನಂತಿಸಿದರು. ಇಲ್ಲ ಎನ್ನದ ಅವರು ನೋಡಿ ಸ್ವತಃ ಮೆಚ್ಚಿಕೊಂಡರು. ಆದರೆ ಮರಾಠಿಗೆ ಅದು ಸರಿ. ಕನ್ನಡದಲ್ಲಿ ಈ ಬದಲಾವಣೆ ಸಮರ್ಪಕ ಆಗಿದೆ ಎಂದು ಶ್ಲಾಘಿಸಿದರು. ಈ ಪ್ರಯತ್ನ ಕನ್ನಡ ರಂಗಾಸಕ್ತರನ್ನು ಖುಷಿಗೊಳಿಸಿತು. ಇಲ್ಲಿ ಸುವರ್ಣರು ಹಾಗೂ ಕೆ.ಜಿ. ರಾವ್ ಇಬ್ಬರೂ ನಟಿಸಿದ್ದರು. 'ಸತ್ಯಂ ವದ ಧರ್ಮಂ ಚರ'ದಲ್ಲಿ ಕೆ.ಜಿ.ರಾಯರ ನಿರ್ದೇಶನದಲ್ಲಿ ಸುವರ್ಣರು ಅಭಿನಯಿಸಿದ್ದರೆ ಇಲ್ಲಿ ಸುವರ್ಣರ ನಿರ್ದೇಶನದಲ್ಲಿ ರಾಯರು ಅಭಿನಯಿಸಿದರು. ಪ್ರಧಾನ ಸ್ತ್ರೀ ಭೂಮಿಕೆಯಲ್ಲಿ ನಟಿಸಿದಾಕೆ 'ಸತ್ಯಂ ವದ 'ದ ನಾಯಕಿ ನಟಿ, ಕನ್ನಡ ಹಾಗೂ ಮರಾಠಿ ಬಲ್ಲ ಲತಾ ಜುಕರ್. ಬಹಳ ಚೆನ್ನಾಗಿ ಪಾತ್ರ ನಿರ್ವಹಿಸಿದ್ದರು. ನಾಟಕ ಯಶಸ್ವಿಯಾಗಿ ಬೇರೆ ಬೇರೆ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಹತ್ತಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿತು. ಕನ್ನಡ ಪ್ರೇಕ್ಷಕರನ್ನು ಕನ್ನಡ ರಂಗಭೂಮಿಯತ್ತ ಸೆಳೆಯುವಲ್ಲಿ ಸುವರ್ಣರ ಪ್ರಯತ್ನ ಫಲಕಾರಿ ಆಯಿತು ಎನ್ನುವ ಧನ್ಯತೆಯನ್ನು ಸುವರ್ಣರು ಅನುಭವಿಸಿದ್ದಾರೆ.

ವಿಜ್ಞಾನಿ ಸಾಹಿತಿ ಡಾ.ವ್ಯಾಸರಾವ್ ನಿಂಜೂರರು ನಾಟಕಕಾರರೂ ಹೌದು. ಅವರು ರಚಿಸಿದ 'ಡೊಂಕು ಬಾಲದ ನಾಯಕರು' ನಾಟಕವನ್ನು ಪ್ರದರ್ಶನಕ್ಕೆ ಸಜ್ಜುಗೊಳಿಸಿದರು. ಸುವರ್ಣರು ಹೊಸತನದ ಶೋಧಕ. ಈ ನಾಟಕವನ್ನು ಮಾಮೂಲಿ ಚೌಕಟ್ಟಿನೊಳಗೆ ಪ್ರದರ್ಶಿಸದೆ ಹೊಸ ಬಗೆಯಲ್ಲಿ ಕಟ್ಟಿಕೊಡಬೇಕು ಎಂದು ಯೋಚಿಸಿದ ನಿಂಜೂರರು ಈ ನಾಟಕವನ್ನು ಯಕ್ಷಗಾನದ ಚೌಕಟ್ಟಿನಲ್ಲಿ ರಚಿಸಿದ್ದರು. ಪರಿಣಾಮವಾಗಿ ಹೊಸ ಬಗೆಯ ರಂಗಕೃತಿಯಾಗಿ ಗಮನ ಸೆಳೆಯಿತು. ಸಾಂಕೇತಿಕ ರಂಗಭೂಮಿಗೆ ಇನ್ನೊಂದು ಕೊಡುಗೆಯಾಯಿತು. ಪರದೆಯ ಮೇಲೆ ಡೊಂಕುಬಾಲದ ನಾಯಿಯ ಚಿತ್ರವೂ ಮನಸ್ಸು ಸೆಳೆಯುವಂತಿತ್ತು. ಡಾ. ನಿಂಜೂರರಿಂದಲೇ ಪ್ರಸಂಗ, ಹಾಡು ಬರೆಯಿಸಿದ್ದರು. ಈ ನಾಟಕಕ್ಕಾಗಿಯೇ ಕಡತೋಕ ಮಂಜುನಾಥ ಭಾಗವತರಿಂದ ಯಕ್ಷಗಾನ ಭಾಗವತಿಕೆ ಕಲಿತ ಸುವರ್ಣರು ಈ ನಾಟಕದಲ್ಲಿ ಭಾಗವತನ ಪಾತ್ರ ನಿರ್ವಹಿಸಿದರು. ಇದರಲ್ಲಿ ಸಿನಿಮಾ ನಟರಾಗಿ ಹೆಸರಾದ ಸದಾಶಿವ ಸಾಲ್ಯಾನರೂ ಅಭಿನಯಿಸಿದ್ದರು, ನಿಂಜೂರರೂ ಪುಟ್ಟದೊಂದು ಪಾತ್ರ ನಿರ್ವಹಿಸಿದ್ದರು.

ಸುವರ್ಣರು ಹೇಳಿದ ಕಥೆಯೊಂದಕ್ಕೆ ಡಾ.ನಿಂಜೂರರು 'ಸಂಚು' ನಾಟಕದ ರೂಪಕೊಟ್ಟಿದ್ದರು. ಸುವರ್ಣರು ಈ ನಾಟಕವನ್ನು ಬಹಳ ಸೊಗಸಾಗಿ ನಿರ್ದೇಶಿಸಿ ಯಶಸ್ವಿಯಾದರು.

ಮೇರಿ ಕೊರೊಲಿ ಅವರ ಕಾದಂಬರಿಯೊಂದನ್ನು ಓದಿದ್ದ ಸುವರ್ಣರಿಗೆ ಆ ಕಾದಂಬರಿಯ ಆರಂಭದಲ್ಲಿ ಬರೆಯಲಾಗಿದ್ದ 'ನಾನು ಮಲಗಿದ್ದೆ. ನಾನು ಸ್ವರ್ಗದಲ್ಲಿದ್ದೇನೆ ಎಂದು ಕನಸು ಕಂಡೆ. ಎದ್ದು ನೋಡಿದರೆ ನಾನು ನರಕದಲ್ಲಿದ್ದೇನೆ' ಅನ್ನುವ ಸಾಲುಗಳು ಬಹಳವಾಗಿ ಕಾಡಿದ್ದವು. ಈ ಸಾಲುಗಳ ಆಧಾರದಲ್ಲೇ ಒಂದೊಳ್ಳೆ ನಾಟಕವನ್ನು ರಚಿಸಬೇಕು ಅನ್ನುವುದು ಸುವರ್ಣರ ಇರಾದೆಯಾಗಿತ್ತು. ಆದರೆ ಚಲನಚಿತ್ರದ ಕಾರ್ಯಬಾಹುಳ್ಯದಿಂದ

ಈ ಕೆಲಸ ಪೂರ್ಣ ಮಾಡುವುದಕ್ಕೆ ಆಗದೇ ಇದ್ದಾಗ ಡಾ. ನಿಂಜೂರರಲ್ಲಿ ಈ ಬಗ್ಗೆ ವಿವರಿಸಿ ನಾಟಕ ರಚಿಸುವಂತೆ ಮನವಿ ಮಾಡಿಕೊಂಡರು. ಪತ್ತೇದಾರಿ ನಾಟಕವಾಗಿ ಇದನ್ನು ಸಿದ್ಧಗೊಳಿಸಿದರು ನಿಂಜೂರರು. ಐಷಾರಾಮಿ ವ್ಯಕ್ತಿಯೊಬ್ಬ ಕಾಯಿಲೆ ಬಿದ್ದಾಗ ಮಗ, ಮಗಳು ಹಾಗೂ ಪತ್ನಿಯ ಅಡ್ಡ ಹಾದಿಯ ನಡವಳಿಕೆಗಳಿಂದ ಕುಸಿದು ಹೋಗಿ ನರಕ ಅನುಭವವಿಸುವ ಸನ್ನಿವೇಶಗಳನ್ನು ಮನಮುಟ್ಟಿಸಿದ್ದಾರೆ, ಮನಸ್ಸು ಒದ್ದೆಯಾಗುವಂತೆ ಹೆಣೆದಿದ್ದಾರೆ. ನಾಯಕ ಕೊನೆತನಕವೂ ವ್ಹೀಲ್ ಚೆಯರ್‌ನಲ್ಲಿ ಕುಳಿತೇ ಅಭಿನಯಿಸುವ ತಂತ್ರವನ್ನು ಆಯ್ದುಕೊಂಡಿದ್ದಾರೆ. ನಿರ್ದೇಶನದಲ್ಲಿನ ತಮ್ಮ ಕೌಶಲ್ಯವನ್ನು ಇಲ್ಲಿ ಅನಾವರಣ ಮಾಡಿದ್ದಾರೆ ಸುವರ್ಣರು.

'ಕೆಲವು ನಾಟಕಕಾರರಿಗೆ ರಂಗಪ್ರಯೋಗದ ಒಳಮರ್ಮ ಅಷ್ಟಾಗಿ ತಿಳಿಯುವುದಿಲ್ಲ. ಕೃತಿಯ ಆಶಯದೊಂದಿಗೆ ಅದರ ಸಾಧ್ಯತೆಗಳನ್ನೆಲ್ಲ ಬಯಲುಗೊಳಿಸಿ ಸಾರ್ಥಕ ರಂಗಪ್ರಯೋಗವಾಗಿಸುವ ಪರಿಕಲ್ಪನೆ ನಿರ್ದೇಶಕನಿಗಿರಬೇಕು. ಸುವರ್ಣರಿಗೆ ಸರಿಸಾಟಿಯಾದ ನಿರ್ದೇಶಕರು ಕಡಿಮೆ. ಅನವಶ್ಯಕ ಮಾತುಗಳನ್ನು ಮೊಟಕುಗೊಳಿಸಿ ಅದರ ಬದಲು ಆಂಗಿಕ, ಮೌಖಿಕಾಭಿನಯ, ಕಣ್ಣುಗಳಲ್ಲಿ ತುಂಬು ಭಾಷೆ, ಸ್ಪಷ್ಟ ಹಾಗೂ ಖಚಿತ ಚಲನೆಗಳಿಗೆ ಸುವರ್ಣರು ಮಹತ್ವ ನೀಡುತ್ತಾರೆ. 'ನಾನು ಬರೆದ ನಾಟಕಗಳು ಸುವರ್ಣರ ನಿರ್ದೇಶನದಲ್ಲಿ ಪ್ರಯೋಗಿಸಲ್ಪಟ್ಟಾಗ ಈ ನಾಟಕಗಳು ನಾನೇ ಬರೆದುದೇ ಎನ್ನುವಷ್ಟು ಅಚ್ಚರಿ ನನಗಾಗಿದ್ದಿದೆ' (ಪು.8 ಸದಾನಂದ ಸುವರ್ಣ ಬದುಕು ಮತ್ತ ಸಾಧನೆ, ಕಸಾಪ ಮಹಾರಾಷ್ಟ್ರ ಘಟಕ ಮುಂಬಯಿ) ಎಂದು ಖುಷಿ ವ್ಯಕ್ತಪಡಿಸುತ್ತಾರೆ ಡಾ. ವ್ಯಾಸರಾವ್ ನಿಂಜೂರರು.

ಆ ಬಳಿಕದ ಇನ್ನೊಂದು ಕೊಡುಗೆ ಮರಾಠಿ ರಂಗಭೂಮಿಯಿಂದಲೇ ಕನ್ನಡಕ್ಕೆ ತಂದದ್ದು ಮಧುಕರ್ ತೋರಡ್‌ಮಲ್ ಅವರ ಬೊವ್ರಾ ನಾಟಕ. ಕನ್ನಡಕ್ಕೆ ರೂಪಾಂತರಿಸಿ 'ಸುಳಿ' ಹೆಸರಿನಲ್ಲಿ ಪ್ರದರ್ಶಿಸಿದಾಗ ಜನ ಕೊಂಡಾಡಿದರು. ಮಂಗಳೂರಿನ ನಟ ಕೆ.ಬಿ.ವಾಮನ್ ಅವರು ಮುಂಬಯಿಗೆ ಬಂದು ಮಿಲ್ ನೌಕರರು ಆಯೋಜಿಸುವ ಮರಾಠಿ ನಾಟಕದಲ್ಲಿ ಪಾತ್ರ ನಿರ್ವಹಿಸಿ ಪ್ರಶಸ್ತಿ ಪಡೆದಿದ್ದವರು. ಅವರು ಸುವರ್ಣರ ನಾಟಕದಲ್ಲಿ ಅಭಿನಯಿಸುವ ಆಸಕ್ತಿ ತೋರಿಸಿದಾಗ ಸುವರ್ಣರು ಇಲ್ಲ ಎನ್ನದೆ ನಾಯಕ ನಟನನ್ನಾಗಿಸಿದರು. ಸತ್ಯಂ ವದದಲ್ಲಿ ಸುವರ್ಣರೊಂದಿಗೆ ಮನೋಜ್ಞ ಅಭಿನಯದಿಂದ ಅಚ್ಚುಮೆಚ್ಚಾಗಿದ್ದ ದೇವದಾಸ್ ಮೇಗರವಳ್ಳಿ ಮತ್ತು ಮೈಸೂರು ಅಸೋಸಿಯೇಶನ್‌ನ ನಾಟಕಗಳಲ್ಲಿ ಅಭಿನಯಿಸಿ ಹೆಸರು ಮಾಡಿದ್ದ ಪ್ರತಿಭಾವಂತ ಎಂ.ಎನ್. ರಾಮಚಂದ್ರ ರಾವ್ ಅವರು ಇತರ ಎರಡು ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿ ನಾಟಕದ ಯಶಸ್ಸಿಗೆ ಕಾರಣರಾಗಿದ್ದರು. ಈ ಪ್ರದರ್ಶನವೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆಯನ್ನು ಗಳಿಸಿತು. ಐದಾರು ಪ್ರದರ್ಶನಗಳನ್ನು ಈ ನಾಟಕ ಕಂಡಿದೆ ಕೂಡ. ಇದೇ ಸಂದರ್ಭದಲ್ಲಿ ಸುವರ್ಣರಿಗೆ ಸಿನೆಮಾದ ಚಿತ್ರೀಕರಣಕ್ಕಾಗಿ ಬೆಂಗಳೂರಿಗೆ ಹೋಗಬೇಕಾಯಿತು. ಕೆಲವೇ ತಿಂಗಳಲ್ಲಿ ಆ ಕೆಲಸವನ್ನು ಮುಗಿಸಿ ವಾಪಾಸಾದರು ಸುವರ್ಣರು. ರಂಗಭೂಮಿಯನ್ನು ಬಿಟ್ಟಿರಲಾರದ ಸುವರ್ಣರು ಮತ್ತೆ ರಂಗಕ್ರಿಯೆಯಲ್ಲಿ ತೊಡಗಿಕೊಂಡರು.

ಸುವರ್ಣರು ಮರಾಠಿಯಲ್ಲಿ ಜನಪ್ರಿಯತೆ ಗಳಿಸಿದ ಮತ್ತೊಂದು ನಾಟಕ 'ಘಾಟ್ ಹೈ ಮಜ್ಬೂರಿ'ಯನ್ನು ಕನ್ನಡಕ್ಕೆ ತರುವುದಕ್ಕೆ ಮನಸ್ಸು ಮಾಡಿದರು. 'ಸೂತ್ರ' ಹೆಸರಿನಲ್ಲಿ ಪ್ರಯೋಗಿಸಿದರು. ಸುಳಿ ನಾಟಕದ ನಾಯಕ ನಟ ಕೆ.ಬಿ.ವಾಮನ್ ಜತೆ ಸುವರ್ಣರ ಸಿನಿಮಾದಲ್ಲಿ ಪಾತ್ರ ನಿರ್ವಹಿಸಿದ್ದ ಸದಾಶಿವ ಸಾಲ್ಯಾನ್, ಎಂ.ಎನ್.ರಾಮಚಂದ್ರ ರಾವ್ ಮತ್ತು ವಿಠಲ ರಾವ್ ದಂಪತಿ, ಅನುಭವಿ ನಟ-ನಟಿಯರನ್ನು ಸೇರಿಸಿ ಪರಿಣಾಮಕಾರಿಯಾಗಿ ಈ ನಾಟಕವನ್ನು ಕನ್ನಡದ ರಂಗಕ್ಕೆ ತಂದರು ಸುವರ್ಣರು.

ಈ ನಡುವೆ ಮತ್ತೆ ಚಲನಚಿತ್ರ ರಂಗದಲ್ಲಿ ಬ್ಯುಸಿಯಾದರು ಸುವರ್ಣರು. ತಮ್ಮದೇ ನಿರ್ದೇಶನ ಹಾಗೂ ನಿರ್ಮಾಣದ 'ಕುಬಿ ಮತ್ತು ಇಯಾಲ' ಸಿನೆಮಾದ ಚಿತ್ರೀಕರಣ ಸಂದರ್ಭ ಕೊಪ್ಪದ ಬಸರೀಕಟ್ಟೆಗೆ ತೆರಳಬೇಕಾಯಿತು ಅನಿವಾರ್ಯವಾಗಿ. ಆರು ತಿಂಗಳ ಕಾಲ ಸಿನೆಮಾ ಕೆಲಸ ಮುಗಿಸಿದ ಬಳಿಕ ರಂಗಭೂಮಿಗೆ ವಾಪಾಸಾದರು ಸುವರ್ಣರು.

'ಕನ್ನಡ ಕಲಾ ಕೇಂದ್ರ'ದ ಸಮಿತಿ ಸದಸ್ಯರು ಸುವರ್ಣರು ಇನ್ನೊಂದು ಸ್ವತಂತ್ರ ಕೃತಿ ರಚಿಸಬೇಕು ಎನ್ನುವ ಇರಾದೆಯನ್ನು ವ್ಯಕ್ತಪಡಿಸಿ ಒತ್ತಾಯಿಸಿದರು. ನಾಟಕ ಕೃತಿ ರಚನೆ ಪ್ರಕ್ರಿಯೆ ಕೆಲ ಕಾಲದಿಂದ ನಡೆದೇ ಇಲ್ಲದ್ದರಿಂದ ಸುವರ್ಣರು ಮೊದಲಿನ ಹಾಗೆ ಕೆಲವೇ ದಿನಗಳಲ್ಲಿ ಬರೆಯುವುದಕ್ಕೆ ಸಾಧ್ಯ ಆಗದಿದ್ದರೂ 'ಆಕಸ್ಮಿಕ' ಅನ್ನುವ ಸ್ವತಂತ್ರ ನಾಟಕವನ್ನು ಕನ್ನಡ ಕಲಾ ಕೇಂದ್ರದ ಹಿಂದಿನ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ ಕಲಾವಿದರನ್ನು ಗಮನದಲ್ಲಿಟ್ಟುಕೊಂಡು ಬರೆದು ಮುಗಿಸಿದರು.

ಇದು ಸಸ್ಪೆನ್ಸ್ ಕಥಾ ಹಂದರ ಇರುವ ನಾಟಕ. ಆತ್ಮಾವಲೋಕನ, ಆತ್ಮಸಾತ್, ಆತ್ಮಸಾಕ್ಷಿಯ ಚೌಕಟ್ಟಿನಲ್ಲಿ ಪ್ರಯೋಗಕ್ಕೆ ತೊಡಗಿದ್ದಾರೆ ಇಲ್ಲಿ. ವಕೀಲನ ಸೋದರ ಹುಡುಗಿಯೊಬ್ಬಳನ್ನು ಪ್ರೇಮಿಸುತ್ತಾನೆ. ಆಕೆಯ ತಂದೆ ವಿಲನ್. ಬ್ಲ್ಯಾಕ್‌ಮೇಲ್ ಮಾಡಿ ಹಿಂಸಿಸುವ ಪ್ರವೃತ್ತಿ ಸಹಿಸಲಾಗದೆ ಆತನ ಕತ್ತು ಹಿಸುಕಿ ಸಾಯಿಸಿಬಿಡುತ್ತಾನೆ. ವಕೀಲನೂ ಶಾಮೀಲಾಗಿ ಕೇಸು ಮುಚ್ಚಿ ಹಾಕಿ ಕಾನೂನಿನ ಹಾದಿ ತಪ್ಪಿಸುವ ತಂತ್ರ ರೂಪಿಸುತ್ತಾರೆ. ಆದರೆ ಇಲ್ಲಿ ಆತ್ಮಸಾಕ್ಷಿ ಆತನನ್ನು ಶರಣಾಗಿಸುತ್ತದೆ, ತಪ್ಪು ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತದೆ. ಅಪರಾಧ, ಅನ್ಯಾಯಗಳನ್ನು ಮಾಡಬಾರದು, ಮಾಡಿದರೆ ಶಿಕ್ಷೆ ಅನುಭವಿಸಲೇಬೇಕು ಅನ್ನುವ ಸಂದೇಶವನ್ನು ಹೊತ್ತ ಈ ನಾಟಕ ಅನೇಕ ತಂತ್ರಗಾರಿಕೆಯೊಂದಿಗೆ ರಂಗಾಸಕ್ತರ ಮನಸ್ಸು ಗೆದ್ದಿದೆ.

ಎಂ.ಎನ್.ರಾಮಚಂದ್ರ ರಾವ್, ದೇವದಾಸ ಮೇಗರವಳ್ಳಿ, ಲತಾ ಜುಕರ್, 'ಗುಡ್ಡೆ ಭೂತ'ದ ರವಿ ಕಾಂಚನ್, 'ಅಣ್ಣನ ಮದುವೆ'ಯ ರಾಜು ಸಾಲ್ಯಾನ್ ಜತೆ ಸುವರ್ಣರೂ ಮುಖ್ಯ ಪಾತ್ರವೊಂದನ್ನು ನಿರ್ವಹಿಸಿದರು. ಎಲ್ಲರ ಅಭಿನಯವೂ ಎಂದಿನಂತೆ ಮನ ಸೆಳೆಯಿತು. ಈ ನಾಟಕವೂ ಯಶಸ್ಸಿನ ಹಾದಿಯನ್ನೇ ಹಿಡಿಯಿತು.

'ಆಕಸ್ಮಿಕ' ನಾಟಕ ಪ್ರಯೋಗಿಸುವುದಕ್ಕೂ ಮೊದಲು ಸುವರ್ಣರು ಲಂಕೇಶರು ಬರೆದ ಗ್ರೀಕ್ ನಾಟಕ 'ದೊರೆ ಈಡಿಪಸ್' ಅನ್ನು ನಿರ್ದೇಶಿಸುವುದಕ್ಕೆ ಯೋಜನೆ ಹಾಕಿಕೊಂಡಿದ್ದರು. ರಿಹರ್ಸಲ್ ಆರಂಭಿಸುವಾಗ ಒಂದೆರಡು ಪಾತ್ರಗಳ ಆಯ್ಕೆ ಸರಿ ಹೊಂದುತ್ತಿಲ್ಲವೆಂದು, ಮುಂದೆ ಬೇರೆ ಕಲಾವಿದರನ್ನು ಸೇರಿಸಿ ಪ್ರಯೋಗಿಸುವುದೇ ಒಳ್ಳೆಯದೆಂದು ಅದನ್ನು ಅರ್ಧಕ್ಕೇ ನಿಲ್ಲಿಸಿದ್ದರು. ಇದೀಗ ಮತ್ತೆ ಆ ನಾಟಕದ ಪ್ರಯೋಗಕ್ಕೆ ಮನಸ್ಸು ಮಾಡಿದರು ಸುವರ್ಣರು. ಅದನ್ನು ನಾಟಕೋತ್ಸವದಲ್ಲಿ ಪ್ರಯೋಗಿಸುವ ಇಂಗಿತ ಅವರದಾಗಿತ್ತು. ರಿಹರ್ಸಲ್ ಆರಂಭಿಸಿದರು, ಪಾತ್ರಗಳನ್ನೂ ಬದಲಾಯಿಸಿದರು. ಗ್ರೀಕ್ ನಾಟಕಕ್ಕೆ ಸರಿ ಹೊಂದುವ ಸ್ಟೇಜ್ ಸೆಟ್ಟಿಂಗ್, ಸರಿಯಾದ ಆರ್ಕಿಟೆಕ್ಚರ್, ಪಾತ್ರಗಳ ವೇಷಭೂಷಣಗಳು, ಹಿನ್ನೆಲೆ ಸಂಗೀತಕ್ಕಾಗಿ ಗ್ರೀಕ್‌ನ ಟ್ಯೂನ್ ಮುಂತಾದವುಗಳ ಬಗ್ಗೆ ಸ್ಪಷ್ಟವಾಗಿ ತಿಳಿಯಬೇಕಾದದ್ದು ಅಗತ್ಯವೆಂದು ನಾಟ್ಯ ಅಕಾಡೆಮಿಯ ಲೈಬ್ರರಿ, ಟಾಟಾ ಫಂಡಮೆಂಟಲ್ ರಿಸರ್ಚ್‌ನ ಲೈಬ್ರರಿಗಳನ್ನೆಲ್ಲ ಹುಡುಕಾಡಿ ಸಿಕ್ಕ ಪುಸ್ತಕಗಳಿಂದ ಮಾಹಿತಿ ಸಂಗ್ರಹಿಸಿದರು. ಐತಿಹಾಸಿಕ ನಾಟಕಗಳನ್ನು ಅಥವಾ ಬೇರೆ ದೇಶದ ಸಂಸ್ಕೃತಿಯನ್ನು ಬಿಂಬಿಸುವ ನಾಟಕಗಳನ್ನು ಕೈಗೆತ್ತಿಕೊಂಡಾಗ ಈ ರೀತಿಯ ಸಂಶೋಧನೆ ಅತಿ ಅಗತ್ಯ. ದೊಡ್ಡ ಕಂಬಗಳು, ಅದಕ್ಕೆ ಬೇಕಾದ ಆರ್ಕಿಟೆಕ್ಚರ್, ಎತ್ತರದ ಸ್ಟೇಜ್, ಹಿಂದೆ ದೊಡ್ಡ ಸೈಕ್ಲೋರಾಮದಲ್ಲಿ ಸ್ಟೇಜ್ ಇಫೆಕ್ಟ್ ಇದೆಲ್ಲ ವಾತಾವರಣ ಸೃಷ್ಟಿಗೆ ಅಗತ್ಯ. ಈ ನಾಟಕದ ಪ್ರಸ್ತುತಿಯಲ್ಲಿ ಬಹಳ ಶ್ರಮಿಸಿದ್ದಾರೆ ಸುವರ್ಣರು. ದುಬಾರಿ ವೆಚ್ಚದ ಪ್ರೊಡಕ್ಷನ್ ಇದಾಗಿತ್ತು.

ಮುಖ್ಯ ಭೂಮಿಕೆಯಲ್ಲಿ ಆಗಿನ ಮುಂಬಯಿ ರಂಗಭೂಮಿಯ ಇಬ್ಬರು ಪ್ರಮುಖ ಕಲಾವಿದರಾದ ಎಂ.ಎನ್.ರಾಮಚಂದ್ರರಾವ್ ಮತ್ತು ಕುಂದಾರೇಗೆ ನಟಿಸಿದ್ದರು. 12 ಜನರ ಮೇಳವನ್ನು ಪ್ರತ್ಯೇಕ ಒಂದು ತಿಂಗಳು ರಿಹರ್ಸಲ್ ನಡೆಸಿದ್ದರು. ಗ್ರೀಕ್ ಸಿಂಫನಿಯ ಒಂದು ಟ್ಯೂನ್ ಬಳಸಿ ಕೆಲ ಮಾತುಗಳನ್ನು ಹಾಡಾಗಿಸಿ ಪರಿವರ್ತಿಸಿದ್ದರು. ಪ್ರೊಡಕ್ಷನ್ ಹಾಗೂ ನಿರ್ವಹಣೆ ಸುವರ್ಣರಿಗೆ ಖುಷಿ ಕೊಟ್ಟಿದೆ. ಪ್ರತಿಕ್ರಿಯೆಯೂ ಸಾರ್ಥಕತೆಯನ್ನು ತಂದುಕೊಟ್ಟಿದೆ. ಕೆಲ ಮಾರ್ಪಾಟುಗಳೊಂದಿಗೆ ಇನ್ನು ಕೆಲವು ಪ್ರದರ್ಶನ ಮಾಡುವ ಯೋಚನೆಯಲ್ಲಿದ್ದಾಗಲೇ ಕಾಸರವಳ್ಳಿ ಅವರ 'ಕ್ರೌರ್ಯ' ಸಿನಿಮಾ ನಿರ್ಮಾಣಕ್ಕೆ ಸಹಕರಿಸುವ ನಿಟ್ಟಿನಲ್ಲಿ ಬೆಂಗಳೂರಿಗೆ ತೆರಳಬೇಕಾಗಿ ಬಂತು. ಮತ್ತೆ ಪ್ರದರ್ಶಿಸುವುದಕ್ಕಾಗಲಿಲ್ಲ. ಆದರೆ ಸುವರ್ಣರು ಇದರ ಬಗ್ಗೆ 'ಇದು ನನ್ನ ಏಂಬೀಷಿಯಸ್ ಪ್ರೊಡಕ್ಷನ್' ಎಂದು ತೃಪ್ತಿಯನ್ನು ಹಂಚಿಕೊಳ್ಳುತ್ತಾರೆ.

'ಸುವರ್ಣರು ಪ್ರತಿ ವರ್ಷ ಒಂದಲ್ಲ ಒಂದು ಒಳ್ಳೆಯ ನಾಟಕ ಕೊಡುತ್ತಾ ಬಂದಿದ್ದಾರೆ. 'ದೊರೆ ಈಡಿಪಸ್' ನಾಟಕವಂತೂ ಅವರ ಭೀಮ ಸಾಹಸಕ್ಕೆ ಒಂದು ಒಳ್ಳೆಯ ಉದಾಹರಣೆ' (ಪು.199 ಅಕ್ಷಯ, 1991) ಎಂಬುದು ಪತ್ರಕರ್ತ ಈಶ್ವರ ಅಲೆವೂರು ಅವರ ಭೀಮವಾಣಿಯಾಗಿದೆ.

## ಹೆಜ್ಜೆ 5 : ಇತರ ತಂಡಗಳಿಗೆ ನಿರ್ದೇಶಕರಾಗಿ

ಸದಾನಂದ ಸುವರ್ಣರು 'ಉದಯ ಕಲಾ ನಿಕೇತನ' ಇರಲಿ 'ಕನ್ನಡ ಕಲಾ ಕೇಂದ್ರ' ಇರಲಿ ಈ ಎರಡು ಸಂಸ್ಥೆಗಳಿಗೆ ನಿರ್ದೇಶಿಸುತ್ತಲೇ ಇದ್ದವರು. ಆಗಲೂ ಇತರ ಬೇರೆ ಬೇರೆ ಹವ್ಯಾಸಿ ರಂಗ ತಂಡಗಳು ಸುವರ್ಣರ ನಿರ್ದೇಶನವನ್ನು ಬಯಸಿದಾಗ ಇಲ್ಲ ಅನ್ನಲಿಲ್ಲ. ಅರುವತ್ತರ ದಶಕದಲ್ಲಿ ಗ್ರಾಂಟ್ ಮೆಡಿಕಲ್ ಸ್ಟೂಡೆಂಟ್ಸ್‌ನ ಕನ್ನಡ ಸಂಘಕ್ಕಾಗಿ 'ಕದಡಿದ ನೀರು' ನಾಟಕವನ್ನು ದಿಗ್ದರ್ಶಿಸಿದ್ದರು. ಜೆ.ಜೆ.ಹಾಸ್ಪೆಲ್‌ನ ಡಾಕ್ಟರರು ಹಾಗೂ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಅದರಲ್ಲಿ ಪಾತ್ರ ನಿರ್ವಹಿಸಿದ್ದರು. ಅವರಲ್ಲಿ ಕೆಲವರು ಪ್ರತಿಭಾವಂತರಿದ್ದುದರಿಂದ ಬಹಳ ಕಡಿಮೆ ಅವಧಿಯಲ್ಲಿ ಅವರನ್ನು ತರಬೇತಿಗೊಳಿಸಿ ಪ್ರದರ್ಶಿಸಿದ್ದರು. ಅವರಲ್ಲಿ ಕೆಲವರು ಹೆಸರಾಂತ ಡಾಕ್ಟರರಾದರು. ನಾಟಕದ ನಾಯಕಿ ನಟಿಯಾಗಿ ಅಭಿನಯಿಸಿದ್ದ ಅರುಣಾರಾಜ್ ಅನ್ನುವವರು ಪುಣೆಯ ಎನ್‌ಟಿಐಐ ಸೇರಿ ಅಲ್ಲಿ ಎಡಿಟಿಂಗ್ ತರಬೇತಿ ಪಡೆದು ಪ್ರಖ್ಯಾತ ಫಿಲ್ಮ್ ಎಡಿಟರ್ ಆಗಿ ಪ್ರಶಸ್ತಿಗಳಿಸಿದ್ದಾರೆ. ಪ್ರಧಾನ ಸ್ತ್ರೀಪಾತ್ರವೊಂದನ್ನು ನಿರ್ವಹಿಸಿದ ಕುಸುಮಾ ಸೊರಬ್ ಪರಿಸರವಾದಿಯಾಗಿ ಪ್ರಖ್ಯಾತರಾದರು.

ಇಷ್ಟಕ್ಕೇ ನಿಲ್ಲದ ಸುವರ್ಣರು ಭಾರತೀಯ ವಿದ್ಯಾ ಭವನದಲ್ಲಿ ಪ್ರತಿ ವರ್ಷ ಆಯೋಜಿಸುತ್ತಿದ್ದ ಕಾಲೇಜು ನಾಟಕೋತ್ಸವದಲ್ಲಿ ಬೇರೆ ಬೇರೆ ಕಾಲೇಜುಗಳ ಕನ್ನಡ ನಾಟಕಗಳನ್ನು ಹಲವು ಬಾರಿ ನಿರ್ದೇಶಿಸಿದ್ದರು. ಹೀಗೆ ಹವ್ಯಾಸಿ ಕನ್ನಡ ರಂಗಭೂಮಿಯನ್ನು ಕ್ರಿಯಾಶೀಲವಾಗಿರಿಸುವ ನಿಟ್ಟಿನಲ್ಲಿ ಯಾರು ಕರೆದರೂ ಹೋಗಿ ಸಹಕರಿಸುತ್ತಿದ್ದರು ಎನ್ನುವುದು ಸುವರ್ಣರ ರಂಗದ ಕುರಿತ ಕಾಳಜಿಯನ್ನು, ಪ್ರೀತಿಯನ್ನು ಪ್ರತಿಬಿಂಬಿಸುತ್ತದೆ. ಹಾಗೆ ನಿರ್ದೇಶಿಸಿದ ನಾಟಕಗಳು ಇವು:

ಎಪ್ಪತ್ತರ ದಶಕದಲ್ಲಿ ಮರಾಠಿಯಲ್ಲಿ ಹತ್ತಿರ ಹತ್ತಿರ ನಾಲ್ಕು ಸಾವಿರ ಪ್ರದರ್ಶನಗಳನ್ನು ಕಂಡು ಪ್ರಖ್ಯಾತಿ ಗಳಿಸಿದ ನಾಟಕ 'ತೋಮೀ ನವೇಚ್' (ಅವನು ನಾನಲ್ಲ). ಈ ನಾಟಕವನ್ನು ಕನ್ನಡದಲ್ಲಿ ನಿರ್ದೇಶಿಸಬೇಕು ಎಂದು ಮುಂಬಯಿಯ ಪ್ರಸಿದ್ಧ ವೈದ್ಯ ಡಾ. ಸೀತಾರಾಮ್ ಆಳ್ವ ಅವರು ಸುವರ್ಣರನ್ನು ಸಂಪರ್ಕಿಸಿ ವಿನಂತಿಸಿದರು. ಮೂಲ (ಮರಾಠಿ) ನಾಟಕದಲ್ಲಿ ಮರಾಠಿಯ ಫನ್ಸೀಕರ್ ಎಂಬವರು ಅದ್ಭುತವಾಗಿ ಅಭಿನಯಿಸಿದ್ದರು. ನಿಜ ಘಟನೆಯನ್ನು ಆಧರಿಸಿ ರಚಿಸಿದ ನಾಟಕ ಅದು. ಅದರಲ್ಲಿ ನಾಯಕನಾದವನು ಬೇರೆ ಬೇರೆ ವ್ಯಕ್ತಿಯಾಗಿ ಗುರುತಿಸಿಕೊಳ್ಳುತ್ತ ನಾಲ್ಕೈದು ಮಹಿಳೆಯರನ್ನು ಮದುವೆಯಾಗುತ್ತಾನೆ. ಕೊನೆಗೂ ಆತ ಸಿಕ್ಕಿಬೀಳುತ್ತಾನೆ. ಕೋರ್ಟ್‌ನಲ್ಲಿ ಕೇಸು ದಾಖಲಾಗುತ್ತದೆ. ಒಬ್ಬನೇ ಬೇರೆ ಬೇರೆ ವ್ಯಕ್ತಿಯಾಗಿ ಮದುವೆಯಾಗುವುದು ಹೇಗೆ ಸಾಧ್ಯ ? ನಾನು ಅವನಲ್ಲ ಎನ್ನುವುದು ಆತನ ವಾದ. ಫನ್ಸೀಕರ್‌ರರ ಚುರುಕಿನ ಅಭಿನಯ ಡಾ. ಆಳ್ವರನ್ನು ಬಹಳವಾಗಿ ಪ್ರಭಾವಿಸಿತ್ತು. ತಿರುಗು ಮಂಚದಲ್ಲಿ ನಡೆಯುವ ಆ ನಾಟಕಕ್ಕೆ ನೆರವನ್ನು, ಮರಾಠಿಯವರಿಂದ ಅವರು ಕೇಳಿದಷ್ಟು ರಾಯಲ್ಟಿ ಕೊಟ್ಟು ಪಡೆದುಕೊಂಡದ್ದೂ ಆಯಿತು. ಡಾ. ಆಳ್ವರೇ ಮುಖ್ಯ

ಪಾತ್ರ ನಿರ್ವಹಿಸಿದರು. ಉಳಿದ ಪಾತ್ರಗಳಿಗೆ ಸೂಕ್ತ ನಟ ನಟಿಯರನ್ನು ಆಯ್ಕೆ ಮಾಡಿ ಎರಡು ತಿಂಗಳ ರಿಹರ್ಸಲ್ ನಡೆಸಿ ಪ್ರದರ್ಶನವನ್ನೂ ಏರ್ಪಡಿಸಿದ್ದಾಯಿತು. ಈ ನಾಟಕಕ್ಕೆ ದೊರೆತ ಉತ್ತಮ ಪ್ರತಿಕ್ರಿಯೆಯೂ ಸುವರ್ಣರನ್ನು, ತಂಡವನ್ನು ಹುರಿದುಂಬಿಸಿತು. ಒಂದೇ ತಿಂಗಳಲ್ಲಿ ನಾಲ್ಕು ಪ್ರದರ್ಶನ ಬುಕ್ ಆದದ್ದೇ ಅದರ ಉತ್ಕೃಷ್ಟತೆಯನ್ನು ಸೂಚಿಸುತ್ತದೆ. ಕಡಿಮೆ ಎಂದರೂ ಹತ್ತು ಪ್ರಯೋಗ ಮಾಡುವ ಎಲ್ಲ ಭರವಸೆಯೂ ಅವರ ಮುಂದಿದ್ದವು. ಈ ಪ್ರದರ್ಶನಕ್ಕೆ ಕಾರಣೀಕರ್ತರಾದ ಡಾ.ಆಳ್ವರು ಒಂದು ದಿನ ಫೋನಾಯಿಸಿ ವಿಷಾದದಿಂದಲೇ 'ಈ ನಾಟಕದ ಶೋವನ್ನು ಇಲ್ಲಿಗೇ ನಿಲ್ಲಿಸಿಬಿಡೋಣ. ನನ್ನ ತಂದೆಯವರು ಡಾಕ್ಟರಿಕೆಯ ಬದಲು ನಾಟಕ ಮಾಡಿ ನಮ್ಮ ಹೆಸರು ಕೆಡಿಸುವುದಾದರೆ ಮುಂದೆ ನೀನು ಈ ಮನೆಗೆ ಬರಬಾರದು' ಎಂದು ವಾರ್ನಿಂಗ್ ನೀಡಿದ್ದಾರೆ ಎಂದಾಗ ಉಮೇದಿಯೆಲ್ಲ ಜರ್‍ರನೆ ಇಳಿದುಬಿಟ್ಟಿತು.

ಆದರೆ ಯಶಸ್ಸು ದೊರೆತ ಖುಷಿ ಉಳಿದುಕೊಂಡಿದೆ. ತಿರುಗು ಮಂಚದ ರಂಗ ಪ್ರಯೋಗವನ್ನು ಕನ್ನಡಕ್ಕೆ ತಂದ ಅನುಭವ, ನೆನಪು ಮಾಸದೇ ಉಳಿದುಕೊಂಡಿದೆ.

## ಹೆಜ್ಜೆ 6 : ರಿಕ್ತ ರಂಗಭೂಮಿಯಲ್ಲೂ

ಮುಂಬಯಿಯ ದಾದರ್‌ನಲ್ಲಿದ್ದ ಛಬಿಲ್‌ದಾಸ್ ಶಾಲೆಯ ಒಂದು ದೊಡ್ಡ ಹಾಲ್‌ನಲ್ಲಿ ಮರಾಠಿಯ ಕೆಲವು ಹವ್ಯಾಸಿ ರಂಗಕರ್ಮಿಗಳು ಪ್ರಯೋಗಾತ್ಮಕ ನಾಟಕಗಳನ್ನು ಒಂದು ಸೀಮಿತ ಪ್ರೇಕ್ಷಕ ವರ್ಗಕ್ಕೆ ಪ್ರದರ್ಶಿಸುತ್ತಿದ್ದರು. ಪರದೆ, ಸೆಟ್ಟಿಂಗ್ಸ್ ಏನೂ ಹಾಕದೇನೇ ಸಾಂಕೇತಿಕವಾಗಿ ಒಂದು ರಂಗಪರಿಸರ ನಿರ್ಮಿಸಿ ನಾಟಕವಾಡುತ್ತಿದ್ದರು. ರಿಕ್ತ ರಂಗಭೂಮಿಯ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಬಹಳ ಕಡಿಮೆ ಖರ್ಚಿನಲ್ಲಿ ಇಲ್ಲಿ ಪ್ರಯೋಗಾತ್ಮಕ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಈ ನಾಟಕಗಳಿಗೆ ಜನಸಾಮಾನ್ಯರು ಬರುತ್ತಿರಲಿಲ್ಲ. ಕುಳಿತುಕೊಳ್ಳುವುದಕ್ಕೆ ಆಸನ ವ್ಯವಸ್ಥೆಯೂ ಇರುತ್ತಿರಲಿಲ್ಲ. ನೆಲದಲ್ಲೇ ಕುಳಿತು ನೋಡಬೇಕಿತ್ತು. ಚಚ್ಚೌಕದ ಒಂದು ದೊಡ್ಡ ಹೊಂಡವನ್ನೇ ರಂಗವನ್ನಾಗಿಸಿಕೊಂಡು ನಾಟಕವಾಡುತ್ತಿದ್ದರು. ಪ್ರೇಕ್ಷಕರು ಆ ಹೊಂಡದ ಬಳಿ ಸುತ್ತ ಮೂರು ಬದಿಯಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಬಾಡಿಗೆಯ ಗೋಜಿರಲಿಲ್ಲ. ವಿದ್ಯುಚ್ಛಕ್ತಿ ಬಳಸಿಕೊಳ್ಳುವುದಕ್ಕೆ ಸ್ವಲ್ಪ ಹಣ ಪಡೆಯುತ್ತಿದ್ದರಷ್ಟೆ. ಕೆಲವು ಉತ್ತಮ ಪ್ರದರ್ಶನಗಳ ಬಗ್ಗೆ ಪತ್ರಿಕೆಗಳೂ ವಿಮರ್ಶೆ ಪ್ರಕಟಿಸಿವೆ. ರಂಗಭೂಮಿಯಲ್ಲಿ ತೀವ್ರ ಆಸಕ್ತಿ ಇರುವವರು ಇಲ್ಲಿನ ಪ್ರಯೋಗಗಳನ್ನು ನೋಡುವುದಕ್ಕೆ ಹೋಗುತ್ತಿದ್ದರು. ಅವರಲ್ಲಿ ಸುವರ್ಣರೂ ಒಬ್ಬರಾಗಿದ್ದರು. ಹಾಗೆ ನೋಡಿದ ಕೆಲವು ಪ್ರದರ್ಶನಗಳಲ್ಲಿ ಒಂದು ಹಿಂದಿ ನಾಟಕದ ವಸ್ತು ಸುವರ್ಣರನ್ನು ಬಹಳ ಆಕರ್ಷಿಸಿದೆ. ಇಲ್ಲಿನ ಪ್ರದರ್ಶನ ಕೆಟ್ಟದಾಗಿದ್ದರೂ ತಾನು ಅದನ್ನು ಚೆನ್ನಾಗಿ ಕನ್ನಡದಲ್ಲಿ ನಿರ್ದೇಶಿಸಬಲ್ಲೆ ಅನ್ನುವ ತೀರ್ಮಾನಕ್ಕೆ ಬಂದುಬಿಟ್ಟಿದ್ದರು ಸುವರ್ಣರು.

ಡಾ. ಶಂಕರ್ ಶೇಷ್ ಅವರು ಹಿಂದಿಯಲ್ಲಿ ಬರೆದ ನಾಟಕ 'ಫಂದಿ'. ದಯಾಮರಣದ ಕುರಿತ ತಾತ್ವಿಕ ಚರ್ಚೆಯನ್ನು ನಡೆಸುವ ಗಂಭೀರ ನಾಟಕ ಅದು. ಅದನ್ನು ಕನ್ನಡಕ್ಕೆ

ರೂಪಾಂತರಿಸುವುದಕ್ಕೆ ತೊಡಗಿದ ಸುವರ್ಣರು ಅಂದುಕೊಂಡ ಕೆಲಸವನ್ನು ಒಪ್ಪವಾಗಿಯೇ ಪೂರ್ಣಗೊಳಿಸಿದರು. 'ಉರುಳು' ಹೆಸರಿನೊಂದಿಗೆ ಕನ್ನಡಕ್ಕೆ ತಂದ ನಾಟಕದ ಹಸ್ತಪ್ರತಿಯನ್ನು ಹಿಂದಿಯಲ್ಲಿ ವಿದ್ವಾಂಸ, ಸುವರ್ಣರ ಸ್ನೇಹಿತ ಡಾ. ಪುತ್ರನ್ ಅವರಿಗೆ ಓದುವುದಕ್ಕೆ ನೀಡಿ ಸಮರ್ಪಕವಾಗಿರುವುದನ್ನು ಖಚಿತಪಡಿಸಿಕೊಂಡರು.

ಆ ವೇಳೆಯಲ್ಲಿ ಕರ್ನಾಟಕ ಸಂಘದ ಸಂಪರ್ಕದಲ್ಲಿದ್ದ ಸುವರ್ಣರು ಕನ್ನಡದ ಕಲಾವಿದರಿಗೆ ತರಬೇತಿ ನೀಡಲು ಪ್ರಖ್ಯಾತ ನಿರ್ದೇಶಕ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರ ಸುರೇಶ್ ಆನಗಳ್ಳಿ ಅವರನ್ನು ಆಹ್ವಾನಿಸಿದ್ದರು. ಅವರು ತರಬೇತಿ ನೀಡಿ ಶಿಬಿರಾರ್ಥಿಗಳಿಗೆ ಕಂಬಾರರ 'ಸಿರಿ ಸಂಪಿಗೆ'ಯನ್ನು ನಿರ್ದೇಶಿಸಿದ್ದರು. ಅದೇ ಸಂದರ್ಭದಲ್ಲಿ ಸಿರಿ ಸಂಪಿಗೆಯ ಜತೆ ಇನ್ನೊಂದು ನಾಟಕವನ್ನು ಸಂಘದ ಕಲಾ ಭಾರತಿ ಆಶ್ರಯದಲ್ಲಿ ಪ್ರದರ್ಶಿಸುವುದಕ್ಕೆ ಸುವರ್ಣರು ನಿರ್ಧರಿಸಿದರು. ಅದಕ್ಕೆ ಅವರು ಆಯ್ದುಕೊಂಡದ್ದು 'ಉರುಳು' ನಾಟಕವನ್ನು. ಕರ್ನಾಟಕದ ಸಂಘದ ಸಭಾಗೃಹದಲ್ಲಿ ಬಹಳ ಯಶಸ್ವಿಯಾಗಿ ಈ ಎರಡೂ ಪ್ರದರ್ಶನಗಳು ನಡೆದವು, ನಾಟಕ ಪ್ರಿಯರನ್ನು ಸಂತುಷ್ಟಗೊಳಿಸಿದವು. ಎರಡು ವಿಭಿನ್ನ ಶೈಲಿಯ ನಾಟಕಗಳು ಭಿನ್ನ ಭಿನ್ನ ಆಯಾಮಗಳಿಂದ ಮುದ ನೀಡಿದವು.

ಇದೇ ದಿನಗಳಲ್ಲಿ ಹೊಸ ಧಾರಾವಾಹಿ ಆರಂಭಿಸಲು ದೂರದರ್ಶನ ಸ್ಕ್ರಿಪ್ಟ್ ಆಹ್ವಾನಿಸಿತ್ತು. ಸುವರ್ಣರು 'ಗುಡ್ಡದ ಭೂತ'ವನ್ನು ಕಳುಹಿಸಲು ನಿರ್ಧರಿಸಿದ್ದರು. ಒಂದು ಕಂತಿನ ಕ್ಯಾಸೆಟ್ ಕೂಡ ಕಳುಹಿಸಿಕೊಟ್ಟಿದ್ದರು. ಅದು ಆಯ್ಕೆಯಾದಾಗ ಸುವರ್ಣರು ಗುಣಮಟ್ಟದ ಧಾರಾವಾಹಿ ನೀಡುವ ಬದ್ಧತೆಯೊಂದಿಗೆ ಅಲ್ಲಿಗೆ ಕೆಲವು ತಿಂಗಳುಗಳ ಕಾಲ ತಮ್ಮನ್ನು ಒಪ್ಪಿಸಿಕೊಂಡರು. ಈ ಧಾರಾವಾಹಿಯ ಚಿತ್ರೀಕರಣದಿಂದ ತೊಡಗಿ ಪ್ರಸಾರ ಮಾಡುವ ಹಂತದವರೆಗೆ ಸುವರ್ಣರು ಪಟ್ಟ ಪಾಡಿನ ಫಲವಾಗಿ 1995ರಲ್ಲಿ ಲಘು ಹೃದಯಾಘಾತವಾಗಿ ಬಿಟ್ಟಿದೆ. ಔಷಧದ ಜತೆಗೆ ಟೆನ್ಶನ್‌ರಹಿತವಾಗಿರಬೇಕು, ವಿಶ್ರಾಂತಿ ಅನಿವಾರ್ಯವಾಗಬೇಕು ಎಂಬ ವೈದ್ಯರ ಸಲಹೆ ಮೇರೆಗೆ ನಾಲ್ಕೈದು ತಿಂಗಳ ಕಾಲ ಸುವರ್ಣರು ಚಟುವಟಿಕೆಯಿಂದ ಮುಕ್ತವಾಗುವುದು ಅನಿವಾರ್ಯವಾಯಿತು. ರಂಗಭೂಮಿಯನ್ನು ಬಿಟ್ಟಿರುವುದಕ್ಕೆ ಸಾಧ್ಯವೇ ಇಲ್ಲದ ಸುವರ್ಣರು ನಾಲ್ಕೈದು ತಿಂಗಳ ಬಳಿಕ ಚೇತರಿಸಿಕೊಂಡು ಆಪ್ಯಾಯಮಾನವಾದ ರಂಗಭೂಮಿಯಲ್ಲಿ ತೊಡಗಿಕೊಂಡರು.

## ಹೆಜ್ಜೆ 7 : ಬೀದಿ ನಾಟಕದಲ್ಲೂ

ಸದಾನಂದ ಸುವರ್ಣರು ಬೀದಿ ನಾಟಕವನ್ನೂ ನಿರ್ದೇಶಿಸಿದ್ದಾರೆ. ತುರ್ತು ಪರಿಸ್ಥಿತಿ ಹೇರಿದ ಇಂದಿರಾ ಗಾಂಧಿಯ ವಿರುದ್ಧ ಬೆಂಕಿ ಉರಿಯ ಚಂದ್ರಶೇಖರ ಪಾಟೀಲರು ಬರೆದ 'ಜಗದಂಬೆ' ನಾಟಕವನ್ನು ಈ ಪ್ರಯೋಗಕ್ಕೆ ಆಯ್ದುಕೊಂಡಿದ್ದರು. 'ರಂಗಸ್ಥಳ' ರಂಗ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಿರ್ದೇಶಿಸಿದ್ದರು. ಪ್ರಯೋಗ ಸಹಜವಾಗಿಯೇ ಯಶಸ್ವಿಯಾಗಿದೆ. ಆದರೆ ಪ್ರೊಸೀನಿಯಂ ರಂಗದಲ್ಲಿ ತಮ್ಮ ಪ್ರಯೋಗಗಳನ್ನು ಕಟ್ಟಿಕೊಡುವ ಸುವರ್ಣರಿಗೆ ಬೀದಿ ನಾಟಕ ಪ್ರಯೋಗ ಹೆಚ್ಚು ಖುಷಿ ಕೊಡಲಿಲ್ಲ. ಬೆಳಕು, ರಂಗ ಸಜ್ಜಿಕೆ,

ಪ್ರಸಾದನ ಯಾವುದನ್ನೂ ಆಧರಿಸದ ಈ ನಾಟಕ ಸಂಭಾಷಣೆಯೊಂದರಿಂದಲೇ ಪ್ರೇಕ್ಷಕರನ್ನು ಸೆಳೆಯಬೇಕು. ಚಳವಳಿ ಅಥವಾ ಸರಕಾರಿ ಸೌಲಭ್ಯಗಳನ್ನು ಜನರಿಗೆ ಮುಟ್ಟಿಸುವ ನಿಟ್ಟಿನಿಂದ ಪ್ರಯೋಜನಕಾರಿಯಾಗುವ ಪ್ರಕಾರ ಇದು. ನಾಟಕವೊಂದು `ಸೃಷ್ಟಿಯಾಗುವುದಕ್ಕೆ ತಕ್ಕ ವಾತಾವರಣ ಅಲ್ಲಿ ಇಲ್ಲದೇ ಇರುವುದರಿಂದ ಈ ಒಂದೇ ಪ್ರಯೋಗದಲ್ಲಿ ಸಂತೃಪ್ತರಾದರು.

## ಹೆಜ್ಜೆ 8 : ಮಕ್ಕಳ ರಂಗಭೂಮಿಯಲ್ಲೂ

ರಂಗಭೂಮಿಗೆ ಮಕ್ಕಳನ್ನು ಆಕರ್ಷಿಸಬೇಕು, ಅವರಲ್ಲೂ ರಂಗಪ್ರೀತಿ ಬೆಳೆಸಬೇಕು ಅನ್ನುವ ಸುವರ್ಣರಿಗೆ ಮಕ್ಕಳ ರಂಗಭೂಮಿಯಲ್ಲಿ ಅಷ್ಟಾಗಿ ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಡಾ. ಶಿವರಾಮ ಕಾರಂತರ 'ಯಾರಿಗೆ ಓಟು' ನಾಟಕವನ್ನು ಮಕ್ಕಳಿಂದ ಆಡಿಸುವ ಪ್ರಯತ್ನ ಪಟ್ಟಿದ್ದಾರೆ. ಮಕ್ಕಳಿಗೆ ಇಲಿ, ಹೆಗ್ಗಣಗಳ ಮುಖವಾಡವನ್ನು ಧರಿಸಿ ಮನೋಜ್ಞವಾಗಿ ರಾಜಕೀಯ ವಿಡಂಬನೆಯನ್ನು ಮಾಡಿಸಿದ್ದಾರೆ. ನಟಿಯೊಬ್ಬರ ಧ್ವನಿಗೆ ತುಟಿಯಾಡಿಸಿದ ಮಕ್ಕಳಿಂದ ಒಳ್ಳೆಯ ಅಭಿನಯವನ್ನೇ ಹೊಮ್ಮಿಸಿದ್ದಾರೆ ಸುವರ್ಣರು. ಕಾರಂತರಿಗೆ ಈ ಪ್ರಯೋಗವನ್ನು ತೋರಿಸಬೇಕು ಅನ್ನುವುದು ಸುವರ್ಣರ ಕನಸಾಗಿತ್ತು. ಅಷ್ಟರಲ್ಲೇ ಅವರು ಅನ್ಯ ಮನೆಯನ್ನು ಪ್ರವೇಶಿಸಿಬಿಟ್ಟಿದ್ದರಿಂದ ಆ ಕನಸು ಈಡೇರಲಿಲ್ಲ.

ಸುವರ್ಣರ ಕಾರ್ಯಕ್ಷೇತ್ರವಾದ ಮುಂಬಯಿಯಲ್ಲಿ ಮಕ್ಕಳ ರಂಗಭೂಮಿಯನ್ನು ಕಟ್ಟುವುದು ಸುಲಭವಾಗಿರಲಿಲ್ಲ. ಮಕ್ಕಳಿಗೆ ಶಾಲೆ ವಾರ್ಷಿಕೋತ್ಸವದಲ್ಲಿ ಮಾತ್ರ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತಿತ್ತೇ ಹೊರತು ಇತರ ದಿನಗಳಲ್ಲಿ ತಾಲೀಮಿಗೆ ಹಾಜರಾಗುವುದು ಕಷ್ಟವಾಗುತ್ತಿತ್ತು. ಇದನ್ನೆಲ್ಲ ಗಮನಿಸಿದ ಸುವರ್ಣರು ಮಕ್ಕಳ ರಂಗ ಪ್ರಯೋಗವನ್ನು ಮತ್ತೆ ಮುಂದುವರಿಸುವ ಪ್ರಯತ್ನಕ್ಕೆ ಕೈ ಹಾಕಲಿಲ್ಲ.

## ಹೆಜ್ಜೆ 9 : ಸುವರ್ಣ ಪ್ರತಿಷ್ಠಾನದಿಂದ

ಬಡ ಮಕ್ಕಳಿಗೆ ವಿದ್ಯಾರ್ಥಿವೇತನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಯುವ ಪ್ರತಿಭೆಗಳಿಗೆ ತರಬೇತಿ ನೀಡಲು ಸುವರ್ಣರು 'ಸುವರ್ಣ ಪ್ರತಿಷ್ಠಾನ' ಆರಂಭಿಸಿದ್ದಾಗಿತ್ತು. ಸಾಂಸ್ಕೃತಿಕ ಕಾರ್ಯಕ್ರಮವಾಗಿ ಖ್ಯಾತ ಸಾಹಿತಿ ಅಮೃತ ಸೋಮೇಶ್ವರರ 'ಗೋಂದೊಳು' ನಾಟಕವನ್ನು ಕೈಗೆತ್ತಿಕೊಂಡರು. ಹಿಂದೊಮ್ಮೆ ಮುಂಬಯಿಯಿಂದ ಮಂಗಳೂರಿಗೆ ಬಂದಿದ್ದಾಗ ಪುರಭವನದಲ್ಲಿ 'ಗೋಂದೊಳು' ನಾಟಕದ ಪ್ರದರ್ಶನ ಕಂಡಿದ್ದರು. ಆ ವಸ್ತು ಸುವರ್ಣರಿಗೆ ಬಹಳವಾಗಿ ಹಿಡಿಸಿತ್ತು. ಈ ಜಾನಪದ ತುಳು ನಾಟಕವನ್ನು, ತುಳು ಜಾನಪದದ ಮೌಖಿಕ ಹಾಡುಗಾರಿಕೆಯನ್ನು ಪಾಡ್ದನದ ಚೌಕಟ್ಟಿನಲ್ಲಿ ಭಿನ್ನವಾಗಿ ಪ್ರದರ್ಶಿಸಬಹುದೆಂದು ಕಲ್ಪಿಸಿದ ಸುವರ್ಣರು ಪ್ರೊ. ಅಮೃತ ಸೋಮೇಶ್ವರ ಅವರನ್ನು ಭೇಟಿಯಾಗಿದ್ದಾರೆ. ತಮ್ಮ ನಿರ್ಧಾರವನ್ನು ಅವರಿಗೆ ತಿಳಿಸಿ ಪಾಡ್ದನವನ್ನು ಬರೆದುಕೊಡಬಹುದೇ ಎಂದು ಬಿನ್ನವಿಸಿಕೊಂಡರು. ನಾಟಕದ ಹಿನ್ನೆಲೆ ಹಾಡಿನ ಬದಲಿಗೆ ಪಾಡ್ದನಗಳನ್ನು ಪ್ರತಿ ದೃಶ್ಯದ ಕೊನೆಗೆ ಅಥವಾ ದೃಶ್ಯದ ಆರಂಭದಲ್ಲಿ ಸನ್ನಿವೇಶದ ಭಾವಕ್ಕೆ ಹೊಂದಿಕೊಳ್ಳುವಂತೆ

ಪಾಡ್ದನ ಬರೆದುಕೊಡುವಂತೆ ಕೇಳಿಕೊಂಡರು. ಪಾಡ್ದನದ ಬೇರೆ ಬೇರೆ ಮಟ್ಟುಗಳಲ್ಲಿ ರಚಿಸಲು ಮಾದರಿಯಾಗಿ ಕೆಲವು ತುಳು ಪಾಡ್ದನಗಳ ತುಣುಕುಗಳನ್ನು ಅವರಿಗೆ ನೀಡಿದ್ದರು ಸುವರ್ಣರು. ಅಮೃತರೂ ಮುತುವರ್ಜಿಯಿಂದ ಅಷ್ಟೇ ಪ್ರೀತಿಯಿಂದ ಬರೆದುಕೊಟ್ಟರು. ಆ ಪಾಡ್ದನದ ಟ್ಯೂನನ್ನು ಸನ್ನಿವೇಶಗಳಿಗೆ ಪೂರಕವಾಗಿ ಹಿನ್ನೆಲೆ ಸಂಗೀತಕ್ಕೆ ಚೆನ್ನಾಗಿಯೇ ಅಳವಡಿಸಿಕೊಳ್ಳಲಾಗಿತ್ತು. ನೃತ್ಯ ಸಂಯೋಜನೆಯೂ ಬಹಳ ಸೊಗಸಾಗಿ ಮೂಡಿಬಂದಿದೆ. ನಾಟಕ ಹೊಸ ರೂಪದೊಂದಿಗೆ ನಿರೀಕ್ಷಿತ ಯಶಸ್ಸು ಪಡೆಯಿತು.

ರಂಗದ ಪಕ್ಕದಲ್ಲಿ ಸಣ್ಣದೊಂದು ವೇದಿಕೆಯನ್ನು ನಿರ್ಮಿಸಿದ್ದಾರೆ. ಅಲ್ಲಿ ಹಿನ್ನೆಲೆ ಗಾಯಕರು ಪಾಡ್ದನ ಹಾಡುವುದಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕೊಳಲು, ಹಾರ್ಮೋನಿಯಂ, ತೆಂಬರೆಯ ಬದಲಿಗೆ ದೋಲಕ್‌ಗಳ ಜತೆ ಪಾಡ್ದನ ಹಾಡುವುದಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅಭಿನಯ ಸಂದರ್ಭ ರಂಗದ ಮೇಲೆ ಬೆಳಕು, ಹಾಡಿನ ಸಂದರ್ಭ ಹಾಡುಗಾರರ ಮೇಲೆ ಬೆಳಕು ಮೂಡುವಂತೆ ನಿರ್ದೇಶಿಸಿದ್ದರು. ಇಡೀ ರಂಗವನ್ನು ಬಳಸಿಕೊಂಡ ರೀತಿ, ಪುರಾಣದ ಕಥೆಯನ್ನು ಆಧುನಿಕ ನೆಲೆಯಲ್ಲಿ ರಂಗಕ್ಕೆ ಸಂಯೋಜಿಸಿದ ಬಗೆಯಲ್ಲಿ ಸುವರ್ಣರ ಪ್ರತಿಭೆ ಮೆರೆದಿದೆ.

ಗೋಂದೊಳು ನಾಟಕದ ಕರ್ತೃ, ನಾಡಿನ ಹಿರಿಯ ಸಾಹಿತಿ, ವಿದ್ವಾಂಸ ಡಾ. ಅಮೃತ ಸೋಮೇಶ್ವರ ಅವರು ಸುವರ್ಣ ನಿರ್ದೇಶನದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು ಹೀಗೆ: 'ಸದಾನಂದ ಸುವರ್ಣ ಅತ್ಯುತ್ತಮ ನಿರ್ದೇಶಕ. ಅವರದೇ ಆದ ಗಟ್ಟಿಯಾದ ನಿಲುವು ಇಟ್ಟುಕೊಂಡವರು. ನಿಶ್ಚಿತ ತೂಕದ ಅವರ ಅನೇಕ ನಾಟಕಗಳು ಮುಂಬಯಿಯಲ್ಲಿ ಖ್ಯಾತಿ ಪಡೆದಿವೆ. ಭದ್ರ ತಳಹದಿಗೆ ಕಾರಣ ಮುಂಬಯಿಯ ಹಲವು ಭಾಷೆಗಳ ನಾಟಕ ರಂಗಗಳ ನಿಕಟ ಪರಿಚಯ ಇದ್ದುದು. ಅವೆಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿ ಸ್ವಂತಿಕೆಯಿಂದ ಕನ್ನಡದಲ್ಲೂ ಪ್ರಯೋಗಿಸಿದರು. ನನ್ನ 'ಗೋಂದೊಳು' ನಾಟಕವನ್ನೂ ಸುವರ್ಣರು ವಿಶಿಷ್ಟ ಬಗೆಯಲ್ಲಿ ನಿರ್ದೇಶಿಸಿದ್ದಾರೆ. ಹಾಡುಗಳನ್ನು ಪಾಡ್ದನದ ರೂಪದಲ್ಲಿ ನನ್ನಿಂದ ಬರೆಯಿಸಿಕೊಂಡು ಅಳವಡಿಸಿದ್ದಾರೆ. ನನಗೂ ಇಷ್ಟವಾಗಿದೆ, ಜನರೂ ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಮಾಮೂಲಿ ಜನಪ್ರಿಯ ಶೈಲಿ ಬಿಟ್ಟು ವಿಭಿನ್ನ ಶೈಲಿಯಲ್ಲಿ ನಾಟಕ ಪ್ರಸ್ತುತ ಪಡಿಸಿದ್ದಾರೆ. ಗಂಭೀರ ಪ್ರವೃತ್ತಿಯ ಸುವರ್ಣರು ಸ್ವತಂತ್ರ ಮನೋವೃತ್ತಿಯನ್ನು ಬೆಳೆಯಿಸಿಕೊಂಡು ವಿಶಿಷ್ಟ ರೀತಿಯ ವಸ್ತುವನ್ನು ನಾಟಕವಾಗಿಸಿ ಪ್ರದರ್ಶಿಸಿದ್ದಾರೆ.' (ರಂಗಕರ್ಮಿ ಸದಾನಂದ ಸುವರ್ಣ, ಲೇ. ಸೀತಾಲಕ್ಷ್ಮೀ ಕರ್ಕಿಕೋಡಿ)

ಕರ್ನಾಟಕ ಸಂಘದ ಸಭಾಗೃಹದಲ್ಲಿ ನಡೆದ ಪ್ರದರ್ಶನಕ್ಕೆ ಮಾರು ಹೋದ ಸಂಘ ಸಂಸ್ಥೆಗಳ ಕಾರ್ಯಕರ್ತರು ತಮ್ಮ ಸಂಘದ ವತಿಯಿಂದ ಪ್ರದರ್ಶನ ನೀಡುವಂತೆ ಆಹ್ವಾನಿಸಿದರು. ಒಂದು ವರ್ಷದ ಅವಧಿಯಲ್ಲಿ ಐದಾರು ಪ್ರದರ್ಶನ ಕಂಡ ನಾಟಕ ಇದು.

ಈ ವೇಳೆಯಲ್ಲಿ ಸುವರ್ಣರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಕಾಸರವಳ್ಳಿ ಅವರ 'ಕ್ರೌರ್ಯ' ಸಿನೆಮಾದ ನಿರ್ಮಾಣ ನಿರ್ವಹಣೆಗೆ ಮತ್ತೆ ಬೆಂಗಳೂರಿಗೆ ತೆರಳಿದ್ದಾರೆ ಸುವರ್ಣರು. ಮೊದಲನೇ ಹಂತದ ಚಿತ್ರೀಕರಣ ಮುಗಿಯಿತು ಅನ್ನುವಷ್ಟರಲ್ಲಿ ಸುವರ್ಣರ ಆರೋಗ್ಯ ಮತ್ತೆ ಕೈಕೊಟ್ಟುಬಿಟ್ಟಿತು. ಆಸ್ಪತ್ರೆ ಸೇರ್ಪಡೆ ಅನಿವಾರ್ಯವಾಯಿತು. ಬಿಡಗಡೆಗೊಂಡ ಮರುದಿನವೇ ಅವರು ಮುಂಬಯಿಗೆ ವಾಪಸಾದರು. ಅಲ್ಲಿ ಒಂದು ತಿಂಗಳು ವಿಶ್ರಾಂತಿ ಪಡೆದ ಸುವರ್ಣರು ಯಾವ ನಾಟಕ ನಿರ್ದೇಶಿಸುವುದಕ್ಕೆ ಯೋಚಿಸಿದ್ದರೋ ಗೊತ್ತಿಲ್ಲ ಆದರೆ ಮಂಗಳೂರಿನಿಂದ ನಿರ್ದೇಶಕ ಮಿತ್ರ ನಟೇಶ್ ಉಳ್ಳಾಲ ಅವರು ದೂರವಾಣಿ ಕರೆ ಮಾಡಿ ಮಂಗಳೂರಿನ ರಂಗಭೂಮಿಯನ್ನು ಸಕ್ರಿಯಗೊಳಿಸುವಂತೆ ಆಹ್ವಾನಿಸಿದ್ದಾರೆ.

## ಹೆಜ್ಜೆ 10 : ಹೊಸಬರಿಗೆ ಜವಾಬ್ದಾರಿ

ಸುವರ್ಣರು ಮಂಗಳೂರಿನಿಂದ ಮುಂಬಯಿಗೆ ಬಂದ ತಕ್ಷಣವೇ 'ಗೋಂದೊಳು' ನಾಟಕದಲ್ಲಿ ಭಾಗವಹಿಸಿದ್ದ ಕಲಾವಿದರು ಹೊಸ ನಾಟಕ ನಿರ್ದೇಶಿಸುವಂತೆ ವಿನಂತಿಸಿದರು. ರಂಗಭೂಮಿಗೆ ನಟರನ್ನು ತರಬೇತುಗೊಳಿಸುವುದರೊಂದಿಗೆ ನಿರ್ದೇಶಕರಿಗೂ ಅವಕಾಶ ಕೊಡಬೇಕು ಅನ್ನುವ ದೃಷ್ಟಿಯಿಂದ ತಂಡದ ಬಹುಮುಖ ಪ್ರತಿಭೆಯ ಕಲಾವಿದ ಗಿರಿಧರ ಕಾರ್ಕಳ ಅವರಿಗೆ ನಾಟಕವನ್ನು ಆಯ್ಕೆ ಮಾಡಿ ನಿರ್ದೇಶನಕ್ಕೆ ಅವಕಾಶ ಮಾಡಿಕೊಟ್ಟರು. ಸುವರ್ಣರ ಸಂಪೂರ್ಣ ಸಹಕಾರದ ಭರವಸೆಯೊಂದಿಗೆ ಅವರು ಪಳಗಿದ ಪ್ರಸನ್ನರು ಬರೆದ 'ಮಹಿಮಾಪುರ' ನಾಟಕವನ್ನು ಆಯ್ಕೆ ಮಾಡಿದರು. ನಟರನ್ನು ಆಯ್ಕೆ ಮಾಡಿ ತಾಲೀಮು ನಡೆಸಿದರು. ಸುವರ್ಣರೂ, ಕೊಟ್ಟ ಮಾತಿನಂತೆ ಸಲಹೆ ಸೂಚನೆ ನೀಡಿದರು. ನಾಟಕವೂ ಚೆನ್ನಾಗಿ ಮೂಡಿಬಂತು.

ಸುವರ್ಣರು ತಾವು ಬೆಳೆಯುವುದರ ಜತೆಗೆ ಕಿರಿಯರನ್ನು ಬೆಳೆಸುತ್ತ ಬಂದರು. ಕಲಾವಿದರನ್ನೂ, ನಿರ್ದೇಶಕರನ್ನೂ ಸ್ವತಃ ಕೊಡುಗೆಯಾಗಿ ಕೊಟ್ಟರು.

'ಕ್ರೌರ್ಯ' ಸಿನಿಮಾ ಚಿತ್ರೀಕರಣ ಸಂದರ್ಭ ಕಾಣಿಸಿಕೊಂಡ ಹೃದಯದ ಸಮಸ್ಯೆಯಿಂದಾಗಿ ಕಂಗೆಟ್ಟು ಮುಂಬಯಿ ಸೇರಿದರೂ ಸುವರ್ಣರು ಸಿನಿಮಾ ರಂಗದಿಂದ ದೂರವಾಗಿರಲಿಲ್ಲ. ಅವಕಾಶ ಸಿಕ್ಕಾಗಲೆಲ್ಲ ಜಾಹೀರಾತು ಕಿರು ಚಿತ್ರ ಮತ್ತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸುತ್ತ ಬಂದರು. ಕಾಲನಿರ್ಣಯ ಎನ್ನುವ ಪ್ರಕಟಣೆ ಸಂಸ್ಥೆಯ ಜಾಹೀರಾತಿಗಾಗಿ ಎರಡು ಕಿರುಚಿತ್ರವನ್ನು ನಿರ್ಮಿಸಿದ್ದರು. ಒಂದರಲ್ಲಿ ಕನ್ನಡದ ಸಿನಿಮಾ ನಟಿ ವಿನಯಾಪ್ರಸಾದ್ ಮತ್ತು ನಟ ರಮೇಶ್ ಭಟ್ಟರು ಅಭಿನಯಿಸಿದ್ದರು. ದೂರದರ್ಶನಕ್ಕಾಗಿ ಸಿದ್ಧಪಡಿಸಿದ ಜಾಹೀರಾತು ಚಿತ್ರದಲ್ಲಿ ಧಾರಾವಾಹಿಯ ನಟಿ ಮಾಡೆಲ್‌ಗಳನ್ನು ಅಭಿನಯಿಸುವುದಕ್ಕೆ ಅವಕಾಶ ಕೊಟ್ಟಿದ್ದರು.

ಸದಾನಂದ ಸುವರ್ಣರ ನೆಚ್ಚಿನ ಸಾಹಿತಿ, ರೋಲ್ ಮಾಡೆಲ್ ಡಾ. ಶಿವರಾಮ ಕಾರಂತರ ಕುರಿತು ಸಾಕ್ಷ್ಯಚಿತ್ರವೊಂದನ್ನು ತಯಾರಿಸುವಲ್ಲಿ ಸುವರ್ಣರು ಅತ್ಯಾಸಕ್ತಿಯಿಂದ

ತೊಡಗಿಕೊಂಡರು. ಅಸೌಖ್ಯದ ಬಳಿಕ ಒಂದು ವರ್ಷಕ್ಕೂ ಹೆಚ್ಚು ಕಾಲದವರೆಗೂ ಇಷ್ಟಪಟ್ಟು ಶ್ರಮಿಸಿದ್ದಾರೆ.

ಸಾಕ್ಷ್ಯಚಿತ್ರದ ಕೆಲಸ ಮುಗಿಸಿ ಬಂದವರಿಗೆ ಮತ್ತೆ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಬೇಕು ಅನ್ನುವ ತುಡಿತ ಹೆಚ್ಚಿತು. 'ಗುಡ್ಡೆದ ಬೂತ'ದ ನಂತರ ತುಳುವಿನಲ್ಲಿ ಬೇರೆ ನಾಟಕವನ್ನು ಸುವರ್ಣರು ಬರೆದಿರಲಿಲ್ಲ. ಮತ್ತೊಂದು ದಾಖಲಾರ್ಹ ತುಳು ನಾಟಕವನ್ನು ರಚಿಸಿ ಕೊಡಿ ಎನ್ನುವುದು ಹಲವರ ಒತ್ತಾಯವಾಯಿತು. ಬೆಂಗಾಲಿಯ ಪ್ರಖ್ಯಾತ ರಂಗ ನಟ, ನಿರ್ದೇಶಕ ಶಂಭುಮಿತ್ರ ಅವರು ಬರೆದ ನಾಟಕವನ್ನು ಪ್ರೇಮಾ ಕಾರಂತರು ಕನ್ನಡಕ್ಕೆ 'ಕುರುಡು ಕಾಂಚಾಣ'ವಾಗಿ ರೂಪಾಂತರಿಸಿದ್ದರು. ಅದನ್ನೇ ಸುವರ್ಣರು ತುಳುವಿನಲ್ಲಿ 'ಬಾಲೆ ಬಂಗಾರ್' ಹೆಸರಿನಲ್ಲಿ ರೂಪಾಂತರ ಮಾಡಿದರು. ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ ಮನೆಗೆಲಸದ ಒಬ್ಬ ನೌಕರನಿಗೆ ಲಾಟರಿಯಲ್ಲಿ ಐದು ಲಕ್ಷ ರೂ. ಸಿಗಲಿದೆ ಎಂದು ತಿಳಿದಾಗ ಇಡೀ ಕುಟುಂಬದಲ್ಲಿ ಉಂಟಾಗುವ ಸಂಚಲನ, ಕುಟುಂಬದ ವಿವಿಧ ಸದಸ್ಯರ ಪ್ರತಿಕ್ರಿಯೆ, ಆ ಸೇವಕನಿಗೆ ಅವರು ತೋರಿಸುವ ಗೌರವಾದರ, ಅವನಿಗಾಗುವ ಮುಜುಗರ ಇವನ್ನೆಲ್ಲ ವಿಡಂಬನಾತ್ಮಕ ಹಾಸ್ಯರೂಪದಲ್ಲಿ ಕಟ್ಟಿಕೊಟ್ಟ ನಾಟಕ ಇದು. ನಾಟಕದ ಕಥಾ ವಸ್ತುವನ್ನು ರಂಗಕ್ಕೊಡ್ಡಿದ ರೀತಿ, ನಿರ್ದೇಶಕರ ಒಳನೋಟ, ಹಾಸ್ಯಪ್ರಜ್ಞೆಗೆ ಹಿಡಿದ ಸುಂದರ ಕನ್ನಡಿಯಾಗಿದೆ. ಬಹಳ ಜನಪ್ರಿಯವಾಗಿ ಸಾಕಷ್ಟು ಪ್ರದರ್ಶನಗಳನ್ನು ಕಂಡಿತು.

## ಹೆಜ್ಜೆ 11 : ಮಂಗಳೂರು ರಂಗಭೂಮಿಗೆ ಹೊಸ ಸ್ಪರ್ಶ

ಸದಾನಂದ ಸುವರ್ಣರು ಐವತ್ತು ವರ್ಷಗಳ ಕಾಲ ಮುಂಬಯಿ ರಂಗ ಪ್ರಪಂಚಕ್ಕೊಂದು ಸುಂದರ ಸದೃಢ ಆಕಾರವನ್ನು, ಪ್ರಯೋಗಶೀಲತೆಯೊಂದಿಗೆ ಚಲನಶೀಲತೆಯನ್ನು ತಂದುಕೊಟ್ಟವರು. ಬಳಿಕ ಹುಟ್ಟೂರು ಮಂಗಳೂರಿನ ರಂಗಭೂಮಿಯನ್ನು ಚೈತನ್ಯಶೀಲಗೊಳಿಸುವುದಕ್ಕೆ ಮುಂದಾದವರು.

'ಮಂಗಳೂರಿನಲ್ಲಿ ಕ್ರಿಯಾಶೀಲವಾಗಿದ್ದ ಭೂಮಿಕಾ, ಅಭಿವ್ಯಕ್ತ, ಆಯನ ಮೊದಲಾದ ನಾಲ್ಕೈದು ಹವ್ಯಾಸಿ ರಂಗ ಸಂಸ್ಥೆಗಳು ನಿಷ್ಕ್ರಿಯವಾಗಿವೆ. ನಟರೆಲ್ಲ ನಾಟಕದಲ್ಲಿ ಅಭಿನಯಿಸುವುದಕ್ಕೆ ಕಾತುರರಾಗಿದ್ದಾರೆ. ಸಂಘಟಕರ ಹಾಗೂ ನಿರ್ದೇಶಕರ ಕೊರತೆಯನ್ನು ಅವರು ಎದುರಿಸುತ್ತಿದ್ದಾರೆ. ತಮ್ಮ ಬಗ್ಗೆ ಹಾಗೂ ಮುಂಬಯಿಯಲ್ಲಿನ ತಮ್ಮ ರಂಗ ಚಟುವಟಿಕೆಗಳನ್ನು ಪತ್ರಿಕೆಗಳಲ್ಲಿ ಓದಿ ಪ್ರಭಾವಿತರಾದ ಕೆಲವು ಸ್ನೇಹಿತರು ತಮ್ಮ ನಿರ್ದೇಶನದಲ್ಲಿ ಇಲ್ಲಿ ನಾಟಕ ಮಾಡಲು ಬಯಸುತ್ತಾರೆ. ಒಂದು ತಿಂಗಳು ಬಿಡುವು ಮಾಡಿಕೊಂಡು ಬಂದರೆ ನಾವು ಎಲ್ಲ ವ್ಯವಸ್ಥೆ ಮಾಡಲು ಸಿದ್ಧರಿದ್ದೇವೆ' ಎಂದು ವಿನಂತಿಸಿಕೊಂಡವರು ಕಲಾವಿದ ನಟೇಶ್. ಆರಂಭದಲ್ಲಿ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ನಟೇಶ್ ಚಿತ್ರರಂಗದತ್ತ ಮುಖ ಮಾಡಿದ್ದರ ಪರಿಣಾಮವಾಗಿ ಸುವರ್ಣರ 'ಕುಬಿ ಮತ್ತು ಇಯಾಲಾ' ಸಿನೆಮಾ ಹಾಗೂ 'ಗುಡ್ಡದ ಭೂತ' ಧಾರಾವಾಹಿ ಚಿತ್ರೀಕರಣದ ಸಂದರ್ಭ ಸಹಾಯಕರಾಗಿ

ಕಾರ್ಯ ನಿರ್ವಹಿಸಿದ್ದರು. ಸುವರ್ಣರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ನಟೇಶರ ಪ್ರೀತಿಯ ಆಗ್ರಹಕ್ಕೆ ಮಣಿದ ಸುವರ್ಣರು ಮಂಗಳೂರಿನತ್ತ ತಮ್ಮ ರಂಗ ಪಯಣವನ್ನು ಬೆಳೆಸಿದರು.

ಮಂಗಳೂರಿನ ಸಂಕೇತ್ ಕಲಾವಿದರ ತಂಡದ ನೇತೃತ್ವದಲ್ಲಿ 'ಉರುಳು' ನಾಟಕವನ್ನು ನಿರ್ದೇಶಿಸುವುದಕ್ಕೆ ಮನಸ್ಸು ಮಾಡಿದರು ಸುವರ್ಣರು. ಮೂರೇ ಪಾತ್ರವಾದದ್ದರಿಂದ ಸೂಕ್ತ ಕಲಾವಿದರನ್ನು ಆಯ್ಕೆ ಮಾಡಿದರು. ಅವರೂ ಚೆನ್ನಾಗಿ ಸಹಕರಿಸಿದ್ದರಿಂದ ವಾಚಿಕದ ಸಂದರ್ಭದಲ್ಲಿ ನಾಟಕ ಪ್ರಯೋಗಿಸಬಹುದು ಎನ್ನುವ ನಿರ್ಧಾರಕ್ಕೂ ಬಂದರು ಸುವರ್ಣರು. ಹದಿನೈದು ದಿನಗಳ ಬಳಿಕ 'ಸಂಭಾಷಣೆ ಬಾಯಿಪಾಠ ಮಾಡಿ, ಮುಂಬಯಿಯಿಂದ ಬಂದು ಬ್ಲಾಕಿಂಗ್ ಮಾಡುತ್ತೇನೆ' ಎಂದು ತಿಳಿಸಿದ ಸುವರ್ಣರು ಮುಂಬಯಿಗೆ ಹೊರಡಲು ಅಣಿಯಾದರೆ, ಕಲಾವಿದರೆಲ್ಲಿ ಬಿಡುತ್ತಾರೆ? ರಂಗ ಪ್ರಯೋಗವೊಂದನ್ನು ಪ್ರದರ್ಶಿಸಲೇಬೇಕು ಅನ್ನುವ ರಂಗ ಪ್ರೀತಿ, ದಾಹ ಸುವರ್ಣರನ್ನು ಮುಂಬಯಿಗೆ ತೆರಳುವುದಕ್ಕೆ ಬಿಡಲೇ ಇಲ್ಲ. 'ನಾವು ಸಿದ್ಧರಾಗಿಬಿಟ್ಟಿದ್ದೇವೆ. ಬಾಯಿಪಾಠ ಆಗಿಬಿಟ್ಟಿದೆ. ಇನ್ನೆರಡೇ ದಿನ ಸಾಕು ಪಕ್ಕಾ ಆಗುವುದಕ್ಕೆ. ನೀವು ಪ್ರದರ್ಶನ ಮುಗಿಸಿಯೇ ಮುಂಬಯಿಗೆ ತೆರಳಬಹುದು' ಎನ್ನುವ ಆಗ್ರಹಕ್ಕೆ ಸುವರ್ಣರೂ 'ಹೂಂ' ಅಂದರು. ಇನ್ನೂ ಇಪ್ಪತ್ತು ದಿನ ಇಲ್ಲೇ ಉಳಿದ ಸುವರ್ಣರು ನಾಟಕವನ್ನು ಪ್ರದರ್ಶನಕ್ಕೆ ಅಣಿಗೊಳಿಸಿದರು. ರಂಗ ವಿನ್ಯಾಸ ನಿರ್ವಹಿಸಿದ ಪ್ರಖ್ಯಾತ ಕಲಾವಿದ ಸುದೇಶ್ ಮಹಾನ್ ಬೆಂಗಳೂರಿನಿಂದ ಬಂದು ಕಾರಾಗೃಹದ ಸೆಟ್ ಅನ್ನು ಸ್ವತಃ ತಯಾರಿಸಿಕೊಟ್ಟು ಸಹಕರಿಸಿದ್ದರು. ಪ್ರದರ್ಶನವಂತೂ ಬಹಳ ಸೊಗಸಾಗಿ ಮೂಡಿಬಂತು. ಪತ್ರಿಕೆಗಳಂತೂ ಮಂಗಳೂರಿನ ರಂಗಭೂಮಿಗೆ ಹೊಸ ಸಂಚಲನ ಮೂಡಿಸಿದ ಈ ನಾಟಕದ ಬಗ್ಗೆ ಮೌಲಿಕ ವಿಮರ್ಶೆಯನ್ನೇ ಬರೆದು ಪ್ರಕಟಿಸಿದವು. ರಂಗಪ್ರೇಮಿಗಳೆಲ್ಲರ ಮುಕ್ತಕಂಠದ ಶ್ಲಾಘನೆಗೆ ಪಾತ್ರವಾದ 'ಉರುಳು' ನಾಟಕ ಮಂಗಳೂರಿನ ಹವ್ಯಾಸಿ ರಂಗಭೂಮಿಯನ್ನು ಮತ್ತೆ ಸಕ್ರಿಯಗೊಳಿಸಿದ ಕೀರ್ತಿಗೆ ಭಾಜನವಾಯಿತು. ಬಹಳ ಖುಷಿಯೊಂದಿಗೆ ಸುವರ್ಣರು ಮುಂಬಯಿಗೆ ಹಿಂದಿರುಗಿದರು.

ಕೆಲವು ದಿನಗಳ ಬಳಿಕ ಮತ್ತೆ ಮಂಗಳೂರಿನ ಕಲಾವಿದರಿಂದ ಫೋನ್. 'ಉರುಳು ನಾಟಕ ಪ್ರದರ್ಶನಕ್ಕೆ ಬೇಡಿಕೆ ಬರುತ್ತಿದೆ. ತಾವು ಇನ್ನೊಮ್ಮೆ ಬಂದು ನಮ್ಮ ಜೊತೆಗಿದ್ದು ಸುಧಾರಣೆಯಿದ್ದರೆ ಸೂಚಿಸಿ' ಎಂದು ಕೇಳಿಕೊಂಡರು. ಸುವರ್ಣರು ಮಂಗಳೂರಿಗೆ ಬಂದು ಒಂದಷ್ಟು ತಿದ್ದಿದರು. ಈ ಪ್ರಯೋಗ ಮೊದಲಿನದ್ದಕ್ಕಿಂತ ಇನ್ನಷ್ಟು ಪ್ರೌಢವಾಗಿ ಮೂಡಿಬಂತು. ಉಡುಪಿ ರಂಗಭೂಮಿ ಸಂಸ್ಥೆಯ ರಾಜ್ಯ ಮಟ್ಟದ ನಾಟಕೋತ್ಸವದಲ್ಲಿ ಉತ್ತಮ ನಟ ಮತ್ತು ಉತ್ತಮ ಸಹ ನಟ ಎರಡು ಪ್ರಶಸ್ತಿಯೂ ಸಂದಿದೆ.

ಮುಂಬಯಿಯಲ್ಲಿ ರಂಗ ಜಗತ್ತಿನಲ್ಲಿ ಅನೇಕ ಪ್ರಯೋಗಗಳೊಂದಿಗೆ ಖ್ಯಾತಿ ಗಳಿಸಿದ್ದ ಸುವರ್ಣರು ತಮ್ಮದೇ ಹುಟ್ಟೂರು ಮಂಗಳೂರಿನ ಕಡೆಗೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದ್ದು, ಅಲ್ಲೂ ಯಶಸ್ಸಿನ ಗಾಥೆಯನ್ನು ಆರಂಭಿಸಿದ್ದು ಅವರ ಸಾಧನೆಯ ಮೈಲುಗಲ್ಲನ್ನು ಬೆಟ್ಟುಮಾಡುತ್ತದೆ.

ಈ ನಾಟಕಕ್ಕೆ ಮುಂಬಯಿ ಹಾಗೂ ಮಂಗಳೂರಿನಲ್ಲಿ ದೊರೆತ ಪ್ರತಿಕ್ರಿಯೆಗಳ ಬಗ್ಗೆ ಸುವರ್ಣರು ಸಂದರ್ಶನದಲ್ಲಿ ಅಭಿಪ್ರಾಯಿಸುವುದು ಹೀಗೆ: 'ಉರುಳು ನಾಟಕಕ್ಕೆ ಮುಂಬಯಿಯಲ್ಲಿ ಪ್ರಥಮ ಪ್ರದರ್ಶನಕ್ಕೆ ಸಿಕ್ಕ ಪ್ರತಿಕ್ರಿಯೆಗಿಂತ ಮಂಗಳೂರಿನಲ್ಲಿ ವ್ಯಕ್ತವಾದ ಪ್ರತಿಕ್ರಿಯೆ ಅದ್ಭುತ. ಇದರಿಂದ ಏನು ವ್ಯಕ್ತವಾಗುತ್ತದೆ ಎಂದರೆ ಒಂದು ನಾಟಕಕ್ಕೆ ಬೇರೆ ಬೇರೆ ಕಡೆಯಲ್ಲಿ ಸಿಗುವ ಪ್ರತಿಕ್ರಿಯೆ ಬೇರೆ ಬೇರೆಯಾಗಿರುತ್ತದೆ. ಕಾರಣ, ಪ್ರತಿಕ್ರಿಯೆ ಆಯಾ ಪ್ರದೇಶದ ಪ್ರೇಕ್ಷಕರ ಅಭಿರುಚಿ, ಶಿಕ್ಷಣ ಮತ್ತು ಅವರ ಅನುಭವಗಳ ಮೇಲೆ ಹೊಂದಿರುತ್ತದೆ. ನಾವು 'ಸತ್ಯಂ ವದ ಧರ್ಮಂ ಚರ' ನಾಟಕವನ್ನು ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಪ್ರದರ್ಶಿಸಿದಾಗ ಇದರ ಸ್ಪಷ್ಟ ಅನುಭವ ನಮಗಾಗಿತ್ತು.'

ಮೂರೇ ಮೂರು ಪಾತ್ರಗಳ ಮೂಲಕ ದಯಾ ಮರಣದ ಕುರಿತ ಚರ್ಚೆಯನ್ನು ಮರ್ಮಸ್ಪರ್ಶಿಯಾಗಿ ಚಿತ್ತರಿಸುವ ನಾಟಕ 'ಉರುಳು'. ಎರಡೇ ಪಾತ್ರಗಳು ನ್ಯಾಯಾಲಯವನ್ನು ಸೃಷ್ಟಿಸುವುದು ಹಾಗೂ ಏಳೆಂಟು ಪಾತ್ರಗಳ ಪರಕಾಯ ಪ್ರವೇಶವನ್ನು ಮಾಡುವುದು, ನಾನಾ ಮನಸ್ಸು, ಆಲೋಚನೆ, ಚಿಂತನೆ, ವಾದ, ವಿವಾದಗಳನ್ನು ಮುಂದಿಡುವುದು ಪ್ರೇಕ್ಷಕರ ಮನದಲ್ಲಿ ಆಲೋಚನೆಗಳ ಸುಗ್ಗಿಯನ್ನು ಉಕ್ಕಿಸುತ್ತದೆ. ಮನಸ್ಸು ಆರ್ದ್ರಗೊಳಿಸುವ, ವಿಚಾರ ಹರಿತಗೊಳಿಸುವ ಅನನ್ಯ ಶಕ್ತಿ ಇರುವುದೇ ಇಲ್ಲಿನ ನಾಟಕೀಯತೆಯೊಳಗೆ; ಅಸಾಧಾರಣ ಎನ್ನುವಂತೆ ಸನ್ನಿವೇಶವನ್ನು ಹೆಣೆದುಕೊಟ್ಟ ರೀತಿಯಲ್ಲಿ. ಉಸಿರು ಬಿಗಿ ಹಿಡಿದು ನೋಡಿಸುವ, ಒಂದರೆಕ್ಷಣವೂ ಬೋರ್ ಅನ್ನಿಸದ ಶಕ್ತಿ ಈ ನಾಟಕಕ್ಕೆ ಬಂದದ್ದೇ ನಿರ್ದೇಶಕ ಸುವರ್ಣರ ಶಿಸ್ತುಬದ್ಧ ಕುಸುರಿಗಾರಿಕೆಯಿಂದಲೇ. ರಿಕ್ತ ರಂಗಭೂಮಿಯ ಪರಿಕಲ್ಪನೆಯನ್ನು ಕನ್ನಡ ರಂಗಭೂಮಿಗೆ ಪರಿಚಯಿಸಿದ ಶ್ರೇಷ್ಠ ನಾಟಕವಾಗಿ ಬಾಳುತ್ತದೆ ಇದು. ಸುವರ್ಣರು ಮುಂಬಯಿಯ 'ಕರ್ನಾಟಕ ಸಂಘ'ದ ಸದಸ್ಯರಿಗೂ ಈ ನಾಟಕವನ್ನು ಮೊದಲು ನಿರ್ದೇಶಿಸಿದ್ದಾರೆ. ಬಳಿಕ ಮಂಗಳೂರಿನ 'ಸಂಕೇತ್' ತಂಡದ ಕಲಾವಿದರಿಗೆ ನಿರ್ದೇಶಿಸಿದ್ದಾರೆ. ಇದೀಗ ಮಂಗಳೂರಿನಲ್ಲಿ ನೆಲೆಸಿದ ಬಳಿಕ 'ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ' ಬ್ಯಾನರ್‌ನಡಿ ಪ್ರದರ್ಶಿಸುತ್ತಿದ್ದಾರೆ. ಅಂತಾರಾಷ್ಟ್ರೀಯ ಚಿತ್ರೋತ್ಸವ ಒಂದರಲ್ಲಿ ಪ್ರದರ್ಶಿತವಾದ ಹೆಸರಾಂತ ಸಿನೆಮಾ ನಿರ್ದೇಶಕ ಕೀಸ್ಲೋವಸ್ಕಿಯ ಸಿನಿಮಾವೊಂದಕ್ಕೆ ಸರಳ ರಾಗವೊಂದನ್ನೇ ವಿಭಿನ್ನ ಸಂದರ್ಭ ಸನ್ನಿವೇಶಗಳಿಗೆ ವಿವಿಧ ರೀತಿಯಲ್ಲಿ ಬಳಸಿದ ವಿಧಾನದಿಂದ ಬಹಳವಾಗಿ ಪ್ರಭಾವಿತರಾಗಿದ್ದರು. ದೃಶ್ಯ ಫೇಡ್ ಇನ್, ಫೇಡ್ ಔಟ್ ಆಗುವಲ್ಲಿ ಬೆಳಕು ಮತ್ತು ಧ್ವನಿ ಪಾತ್ರಗಳೇ ಆಗಿಬಿಡುವುದು ಅವರನ್ನು ಬಹಳವಾಗಿ ತಟ್ಟಿತ್ತು. ಸುವರ್ಣರು ಒಂದು ಟ್ಯೂನ್ ಅನ್ನು ನಿರ್ದೇಶಕರಿಂದ ಹೊರಡಿಸಿ ಅದನ್ನೇ ನಾನಾ ಸನ್ನಿವೇಶಗಳಿಗೆ ಬಗೆ ಬಗೆಯಾಗಿ ಅಳವಡಿಸುವ ಪ್ರಯತ್ನ ಮಾಡಿದರು, ಯಶಸ್ವಿಯೂ ಆದರು. 'ಉರುಳು' ನಾಟಕ ರಾಜ್ಯಾದ್ಯಂತ ಸುಮಾರು 45 ಪ್ರದರ್ಶನಗಳ ಮೂಲಕ ಹೊಸ ಮೈಲುಗಲ್ಲೊಂದನ್ನು ತೆರೆದಿಟ್ಟಿದೆ. ಅರಿತ, ಹರಿತ ವಿಮರ್ಶಕ ಗೋಪಾಲ ತ್ರಾಸಿ ಅವರು 'ಈ ನಾಟಕ ನಿರ್ದೇಶಕರ ಜಾಣ್ಮೆ ಮತ್ತು ಕ್ರಿಯಾಶೀಲತೆಗೆ ನಿಜಕ್ಕೂ ಸವಾಲೆಸೆಯುತ್ತದೆ' (ವಾರ್ತಾಭಾರತಿ ಫೆ.9,2011) ಎಂದು ಅಭಿಪ್ರಾಯಿಸಿದ್ದಾರೆ.

ಸವಾಲುಗಳನ್ನೇ ಸ್ವೀಕರಿಸಿ ಅವನ್ನು ಯಶಸ್ವಿಯಾಗಿ ದಾಟುವುದನ್ನು ರೂಢಿಸಿಕೊಂಡ ಸುವರ್ಣರು ಇಲ್ಲೂ ಅದನ್ನೇ ನಿರೂಪಿಸಿದ್ದಾರೆ. ಉತ್ಕೃಷ್ಟ ಪ್ರಯೋಗದ ಕನಸು ನನಸಾಗಿಸುವುದಕ್ಕೆ ತಮ್ಮ ಶಕ್ತಿ ಧಾರೆ ಎರೆದ ಸುವರ್ಣರು ಕಲಾವಿದರಲ್ಲೂ ಈ ಛಾಲೆಂಜ್ ಸ್ವೀಕಾರದ ಛಲವನ್ನು ಹುಟ್ಟುಹಾಕುತ್ತಾರೆ. ಇಲ್ಲಿ ತನ್ಮಯತೆ, ಹಟ, ಸಾಧನೆ, ಶಿಸ್ತು ಎದ್ದು ಕಾಣುತ್ತದೆ. ಈ ನಾಟಕದ ಮೂಲ ಕರ್ತೃ ಶಂಕರ ಶೇಷ ಅವರ ಪತ್ನಿ ಸುವರ್ಣರ ಪ್ರಯೋಗವನ್ನು ನೋಡಿ ಮೆಚ್ಚಿ 'ರಿಕ್ತ ರಂಗಭೂಮಿಯ ಥೀಮ್‌ನೊಳಗೆ ಚೆನ್ನಾಗಿ ನಿರ್ದೇಶಿಸಿದ್ದೀರಿ' ಎಂದು ಶ್ಲಾಘಿಸಿದ್ದಾರೆ.

'ಒಂದೂ ಮುಕ್ಕಾಲು ಗಂಟೆ ಕಾಲ ನಿರಾತಂಕವಾಗಿ ಸಾಗುವ ಈ ನಾಟಕದಲ್ಲಿ ಸಂಭಾಷಣೆ ಹಾಗೂ ಅಭಿನಯ ಪರಸ್ಪರ ಕೈ ಜೋಡಿಸಿದೆ. ಸುವರ್ಣರ ಮಾಸ್ತರಿಕೆಯ ಉಚ್ಚಕಂಠ ನಾಟಕದ ಪಾತ್ರಗಳ ಮೂಲಕವೂ ಹೊರಹೊಮ್ಮಿದೆ. ಪ್ರೇಕ್ಷಕರನ್ನು ಮಿಸುಕಾಡದಂತೆ ಮಾಡುವ ಶಕ್ತಿ ಈ ನಾಟಕಕ್ಕಿದೆ. ನಟರನ್ನು ದುಡಿಸಿಕೊಂಡ ಬಗೆಯೂ ಅಸಾಧಾರಣವಾದದ್ದು' (ಜನವರಿ 2004) ಎಂದು 'ಪ್ರಜಾವಾಣಿ' ಪತ್ರಿಕೆ ವಿಶ್ಲೇಷಿಸಿದೆ.

## ಕೋರ್ಟ್‌ಮಾರ್ಷಲ್‌ಗೆ ಸುವರ್ಣೋತ್ಸವ

ಸುವರ್ಣರು ಒಂದಾದ ನಂತರ ಒಂದು ಪ್ರಯೋಗವನ್ನು ನಡೆಸುತ್ತಲೇ ಇರುವವರು. ನಾಟಕ, ಸಿನಿಮಾ, ಧಾರಾವಾಹಿ, ಸಾಕ್ಷ್ಯಚಿತ್ರ, ಕಿರುಚಿತ್ರಗಳ ನಡುವೆ ಆರೋಗ್ಯ ಕೈಕೊಡುತ್ತಿದ್ದಾಗಲೂ ಅವರು ಚಿಂತಿಸುತ್ತಿದ್ದುದು ಹೊರತನ್ನು ಸೃಷ್ಟಿಸುವ ಕಡೆಗೇ.

ರಂಗ ಚೈತನ್ಯ ಅವರ ಹೃದಯ ಬೇನೆಯನ್ನೇ ಮೆಟ್ಟಿ ನಿಲ್ಲುವಂತೆ ಮಾಡುತ್ತದೆ. ಸೈನಿಕ ಕೋರ್ಟ್ ಕಥಾನಕವನ್ನು ತನ್ನದೇ ಆದ ನೆಲೆಯಲ್ಲಿ ರಂಗಕ್ಕಿಳಿಸಬಹುದಾದ ಬಗ್ಗೆ ಸ್ಪಷ್ಟಗೊಂಡ ಸುವರ್ಣರು 'ಕೋರ್ಟ್ ಮಾರ್ಷಲ್' ನಿರ್ದೇಶನಕ್ಕೆ ತಮ್ಮನ್ನು ಒಪ್ಪಿಸಿಕೊಳ್ಳುತ್ತಾರೆ. ಹದಿನೈದು ವರ್ಷಗಳ ಹಿಂದೆ ಆರಂಭಗೊಂಡ ಈ ಪ್ರಯೋಗ ಇವತ್ತಿಗೂ ಬಹುಬೇಡಿಕೆಯಲ್ಲಿದೆ. 'ಕೋರ್ಟ್ ಮಾರ್ಷಲ್' ಸುವರ್ಣರ ಹೆಸರನ್ನು ಬಹು ಎತ್ತರಕ್ಕೇರಿಸಿದ ಅತ್ಯುತ್ಕೃಷ್ಟ ಪ್ರಯೋಗವಾಗಿ ಖ್ಯಾತಿ ಗಳಿಸಿದೆ. ಒಂದು ಘಟನೆ, ಅದಕ್ಕೆ ಕಾರಣವಾಗುವ ಸಂಗತಿಗಳು ಹಾಗೂ ಸತ್ಯಾಸತ್ಯತೆಯ ಶೋಧಕ್ರಿಯೆ, ಕಾನೂನಿನ ಚೌಕಟ್ಟು ಹಾಗೂ ಅಮಾನವೀಯತೆ ಹಾಗೂ ಮಾನವತಾವಾದದ ಸಂಘರ್ಷಕ್ಕೆ ಈ ನಾಟಕ ಪ್ರಖರ ವೇದಿಕೆಯಾಗುತ್ತದೆ.

ಗಾರ್ಡ್ ಕರ್ತವ್ಯದಲ್ಲಿದ್ದ ಜವಾನನೊಬ್ಬ ರೆಜಿಮೆಂಟ್ ಒಂದರ ಇಬ್ಬರು ಅಧಿಕಾರಿಗಳ ಮೇಲೆ ಗುಂಡು ಹಾರಿಸುತ್ತಾನೆ. ಒಬ್ಬ ಸ್ಥಳದಲ್ಲೇ ಅಸು ನೀಗಿದರೆ ಇನ್ನೊಬ್ಬನಿಗೆ ಗಂಭೀರವಾದ ಗಾಯಗಳಾಗುತ್ತವೆ. ಇಬ್ಬರು ಅಧಿಕಾರಿಗಳ ಕೊಲೆ ಯತ್ನಕ್ಕೆ ಸಂಬಂಧಿಸಿದಂತೆ ನಡೆಯುವ ಕೋರ್ಟ್ ಮಾರ್ಷಲ್ ನಾಟಕದ ವಸ್ತು. ಆರೋಪಿಗೆ ಆರ್ಮಿ ಆ್ಯಕ್ಟ್ 69 ಮತ್ತು ಇಂಡಿಯನ್ ಪೀನಲ್ ಕೋಡ್ ಕಲಂ 302ರ ಪ್ರಕಾರ ಮರಣದಂಡನೆಯ ಶಿಕ್ಷೆ ವಿಧಿಸಬೇಕು ಎನ್ನುವುದು ವಾದಿ ವಕೀಲನ ವಾದವಾಗಿದೆ. ಪ್ರತಿವಾದಿ ವಕೀಲ ಗುಂಡು

ಹಾರಿಸುವುದಕ್ಕೆ ಆತನಿಗೆ ಎದುರಾದ ಸನ್ನಿವೇಶ ಏನಿರಬಹುದು ಎನ್ನುವ ಸತ್ಯದ ಶೋಧನೆಯನ್ನು ಮಾಡುತ್ತಾನೆ. ಅಸಮಾನತೆ, ಶೋಷಣೆಯ ಮಜಲುಗಳನ್ನು ಬಿಡಿಸಿಡುವಲ್ಲಿನ ಮೊನಚು ವ್ಯಂಗ್ಯ, ಹರಿತ ಲೇವಡಿ ವ್ಯವಸ್ಥೆಯೊಳಗಿನ ಅವ್ಯವಸ್ಥೆಯನ್ನು ಶೋಷಿತರ ಪರವಾದ, ಸ್ತ್ರೀಪರವಾದ ಕಾಳಜಿಯನ್ನು ಅಭಿವ್ಯಕ್ತಿಸಿದ ವಿಧಾನ ನಾಟಕವನ್ನು ಅತ್ಯಂತ ಗಟ್ಟಿಗೊಳಿಸುತ್ತದೆ. 'ಜಾರುವುದು ಯಾವತ್ತೂ ಹೆಣ್ಣೇ, ಗಂಡಲ್ಲ', 'ಸೀಮೆ ಎಣ್ಣೆ ಎರೆದು ಬೆಂಕಿಹಚ್ಚುವುದು ಸೊಸೆಗೇ ಮಗಳಿಗಲ್ಲ' ಅನ್ನುವಂಥ ಮಾತು ಹೆಣ್ಣನ್ನು ನೋಡುವ ದೃಷ್ಟಿಕೋನವನ್ನು ಚುಚ್ಚುತ್ತದೆ. ಉಚ್ಚವರ್ಗದವರ ಸಣ್ಣತನಗಳನ್ನು ಬಟಾಬಯಲುಗೊಳಿಸಿದ ವಿಧಾನ ಇಲ್ಲಿ ಹೃದಯಸ್ಪರ್ಶಿಯಾಗಿದೆ. ಒಬ್ಬೊಬ್ಬ ಪಾತ್ರಧಾರಿಯ ಅಭಿನಯ ಪಕ್ವತೆ ಅದನ್ನು ಮೀರಿಸಿದ ಸಂಭಾಷಣೆಯ ಶ್ರೀಮಂತಿಕೆ ಅಪೂರ್ವವಾದದ್ದಾಗಿದೆ. ಅದರ ಶಕ್ತಿ ಅಪ್ಪಟ ಮನುಷ್ಯತ್ವದ ಹಾದಿಯನ್ನು ತುಳಿಯುವಂತೆ ಪ್ರೇರೇಪಿಸುತ್ತದೆ. ನೋಟ, ಚಲನವಲನದೊಳಗಿನ ಬಿಗಿತನವೇ ಇಡೀ ಪರಿಸ್ಥಿತಿಯನ್ನು ಮನತಟ್ಟುವಂತೆ ಮಾಡಿದೆ. ಆರೋಪಿ ರಾಮಚಂದ್ರನ ಅಸಹಾಯಕತೆಯ ಅಭಿವ್ಯಕ್ತಿ, ತಪ್ಪು ಮಾಡಿಯೂ ತಲೆ ಎತ್ತಿ ನಿಂತ ವ್ಯಕ್ತಿಯೂ ಪ್ರತಿವಾದಿಯ ಶೋಧದಿಂದ ತನ್ನ ತಪ್ಪು ಬೆಳಕಿಗೆ ಬಂದಾಗ ವ್ಯಕ್ತಪಡಿಸುವ ಹತಾಶೆಯ ಭಂಡತನ, ಪರಿಣಾಮವಾಗಿ ತನ್ನನ್ನೇ ತಾನು ಶೂಟ್ ಮಾಡಿಕೊಳ್ಳುವುದು ಎಲ್ಲವೂ ಧ್ವನಿಪೂರ್ಣವಾಗಿದೆ. ಮರುದಿನ ರಾಮಚಂದ್ರನ ವಿಷಯದಲ್ಲಿ ತೀರ್ಪು ನೀಡುವುದಿದ್ದರೂ – ತೀರ್ಪು ಏನೇ ಬರಬಹುದು. ಆದರೂ ಇಂದು ಆತನ ಹೆಗಲ ಮೇಲೆ ಕೈ ಇರಿಸಿ ಪಾರ್ಟಿ ಆಚರಿಸುವ ಜಡ್ಜ್‌ನ ಸ್ವಭಾವ ಮನುಷ್ಯತ್ವವನ್ನು ಮಾರ್ಮಿಕವಾಗಿ ಕಟ್ಟಿಕೊಡುವುದೇ ಆಗಿದೆ.

ಸ್ವದೇಶ್ ದೀಪಕ್ ಅವರು ಹಿಂದಿಯಲ್ಲಿ ಬರೆದ ಈ ನಾಟಕವನ್ನು ತಜ್ಞ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಘನ ಗಂಭೀರ ನಾಟಕದೊಳಗಿನ ಸಂದರ್ಭವನ್ನು ಅರ್ಥೈಸುವ ಚಲನವಲನ, ಹಾವ ಭಾವ, ಭಂಗಿ ಮೈನವಿರೇಳಿಸುತ್ತವೆ. ಹಿತಮಿತ ಹಾಗೂ ನಾಟಕದ ಓಟ್ಟಂದಕ್ಕೆ ಪೂರಕವಾಗುವ ಸಂಗೀತ, ನಾನಾ ಸಂದರ್ಭಗಳನ್ನು ಕಣ್ಣಿಗೆ ಕಟ್ಟಿಸುವ ಬೆಳಕು, ಸಂಘರ್ಷ, ಉತ್ಕರ್ಷದ ಪೋಷಣೆ ನಾಟಕವನ್ನು ಬಿಗಿ ಹಿಡಿದು ನೋಡಿಸುತ್ತದೆ. ಇಲ್ಲಿ ಫ್ಯೂಷನ್ ಸಂಗೀತವನ್ನು, ಸೈನ್ಯದ ಮಾರ್ಚಿಂಗ್ ಟ್ಯೂನ್ ಅನ್ನು ಥೀಮ್ ಮ್ಯೂಸಿಕ್ ಆಗಿ ತೆಗೆದುಕೊಂಡು ಬೇರೆ ಬೇರೆ ಸಂದರ್ಭಗಳಿಗೆ ಸಮರ್ಥವಾಗಿ ಅಳವಡಿಸಿದ್ದಾರೆ. ಕತ್ತಲೆ, ಬೆಳಕು, ಮೌನವೂ ಇಲ್ಲಿ ಪಾತ್ರವಾಗಿಬಿಡುತ್ತವೆ. ಸುವರ್ಣರ ಅನನ್ಯ ತಂತ್ರಗಾರಿಕೆಯೇ ನಾಟಕದ ಯಶಸ್ಸಿಗೆ ಕಾರಣವಾಗಿದೆ. ಇದುವರೆಗೆ 55 ಪ್ರದರ್ಶನಗಳನ್ನು ಕಂಡ ಸಾರ್ಥಕ ಪ್ರಯೋಗವಿದು. ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಬೆಂಗಳೂರು, ಹೆಗ್ಗೋಡು, ಮುಂಬಯಿ, ಧಾರವಾಡ ರಂಗ ಮಂದಿರಗಳಲ್ಲಿ ಎಲ್ಲ ವರ್ಗದ ಪ್ರೇಕ್ಷಕರನ್ನು ತಟ್ಟಿ ಅವರ ಮನದಲ್ಲಿ ಗಟ್ಟಿಯಾಗಿ ನೆಲೆನಿಂತಿದೆ. ಸುವರ್ಣರೆಂದರೆ ಕೋರ್ಟ್‌ಮಾರ್ಷಲ್, ಕೋರ್ಟ್ ಮಾರ್ಷಲ್ ಅಂದರೆ ಸುವರ್ಣರು ಅನ್ನುವಂತಾಗಿದೆ.

'ಹಾಡು ಕುಣಿತ, ಗುಂಪು ದೃಶ್ಯ ಚಲನವಲನಗಳಿಗೆ ಅವಕಾಶವೇ ಇಲ್ಲದಿರುವಾಗಲೂ ಒಂದು ರಂಗಕೃತಿ ಎರಡು ಗಂಟೆಗಳ ಕಾಲ ಪ್ರೇಕ್ಷಕರನ್ನು ಹಿಡಿದಿರಿಸಿ ಅವರನ್ನು ರಂಗಾನುಭವದಲ್ಲಿ ಭಾಗಿಯಾಗುವಂತೆ ಮಾಡುವುದು ಸುಲಭದ ಕೆಲಸವೇನಲ್ಲ. ಆದರೆ ಇಂತಹ ಕಷ್ಟದ ಕೆಲಸವನ್ನು ಅತ್ಯಂತ ಸುಲಭವಾಗಿ ನಿಭಾಯಿಸಿದ, ಒಂದು ಗಂಭೀರ ನಾಟಕವನ್ನು ಪರಿಣಾಮಕಾರಿಯಾಗಿ ನಿರೂಪಿಸಿದ ಹೆಚ್ಚುಗಾರಿಕೆಗೆ ರಂಗ ನಿರ್ದೇಶಕ ಸದಾನಂದ ಸುವರ್ಣ ಮತ್ತು ಅಭಿನಯಿಸಿದ ಎಲ್ಲ ನಟರೂ ಪಾತ್ರರಾಗುತ್ತಾರೆ' ಎಂಬುದು 'ವಿಜಯ ಕರ್ನಾಟಕ' (ಫೆ 10 2002) ಬಗೆದುಕೊಟ್ಟಿದ್ದಾಗಿದೆ.

'ಸುವರ್ಣರ ನಿರ್ದೇಶನದ 'ಕೋರ್ಟ್‌ಮಾರ್ಷಲ್' ಒಂದು ಕಥಾವಸ್ತುವಾಗಿ ಅನ್ವೇಷಕ ನಾಟಕ. ಇಲ್ಲಿ ತೆರೆದುಕೊಳ್ಳುವುದು ಕೇವಲ ಸತ್ಯ ಮಾತ್ರ ಅಲ್ಲ. ಸತ್ಯವನ್ನು ಶೋಧಿಸುವ ನಿರ್ದೇಶಕನ ಮನೋಧರ್ಮ. ಮೂಲ ಮರಾಠಿ ನಾಟಕವನ್ನು ಸುವರ್ಣರು ಆಯ್ಕೆ ಮಾಡಿದ್ದರೂ ಅದನ್ನು ಆರಿಸುವಲ್ಲಿ ಸುವರ್ಣರ ಅನ್ವೇಷಕ ಮನಸ್ಸು ಕೆಲಸ ಮಾಡಿದೆ. ಕಣ್ಣಾರೆ ಕಂಡಿದ್ದರೂ, ಕಿವಿಯಾರೆ ಕೇಳಿದ್ದರೂ ಅದು ಸತ್ಯವೇ ಆಗಿರಬೇಕಾಗಿಲ್ಲ. ಸತ್ಯದಂತೆ ಕಾಣುವ ಸುಳ್ಳುಗಳು ಸೃಷ್ಟಿಸಿರುವ ಸಮಾಧಿಯ ಒಳಗೆ ಅದು ಅಡಗಿಕೊಂಡಿರಬಹುದು. ಒಂದು ಅನ್ವೇಷಣೆ, ಒಳಹೊಕ್ಕು ನೋಡುವ ವಿಶ್ಲೇಷಣೆಯಿಂದ ಸತ್ಯವನ್ನು ಹೊರತೆಗೆಯಲು ಸಾಧ್ಯವಿದೆ ಎನ್ನುವುದನ್ನು ಈ ಮೂಲಕ ತೋರಿಸಿಕೊಡುತ್ತಾರೆ. ಅದರಲ್ಲೂ ನ್ಯಾಯಾಂಗ ವ್ಯವಸ್ಥೆಯ ಒಳ ಸುಳಿಗಳನ್ನು, ಅದು ಮುಚ್ಚಿಹಾಕಬಹುದಾದ ಸತ್ಯಗಳನ್ನು, ತೆರೆದಿಡುತ್ತಾರೆ' ಎಂದು 'ವಿಜಯ ಕರ್ನಾಟಕ'ದ ಕಿರಿಯ ಸಹಾಯಕ ಸಂಪಾದಕ ಎ. ಕೃಷ್ಣಭಟ್ ನೆಗೆದಾಡುತ್ತಾರೆ.

ಇದು ಕನ್ನಡಕ್ಕೆ ತೀರಾ ಹೊಸ ಬಗೆಯ ನಾಟಕ. ಸುವರ್ಣರೇ ಈ ನಾಟಕವನ್ನು ಕನ್ನಡಕ್ಕೆ ವೊದಲಾಗಿ ತಂದರು. ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ಈ ನಾಟಕ ಪ್ರದರ್ಶನಗೊಂಡಿದೆ ನಿಜ, ಆದರೆ ಅಲ್ಲಿನ ಪ್ರಯೋಗಗಳಿಗಿಂತ ಸುವರ್ಣರ ಪ್ರಯೋಗವೇ ತೂಕದ್ದಾಗಿದೆ, ವಿಶಿಷ್ಟತೆಗೆ ಹೊಸ ಭಾಷ್ಯ ಬರೆದಿದೆ ಎಂದು ಅಭಿಪ್ರಾಯಿಸಿದಾಗ ಸುವರ್ಣರು ಬೆರಗು, ಸಂತೋಷ ಹಾಗೂ ಧನ್ಯತೆಯನ್ನು ಅನುಭವಿಸಿದ್ದಾರೆ. ಆ ಮೆಚ್ಚುಗೆಯ ಜತೆಗೆ ಪತ್ರಿಕೆಗಳೂ ಮೌಲಿಕ ನಾಟಕವೆಂದೇ ವಿಮರ್ಶಿಸಿವೆ.

ಗಂಭೀರ ನಾಟಕವೊಂದನ್ನು ಒಂದೂಮುಕ್ಕಾಲು ಗಂಟೆಗಳ ಕಾಲ ಒಂದರೆಕ್ಷಣವೂ ಕಣ್ ರೆಪ್ಪೆ ಮುಚ್ಚದಷ್ಟು ಕುತೂಹಲದೊಂದಿಗೆ ನೋಡಿಸುವ ತಾಕತ್ತು ಬಂದಿರುವುದು ಅಲ್ಲಿನ ಸರಳತೆ ಹಾಗೂ ಕಲಾತ್ಮಕತೆ, ಧ್ವನಿಪೂರ್ಣತೆಗೆ. ಶ್ರೇಷ್ಠ ರಂಗಕೃತಿಯಾಗಿಸಿರುವುದು ಅವರ ಅನನ್ಯ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ. 'ಸತ್ಯಂ ವದ ಧರ್ಮಂ ಚರ' ನಾಟಕದ ವಿದ್ಯಾನಂದನ ಪಾತ್ರ ಅಭಿನಯದ ನಿಟ್ಟಿನಿಂದ ಎವರ್‌ಗ್ರೀನ್ ಅನ್ನಿಸಿಕೊಂಡರೆ ನಿರ್ದೇಶನದ ನಿಟ್ಟಿನಲ್ಲಿ 'ಕೋರ್ಟ್‌ಮಾರ್ಷಲ್' ಎವರ್‌ಗ್ರೀನ್.

'ಕೋರ್ಟ್ ಮಾರ್ಷಲ್'ನೊಳಗಣ ಮಾನವಾಂತಃಕರಣವನ್ನು, ಸ್ತ್ರೀಪರ ಕಾಳಜಿಯನ್ನು ಅತ್ಯಂತ ಪರಿಣಾಮಕಾರಿಯಾಗುವಂತೆ ಮನ ತಟ್ಟುವಂತೆ ನಿರ್ದೇಶಿಸುವಲ್ಲಿನ ತಂತ್ರಗಾರಿಕೆ ಸುವರ್ಣರ ಅನನ್ಯತೆಗೇ ಹೊಸ ಭಾಷ್ಯ ಬರೆಯುತ್ತದೆ.

'ಕೋರ್ಟ್ ಮಾರ್ಷಲ್'ನ ಹೆಚ್ಚು ಪ್ರದರ್ಶನಕ್ಕೆ ಕಾರಣ ನಮ್ಮ ಪ್ರಯೋಗದ ಅಚ್ಚುಕಟ್ಟುತನವಿರಬಹುದು. ಇನ್ನೊಂದು ಮುಖ್ಯ ವಿಷಯವೇನೆಂದರೆ ಇದು ಎಲ್ಲ ಸ್ತರದ ಪ್ರೇಕ್ಷಕ ವರ್ಗವನ್ನು ಆಕರ್ಷಿಸುವುದರಲ್ಲಿ ಯಶಸ್ವಿಯಾಗಿದೆ. ಬೇರೆ ಬೇರೆ ಭಾಷೆಗಳಲ್ಲಿ ಇದರ ಪ್ರಯೋಗಗಳು ಮುಂಬಯಿಯಲ್ಲಿ ನಡೆದಿವೆ. ನಾವು ಅಲ್ಲಿನ ಕರ್ನಾಟಕ ಸಂಘದ ಸಭಾಗೃಹದಲ್ಲಿ ಇದನ್ನು ಪ್ರದರ್ಶಿಸಿದಾಗ ಅಲ್ಲಿನ ತಾಂತ್ರಿಕ ವಿಭಾಗದವರು 'ಇಲ್ಲಿ ಮೊದಲು ಪ್ರಯೋಗವಾಗಿರುವ ಹಿಂದಿ ಮತ್ತು ಮರಾಠಿ ಪ್ರಯೋಗಗಳಿಗಿಂತ ನಿಮ್ಮ ಕನ್ನಡದ ಪ್ರಯೋಗವೇ ಉತ್ತಮ' ಎಂದು ತಿಳಿಸಿದಾಗ ನಮಗೆ ಆಶ್ಚರ್ಯ, ಆನಂದ ಒಟ್ಟಿಗೇ ! ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಒತ್ತಾಯದ ಮೇರೆಗೆ ನಿರ್ದೇಶಕ ಪ್ರಸನ್ನ ಅವರು ಧಾರವಾಡದ ಉತ್ಸವದಲ್ಲಿ ಪ್ರದರ್ಶಿತವಾದ ಈ ನಾಟಕವನ್ನು ನೋಡಲು ಬಂದಿದ್ದರು. ನಾಟಕ ನೋಡಿ ಮೆಚ್ಚಿದ ಪ್ರಸನ್ನ ಹೆಗ್ಗೋಡಿನಲ್ಲಿ ತಾವು ನಡೆಸುತ್ತಿರುವ ಗ್ರಾಮೀಣ ಹೆಣ್ಣು ಮಕ್ಕಳ 'ಚರಕ' ಸಂಸ್ಥೆಯ ಒಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರದರ್ಶಿಸಲು ಈ ನಾಟಕ ತಂಡವನ್ನು ಆಹ್ವಾನಿಸಿದರು. ಇಂತಹ ನಾಟಕಗಳನ್ನು ನೋಡಿರದ ಗ್ರಾಮೀಣ ಹೆಂಗಸರು ಹೇಗೆ ಪ್ರತಿಕ್ರಿಯಿಸುತ್ತಾರೋ ಎಂದು ಹೆದರಿದ್ದ ನಮಗೆ ನೆರೆದ ಹೆಂಗಸರು, ಮಕ್ಕಳು ತನ್ಮಯರಾಗಿ ನಾಟಕ ನೋಡಿದ್ದನ್ನು ಕಂಡು ನೆಮ್ಮದಿ. ಎರಡು ದಿವಸಗಳ ನಂತರ ಚರಕದ ಪ್ರೇಕ್ಷಕರು ನಾಟಕ ನೋಡಿ ಮೆಚ್ಚಿದ್ದಾರೆ ಎಂದು ಪ್ರಸನ್ನ ಕಾಗದ ಬರೆದು ತಿಳಿಸಿದಾಗ ಈ ನಾಟಕ ಎಲ್ಲ ವರ್ಗದ ಪ್ರೇಕ್ಷಕರ ಮೇಲೆ ಪರಿಣಾಮ ಬೀರಿದುದು ನನಗೆ ಖಚಿತವಾಯಿತು...' ಎಂದು ನೆನಪಿಸಿಕೊಳ್ಳುತ್ತಾರೆ ಸುವರ್ಣರು. ('ವಿಜಯ ಕರ್ನಾಟಕ', ಡಿಸೆಂಬರ್ 24, 2010)

ಕೋರ್ಟ್ ಹಿನ್ನೆಲೆಯನ್ನೇ ಇರಿಸಿಕೊಂಡು ಮಂಗಳೂರಿನ ಕಲಾವಿದರಿಗಾಗಿ ನಿರ್ದೇಶಿಸಿದ ಇನ್ನೊಂದು ನಾಟಕ 'ಮಳೆ ನಿಲ್ಲುವವರೆಗೆ'. ನಿವೃತ್ತ ವಕೀಲರ ಸಮಯ ಕಳೆಯುವ ವಕೀಲಿ ವೃತ್ತಿಯಾಟಕ್ಕೆ ಮನೆಯೇ ಕೋರ್ಟ್ ಆಗಿ ಪರಿವರ್ತಿಸುವ ನಾಟಕ. ಇಲ್ಲಿ ಆಟದ ಹೆಸರಿನಲ್ಲಿ ನಡೆಯುವ ವಾದ ಪ್ರತಿವಾದ ಸತ್ಯವೊಂದನ್ನು ತನ್ನಿಂತಾನೇ ಹೊರಹೊಮ್ಮುವಂತೆ ಮಾಡುವುದು ರೋಚಕತೆ. ಕ್ಷಣ ಕ್ಷಣವೂ ಕುತೂಹಲ, ಮರುಕ್ಷಣದಲ್ಲೇ ಪಡೆದುಕೊಳ್ಳುವ ಅನಿರೀಕ್ಷಿತ ತಿರುವು ನಾಟಕಕ್ಕೆ ಇನ್ನೊಂದೇ ಆಯಾಮವನ್ನು ತಂದುಕೊಡುತ್ತದೆ. ಇಡೀ ನಾಟಕ ಬೆರಗು ಹುಟ್ಟುವಂತೆ ನಿರ್ಮಾಣಗೊಂಡಿದೆ. ಕನ್ನಡಕ್ಕೆ ಬಹಳ ಅಪೂರ್ವದ್ದಾದ ರಂಗಕೃತಿಯಾಗಿ ಸಂದಿದೆ.

ಇಂಗ್ಲಿಷಿನ 'ಡೆಡ್ಲಿಗೇಮ್' ನಾಟಕವನ್ನು ಸುಧೀಂದ್ರ ಎಸ್. ಅವರು ಕನ್ನಡಕ್ಕೆ 'ಮಳೆ ನಿಲ್ಲುವವರೆಗೆ' ಹೆಸರಿನಲ್ಲಿ ರೂಪಾಂತರಿಸಿದ್ದಾರೆ. ಇದನ್ನು ಸ್ವಲ್ಪ ಪರಿಷ್ಕರಿಸಿ ಬಹಳ ಸೂಕ್ಷ್ಮ ಪ್ರಜ್ಞೆಯೊಂದಿಗೆ ರಂಗಕ್ಕೆ ಸಂಯೋಜಿಸಿದ್ದಾರೆ ಸುವರ್ಣರು.

ಗುಡ್ಡದ ತುದಿಯಲ್ಲೊಂದು ಬಂಗಲೆ ಇದೆ. ನಿವೃತ್ತ ಸೆಷನ್ಸ್ ಜಡ್ಜ್ ಆ ಮನೆಯ ಯಜಮಾನ. ನಿವೃತ್ತ ವಕೀಲರಾದ ಶಂಕರ ರಾವ್, ರೆಹಮಾನ್ ಇವರ ಮಿತ್ರರು. ಸುಂದರ್ ರಾವ್ ಅವರ ಮನೆಯಲ್ಲೇ ಇವರಿಬ್ಬರೂ ಸಮಯ ಕಳೆಯುವುದಕ್ಕೆ ತಮ್ಮ ವೃತ್ತಿ ದಿನಗಳಲ್ಲಿ ಕೈಗೆತ್ತಿಕೊಂಡಿದ್ದ ಕೇಸು, ನಡೆಸಿದ್ದ ವಾದ ಪ್ರತಿವಾದವನ್ನೇ ಮತ್ತೆ ಆಟವಾಗಿ ಆಡಿ ನೆನಪಿಸಿಕೊಳ್ಳುವುದನ್ನು ರೂಢಿಸಿಕೊಂಡಿದ್ದರು. ಒಟ್ಟಿನಲ್ಲಿ ಅಣಕು ಕೋರ್ಟ್ ಆಗಿ ಮನೆ ಪರಿವರ್ತನೆಯಾಗುತ್ತದೆ. ಅದೊಂದು ದಿನ ಜೋರು ಮಳೆಯಾಗುತ್ತಿದೆ ಹೊರಗೆ. ಶಂಕರ್ ರಾವ್ ಬಂದಾಗಿದೆ. ರೆಹಮಾನ್ ಖಾನ್‌ನ ಬರುವಿಕೆಯನ್ನು ಕಾಯುತ್ತಿದ್ದಾರೆ ಇಬ್ಬರು ಮಿತ್ರರು. ಆದರೆ ಅಷ್ಟರಲ್ಲಿ ಅಪರಿಚಿತನ ಆಗಮನವಾಗುತ್ತದೆ. ಮಳೆಯಿಂದ ರಕ್ಷಿಸಿಕೊಳ್ಳುವುದಕ್ಕೆಂದು ಆತ ಬಂದಿದ್ದಾನೆ. ಆಟದಲ್ಲೇ ಸಂತಸ ಹಾಗೂ ಮಜಾ ಅನುಭವಿಸುವ ಇಬ್ಬರಿಗೂ ಈತನನ್ನು ಕಂಡದ್ದೇ ಒಮ್ಮೆ ಆಶ್ಚರ್ಯವಾಗುತ್ತದೆ ಜತೆಗೆ ತಮ್ಮ ಆಟಕ್ಕೊಬ್ಬ ಹೊಸ ಸದಸ್ಯ ಸಿಕ್ಕಿಬಿಟ್ಟ ಅನ್ನುವ ಖುಷಿಯೂ ಆಗಿಬಿಡುತ್ತದೆ. ರೆಹಮಾನ್ ಖಾನ್ ಕೂಡ ಇದೇ ವೇಳೆಗೆ ಆಗಮಿಸುತ್ತಾರೆ. ಬಲವಂತವಾಗಿ ಅತಿಥಿಯನ್ನು ಆಟಕ್ಕೆ ಸೇರಿಸಿಕೊಳ್ಳುತ್ತಾರೆ. ಆತನನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿ ವಕೀಲಿ ವೃತ್ತಿಯಾಟ ಆರಂಭಗೊಳ್ಳುತ್ತದೆ. ಊಹೆಗೂ ಮೀರಿ ನಡೆಯುವ ವಾದದಲ್ಲಿ ಕಟಕಟೆಯಲ್ಲಿ ನಿಂತ ವ್ಯಕ್ತಿ ನೈಜ ಆರೋಪಿಯಾಗಿ ಅನಾವರಣಗೊಳ್ಳುವುದು, ಆತ್ಮಸಾಕ್ಷಿ ಆತನಿಂದಲೇ ಸಾವಿನ ಶಿಕ್ಷೆ ಪಡೆಯುವಂತೆ ಮಾಡುವ ವಿದ್ಯಮಾನಗಳೆಲ್ಲ ಇನ್ನಿಲ್ಲದಷ್ಟು ಪರಿಣಾಮಕಾರಿಯಾಗಿ ನಾಟಕೀಯಗೊಂಡಿವೆ. ಸುವರ್ಣರು ಆಗುಗೊಳಿಸಿದ್ದಾರೆ.

ಹೊರಗೆ ಸುರಿಯುವ ಮಳೆ, ಹೊಡೆಯುವ ಮಿಂಚು, ಸಿಡಿಯುವ ಸಿಡಿಲು, ಅಬ್ಬರಿಸುವ ಗುಡುಗು, ಸುಯ್ಯೆಂದು ಬೀಸುವ ಬಿರುಗಾಳಿ ಎಲ್ಲವೂ ಇಲ್ಲಿ ಪ್ರಧಾನ ಪಾತ್ರಗಳು. ಜಿಟಿ ಜಿಟಿ ಮಳೆ ಪ್ರೇಕ್ಷಕನಿಗೂ ಮಳೆಯದ್ದೇ ಅನುಭವ. ಈ ಮಳೆ ನಿಲ್ಲುವವರೆಗೆ ಕೋರ್ಟ್ ಆಟ ಅನೇಕ ವಿದ್ಯಮಾನಗಳಿಗೆ ಕನ್ನಡಿಯಾಗುತ್ತದೆ. ಆತ್ಮಸತ್ಯ ಅನ್ನುವುದು ತಪ್ಪಿತಸ್ಥನನ್ನು ಕೊಂದುಕೊಳ್ಳುವ ಕ್ರಿಯೆಗೆ ದೂಡುತ್ತದೆ. ವಂಚನೆಯ ಹಾದಿ ಕೊನೆಗೆ ನೀಡುವುದು ಸಾವಿನ ಮನೆಯನ್ನು ಅನ್ನುವುದನ್ನು ಧ್ವನಿಸುವುದು ಬಹುದೊಡ್ಡ ಸವಾಲು. ಸುವರ್ಣರು ಆ ಪ್ರಕ್ರಿಯೆಯನ್ನು ಬಹಳ ಚೆನ್ನಾಗಿ ರೂಪುಗೊಳಿಸಿದ್ದಾರೆ. ತಮ್ಮ ಕಲಾವಿದರನ್ನು ತಮ್ಮ ಕಲ್ಪನೆಯ ಹಂದರಕ್ಕೆ ಹದಗೊಳಿಸಿದ್ದಾರೆ, ಮಾತಿನ ಗತಿಯಲ್ಲೇ ಘಟನಾವಳಿಯ ಸುರುಳಿಯನ್ನು ಬಿಚ್ಚಿಸಿದ್ದಾರೆ. ಪಾತ್ರೋಚಿತವಾದ ಸಂಭಾಷಣೆಯ ಓಘ ಹಾಗೂ ನಿಧಾನ ಗತಿ ಇಡೀ ದೃಶ್ಯಾವಳಿಯನ್ನು ಕಣ್ಮುಂದೆ ನಿಲ್ಲಿಸುವ ಚಮತ್ಕಾರವನ್ನು ಸುವರ್ಣರು ಲೀಲಾಜಾಲವಾಗಿ ಸಾಧ್ಯವಾಗಿಸಿದ್ದಾರೆ.

ಪರಮಾನಂದನ ಪಾತ್ರದ ಸಂಭಾಷಣೆ ಹಾಗೂ ರೋಮಾಂಚಕಾರಿ ತಿರುವುಗಳನ್ನು ತೆರೆದಿಡುವ ರೀತಿ ನಾಟಕದ ಹೃದಯ. ಆಟಕ್ಕೆಂದು ಕಟಕಟೆಯಲ್ಲಿ ನಿಂತ ಪರಮಾನಂದ ತಾನು ನಿರಪರಾಧಿ ಅನ್ನುವುದನ್ನು ಪ್ರಖರವಾಗಿ ಸಮರ್ಥಿಸುತ್ತಲೇ ಇನ್ನೊಮ್ಮೆ ಗಹಗಹಿಸಿ ನಗುವ ಉತ್ಕರ್ಷದ ಶೃಂಗ ತಲುಪಿದ ಹಂತದಿಂದಲೇ ಅರೆಕ್ಷಣದಲ್ಲಿ ದುಃಖಿಸುವ

ಹಂತಗಳೇ ತಿರುವು ಮುರುವುಗಳ ಕಥೆ ಹೇಳುವ ಘಟ್ಟಗಳು. ಬದುಕಿನ ಮೇಲಿನ ಪ್ರೀತಿ, ಹೃದಯದ ಬೇನೆ ಬೇಸರ, ಕೊಲೆಗೆ ಕಾರಣವಾದ ಸನ್ನಿವೇಶಗಳೆಲ್ಲ ಕುತೂಹಲವನ್ನು, ರೋಚಕತೆಯನ್ನು ಹುಟ್ಟುಹಾಕುತ್ತಲೇ ಮುಂದಿನ ಘಟ್ಟದ ವೀಕ್ಷಣೆಗೆ ಪ್ರೇಕ್ಷಕರನ್ನು ಸಜ್ಜಾಗಿಸುತ್ತಿರುತ್ತವೆ.

ಮಾತಿನಲ್ಲೇ ಘಟನೆಗಳನ್ನು ಕಟ್ಟಿಕೊಡುತ್ತ ಸತ್ಯವನ್ನು ಅನಾಮತ್ತಾಗಿ ಹೊರಗೆಡಹುವ ತಂತ್ರಗಳೇ ನಾಟಕವನ್ನು ಗೆಲ್ಲಿಸಿವೆ. ಸಂಸ್ಕೃತಿ, ಬದುಕು, ಮನೋವಿಪ್ಲವ, ಹೆಣ್ಣು ಗಂಡಿನ ಸಂಬಂಧದ ಎಲ್ಲೆ ಹಾಗೂ ಅದನ್ನು ಮೀರುವ ಪರಿ, ಅದರಿಂದಾಗುವ ಮನೋವೇದನೆ ಹೀಗೆ ಎಲ್ಲವುಗಳ ಚಿತ್ರವೂ ಹಾದು ಹೋಗುತ್ತವೆ. ಪ್ರಬುದ್ಧ, ಪಕ್ವ ನಟನೆ ಬರಿಸುವಲ್ಲಿ, ಮನೋಪಟಲದಲ್ಲಿ ಘಟನಾವಳಿಯ ದೃಶ್ಯ ಬಿತ್ತುವಲ್ಲಿ, ಪ್ರೇಕ್ಷಕನನ್ನು ಇಡಿಯಾಗಿ ಎಚ್ಚರಿಡುವಲ್ಲಿ ಸುವರ್ಣರ ಅದ್ಭುತ ನಿರ್ದೇಶನವೇ ಬೆಳಕಾಗಿದೆ.

2009ರಲ್ಲಿ ಮೊದಲ ಬಾರಿಗೆ ಮಂಗಳೂರಿನಲ್ಲಿ ತುಂಬಿದ ಸಭಾಂಗಣದಲ್ಲಿ ಪ್ರದರ್ಶನಗೊಂಡ ಈ ನಾಟಕ ಉಡುಪಿ ಜಿಲ್ಲೆಯ ಬೈಂದೂರಿನ 'ಲಾವಣ್ಯ ರಂಗ' ತಂಡ ಏರ್ಪಡಿಸಿದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ನಾಲ್ಕು ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಮೈಸೂರಿನ 'ರಂಗಾಯಣ'ದಲ್ಲಿ ಏರ್ಪಡಿಸಿದ ಸಿಜಿಕೆ ನೆನಪಿನ ನಾಟಕೋತ್ಸವದಲ್ಲೂ ಇದು ಪ್ರದರ್ಶನಗೊಂಡು ಜನಮಾನಸವನ್ನು ತಟ್ಟಿ, ಶ್ಲಾಘನೆಗೆ ಪಾತ್ರವಾಗಿದೆ.

'ನಾಟಕವು ಪ್ರೇಕ್ಷಕಾಂಗಣದಲ್ಲಿ ಸೃಷ್ಟಿಸಿದ ವಾತಾವರಣದ ಬಗ್ಗೆ ಇಲ್ಲಿ ಹೇಳಲೇಬೇಕು. ನಿಗೂಢತೆ ಮತ್ತು ಭಯಾನಕತೆಯನ್ನು ಬಿಂಬಿಸುವ ರುದ್ರ ಸುಂದರ ಮನೆಯೊಂದು ವೇದಿಕೆಯ ಮೇಲೆ ಕಲಾತ್ಮಕವಾಗಿ ನಿರ್ಮಾಣವಾಗಿತ್ತು. ಹಿನ್ನಲೆಯಲ್ಲಿ ನಾಟಕದುದ್ದಕ್ಕೂ ಮೂಡಿ ಬಂದ ಮಳೆ-ಗಾಳಿ-ಗುಡುಗು-ಮಿಂಚುಗಳ ಪರಿಣಾಮವು ಘಟನಾವಳಿಗಳ ಆಳವನ್ನು ಇನ್ನಷ್ಟು ಹೆಚ್ಚಿಸುವಂತಿತ್ತು. ಮನುಷ್ಯ ಮನಸ್ಸುಗಳನ್ನು ಬಗೆದು ಅಪರಾಧಗಳನ್ನು ಪತ್ತೆ ಹಚ್ಚಿ ಶಿಕ್ಷಿಸುವುದರಲ್ಲೇ ಖುಷಿಪಡುವ ಈ ಆಟದಲ್ಲಿ ನಾವು ಭಾಗಿಯಾಗಲಾರೆವು ಎಂಬ ಪ್ರತಿಭಟನೆಯ ಧ್ವನಿಯನ್ನು ಪ್ರೇಕ್ಷಕನಲ್ಲೂ ಹುಟ್ಟಿಸುವುದೇ 'ಮಳೆ ನಿಲ್ಲುವವರೆಗೆ' ನಾಟಕದ ಯಶಸ್ಸಿನ ಹಿಂದಿನ ಗುಟ್ಟು' ('ಉದಯವಾಣಿ', ಡಿ.4 2009) ಎಂದು ಸೂಕ್ಷ್ಮ ಹಾಗೂ ತೀಕ್ಷ್ಣ ವಿಮರ್ಶಕಿ ಪಾರ್ವತಿ ಜಿ. ಐತಾಳ್ ಅವರು ಕಂಡುಕೊಂಡಿದ್ದಾರೆ.

'ಮಳೆ ನಿಲ್ಲುವವರೆಗೆ – ಸಮರ್ಥ ನಿರ್ದೇಶನ, ಅನುಭವಿ ನಟರ ಪ್ರಸ್ತುತತೆಯುಳ್ಳ ಕಥಾವಸ್ತು, ಕಲಾತ್ಮಕ ರಂಗಸಜ್ಜಿಕೆ, ರೋಮಾಂಚಕಾರಿ ಶಬ್ದ ಸಂಯೋಜನೆಗಳಿಂದ ಕೂಡಿದ್ದು ಎಲ್ಲ ದೃಷ್ಟಿಯಿಂದಲೂ ರಂಗಾಸಕ್ತ ಪ್ರೇಕ್ಷಕರ ಗಮನ ಸೆಳೆಯಿತು' ಎಂಬುದಾಗಿಯೂ ಉದಯವಾಣಿಯೇ (2009 ಅಕ್ಟೋಬರ್).

'ಉರುಳು', 'ಕೋರ್ಟ್‌ಮಾರ್ಷಲ್', 'ಮಳೆನಿಲ್ಲುವವರೆಗೆ' ನಾಟಕಗಳಲ್ಲಿನ ಸಂಗೀತ ಸಂಯೋಜನೆಯಲ್ಲಿ ಹೊಸತನವಿದೆ. ಸುವರ್ಣರ ಪ್ರವೀಣತೆಗೆ, ಪ್ರಯೋಗಶೀಲತೆಗೆ ಸಂಗೀತ ಸಂಯೋಗ ಸಾಕ್ಷಿ ನುಡಿಯುತ್ತದೆ.

## ತುಳು ರಂಗಭೂಮಿಯಲ್ಲಿ ಸಂಚಲನ

ತುಳು ರಂಗಭೂಮಿಯಲ್ಲಿ ವಿಶೇಷ ಪ್ರಯೋಗ ನಡೆಸಿ ಜನಮನ್ನಣೆ ಪಡೆದಿರುವ ಖ್ಯಾತ ರಂಗಕರ್ಮಿ ಸದಾನಂದ ಸುವರ್ಣರು 2014ರಲ್ಲಿ 'ಕಲಂಕ್‌ದಿ ನೀರ್' ನಾಟಕವನ್ನೂ ನಿರ್ದೇಶಿಸಿ ಮಂಗಳೂರಿನ ತುಳು ರಂಗಭೂಮಿಯಲ್ಲಿ ಮತ್ತೊಮ್ಮೆ ಸಂಚಲನ ಮೂಡಿಸಿದ್ದಾರೆ. ಗಂಭೀರ ಪ್ರೇಕ್ಷಕ ವರ್ಗದ ನಡುವೆ ಪಕ್ಕಾ ವಾಸ್ತವವಾದಿ ರಂಗಕೃತಿಯೊಂದನ್ನು ಯಶಸ್ವಿಯಾಗಿ ಲೋಕಾರ್ಪಣೆ ಮಾಡಿದ್ದಾರೆ. ಸಂಭಾಷಣೆ, ಭಾವನೆಗಳೇ ಪ್ರಧಾನವಾಗಿರುವ, ಎಲ್ಲ ಅತಿಗಳಿಂದ ದೂರವಿರುವ ಸಂಯಮವೂ, ಪ್ರೌಢವೂ ಹಾಗೂ ಮೌಲಿಕವೂ ಆಗಿರುವ ಕೊಡುಗೆ ಇದು.

ಸಂಕ್ರಮಣ ಕಾಲಘಟ್ಟದ ವಾಸ್ತವ ರಂಗಭೂಮಿಯನ್ನು ಪ್ರತಿನಿಧಿಸಿದ ಪ್ರಸಿದ್ಧ ನಾಟಕಕಾರ ಜಿ.ಬಿ.ಜೋಶಿ ಅವರ 'ಕದಡಿದ ನೀರು' ನಾಟಕ, ಹಳ್ಳಿ ಬದುಕನ್ನು ಹುಬೇ ಹುಬೇ ತೆರೆದಿಡುತ್ತದೆ. ಉಳ್ಳವರ ದರ್ಪ ದಬ್ಬಾಳಿಕೆಯ ನಡುವೆ ಇಲ್ಲದವರ ಆದರ್ಶದ ಬದುಕು ಇಂಚಿಂಚಾಗಿ ಸೊರಗಿ ಕಮರಿ ಹೋಗುವ ಆರ್ದ್ರ ವಾತಾವರಣವನ್ನು ದರ್ಶಿಸುತ್ತದೆ. ಹೆಣ್ಣಿನ ಸ್ವಾಭಿಮಾನ, ರೊಚ್ಚು ಆಕೆಯನ್ನು ಅತ್ಯಾಚಾರಕ್ಕೆ ಒಳಗುಮಾಡುವುದು ಅಂದಿನ, ಇಂದಿನ ಬಹುಶಃ ಯಾವತ್ತಿನ ಅತಿರೇಕವೂ ಹೌದು. ಅವನ್ನೆಲ್ಲ ಅತ್ಯಂತ ಕರಾರುವಾಕ್ಕಾಗಿ ತುಳುವಿಗೆ ರೂಪಾಂತರಿಸಿ ರಂಗದಲ್ಲಿ ಜವಾಬ್ದಾರಿಯಿಂದ ಬಿಡಿಸಿಟ್ಟ ಬಗೆ ಸುವರ್ಣರ ರಂಗಪ್ರಜ್ಞೆಗೆ ಸಾಕ್ಷಿ ನುಡಿಯುತ್ತದೆ. ನೈಜವೂ, ಹಾರ್ದಿಕವೂ ಆದ ತುಳುವಿನಲ್ಲಿ ವಾಸ್ತವ ಜಗತ್ತನ್ನು ರಂಗಕ್ಕೊಡ್ಡಿದ ಬಗೆ ಸುವರ್ಣರ ಸೂಕ್ಷ್ಮತೆಗೆ ಗೌರವವಾಗಿದೆ. ಪ್ರತಿಯೊಂದು ಪಾತ್ರಕ್ಕೂ ನೀಡಿರುವ ಕೆಲಸಗಳು ಪಾತ್ರದ ಹಾಗೂ ರಂಗದ ಜೀವಂತಿಕೆಗೆ ಪೂರಕವಾಗಿವೆ. ಪಾತ್ರ ಹಂಚಿಕೆ ಸಮರ್ಪಕವಾಗಿದೆ; ಆಯಾಯ ಪ್ರತಿಭೆಗೆ ತಕ್ಕುದಾಗಿದೆ.

ಅತ್ಯಾಚಾರ ಅನ್ನುವುದು ಲಾಗಾಯ್ತಿನಿಂದಲೂ ನಡೆಯುತ್ತ ಬಂದಿರುವ ಪೈಶಾಚಿಕ ಕೃತ್ಯ. ಇವತ್ತಿಗೂ ಅದು ಚಿಗುರಿಕೊಳ್ಳುತ್ತಲೇ ಇದೆ. ತನ್ಮಧ್ಯೆಯೂ ಪ್ರತಿರೋಧ ಕಾರ್ಯ ಘಟಿಸುತ್ತಿರುವುದನ್ನು, ಘಟಿಸಲೇಬೇಕಾದದ್ದನ್ನು ಪರಿಣಾಮಕಾರಿಯಾಗಿ ರಂಗದಲ್ಲಿ ಸಂಗತಗೊಳಿಸಲಾಗಿದೆ. ಒಳಗೊಳಗೇ ಕುದಿದ ಹೆಣ್ಣಿನ ಅವಮಾನಿತ ಮನಸ್ಸು ಅತ್ಯಾಚಾರಿಯ ಕೊಲೆಗೈಯ್ಯಲು ಮುಂದಾಗುತ್ತದೆ. ಆದರೆ ಇನ್ಯಾರಿಂದಲೋ ಆತನ ಹತ್ಯೆಯಾಗಿರುವುದು ಗೊತ್ತಾದಾಗ ಅದು ಕೆದರಿದ್ದ ತಲೆಕೂದಲನ್ನು ಸೂಡಿ ಕಟ್ಟಿ ಸಂತೃಪ್ತಿ ಅನುಭವಿಸುತ್ತದೆ. ಇಲ್ಲಿ ತಲೆಕೂದಲು ಕಟ್ಟುವಿಕೆ ದ್ರೌಪದಿಯ ಪ್ರತಿಜ್ಞಾ ಕ್ರಿಯೆಯನ್ನು ನೆನಪಿಸುತ್ತದೆ. ಇದು ಸುವರ್ಣರದೇ ಅಳವಡಿಕೆಯಾಗಿದೆ. ಬಲಾತ್ಕಾರದಂಥ ಹೇಯ ಕೃತ್ಯಕ್ಕೆ ಗುಂಡಿಕ್ಕುವುದೇ ತತ್‌ಕ್ಷಣದ ಪ್ರತೀಕಾರ ಎಂಬುದು ಉದ್ವೇಗದಲ್ಲಿ ಅಭಿವ್ಯಕ್ತಗೊಂಡರೂ ವಿವೇಕ ಮತ್ತು ಅಹಿಂಸೆಯಂಥ ಉನ್ನತ ಮೌಲ್ಯಗಳು ಪರಿಣಾಮದಲ್ಲಿ ವಿಜೃಂಭಿಸುವುದು ಕಥಾನಕದ ಮೌಲ್ಯವಾಗಿದೆ. ಅಂದರೆ ಕೊಲೆಗೈದ ಅಣ್ಣ ತಾನೇ ಕೊಲೆಗಡುಕ ಎಂದು ಸಾಬೀತುಪಡಿಸಿ ಜೈಲು ಸೇರುವುದು ತಾತ್ವಿಕತೆ ಮತ್ತು ನೈತಿಕತೆಯಾಗಿದೆ; ಗಾಂಧೀಜಿಯ ಆದರ್ಶದ

ಪುನರುತ್ಥಾನವಾಗಿದೆ. ಅತ್ಯಾಚಾರಕ್ಕೊಳಗಾದ ಮಲ್ಲಿಯಾಗಿ ಅಭಿನಯಿಸಿದ ಬಬಿತಾ ಉಳ್ಳಾಲ್ ಭಾವನೆಗಳನ್ನು ಪ್ರಕಟಪಡಿಸುವಲ್ಲಿ ಗಮನಸೆಳೆಯುತ್ತಾರೆ.

ಗಾಂಧೀಜಿಯ ಒಡನಾಡಿಯಾಗಿದ್ದ ಶಿವಪ್ಪನ ಬದುಕು ಅನಂತರದ ದಿನಗಳಲ್ಲಿ ಅಂಗವಿಕಲತೆಯಿಂದಾಗಿ ಅಸಹಾಯಕವಾಗಿದೆ. ಸಾಲಗಾರರ ಕಾಟಕ್ಕೆ ತತ್ತರಿಸಿ ಹೋಗಿದೆ. ತನ್ನದ್ದೆ ಮಗಳೂ ಅತ್ಯಾಚಾರಕ್ಕೊಳಗಾಗಿದ್ದಾಳೆ. ದುಷ್ಟತನ ಹಾಗೂ ಆದರ್ಶವಾದಿ ನಡುವಣ ತಿಕ್ಕಾಟದಲ್ಲಿ ಆದರ್ಶ ಅಂತ್ಯ ಕಂಡರೆ ಅತ್ಯಾಚಾರಿ ಗುಂಡಪ್ಪ ಲೋಕಕ್ಕೆ ಮಾನ್ಯನಾಗುತ್ತಾನೆ. ದುಷ್ಟತನವೇ ಪೂಜೆಗೊಳ್ಳುವುದನ್ನು ಧ್ವನಿಸಿರುವ ರೀತಿ ಮರ್ಮಸ್ಪರ್ಶಿಯಾಗಿದೆ. ತನ್ನದೇ ಮಗ ತಾನು ಅಪರಾಧಿ ಎಂದು ಒಪ್ಪಿಸಿಕೊಂಡಾಗಲೂ ಜೈಲು ಸೇರಲು ಒಪ್ಪಿಗೆಕೊಡದ ತಂದೆ ಶಿವಪ್ಪನ ಪುತ್ರವ್ಯಾಮೋಹ, ಆದರ್ಶವಾದವನ್ನು ಒಂದರೆಗಳಿಗೆ ಪ್ರಶ್ನಿಸಿಬಿಡುತ್ತದೆ. ನಾಟಿಕವನ್ನು ಇಡಿಯಾಗಿ ತುಂಬಿಕೊಡುವ ಶಿವಪ್ಪ ಪಾತ್ರದ ಲಕ್ಷ್ಮಣಕುಮಾರ್ ಮಲ್ಲೂರ್ ಅವರ ಅಭಿನಯ ತಾದಾತ್ಮ್ಯತೆ, ಪ್ರಬುದ್ಧತೆ ಹಾಗೂ ಸಂಭಾಷಣೆಯಲ್ಲಿನ ಕಸುವು, ನೈಜತೆ ಸಹೃದಯರನ್ನು ಪರವಶಗೊಳಿಸುತ್ತದೆ.

ನಾಟಕದ ಕೇಂದ್ರಬಿಂದುವಾದ ಗುಂಡಪ್ಪನಾಗಿ ಗೋಪಿನಾಥ್ ಭಟ್ ಒಂದೇ ಒಂದು ದೃಶ್ಯದಲ್ಲಿ ಕಾಣಿಸಿಕೊಂಡರೂ ದಾರ್ಷ್ಟ್ಯತನದ ಪರಾಕಾಷ್ಠೆಯನ್ನು ಸಾದರಪಡಿಸುವಲ್ಲಿ ಗೆಲ್ಲುತ್ತಾರೆ, ಜನಮನದಲ್ಲಿ ನಿಲ್ಲುತ್ತಾರೆ. ಧನಿಕನೂ ಮತ್ತು ಸ್ತ್ರೀಲೋಲನೂ ಆದ ಬಂಗಾರ್‌ಸೆಟ್ಟಿ ತನ್ನನ್ನು ವಿಲಕ್ಷಣ ಹಾಗೂ ವಿಪರೀತ ರೀತಿಯಲ್ಲಿ ಬಯಲುಮಾಡುವಲ್ಲಿ ತೋರುವ ಅಭಿನಯ ಪರಿ ಅದ್ಭುತವಾಗಿದೆ. ಗಳಿಗೆ ಗಳಿಗೆಗೂ ಬದಲಾಗುವ ಆಂಗಿಕ ವಿನ್ಯಾಸ ನಿಬ್ಬೆರಗಾಗಿಸುತ್ತದೆ. ಸಭೆಯನ್ನು ಹಿಡಿದಿಟ್ಟುಕೊಳ್ಳುವಲ್ಲಿ ಪಾತ್ರೋಚಿತವಾದ ಚುರುಕುತನ ಹಾಗೂ ನಗು ಉಕ್ಕಿಸುವ ಆಂಗಿಕ ಅಭಿನಯದಿಂದ ಪಾತ್ರದ ಒಳ ಹೊಕ್ಕು ನ್ಯಾಯ ಸಲ್ಲಿಸಿದ್ದಾರೆ. ಈ ಪಾತ್ರ ನಿರ್ವಹಿಸಿದ ಮುರಳೀಧರ ಕಾಮತರು ನಿರ್ದೇಶಕರ ಕಲ್ಪನೆಗಳಿಗೆ ಒಪ್ಪವಾಗಿ ಸಹಕರಿಸಿದ್ದಾರೆ.

ನಾಟಕದ ಆರಂಭದಲ್ಲಿನ ಸಿದ್ದಪ್ಪ ಸ್ವಾಮಿಯ ಧ್ಯಾನ, ದುಷ್ಟ ಅಗೋಚರ ಶಕ್ತಿಯ ಹೊಳಹು ಮುಂದೆ ಘಟಿಸಲಿರುವ ವಿದ್ಯಮಾನವನ್ನು ಆತನಿಗೆ ತೋರಿಸುತ್ತದೆ ಮತ್ತು ಆತ ಅದನ್ನು ಗಹಗಹಿಸಿ ನಕ್ಕು ನಿರಾಕರಿಸುತ್ತಾನೆ. ಆದರೂ ದುರ್ಘಟನೆಗಳು ಆ ಮನೆಯಲ್ಲಿ ನಡೆಯುತ್ತ ಸಾಗುತ್ತವೆ ಎಂಥೆಂಥ ಎದೆಯನ್ನೂ ನಡುಗಿಸುತ್ತವೆ.

ಘಟಿಸುವ ಅನಾಹುತಗಳನ್ನು ಮುನ್ನವೇ ಗ್ರಹಿಸಿಕೊಂಡು ಪ್ರತಿಕ್ರಿಯಿಸುವ ಹುಚ್ಚನ ಪಾತ್ರಧಾರಿಯದೂ ಅಪೂರ್ವವಾದ ಅಭಿವ್ಯಕ್ತಿಯೇ ಆಗಿದೆ. ಇಲ್ಲಿ ಈ ಪಾತ್ರಧಾರಿ ಹದಿನೈದು ದಿನಗಳಿಗೊಮ್ಮೆ ಹುಚ್ಚನಾಗುವುದು. ಇತರ ದಿನಗಳಲ್ಲಿ ಸಾಮಾನ್ಯನಂತಿರುವುದು ನಡೆದೇ ಇರುತ್ತದೆ. ಎಂದರೆ ಪ್ರತಿಯೊಬ್ಬನಲ್ಲೂ ಕೆಲವು ದಿನ ಸಾಮಾನ್ಯತೆ, ಕೆಲವು ದಿನ ಅಸಾಮಾನ್ಯತೆ ದುಡಿದುಕೊಳ್ಳುವುದನ್ನು ಈ ಚಿತ್ರಣ ಸಂಕೇತಿಸುವುದಾಗಿದೆ. ಈತನ ಕೈಯಲ್ಲಿರುವ ಕೊಳಲು ಹುಚ್ಚನಲ್ಲೂ ಇರಬಹುದಾದ ಕಲೆಗಾರಿಕೆಯನ್ನು

ಸಂಕೇತಿಸುವುದಾಗಿದೆ. ಇಲ್ಲಿಯೂ ಸುವರ್ಣರ ಪ್ರತಿಭೆ ಕೆಲಸ ಮಾಡಿದೆ. ಚಂದ್ರಹಾಸ ಉಳ್ಳಾಲರ ವಿಶಿಷ್ಟ ಮ್ಯಾನರಿಸಂ ಸಭೆಯನ್ನು ಹಿಡಿದಿಟ್ಟುಕೊಂಡದ್ದನ್ನು ಉಲ್ಲೇಖಿಸಲೇಬೇಕು.

ಅತ್ಯಾಚಾರ, ಕೊಲೆ, ನಾಯಿ ಕಾಳ್ಯನ ಕೊಲೆ ಯಾವುದೂ ರಂಗದಲ್ಲಿ ಘಟಿಸುವುದಿಲ್ಲ. ಆದರೆ ನಡೆದದ್ದೆಲ್ಲವೂ ಗಾಂಧಿವಾದಿ ಶಿವಪ್ಪನ ಮನೆಯೊಳಗೆ ಚರ್ಚೆಗೆ ಒಳಗಾಗುತ್ತದೆ. ಅಲ್ಲಿ ವ್ಯಕ್ತವಾಗುವ ಭಾವನೆ ಹಾಗೂ ಸಂಭಾಷಣೆಯೇ ಘಟನೆಗಳ ತೀವ್ರತೆಯನ್ನು ಶಕ್ತವಾಗಿ ಕಟ್ಟಿಕೊಡುತ್ತವೆ. ಸಂಭಾಷಣೆಗೆ ಆದ್ಯತೆ ನೀಡುವ ಸುವರ್ಣರು ಹಿತ ಮಿತವಾದ ಭಾವನೆ ಹಾಗೂ ಆವೇಶಗಳ ಜತೆಗೆ ದುರಂತವನ್ನು ಬಿಂಬಿಸಿದ್ದಾರೆ. ಮೌಲಿಕತೆಯ ಘರ್ಷಣೆ, ವಿಷಾದ ಅಂತ್ಯ ಮನ ಕಲಕುತ್ತದೆ.

ಗಾಂಧಿ ಅನುಯಾಯಿ, ಆದರ್ಶವಾದಿ ಶಿವಪ್ಪನ ಮನೆಯ ಬಾಗಿಲ ಮಧ್ಯೆ ಇರುವ ಗಾಂಧೀಜಿಯ ಭಾವಚಿತ್ರ, ಅದಕ್ಕೊದಗಿಸಿದ ವೃತ್ತಾಕಾರದ ಬೆಳಕಿನ ವ್ಯವಸ್ಥೆ ಗಾಂಧೀಜಿಗೆ ಕೊಟ್ಟ ಗೌರವವೇ. ಚರಕ ಕೂಡ ಗಾಂಧೀವಾದವನ್ನೇ ಸಮರ್ಥಿಸುತ್ತದೆ. ಮೂಲಕೃತಿಯು ಉತ್ತರ ಕರ್ನಾಟಕದ ಆಡು ಭಾಷೆಯನ್ನು ಒಳಗೊಂಡಿದೆ. ಇಲ್ಲಿಯೂ ಸುವರ್ಣರು ಸರಳ, ಸಹಜ, ಜೀವಂತಿಕೆಯ ತುಳುವನ್ನು ಅದೇ ರೀತಿಯಲ್ಲಿ ದುಡಿಸಿಕೊಳ್ಳುತ್ತಾರೆ. ನಮ್ಮದೇ ಆದ ಲೋಕವನ್ನು ಆ ಮೂಲಕ ಕಟ್ಟಿಕೊಡುತ್ತಾರೆ. ಎಲ್ಲ ವರ್ಗದ ಪ್ರೇಕ್ಷಕರನ್ನೂ ಅನಾಯಾಸವಾಗಿ ತಲುಪುವಲ್ಲಿ ಯಶಸ್ವಿಯಾಗುತ್ತಾರೆ. ಹಿತ ಮಿತ ಮಧುರ ತಮಾಷೆ ಅಲ್ಲಲ್ಲಿ ಸುಳಿದು ಹೋಗುತ್ತದೆ, ಮತ್ತೊಂದಷ್ಟು ಕಡೆ ಆಂಗಿಕ ಅಭಿನಯವೇ ನಗು ಉಕ್ಕಿಸುತ್ತದೆ. ಬೈಗುಳವೂ ತೀರ ಸಹಜವಾಗಿಯೇ ಹಾದು ಹೋಗುತ್ತದೆ.

ಸುವರ್ಣರು ತಮ್ಮ ನಾಟಕಗಳಿಗೆ ಸಂಗೀತ ಅಳವಡಿಸುವಲ್ಲಿ ವಿಶಿಷ್ಟರಾಗುತ್ತಾರೆ. ಇಲ್ಲಿ ಅವರು ಆಯ್ದುಕೊಂಡದ್ದು ಇಂಪಾದ ಕೊಳಲಿನ ಹಿನ್ನೆಲೆ ಸಂಗೀತವವನ್ನು, ನಡು ನಡುವೆ ಆಪ್ತವಾದ ಮೃದಂಗದ ಸಾಥ್. ಸಂದರ್ಭಕ್ಕೆ ತಕ್ಕ ಹಾಗೆ ಕೊಳಲಿನ ನಿನಾದವನ್ನು ದುಡಿಸಿಕೊಂಡಿರುವುದು ಇಡೀ ರಂಗಕೃತಿಗೆ ಚೆನ್ನಾಗಿ ಹೊಂದಿಕೆಯಾಗಿದೆ ಮತ್ತು ಆಹ್ಲಾದಕಾರಿಯಾಗಿದೆ. (ಒಂದು ಕೊಳಲಿನ ನಿನಾದ ಹಿನ್ನೆಲೆಗೆ ಒದಗಿದರೆ ಇನ್ನೊಂದು ಕೊಳಲ ನಾದ ದಾಸಪ್ಪನೂದುವ ಕೊಳಲ ನಾದಕ್ಕೆ ಬಳಕೆಯಾಗಿದೆ.) ಬೆಳಗನ್ನು ಕಾಣಿಸುವ ಧ್ವನಿ, ಹಕ್ಕಿಗಳಿಂಚರ ಎಲ್ಲವೂ ಹಿತಕಾರಿಯಾಗಿದೆ. ಆಕರ್ಷಕ ಬೆಳಕಿನ ವಿನ್ಯಾಸ ಅನೇಕ ಸಂಗತಿಗಳನ್ನು ಧ್ವನಿಸುತ್ತದೆ. ಚಂದ್ರಶೇಖರ ಸುವರ್ಣರ ರಂಗ ವಿನ್ಯಾಸವೂ ಒಪ್ಪವಾಗಿದೆ. ವಾಸ್ತವ ರಂಗಭೂಮಿಯನ್ನು ಆಧುನಿಕೋತ್ತರ ಕಾಲಘಟ್ಟದಲ್ಲೂ ಚಾಲ್ತಿಯಲ್ಲಿರಿಸುವ ಒಂದು ಅರ್ಥಪೂರ್ಣ ಹಾಗೂ ಗಂಭೀರ ಪ್ರಯತ್ನ 'ಕಲಂಕ್‌ದಿ ನೀರ್' ಎಂದು 'ಅಕ್ಷಯ' (2014ರ ಆಗಸ್ಟ್) ಮಾಸಿಕ ಸತ್ಯಪಕ್ಷಪಾತಿಯಾಗುತ್ತದೆ.

'ಈ ನಾಟಕವನ್ನು ಆರಿಸಿಕೊಳ್ಳಲು ಕಾರಣವೆಂದರೆ ಇದು ವಾಸ್ತವಿಕ ಶೈಲಿಯ ಒಂದು ಉತ್ತಮ ನಾಟಕ. ಇದನ್ನು ಪ್ರತಿಪಾದಿಸಿ ಅನೇಕ ವಿಮರ್ಶೆಗಳು ಬಂದಿವೆ. ಅಲ್ಲದೆ ಇದನ್ನು ನಾನು ಸುಮಾರು ನಲ್ವತ್ತು ವರ್ಷಗಳ ಹಿಂದೆ ಮುಂಬಯಿಯ

ಗ್ರ್ಯಾಂಟ್ ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳಿಂದ ಬಹಳ ಯಶಸ್ವಿಯಾಗಿ ಕನ್ನಡದಲ್ಲಿ ಮಾಡಿಸಿದ್ದೆ. ಇಲ್ಲಿ ಯಶಸ್ವಿಯಾಗಿ ಪ್ರದರ್ಶಿತವಾಗುವ ತುಳು ಹಾಸ್ಯ ನಾಟಕಗಳ ಜತೆ ತುಳು ಹವ್ಯಾಸಿ ರಂಗಭೂಮಿಯಲ್ಲಿ ಗಂಭೀರ ನಾಟಕ ಪ್ರಯೋಗವಾಗಬೇಕು ಎಂಬುದು ನನ್ನ ಆಶಯ. ಆ ನಿಟ್ಟಿನಲ್ಲಿ ಈ ಮೊದಲು ನಾನು ನಿರ್ದೇಶಿಸಿದ 'ಉರುಳು', 'ಕೋರ್ಟ್ ಮಾರ್ಷಲ್', 'ಮಳೆ ನಿಲ್ಲುವವರೆಗೆ' ಕನ್ನಡ ನಾಟಕಗಳ ಕಲಾವಿದರ ತಂಡದಿಂದ ಜಿ.ಬಿ.ಜೋಶಿಯವರು ರಚಿಸಿದ ಈ ವಾಸ್ತವಿಕ ಶೈಲಿಯ 'ಕದಡಿದ ನೀರು' ನಾಟಕವನ್ನು ತುಳುವಿಗೆ ರೂಪಾಂತರಿಸಿ 'ಕಲಂಕ್‌ದಿ ನೀರ್' ಹೆಸರಿನೊಂದಿಗೆ ಪ್ರದರ್ಶಿಸಲು ನಿರ್ಧರಿಸಿದ್ದೇವೆ. ಇದು ಭಾಷಾಂತರವಷ್ಟೇ ಅಲ್ಲ. ಈ ನಾಟಕದಲ್ಲಿ ತುಳು ಜೀವನ ಶೈಲಿಗೆ ಹತ್ತಿರವಾಗುವ ಮಾತುಗಳಿವೆ. ಹಳ್ಳಿಯ ಕತೆ ಹೇಳುವ ಕದಡಿದ ನೀರು ತುಳುನಾಡಿನ ಪ್ರೇಕ್ಷಕರಿಗೆ ಇಷ್ಟವಾದೀತು ಎಂಬುದು ನನ್ನ ವಿಶ್ವಾಸ'.

'ಇದನ್ನು ಆರಿಸಲು ಇನ್ನೊಂದು ಮುಖ್ಯ ಕಾರಣವೆಂದರೆ ಇದು ಓರ್ವ ಸ್ವಾರ್ಥಪರ ರಾಜಕೀಯ ಮುಂದಾಳು ಮತ್ತು ಆದರ್ಶ ಗಾಂಧಿವಾದಿಯ ನಂಬಿಕೆಗಳ ನಡುವೆ ನಡೆಯುವ ಹೋರಾಟದ ಸಾಂಕೇತಿಕ ರೂಪವಾಗಿದ್ದು ಭಾರತದ ಹಳ್ಳಿಗಳ ಸಮಾಜದ ವ್ಯವಸ್ಥೆ ಮತ್ತು ನಂಬಿಕೆಗಳ ವಿಘಟನೆಯನ್ನು ತೆರೆದಿಡುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ರಚಿತವಾದ ಈ ನಾಟಕ ಇಂದಿಗೂ ಪ್ರಸ್ತುತವಾಗುತ್ತದೆ, ಇದನ್ನು ವಾಸ್ತವಿಕ ಶೈಲಿಯಲ್ಲೇ ಹಿನ್ನೆಲೆ ಸಂಗೀತ, ರಂಗವ್ಯವಸ್ಥೆ, ವೇಷಭೂಷಣ, ಅಭಿನಯದೊಂದಿಗೆ ಪ್ರದರ್ಶಿಸಲು ಪ್ರಯತ್ನಿಸುತ್ತಿದ್ದೇವೆ' ('ವಿಜಯ ಕರ್ನಾಟಕ' ಜುಲೈ 2014) ಎನ್ನುವಲ್ಲಿ ಮೌಲಿಕ ಕೊಡುಗೆಗಳ ಮೂಲಕ ತುಳು ರಂಗಭೂಮಿಯನ್ನು ವಿಸ್ತರಿಸುತ್ತ ಬಂದ ಸುವರ್ಣರಿಗೆ ತುಳು ರಂಗಭೂಮಿಯಲ್ಲಿ ಲಘು ಪರಿಕಲ್ಪನೆ ಎಡೆಗೊಳ್ಳದಿರಬೇಕು ಎನ್ನುವುದು ಮಹತ್ವಾಕಾಂಕ್ಷೆ. ಲಘು ಹಾಸ್ಯದ ಮೂಲಕ ತುಳು ನಾಟಕವೆಂದರೆ ಹೀಗೆ ಇಷ್ಟೇ ಎನ್ನುವ ಚಿತ್ರಣವನ್ನು ನೀಡುವವರ ಮನಃಪರಿವರ್ತನೆಯಾಗಬೇಕು, ಅಲ್ಲೂ ಗಂಭೀರ ನಾಟಕಗಳು ಆದ್ಯತೆ ಗಿಟ್ಟಿಸಬೇಕು ಎನ್ನುವ ಆಶಯವುಳ್ಳ ಸುವರ್ಣರು ಈ ನಿಟ್ಟಿನಲ್ಲಿ ಪ್ರಯೋಗಶೀಲರಾದವರೇ. 'ಗುಡ್ಡೆದ ಭೂತ', 'ಬಾಲೆಬಂಗಾರ್', 'ಗೋಂದೊಳು' ಹೊಸ ಹೊಸ ಇತಿಹಾಸವನ್ನೇ ಸೃಷ್ಟಿಸಿಬಿಟ್ಟಿವೆ, ಸುವರ್ಣರ ಇಮೇಜನ್ನೂ ಹೆಚ್ಚಿಸಿವೆ. ಅದಕ್ಕೆ 'ಕಲಂಕ್‌ದಿ ನೀರ್' ನಾಟಕವೂ ಸೇರ್ಪಡೆಯಾಗಿದೆ.

ಹೀಗೆ ರಂಗಭೂಮಿಯ ಆಳ ಅಗಲಗಳನ್ನು ಬಗೆದು ಕೊಡುತ್ತ ಬಂದ ಸುವರ್ಣರು ಅಲ್ಲೆಲ್ಲ ತಮ್ಮ ವಿಶಿಷ್ಟತೆಗಳನ್ನೂ ದಾಖಲಿಸುತ್ತ ರಂಗ ಜಗತ್ತಿನ ಸುವರ್ಣ ಅಧ್ಯಾಯವಾದರು, ಅಧ್ಯಯನಯೋಗ್ಯವಾದರು.

***

ಅಧ್ಯಾಯ 4

# ಅಭಿನಯ ಅನುಭಾವ (ವಿ)

ರಂಗಭೂಮಿಯನ್ನು ಬಹಳ ಗಂಭೀರವಾಗಿ ಸ್ವೀಕರಿಸಿದ ಸದಾನಂದ ಸುವರ್ಣರು ತಮ್ಮ ಅಸಾಧಾರಣ ಅಭಿನಯದಿಂದಲೂ ಮುಂಬಯಿ ಕನ್ನಡ ರಂಗಭೂಮಿಗೆ ಮರುಜನ್ಮ ಕಾಣಿಸಿದರು, ಹೊಸ ಹೊಳಪು ನೀಡಿದರು. ಸ್ವಂತ ನಿರ್ದೇಶನದ ಹಾಗೂ ಇತರ ಪ್ರಮುಖ ನಿರ್ದೇಶಕರ ಹಲವು ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ ಅಪಾರ ಜನಮೆಚ್ಚುಗೆ ಗಳಿಸಿದವರು ಸುವರ್ಣರು. "ವಾಚಿಕ ಮತ್ತು ಆಂಗಿಕ, ಆಂತರಿಕ ಅಭಿನಯದೊಂದಿಗೆ ರಂಗಭೂಮಿಯಲ್ಲಿ ಪಾತ್ರ ಸೃಷ್ಟಿಸುವಾಗಿನ ಆನಂದ ಬೇರೆ ಮಾಧ್ಯಮಗಳಲ್ಲಿ ದೊರೆಯಲಾರದು. ರಂಗಾಸಕ್ತನಿಗೆ, ಕಲಾವಿದನಿಗೆ ಬಿಡುವಿನ ವೇಳೆ ಎಂಬುದು ಕಲೆಗಾಗಿ ವಿನಿಯೋಗವಾಗಬೇಕು. ಆತನಿಂದ ಸಮಯಹರಣ ಸಲ್ಲದು. ರಂಗ ಕಲಾವಿದ ಆತ್ಮ-ದೇಹ ಎರಡನ್ನೂ ಬಳಸಿ ಪಾತ್ರವನ್ನು ಅಭಿವ್ಯಕ್ತಿಸುವ ಸಂದರ್ಭ ಪಾತ್ರದ ಪರಕಾಯ ಪ್ರವೇಶ ಮಾಡುತ್ತಾನೆ. ನಾಟಕವೊಂದರ ಪ್ರದರ್ಶನ ಸಂದರ್ಭ ಪ್ರೇಕ್ಷಕನ ಕುತೂಹಲ, ಮೌನ, ತಲ್ಲೀನತೆ, ಉದ್ಗಾರ, ಕರತಾಡನ... ಇವೆಲ್ಲದರಿಂದ ದಕ್ಕುವ ಆನಂದ ಪರಮಾನಂದವನ್ನು, ಆತ್ಮಾನಂದವನ್ನು ಉಣಿಸುತ್ತದೆ. ಇಂಥ ಅನುಭೂತಿ ರಂಗಾಭಿವ್ಯಕ್ತಿಯಿಂದ ಮಾತ್ರ ಸಾಧ್ಯ. ಈ ಅನುಭವ ಕಾವ್ಯವೇ ರಂಗ ಜಗತ್ತನ್ನು ಆಪ್ತವಾಗಿಸುತ್ತದೆ' ಎಂಬುದು ಸುವರ್ಣರ ಅಭಿಮತವಾಗಿದೆ.

ಆಧುನಿಕ ರಂಗಭೂಮಿಯ ರಂಗಕರ್ಮಿ ಸದಾನಂದ ಸುವರ್ಣರು ಸ್ತಾನಿಸ್ಲಾವಸ್ಕಿಯ ಮೆಥಡ್ ಆ್ಯಕ್ಟಿಂಗ್ ಪದ್ಧತಿಯ ಅಭಿಮಾನಿ. ಅವರ ಅನುಭವ ಸಿದ್ಧಾಂತಗಳನ್ನು ವಾಸ್ತವ ರಂಗಭೂಮಿಯ ಸೈದ್ಧಾಂತಿಕತೆಯನ್ನು ಸ್ವತಃ ಅರಿತುಕೊಂಡು, ಅರಗಿಸಿಕೊಂಡು, ಹೊಸ ತಲೆಮಾರಿಗೂ ದಾಟಿಸುವ ಪ್ರಾಮಾಣಿಕ ಅನುಸಂಧಾನಕಾರ. ಸ್ತಾನಿಸ್ಲಾವಸ್ಕಿಯ ಆಂತರಿಕ ಅಭಿನಯದ ತತ್ತ್ವವನ್ನು ಅನುಷ್ಠಾನಕ್ಕೆ ತಂದುಕೊಂಡು ತನ್ನತನದೊಂದಿಗೆ ಮುಂಬಯಿ ಕನ್ನಡ ರಂಗಭೂಮಿಯ ಹೊಸ ನಡೆಗೆ ಬೆಳಕಾದವರು ಸುವರ್ಣರು. ಆಂತರಿಕವಾಗಿ ಅಭಿನಯದ ಬಗ್ಗೆ ಪಕ್ವಗೊಂಡಾಗಲೇ ಬಾಹ್ಯ ಅಭಿನಯವೂ ಹೃದ್ಯವಾಗುತ್ತದೆ. ಪಾತ್ರವೊಂದನ್ನು ಅರ್ಥ ಮಾಡಿಕೊಳ್ಳುವ, ಆ ಪಾತ್ರವೇ ಆಗಿ ಒಳಹೊಕ್ಕುವ ಪ್ರಕ್ರಿಯೆಯನ್ನು ಯಾರು

ಎಷ್ಟು ಚೆನ್ನಾಗಿ ನಿಭಾಯಿಸಬಲ್ಲರೋ ಅಂಥವರಿಂದ ರಂಗದ ಮೇಲೂ ಅತ್ಯುತ್ತಮವಾದ ಅಭಿವ್ಯಕ್ತಿಯನ್ನು ನಿರೀಕ್ಷಿಸಬಹುದು. ಸಹಜ ಪ್ರತಿಭೆಗೆ ರಂಗತರಬೇತಿಯ, ಸೈದ್ಧಾಂತಿಕತೆಯ ಸ್ಪರ್ಶದಿಂದಾಗಿ ಮೌಲಿಕ ಪ್ರಯೋಗಗಳನ್ನು, ಹೊಸ ಬಗೆಯ, ವಿಭಿನ್ನ ಶೈಲಿಯ ರಂಗಕೃತಿಗಳನ್ನು ನೀಡುವುದಕ್ಕೆ ಸಾಧ್ಯವಾಗಿಯೇ ಆಗುತ್ತದೆ. ಇಲ್ಲಿ ಆಗಿದೆ ಕೂಡ.

ರಿಯಲಿಸ್ಟಿಕ್ ಆ್ಯಕ್ಟಿಂಗ್ ಪದ್ಧತಿಯ ಪ್ರತಿಪಾದಕ ಸುವರ್ಣರಿಗೆ ಗಾಡ್‌ಫಾದರ್‌ನ ಪಾತ್ರದ ಒಳಗೆ ಹೋದ ಮಾರ್ಲನ್ ಬ್ರಾಂಡೊ ಬಹಳ ಪ್ರಭಾವ ಬೀರಿದ ನಟ. ಆತ ತನ್ನ ಪಾತ್ರದ ಆಕಾರದಲ್ಲಿ ಗಮನಾರ್ಹವಾದ ಬದಲಾವಣೆಯನ್ನು ಕಾಣಿಸುವುದಕ್ಕೆ ಧ್ಯಾನಸ್ಥನೇ ಆಗಿದ್ದ. ಹೊಸತನದ ಶೋಧನೆಗಿಳಿದದ್ದರಿಂದ ಆತನಿಗೆ ವಿಶಿಷ್ಟವಾದ ಪರಿಕಲ್ಪನೆಯೊಂದು ಹೊಳೆದಿದೆ. ಆ ಬಳಿಕವೇ ಆತ ತನ್ನ ಪಾತ್ರದ ತಾಲೀಮಿಗೆ ಹೊರಟಿದ್ದಾನೆ. ಹೀಗೆ ವರ್ಷಗಟ್ಟಲೆ ಹೊಸ ಆವಿಷ್ಕಾರಕ್ಕೆ ಸಮಯ ಕೊಡುವುದು, ಸುದೀರ್ಘ ಕಾಲವನ್ನು ತಾಲೀಮಿಗೆ ವ್ಯಯಿಸುವುದು ವೃತ್ತಿಪರ ನಾಟಕ ತಂಡದವರಿಂದ ಮಾತ್ರ ಸಾಧ್ಯ. ಬೇರೆ ಬೇರೆ ಉದ್ಯೋಗದಲ್ಲಿದ್ದುಕೊಂಡು ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡ ಕಲಾವಿದರಿಗೆ ಈ ರೀತಿಯ ತನ್ಮಯತೆ, ಏಕಾಗ್ರತೆ ಹಂತ ತಲುಪುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ 'ಲಿವಿಂಗ್‌ದ ರೋಲ್'ಗಿಂತ 'ಆ್ಯಕ್ಟಿಂಗ್‌ದ ರೋಲ್' ಅನ್ನು ಹವ್ಯಾಸಿ ನಿರ್ದೇಶಕರು, ಕಲಾವಿದರು ಹೆಚ್ಚು ಅನುಸರಿಸುತ್ತಾರೆ. ಸ್ತಾನಿಸ್ಲಾವಸ್ಕಿಯನ್ನು ಜಗತ್ತಿನ ರಂಗಭೂಮಿ ಸ್ವೀಕರಿಸಿಕೊಂಡಿದೆ. ಪೃಥ್ವಿರಾಜ್ ಕೂಡ ಲಿವಿಂಗ್‌ದ ರೋಲ್‌ಗಿಂತ ಆ್ಯಕ್ಟಿಂಗ್ ಮೆಥಡ್‌ನ್ನೇ ಅನುಸರಿಸಿರುವುದನ್ನು ಸುವರ್ಣರು ಅನುಭವಕ್ಕೆ ತಂದುಕೊಂಡಿದ್ದಾರೆ. ಆದ್ದರಿಂದಲೇ ಅವರ ಅಭಿನಯ ಅತ್ಯಂತ ಪರಿಣಾಮಕಾರಿಯಾಗಿದೆ ಅನ್ನುವುದನ್ನೂ ಅರ್ಥೈಸಿಕೊಂಡಿದ್ದಾರೆ.

'ರಿಯಲಿಸ್ಟಿಕ್ ಆ್ಯಕ್ಟಿಂಗ್' ಪದ್ಧತಿಯಲ್ಲಿ ಮಾತು, ನಡಿಗೆ, ರಿಯಾಕ್ಷನ್ಸ್ ತುಂಬ ಮುಖ್ಯ. ಮಾತಾಡುವಾಗ ಎಕ್ಸ್‌ಪ್ರೆಶನ್ ಅಲ್ಲದೆ ಎದುರಿಗಿರುವ ಪಾತ್ರಧಾರಿಗಳ ರಿಯಾಕ್ಷನ್, ಎಕ್ಸ್‌ಪ್ರೆಶನ್ ಕೂಡ ಅಷ್ಟೇ ಮುಖ್ಯ. ಅದಿಲ್ಲದಿದ್ದರೆ ರಿಯಲಿಸ್ಟಿಕ್ ಆಗಿ ಕಾಣಿಸುವುದಿಲ್ಲ. ಒಂದು ಪಾತ್ರದ ಮಾತು ಪರಿಣಾಮಕಾರಿಯಾಗಬೇಕಾದರೆ ಇನ್ನೊಂದು ಪಾತ್ರದ ರಿಯಾಕ್ಷನ್ ಕೂಡ ಮುಖ್ಯ. ಆ್ಯಕ್ಷನ್-ರಿಯಾಕ್ಷನ್ ಎರಡೂ ಒಟ್ಟಾಗಿದ್ದರೇನೇ ನಾಟಕ ಪರಿಣಾಮಕಾರಿಯಾಗುವುದು. ಅದು ಮುಖ್ಯ. ಸ್ತಾನಿಸ್ಲಾವಸ್ಕಿ ಮೆಥಡ್‌ನಲ್ಲಿ ಹೇಳುವುದೇ ಅದನ್ನು. ಡೈಲಾಗ್ ಏನ್ ಹೇಳ್ತಿ? ಯಾಕೆ ಹೇಳ್ತಿ ಅನ್ನೋದು ಗೊತ್ತಾದರೆ ಹೇಗೆ ಹೇಳಬೇಕು ಅನ್ನೋದು ತನ್ನಿಂತಾನೇ ಗೊತ್ತಾಗಿಬಿಡುತ್ತದೆ. ಶೌಟ್ ಮಾಡ್ತೇನೆ, ಯಾಕೆ ಮಾಡ್ತೇನೆ? ಸಿಟ್ಟು ಬಂದು ತಾನೇ? ಅದು ಗೊತ್ತಾದಾಗ ಹೇಗೆ ಸಿಟ್ಟು ತೋರಿಸಬೇಕು ಅನ್ನುವುದು ತನ್ನಿಂತಾನೇ ಗೊತ್ತಾಗ್ತದೆ. ಆತ ಲಿವಿಂಗ್ ದ ರೋಲ್ ಎಂದು ಪರಿಚಯಿಸಿದರೆ ನಾವು ಆ್ಯಕ್ಟಿಂಗ್‌ದ ರೋಲ್ ಅನುಸರಿಸುತ್ತೇವೆ. ಲಿವಿಂಗ್‌ದ ರೋಲ್ ಮಾಡುವುದಕ್ಕೆ ಹವ್ಯಾಸಿ ರಂಗ ಕಲಾವಿದರಿಗೆ ಕಷ್ಟವಾಗುತ್ತದೆ. ಅಂದರೆ ಅದಕ್ಕೆ ವರ್ಷಾನುಗಟ್ಟಲೆ ತಾಲೀಮು

ಬೇಕಾಗುತ್ತದೆ ಎಂದು ಅಭಿನಯ ಪಾಠ ಹೇಳುವ ಸುವರ್ಣರು ಈ ತತ್ವವನ್ನು ಸ್ವತಃ ಪಾಲಿಸಿದ್ದಾರೆ, ಅದರ ಪರಿಣಾಮದ ಆನಂದವನ್ನು ಅನುಭವಿಸಿದ್ದಾರೆ.

ನಾಟ್ಯ ಅಕಾಡೆಮಿಯಲ್ಲಿ ಭಾಷಾ ತಜ್ಞ ಪ್ರೊ. ಬರ್ಕ್‌ಲೇ ಹಿಲ್ ಅವರ ಸಂಭಾಷಣೆಯ ತಿದ್ದುಪಡಿ (ಬ್ರಷಿಂಗ್ ಅಪ್ ದಿ ಡೈಲಾಗ್) ವಿಧಾನ, ಧ್ವನಿಯನ್ನು ನಟನಾದವನು ಪ್ರೊಜೆಕ್ಟ್ ಮಾಡಬೇಕಾದ ಸಂದರ್ಭ ಸಂಪಾದಿಸುವ ಎಳೆಎಳೆಯಾದ ಮಾಹಿತಿ ಬಹಳವೇ ಪರಿಣಾಮ ಬೀರಿದೆ. ಅಭಿನಯಕ್ಕೆ ಪೂರಕವಾಗಿ ಸನ್ನಿವೇಶಗಳ ಕಲ್ಪನೆ, ಸಂಯೋಜನೆ ಕುರಿತ ಎಲಿಕ್ ಪದಮ್‌ಸಿ ಅವರ ಪಾಠ, ಬೆಳಕಿನ ಪ್ರಕ್ರಿಯೆಯ ಬಗ್ಗೆ ಜಾಫ್ರಿನ್, ಗುಜರಾತಿ ರಂಗಭೂಮಿಯ ಬೆಳಕಿನ ವಿನ್ಯಾಸಕಾರ ಸುರೇಶ್ ವ್ಯಾಸ್ ಅವರು ಬೆಳಕನ್ನು ದುಡಿಸಿಕೊಳ್ಳುವ ಬಗ್ಗೆ ನೀಡಿದ ಮಾಹಿತಿ ಸುವರ್ಣರನ್ನು ಅನನ್ಯತೆಯತ್ತ ಕರೆದೊಯ್ಯುವುದಕ್ಕೆ ಪ್ರೇರಣೆಯಾದವು.

ಪಂಡಿತ್ ಸತ್ಯದೇವ್ ದುಬೆ ಅವರ ಪ್ರಯೋಗಗಳನ್ನು ಮನಸಾರೆ ಮೆಚ್ಚಿಕೊಂಡಿದ್ದ ಸುವರ್ಣರು ಅವರ ನಾಟಕದ ಚುರುಕಿನ ಗತಿಗೆ ಮಣಿದಿದ್ದರು. ಯಾವಾಗ ಸ್ತಾನಿಸ್ಲಾವಸ್ಕಿಯ ತತ್ವಗಳನ್ನು ಅರ್ಥಮಾಡಿಕೊಂಡರೋ ಆಗ ರಂಗದ ನೈಜತೆಗೇ ಹೆಚ್ಚು ಒತ್ತುಕೊಡುವುದಕ್ಕೆ ಆರಂಭಿಸಿದರು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಸುವರ್ಣರು ಅನುಸರಣೆಗಿಂತ ತನಗೆ ಸರಿ ಅನ್ನಿಸಿದ ಬಗೆಗೆ ನಿಷ್ಠರಾಗುವುದು, ನಿರ್ದೇಶಿಸುವುದು. ಸರಿ ಅನ್ನುವ ನಿರ್ಧಾರಕ್ಕೆ ಬರುವುದು. ಜತೆಗೆ ದುಬೆ ಅವರ ರಂಗ ಬದ್ಧತೆ ಕಾಳಜಿಯನ್ನು ಮಾದರಿಯಾಗಿ ಸ್ವೀಕರಿಸಿ ಆದರಿಸುವುದು ಮರೆಯುವುದಲ್ಲ.

ಸದಾನಂದ ಸುವರ್ಣರದು ಶ್ರೇಷ್ಠ ನಟನೆ. ಅಭಿವ್ಯಕ್ತಿ ವಿಧಾನದಲ್ಲಿ ತನ್ನದೇ ಆದ ವಿಶೇಷತೆಗಳನ್ನು ಮೈಗೂಡಿಸಿಕೊಂಡು ರಂಗಭೂಮಿಗೆ ಹೊಸತೊಂದು ಕಳೆಯನ್ನು ತಂದುಕೊಟ್ಟವರು ಅವರು. ಪಾತ್ರಕ್ಕೆ ಜೀವ ತುಂಬುವ ಪರಿಯಲ್ಲಿ ಸುವರ್ಣತನವಿದೆ. ಒಬ್ಬ ನಟ ಅಭಿನಯ ಕಲೆಯನ್ನು ಎಷ್ಟು ಎತ್ತರಕ್ಕೆ ಕೊಂಡೊಯ್ಯಬಹುದು ಎಷ್ಟೆಲ್ಲ ಬಗೆಯಲ್ಲಿ ವಿಸ್ತರಿಸಬಹುದೋ ಆ ಎಲ್ಲ ಬಗೆಯಲ್ಲಿ ಪರಿಶ್ರಮಿಸುವುದಕ್ಕೆ ತೊಡಗಿಸಿಕೊಂಡವರು ಎಲ್ಲದರಲ್ಲೂ ಯಶಸ್ವಿಯಾದವರು ಅವರು.

ನಟನೆ ಹಾಗೂ ನಿರ್ದೇಶನಗಳೆರಡರಕ್ಕೂ ಏಕ ಕಾಲಕ್ಕೆ ಪ್ರವೇಶಿಸಿದ ಸುವರ್ಣರು ಆರಂಭದ ದಿನಗಳಲ್ಲಿ, ಉದಯ ಕಲಾನಿಕೇತನದಲ್ಲಿದ್ದಾಗ ಸುವರ್ಣರೇ ಬರೆದು ನಿರ್ದೇಶಿಸುತ್ತಿದ್ದ ನಾಟಕಗಳಲ್ಲಿ ಪ್ರಧಾನ ಪಾತ್ರವನ್ನು ಸುವರ್ಣರೇ ನಿರ್ವಹಿಸುತ್ತಿದ್ದರು. ಕಾರಣ ಇಷ್ಟೇ, ರಂಗಭೂಮಿಯ ಕುರಿತ ಯಾವ ಪರಿಜ್ಞಾನವೂ ಇಲ್ಲದವರನ್ನು ತಮ್ಮ ತಂಡದ ಸದಸ್ಯರನ್ನಾಗಿಸಿಕೊಂಡು ತರಬೇತಿ ನೀಡಿ ಕಲಾವಿದರನ್ನಾಗಿಸುವ ಸವಾಲಿನ ಮುಂದೆ ಅವರನ್ನು ಪ್ರಧಾನ ಪಾತ್ರಕ್ಕೆ ಹೊಂದಿಸಬೇಕಾದರೆ ಅನಿವಾರ್ಯವಾಗಿ ಸಮಯ ವ್ಯಯವಾಗುತ್ತಿತ್ತು. ನಾಟಕದ ಸಂಪೂರ್ಣ ಚಿತ್ರಣ ಕಣ್ಮುಂದೆ ಇರುತ್ತಿದ್ದುದರಿಂದ ನಾಯಕ ಪಾತ್ರವನ್ನು ತಾವೇ ಇರಿಸಿಕೊಂಡು ಇತರ ಪಾತ್ರಗಳನ್ನು ನಿರ್ದೇಶಿಸುತ್ತಿದ್ದರು. ಅವರನ್ನೆಲ್ಲ

ತಿದ್ದಿ ಒಂದು ಹಂತಕ್ಕೆ ತಂಡ ಬಂತು ಅನ್ನುವಾಗ ಸುವರ್ಣರು ಒಂದಷ್ಟು ತಾಲೀಮು ನಡೆಸಿ ಪ್ರದರ್ಶನಕ್ಕೆ ಅಣಿಯಾಗುತ್ತಿದ್ದರು. ಪ್ರೇಕ್ಷಕರೆಲ್ಲ ಸುವರ್ಣರ ಅಭಿನಯವನ್ನು ಭಲೇ, ಎಂದು ಕೊಂಡಾಡಿದ್ದಾರೆ, ಆದರೆ ಸುವರ್ಣರು ತಮ್ಮ ಪಾತ್ರಕ್ಕೆ ನ್ಯಾಯ ಕೊಡಲಾಗಲಿಲ್ಲ ಎಂದು ಒಳಗೊಳಗೇ ಅತೃಪ್ತರಾಗುತ್ತಿದ್ದರು. ತನ್ನ ಸಾಮರ್ಥ್ಯವನ್ನು ಇಲ್ಲಿ ಪ್ರಕಟಿಸುವುದಕ್ಕೆ ಸಾಧ್ಯವಾಗುತ್ತಿಲ್ಲವಲ್ಲ ಎಂಬ ಅತೃಪ್ತಭಾವ ಇದ್ದೇ ಇರುತ್ತಿತ್ತು. ನಿಜದಲ್ಲಿ ಅವರೊಳಗಿನ ಅಭಿನಯ ಕಲೆ ತನ್ನಿಂತಾನೇ ಪ್ರಕಟವಾಗಿ ಮೆಚ್ಚುಗೆಗಳಿಸಿಕೊಂಡುಬಿಡುತ್ತಿತ್ತು. ಸುವರ್ಣರ ಅಭಿನಯ ನಟನಾ ಸಾಮರ್ಥ್ಯದ ವಿರಾಡ್ರೂಪ ಅಭಿವ್ಯಕ್ತಗೊಳ್ಳುವುದಕ್ಕೆ ಸಾಧ್ಯವಾದದ್ದು ಇತರ ನಿರ್ದೇಶಕರ ನಿರ್ದೇಶನದಲ್ಲಿ ಪಾತ್ರ ನಿರ್ವಹಿಸುವ ಸಂದರ್ಭಗಳಲ್ಲಿ. ಸುವರ್ಣರಲ್ಲಿ ಧನ್ಯತೆ, ಸಂತೃಪ್ತಿ ಭಾವನೆಯೂ ಮೂಡಿದೆ. ಅಶೋಕ್‌ಕುಮಾರರಂಥ ಶಕ್ತ ನಟರ ಮೆಚ್ಚುಗೆ ಹಾಗೂ ಹಾರೈಕೆಯನ್ನು ಸುವರ್ಣರು ಪಡೆದಿರುವುದು ಅವರ ಪ್ರತಿಭೆಗೆ ಸಾಕ್ಷಿಯಾಗುತ್ತದೆ.

'ಕನ್ನಡ ಕಲಾ ಕೇಂದ್ರ'ದ ನಿರ್ದೇಶಕರಾದ ಕೆ.ಜೆ.ರಾವ್ ಸುವರ್ಣರ ನಟನಾ ಸಾಮರ್ಥ್ಯವನ್ನು, ಪ್ರತಿಭೆಯನ್ನು ನೋಡಿ ಅಚ್ಚರಿಗೊಂಡಿದ್ದರು ಜತೆಗೆ ಆನಂದ ಅನುಭವಿಸಿದ್ದರು. ಸುವರ್ಣನ್ನು ಕಲಾ ಕೇಂದ್ರಕ್ಕೆ ಕರೆತರಬೇಕು ಎಂದು ಆಶಿಸಿದ್ದವರು ಅವರು. ಅದೊಮ್ಮೆ 'ಧರ್ಮದುರಂತ' ನಾಟಕದಲ್ಲಿ ಮುಖ್ಯ ಪಾತ್ರ ನಿವರ್ಹಿಸುತ್ತಿದ್ದ ಕೆ. ವ್ಯಾಸರಾವ್ ಅನ್ನುವವರು ಯಾವುದೋ ಮನಸ್ತಾಪದಿಂದ ಆ ಪಾತ್ರ ನಿವರ್ಹಿಸುವುದಿಲ್ಲ ಎಂದು ದೂರ ಉಳಿದರು. ಆಗ ಕೆ.ಜೆ.ರಾಯರು ಸುವರ್ಣರನ್ನು ಸಂಪರ್ಕಿಸಿ ನೀವು ಪಾತ್ರ ನಿರ್ವಹಿಸುವುದಾಗಬೇಕು ಎಂದು ವಿನಂತಿಸಿದರು. 'ಉದಯಕಲಾ ನಿಕೇತನ'ದ ಏಕಮಾತ್ರ ನಿರ್ದೇಶಕರಾಗಿದ್ದ ಸುವರ್ಣರು ಇನ್ನೊಂದು ತಂಡದಲ್ಲಿ ಪಾತ್ರ ನಿವರ್ಹಿಸುವ ಬಗ್ಗೆ ತಂಡದ ಸದಸ್ಯರು ಆತಂಕ ವ್ಯಕ್ತಪಡಿಸಿದರು. ಆದರೆ ಕಲಾವಿದನಿಗೆ ಈ ಇತಿಮಿತಿಗಳಿರಬಾರದು ಅಂದುಕೊಂಡ ಸುವರ್ಣರು ಒಂದು ಒಳ್ಳೆ ಪಾತ್ರಕ್ಕೆ ನಟರ ಕೊರತೆ ಇರುವಾಗ, ಅವರು ತನ್ನ ಪ್ರತಿಭೆಯನ್ನು ಗುರುತಿಸಿ ಆಹ್ವಾನಿಸಿದಾಗ ಪಾತ್ರ ನಿವರ್ಹಿಸುವುದು ತಪ್ಪೇನಲ್ಲ ಎಂದು ನಿರ್ಧರಿಸಿದರು. ತನಗೆ ಸರಿ ಬಂದಂತೆ ಅಭಿನಯಿಸುವ ಸ್ವಾತಂತ್ರ್ಯ ಕೊಡುತ್ತೀರಲ್ಲ ಎಂದು ಸುವರ್ಣರು ಕೇಳಿಕೊಂಡರು. ರಾಯರು ಪೂರ್ಣವಾಗಿ ಒಪ್ಪಿಸಿಕೊಂಡರು.

ಆ ಕ್ಷಣದಿಂದ ಸುವರ್ಣರು ಆ ಪಾತ್ರದ ನಿರೂಪಣೆಯ ಬಗ್ಗೆ, ಅಭಿನಯದ ಬಗ್ಗೆ, ಚಲನವಲನದ ಬಗ್ಗೆ, ವಾಚಿಕಾಭಿನಯದ ಬಗ್ಗೆ ತಮ್ಮದೇ ಆದ ಧೋರಣೆಗಳನ್ನು ಅನುಸರಿಸಿ ಸಿದ್ಧತೆಯನ್ನು ಮಾಡಿಕೊಂಡರು. ರಿಹರ್ಸಲ್‌ನಲ್ಲಿ ಇತರ ನಟರೂ ಸಹಕರಿಸುವಂತೆ ಮಾಡಿ ತಮ್ಮ ಪಾತ್ರದಲ್ಲಿ ಲೀನವಾಗಲು ಪ್ರಯತ್ನಿಸಿದರು, ಪಾತ್ರದ ಬಗ್ಗೆ ಒಟ್ಟೂ ತಯಾರಿಯನ್ನು ಮಾಡಿಕೊಂಡರು.

ಅದರಲ್ಲಿ ಒಂದು ಮುಖ್ಯವಾದ ದೃಶ್ಯವಿದೆ. ಆಸ್ಥಾನದಲ್ಲಿ ಧರ್ಮಗುರುಗಳ ಮಧ್ಯೆ ವಾಗ್ವಾದವಾಗುತ್ತದೆ. ಕೊನೆಗೆ ಖಾನ್‌ಜಹಾನ್ ಪಾತ್ರಧಾರಿ ಒಂದು ಪುಟ ಆವೇಶಭರಿತ ಮಾತುಗಳನ್ನಾಡಿ ಸಭೆಯಿಂದ ನಿರ್ಗಮಿಸುವ ಸಂದರ್ಭವನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದ್ದರು ಸುವರ್ಣರು. ಸುವರ್ಣರ ಪಾತ್ರ ಅದ್ಭುತವಾಗಿ ಮೈನವಿರೆಬ್ಬಿಸಿತ್ತು, ಸುವರ್ಣರ ಸಂಭಾಷಣೆಯ ಮಧ್ಯೆ ಮಧ್ಯೆ ಕರತಾಡನದ ಪ್ರೋತ್ಸಾಹ, ಮೆಚ್ಚುಗೆಯ ಸುರಿಮಳೆ ವ್ಯಕ್ತವಾಗುತ್ತಿತ್ತು. ಇಲ್ಲಿ ನಿರ್ದೇಶನದ ಹೊಣೆ ಹೊರಲಿಲ್ಲವಾದ್ದರಿಂದ ಸುವರ್ಣರು ನಿರಾಳತೆಯಿಂದ ಅಭಿನಯಿಸಿದ್ದರು. ಕೆ.ಜಿ.ರಾಯರು ಅತ್ಯಂತ ಸಂಭ್ರಮಿಸಿ ಸುವರ್ಣರನ್ನು ಬಿಗಿದಪ್ಪಿ ಸಂತಸ ವ್ಯಕ್ತಪಡಿಸಿದ್ದರು.

ಸುವರ್ಣರದೇ ನಿರ್ದೇಶನದಲ್ಲಿ 'ಧರ್ಮಚಕ್ರ' ನಾಟಕವನ್ನು ಆಯೋಜಿಸಿದಾಗ ಸುವರ್ಣರು ಅದರಲ್ಲಿ ಅಶೋಕನ ಪಾತ್ರವನ್ನು ನಿರ್ವಹಿಸಿದ್ದರು. ಆ ಪಾತ್ರಕ್ಕೆ ನ್ಯಾಯ ನೀಡುವ ನಿಟ್ಟಿನಲ್ಲಿ ತೋರಿಸಿದ ಮುತುವರ್ಜಿ, ಶ್ರದ್ಧೆಯ ಪರಿಣಾಮವಾಗಿ ಸುವರ್ಣರು ಗಂಭೀರ ನಟರಾಗಿ ಖ್ಯಾತಿ ಪಡೆದರು.

ಆರು ದಶಕಗಳ ರಂಗ ಪ್ರಯೋಗದಲ್ಲಿ ಸುವರ್ಣರು ಸಂಪೂರ್ಣ ತೃಪ್ತಿ ಅನುಭವಿಸಿದ್ದು 'ಸತ್ಯಂ ವದ ಧರ್ಮಂ ಚರ' ನಾಟಕದ ವಿದ್ಯಾನಂದನ ಪಾತ್ರದಲ್ಲಿ. ಪ್ರೇಕ್ಷಕರ ನೆನಪಿನ ಭಿತ್ತಿಯಲ್ಲಿ ಅಚ್ಚೊತ್ತಿದ್ದ ಪಾತ್ರ ಅದು. ಇದೂ ಕೆ.ಜಿ.ರಾಯರದೇ ನಿರ್ದೇಶನ. ಸುವರ್ಣರು ಅದೇ ಸ್ವಾತಂತ್ರ್ಯದೊಂದಿಗೆ ಪಾತ್ರಕ್ಕೆ ಜೀವ ತುಂಬುವ ನಿಟ್ಟಿನಲ್ಲಿ ತಪಸ್ಸಿನ ರೀತಿಯಲ್ಲಿ ತಾಲೀಮು ನಡೆಸಿದರು. ಪ್ರೊಫೆಸರ್ ಪಾತ್ರವನ್ನೇ ಆವಾಹಿಸಿಕೊಂಡುಬಿಟ್ಟ ಸುವರ್ಣರು ಅದನ್ನು ರಂಗಕ್ಕೊಪ್ಪಿಸಿದ ರೀತಿ ಅತ್ಯದ್ಭುತ ಹಾಗೂ ಹೃದಯಸ್ಪರ್ಶಿಯಾಗಿತ್ತು. ಆ ಪಾತ್ರ ಪ್ರೇಕ್ಷಕರ ಮನಃಪರಿವರ್ತನೆಗೆ ಕಾರಣವಾದದ್ದು, ಆದರ್ಶ ಪ್ರೊಫೆಸರ್ ಆಗಿಯೇ ಸುವರ್ಣರನ್ನು ಕಂಡು 'ನಿಮ್ಮಂಥಾ ಅಧ್ಯಾಪಕ ಸಿಕ್ಕಿದ್ದರೆ ನನ್ನ ಮಗ ಹೀಗಿರುತ್ತಿರಲಿಲ್ಲ, ಒಂದೊಳ್ಳೆ ದಾರಿ ಹಿಡಿಯುತ್ತಿದ್ದ' ಎಂದು ಕಣ್ಣೀರಿಡುತ್ತ ಹೇಳಿಕೊಂಡದ್ದು ಪಾತ್ರದ ಪ್ರಭಾವವನ್ನು ತಿಳಿಸುತ್ತದೆ.

ಮರಾಠಿಯಲ್ಲಿ ಸಾವಿರಾರು ಪ್ರದರ್ಶನವನ್ನು ಕಂಡಿರುವ ನಾಟಕವಿದು. ಅದರಲ್ಲಿ ಮುಖ್ಯ ಪಾತ್ರವನ್ನು ಪ್ರಭಾಕರ ಪಣ್ಶೀಕರ್ ಎಂಬ ಮರಾಠಿಯ ಖ್ಯಾತ ನಟ ಬಹಳ ಪರಿಣಾಮಕಾರಿಯಾಗಿಯೇ ನಿರ್ವಹಿಸುತ್ತಿದ್ದರು. ಮರಾಠಿಯಲ್ಲಿ ಮೆಲೋಡ್ರಾಮಾ ಹೆಚ್ಚು ಇಷ್ಟ ಪಡುವವರಾದ್ದರಿಂದ ನಟರೂ ಕೂಡ ಭಾವಾವೇಶವನ್ನೇ ಪ್ರದರ್ಶಿಸುತ್ತಾರೆ. ಆದರೆ ಸುವರ್ಣರು ಕನ್ನಡ ರಂಗಭೂಮಿಗೆ ಅದನ್ನು ಹೊಸ ಬಗೆಯಲ್ಲಿ ಪ್ರದರ್ಶಿಸುವ ನಿಟ್ಟಿನಲ್ಲಿ ತುಸು ಬದಲಾವಣೆಯನ್ನು ಮಾಡಿದ್ದಾರೆ. ಭಾವಾವೇಶವನ್ನು ಕಡಿಮೆ ಮಾಡಿ ಗಂಭೀರವಾಗಿ ಆ ಪಾತ್ರವನ್ನು ನಿರೂಪಿಸಿದರು. ಪ್ರತಿಯೊಂದು ಪ್ರಯೋಗದಲ್ಲೂ ಹೊಸತೇ ಅನ್ನುವ ಹಾಗೇ ಅತ್ಯಂತ ಪ್ರಭಾವಪೂರ್ಣವಾಗಿ ಅಭಿನಯಿಸುತ್ತಿದ್ದುದು ಸುವರ್ಣರ ಅನನ್ಯತೆಯಾಗಿತ್ತು. ಪ್ರತಿ ಪ್ರದರ್ಶನವನ್ನೂ ಕೂಡ ಪ್ರೇಕ್ಷಕರು ಅಷ್ಟೇ ಬೆರಗು ಕಂಗಳಿಂದ ನೋಡಿ

ಮೆಚ್ಚಿಕೊಳ್ಳುತ್ತಿದ್ದರು. ಸುವರ್ಣರ ನಟನೆಯ ಸಾಮರ್ಥ್ಯ ಅಲ್ಲಿ ಅಭಿವ್ಯಕ್ತಗೊಳ್ಳುತ್ತಲೇ ಹೋಯಿತು. ಅತ್ಯಂತ ತಾಕತ್ತನ್ನು ಬಯಸುವ ಈ ಪಾತ್ರಕ್ಕೆ ಸುವರ್ಣರೂ ಕೂಡ ವಿಟಮಿನ್ ಇಂಜೆಕ್ಷನ್‌ಸಹಿತವೇ ಸಿದ್ಧರಾಗಬೇಕಾಗುತ್ತಿತ್ತು. ಜೈಲ್‌ನ ದೃಶ್ಯ ಮತ್ತು ಏರ್‌ಪೋರ್ಟ್ ದೃಶ್ಯಗಳಲ್ಲಿ ಸುವರ್ಣರ ಅಭಿನಯ ಮೂಲ ನಾಟಕದ ವಿದ್ಯಾನಂದನ ಅಭಿನಯಕ್ಕಿಂತ ಒಂದು ತೂಕ ಹೆಚ್ಚೇ ಎಂದು ಎರಡೂ ನಾಟಕಗಳನ್ನು ನೋಡಿದವರ ತುಲನಾತ್ಮಕ ವಿಶ್ಲೇಷಣೆಯಾಗಿದೆ.

'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಕಲಾ ವಿಮರ್ಶಕ ಶ್ರೀಧರ್ ಮರಾಠಿಯ ವಿದ್ಯಾನಂದನ ಪಾತ್ರಕ್ಕಿಂತ ಕನ್ನಡದ ವಿದ್ಯಾನಂದನ ಪಾತ್ರದ ಅಭಿನಯವೇ ಹೆಚ್ಚು ಮೌಲಿಕವಾದುದು ಎಂದು ವಿಮರ್ಶಿಸಿದ್ದರು. ಇದನ್ನು ಓದಿದ ಹಿಂದಿ ಚಲನಚಿತ್ರ ನಟ, ಎವರ್‌ಗ್ರೀನ್ ಹೀರೋ ಅಶೋಕ್‌ಕುಮಾರ್ ಈ ನಾಟಕವನ್ನು ನೋಡುವುದಕ್ಕೆ ಬಂದಿದ್ದರು. ಇದೇ ಕಥೆಯನ್ನು ಆಧರಿಸಿ ಹಿಂದಿಯಲ್ಲಿ ಚಲನಚಿತ್ರ ನಿರ್ಮಾಣಗೊಳ್ಳುತ್ತಿತ್ತು. ಅದರಲ್ಲಿ ವಿದ್ಯಾನಂದನ ಪಾತ್ರವನ್ನು ನಟ ಅಶೋಕ್‌ಕುಮಾರರೇ ನಿರ್ವಹಿಸುವವರಿದ್ದರು. ಅದಕ್ಕೆ ಪೂರ್ವಭಾವಿ ಸಿದ್ಧತೆಗಾಗಿ ಅವರು ಈ ನಾಟಕದ ವೀಕ್ಷಣೆಗಾಗಿ ಬಂದಿದ್ದರು. ನಾಟಕ ಮುಗಿದ ತಕ್ಷಣ ಗ್ರೀನ್ ರೂಂಗೆ ಬಂದು ನಿರ್ದೇಶಕರು ಹಾಗೂ ನಟರಾದ ಸುವರ್ಣರನ್ನು ಬೆನ್ನು ತಟ್ಟಿ ಹರಸಿದರು. ಸುವರ್ಣರ ಪಾತ್ರ ನಿರ್ವಹಣೆಯನ್ನು ಬಿಚ್ಚು ಮನಸ್ಸಿನಿಂದ ಶ್ಲಾಘಿಸಿದ್ದರು. ಈ ರಸಗಳಿಗೆಯನ್ನು ಅಲ್ಲೇ ಸನಿಹದಲ್ಲಿದ್ದ ಖ್ಯಾತ ಛಾಯಾಗ್ರಹಾಕ ಸನಿಲ್ ಅವರು ಕ್ಲಿಕ್ಕಿಸಿ ಫೋಟೋವನ್ನು ದೊಡ್ಡ ಫ್ರೇಮ್‌ನೊಂದಿಗೆ ಸುವರ್ಣರಿಗೆ ಅರ್ಪಿಸಿದರು. ಸುವರ್ಣರು ತಮ್ಮ ನಟನೆಗೆ ದೊರೆತ ಬಹುದೊಡ್ಡ ಪ್ರಶಸ್ತಿಯೆಂದು ಗ್ರಹಿಸಿ ಅಭಿಮಾನಿಸಿದರು. ಆ ಫೋಟೋವನ್ನು ಮನೆಯಲ್ಲಿ ತೂಗು ಹಾಕಿದ ಸುವರ್ಣರು ಈಗಲೂ ಆ ಘಟನೆಯನ್ನು, ನಾಟಕವನ್ನು, ಅಭಿನಯವನ್ನು ಮೆಲುಕು ಹಾಕಿ ಆನಂದಿಸುತ್ತಿದ್ದಾರೆ. ವಿದ್ಯಾನಂದನ ಪಾತ್ರದ ಮೂಲಕ ಹೊಸ ಇತಿಹಾಸವನ್ನು ಸೃಷ್ಟಿಸಿದ ಸುವರ್ಣರು ಅಭಿನಯವಿಶಾರದರಾಗಿ ಕೀರ್ತಿತರಾದರು.

ಮುಂದಿನ ದಿನಗಳಲ್ಲಿ ಕರ್ನಾಟಕದ ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ, ಚಿತ್ರದುರ್ಗ, ಮಂಗಳೂರು, ಉಡುಪಿ, ಸುರತ್ಕಲ್ ಮೊದಲಾದ ಕಡೆಗಳಲ್ಲೆಲ್ಲ ಪ್ರದರ್ಶನಗೊಂಡು ಭೇಷ್ ಅನ್ನಿಸಿಕೊಂಡ ನಾಟಕವಿದು.

ಗಿರೀಶ್ ಕಾರ್ನಾಡರ 'ತುಘಲಕ್' ನಾಟಕವನ್ನು ಮುಂಬಯಿಯ ಪ್ರಖ್ಯಾತ ನಿರ್ದೇಶಕರನ್ನೆಲ್ಲ ಒಟ್ಟುಗೂಡಿಸಿ ಒಂದು ಅದ್ಭುತ ಪ್ರದರ್ಶನ ನೀಡಬೇಕು ಎಂಬುದಾಗಿ ಮುಂಬಯಿಯ ವಿಶಾಲ ಸಭಾಗೃಹ ಷಣ್ಮುಖಾನಂದ ಹಾಲ್‌ನ ಮ್ಯಾನೇಜರ್ ಕೆ.ಕೆ.ಸುವರ್ಣ ನಿರ್ಧರಿಸಿದ್ದರು. ತಾವೇ ನಿರ್ದೇಶನ ಮಾಡುವುದಾಗಿ ಹೇಳಿದ ಅವರು ಆರ್.ಡಿ.ಕಾಮತ್, ವೆಂಕಟರಾವ್ ತಲಗೇರಿ ಹಾಗೂ ಸದಾನಂದ ಸುವರ್ಣ ಅವರನ್ನು ಆಮಂತ್ರಿಸಿದರು. ತುಘಲಕ್ ಪಾತ್ರವನ್ನು ತಾವೇ ನಿರ್ವಹಿಸುವುದಾಗಿ ಹೇಳಿದ ಕೆ.ಕೆ.ಸುವರ್ಣರು ಇತರ

ಯಾವುದೇ ಇಷ್ಟ ಬಂದ ಪಾತ್ರವನ್ನು ಅವರವರೇ ಆಯ್ಕೆ ಮಾಡಿಕೊಳ್ಳಬಹುದು ಎಂದೂ ಸೂಚಿಸಿದರು. ಸುವರ್ಣರು ಅಭಿನಯಕ್ಕೆ ಎಲ್ಲಿ ಅವಕಾಶವಿದೆ ಎಂದು ಹಾಗೂ ಯಾವ ಪಾತ್ರವನ್ನು ಹೇಗೆ ಹೊಸತಾಗಿ ನಿರೂಪಿಸಬಹುದು ಎಂದು ಯೋಚಿಸುವವರಾದ್ದರಿಂದ ರತನ್‌ಸಿಂಹನ ಪಾತ್ರವನ್ನು ಆಯ್ಕೆ ಮಾಡಿಕೊಂಡರು. ಎಲ್ಲರಿಗೂ ಆಶ್ಚರ್ಯ ಆಗಿದೆ. ಅವರೆಲ್ಲ ನೀವು ಶಿಹಾಬುದ್ದೀನ್ ಅನ್ನುವ ಇನ್ನೊಂದು ಪ್ರಧಾನ ಪಾತ್ರವನ್ನು ನಿರ್ವಹಿಸಬೇಕು. ನೀವು ಗಂಭೀರ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತ ಬಂದಿದ್ದೀರಿ ಎಂದು ಒತ್ತಾಯಿಸಿದರೂ ಸುವರ್ಣರು ಹಿಂದೆ ಸರಿಯಲಿಲ್ಲ. ಸಣ್ಣ ಪಾತ್ರವೇ ಸಾಕು ಎಂದರು. ಇಲ್ಲಿ ತನ್ನದೇ ಆದ ಛಾಪು ಮೂಡಿಸುವ ನಿಟ್ಟಿನಲ್ಲಿ ಸುವರ್ಣರು ರಿಹರ್ಸಲ್‌ಗೆ ತಮ್ಮನ್ನು ಒಪ್ಪಿಸಿಕೊಂಡರು. ಒಂದು ತಿಂಗಳ ತಾಲೀಮಿನ ಬಳಿಕ ಅದೇ ಹಾಲ್‌ನಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಭರ್ಜರಿ ಪ್ರಚಾರವನ್ನೂ ಮಾಡಿದ್ದರಿಂದ ಜನರೂ ತುಂಬಿದ್ದರು. ಕಾರ್ನಾಡ್ ಸಹಿತ ಇನ್ನನೇಕ ಗಣ್ಯರನ್ನೂ ಆಹ್ವಾನಿಸಿದ್ದರು. ಕಾರ್ನಾಡರು ಗೈರಾಗಿದ್ದರು, ಆದರೆ ತಮ್ಮ ಸ್ನೇಹಿತ ಮನೋಹರ ಗ್ರಂಥಮಾಲೆಯ ಜಿ.ಬಿ.ಜೋಶಿ ಅವರನ್ನು ಕಳುಹಿಸಿಕೊಟ್ಟಿದ್ದರು.

ಅಪಾರ ಚಪ್ಪಾಳೆ, ಗಣ್ಯರ ಮೆಚ್ಚುಗೆಯ ಮಹಾಪೂರ ಹರಿದುಬಂದರೂ ಸುವರ್ಣರು ತೃಪ್ತಿಯ ಹುಡುಕಾಟ ಮುಂದುವರಿಸಿದ್ದರು. ಮರುದಿನ ಬೆಳಗ್ಗೆ ನಾಟಕದ ನಿರ್ದೇಶಕರ ದೂರವಾಣಿ ಕರೆ ಬಂದಿದೆ. 'ನಿಮ್ಮದು ಚಿಕ್ಕ ಪಾತ್ರವಾದರೂ ನೀವು ಬಹಳ ಚೆನ್ನಾಗಿ ಅಭಿನಯಿಸಿದ್ದೀರಿ ಎಂದು ಜಿ.ಬಿ.ಜೋಶಿಯವರು ಹೇಳಿದರು. ಅವರ ಪ್ರಕಾರ ನೀವು ತುಘಲಕನ ಪಾತ್ರ ನಿರ್ವಹಿಸಬೇಕಿತ್ತಂತೆ. ನಿಮ್ಮ ಡೈಲಾಗ್ ಡೆಲಿವರಿ ಬಹಳ ಚೆನ್ನಾಗಿತ್ತು ಎಂದು ಅವರು ಹೇಳಿದರು' ಎಂದರು ಪ್ರಾಂಜಲವಾಗಿ. ಆದರೆ ಸುವರ್ಣರು 'ಛೆ, ನಿಮ್ಮಷ್ಟು ಚೆನ್ನಾಗಿ ಮಾಡಲಾಗುತ್ತಿರಲಿಲ್ಲ. ನಿಮ್ಮ ಬಾಡಿ ಪರ್ಸನಾಲಿಟಿ ನನಗೆಲ್ಲಿದೆ? ಅವರು ಬರೇ ನನ್ನ ಡೈಲಾಗ್ ಡೆಲಿವರಿ ಅಷ್ಟೇ ನೋಡಿ ಹೇಳಿರಬೇಕು. ನೀವು ಅದ್ಭುತವಾಗಿ ನಟಿಸಿದ್ದೀರಿ' ಎಂದು ಪ್ರತಿಯಾಗಿ ಪ್ರಶಂಸಿಸಿದಾಗ ಖುಷಿಯಾದರು. ಸುವರ್ಣರಿಗೂ ಒಳಗೊಳಗೇ ಖುಷಿಯಾಗಿತ್ತು. ಜೋಶಿಯವರು ತುಘಲಕ್ ಪಾತ್ರವನ್ನು ಸುವರ್ಣರೇ ನಿರ್ವಹಿಸಬೇಕಿತ್ತು ಎಂದಿರುವುದು. ಸುವರ್ಣರ ಗಂಭೀರ ಪಾತ್ರ ನಿರೂಪಣೆಯನ್ನು ಮೆಚ್ಚಿ ಜೊಶಿಯವರು ನೀಡಿದ ಸರ್ಟಿಫಿಕೇಟ್ ಆಗಿದೆ. ಇದು ಸುವರ್ಣರ ಪಾಲಿಗೆ ಮಹತ್ತ್ವದ್ದಾಗಿದೆ.

ನಟನಾದವನು ತನ್ನ ಸುತ್ತಮುತ್ತಲಿನ ಪ್ರಪಂಚವನ್ನು ಕ್ಷಣ ಕ್ಷಣವೂ ಗ್ರಹಿಸುತ್ತ ಇರಬೇಕು. ಅನೇಕ ವೈವಿಧ್ಯಮಯ ಪಾತ್ರಗಳು ಅಲ್ಲಿ ನೋಡ ಸಿಗುತ್ತವೆ. ಅವನ್ನು ನೆನಪಿನಾಳದಲ್ಲಿ ಸಂಗ್ರಹಿಸಿಟ್ಟುಕೊಂಡು ಅಭಿನಯ ಸಂದರ್ಭ ಅನುಭವಕ್ಕೆ ತಂದುಕೊಳ್ಳಬೇಕು ಅನ್ನುವುದನ್ನು ಸುವರ್ಣರು ಪಾಲಿಸಿದ್ದಾರೆ, ಎಳೆಯರಿಗೆ ಅದನ್ನೇ ಹೇಳಿಕೊಡುತ್ತಿದ್ದಾರೆ. ಸುವರ್ಣರ ಈ ಗ್ರಹಿಸುವಿಕೆ ನೆರವಿಗೆ ಬಂದದ್ದು ಪರ್ವತವಾಣಿಯವರ 'ಮೀನಾ ಮದುವೆ' ನಾಟಕದ ಪಾತ್ರವೊಂದರ ನಿರ್ವಹಣೆ ಸಂದರ್ಭ. ಈ ನಾಟಕದಲ್ಲಿ ಹಳೆ ತಲೆಮಾರಿನ

ವಿಧವೆ ಬೋಳಮ್ಮನ ಪಾತ್ರವಿದೆ. ಮಹಿಳೆಯರು ನಾಟಕ ರಂಗಕ್ಕೆ ಬಾರದ ಕಾಲಘಟ್ಟವದು. ಹೀಗಿರುವಾಗ ಪುರುಷರೇ ಈ ಪಾತ್ರವನ್ನು ನಿಭಾಯಿಸಬೇಕು. ಯಾರು ನಿರ್ವಹಿಸುವವರು ಅನ್ನುವ ಪ್ರಶ್ನೆ ಎದುರಾಯಿತು. ಕೊನೆಗೂ ಸುವರ್ಣರೇ ಆ ಪಾತ್ರವನ್ನು ನಿರ್ವಹಿಸುವುದು ಎಂದು ತೀರ್ಮಾನಿಸಲಾಯಿತು.

ಸುವರ್ಣರಿಗೆ ಈಗ ಎದುರಾದದ್ದು ಬೋಳಮ್ಮನನ್ನು ಕಾಣುವ ಸವಾಲು. ಅಭಿನಯದ ಸಹಜತೆಗೆ ಹಾಗೂ ಪಾತ್ರ ಪೋಷಣೆಗೆ ನ್ಯಾಯ ಕೊಡುವುದಕ್ಕೆ ಆಕೆಯ ಚಲನವಲನ ಗ್ರಹಿಸುವುದು ಅವರಿಗೆ ಅಗತ್ಯವೂ ಆಗಿತ್ತು.

ಮುಂಬಯಿಯಂಥ ನಗರದಲ್ಲಿ ಇಂಥ ಬೋಳಮ್ಮ ಕಾಣಲು ಸಿಗುವುದು ತೀರಾ ಅಪರೂಪವೇ. ಹಾಗಿರುವಾಗ ಊರಿನಲ್ಲಿ ಎಂದೋ ನೋಡಿದ್ದ ಬೋಳಮ್ಮನನ್ನು ಕಣ್ಮುಂದೆ ತಂದುಕೊಂಡು ನಟಿಸುವುದು ಅನಿವಾರ್ಯ ಎಂದೇ ಭಾವಿಸಿದ್ದರು ಸುವರ್ಣರು. ಮಾನಸಿಕವಾಗಿ ಸಿದ್ಧಗೊಳ್ಳುತ್ತಿದ್ದರು ಕೂಡ. ಪ್ರತಿದಿನ ಸುವರ್ಣರು ತಂಗಿದ್ದ ಕಟ್ಟಡಕ್ಕಿಂತ ಒಂದು ಫರ್ಲಾಂಗು ದೂರದಲ್ಲಿನ ಎಲ್ಲ ರಸ್ತೆ, ಗಲ್ಲಿಗಳಲ್ಲಿ ಸುತ್ತಾಡಿ ಅಂಥ ಅಜ್ಜಮ್ಮಂದಿರು ಕಾಣ ಸಿಗುತ್ತಾರೆಯೇ ಎಂದು ಶೋಧಿಸುವ ಕೆಲಸವನ್ನು ಮಾತ್ರ ಚಾಚೂತಪ್ಪದೆ ಮಾಡುತ್ತಿದ್ದರು. ಜತೆಜತೆಗೆ ನಾಟಕ ತರಬೇತಿಯನ್ನು ಮುಂದುವರಿಸಿದರು. ಅದೊಂದು ದಿನ ಬೆಳಗ್ಗೆ ಕೆಲಸ ನಿಮಿತ್ತ ದಾದರ್‌ನ ವಿ.ಟಿ. ರೈಲ್ವೇ ಸ್ಟೇಷನ್ ಕಡೆಗೆ ನಡೆದುಕೊಂಡು ಹೋಗುತ್ತಿದ್ದ ಸಂದರ್ಭ ಚೋರಾ ಬಜಾರ್ ಎದುರಿಗೆ ಓರ್ವ ಬೋಳಮ್ಮ ತಲೆಗೆ ಸೆರಗು ಹೊದ್ದುಕೊಂಡು ಬಗ್ಗಿ ನಡೆಯುತ್ತಿದ್ದುದು ಸುವರ್ಣರ ಕಣ್ಣಿಗೆ ಬಿತ್ತು. ಸುವರ್ಣರಿಗೆ ಸಹಜವಾಗಿಯೇ ಬಹಳ ಖುಷಿಯಾಗಿದೆ. ಆಕೆಯನ್ನು ಹಿಂಬಾಲಿಸಿಕೊಂಡು ನಡೆದರು. ಆಕೆಯ ಚಲನವಲನ ಗಮನಿಸುತ್ತಲೇ ಹೋದರು. ಬಗ್ಗಿಕೊಂಡೇ ಸರಸರ ನಡೆಯುತ್ತಿದ್ದ ಮುದುಕಿ ಹತ್ತು ಹೆಜ್ಜೆ ಮುಂದೆ ಹೋದ ಕೂಡಲೇ ನಿಂತು ಬೆನ್ನು ನೆಟ್ಟಗೆ ಮಾಡಿ ಮತ್ತೆ ಸರಸರ ನಡೆಯುತ್ತಿದ್ದಳು. ಸುವರ್ಣರೂ ಆಕೆಯ ಜತೆಗೇ ಮುಂದುವರಿದರು. ಒಮ್ಮೆ ನಿಂತ ಮುದುಕಿ ಮೆಲ್ಲಗೆ ಬಗ್ಗಿ ಅದೇನನ್ನೋ ಹೆಕ್ಕಿ ಕಣ್ಣ ಹತ್ತಿರಕ್ಕೆ ತಂದು ನೋಡಿದ್ದಾಳೆ, ತಕ್ಷಣ ಸಿಟ್ಟಿನಿಂದ ಅದನ್ನು ಕೆಳಕ್ಕೆಸೆದಿದ್ದಾಳೆ, ತನ್ನಷ್ಟಕ್ಕೆ ಏನೋ ಮಾತನಾಡುತ್ತ ಸಾಗಿದ್ದಾಳೆ. ರೈಲ್ವೆ ಸ್ಟೇಶನ್ ಮೆಟ್ಟಿಲಲ್ಲಿ ಕುಳಿತು ತಲೆಯ ಮೇಲಿನ ಸೆರಗು ಜಾರಿಸಿ ಮುಖ ಒರೆಸಿದ್ದಾಳೆ. ಈ ದೃಶ್ಯಗಳನ್ನೆಲ್ಲ ಕಣ್ತುಂಬಿಸಿಕೊಳ್ಳುತ್ತಿದ್ದ ಸುವರ್ಣರಿಗೆ ಅಭಿನಯಕ್ಕೆ ಸಾಕಷ್ಟು ಮಾಹಿತಿಗಳು ಸಿಕ್ಕಿ ಬಿಟ್ಟಿವೆ. ಮನೆಗೆ ಬಂದ ಬಳಿಕ ಸುವರ್ಣರು ತಾನು ಕಂಡ ಬೋಳಮ್ಮನನ್ನು ಅನುಕರಿಸಿ ಅಭಿನಯಿಸಿ ತಾಲೀಮು ಮಾಡಿದರು. ಸಂಭಾಷಣೆಯನ್ನು ಮುದುಕಿಯ ಸ್ವರದಂತೆ ಬದಲಾಯಿಸಿಕೊಂಡು ಹೇಳುವುದನ್ನು ಅಭ್ಯಾಸ ಮಾಡಿದರು. ಅದನ್ನೇ ಆ ನಾಟಕದಲ್ಲಿ ಅಭಿವ್ಯಕ್ತಿಸಿದರು. ಮುದುಕಿ ವಟಗುಟ್ಟುತ್ತ ಒಳಗೆ ತೆರಳಿದಾಗ ಪ್ರೇಕ್ಷಕರಿಂದ ಮೆಚ್ಚುಗೆಯ ಚಪ್ಪಾಳೆಯ ಸುರಿಮಳೆ. ಸುವರ್ಣರ ಈ ಅಭಿನಯ ಪ್ರೇಕ್ಷಕರ ಮೇಲೆ ಬಹಳ ಪರಿಣಾಮಬೀರಿತ್ತು. ಅತ್ಯಂತ ಪರಿಣಾಮಕಾರಿಯಾದ ಅಭಿನಯ ನೈಜತೆಯನ್ನು ತುಂಬಿಕೊಂಡದ್ದರಿಂದ ಆ ಪಾತ್ರ ಜನ ಪ್ರೀತಿಗಳಿಸಿಕೊಂಡಿತ್ತು. ಸುವರ್ಣರಲ್ಲಿ ಸಾರ್ಥಕ್ಯದ

ಭಾವ ತುಂಬಿಕೊಂಡಿದೆ. ಈ ಪಾತ್ರ ನಿರ್ವಹಿಸುವವರ ಹೆಸರನ್ನು ಕರಪತ್ರದಲ್ಲಿ ನಮೂದಿಸದೇ ಇದ್ದುದರಿಂದ ಪ್ರೇಕ್ಷಕರಿಗೆ ಪಾತ್ರಧಾರಿ ಯಾರಿರಬಹುದು ಅನ್ನುವ ಕುತೂಹಲ ಮೂಡಿತ್ತು. ನೈಜತೆಯ ಪರಿಣಾಮ ಎಷ್ಟಿತ್ತೆಂದರೆ ಸ್ವತಃ ಸುವರ್ಣರೇ ಆ ಪಾತ್ರವನ್ನು ತಾನೇ ನಿರ್ವಹಿಸಿದ್ದು ಎಂದು ಹೇಳಿದರೂ ನಂಬದ ಸ್ಥಿತಿ ಎದುರಾಗಿತ್ತು. ಸುವರ್ಣರ ಅಭಿನಯವನ್ನು ಗಮನಿಸಿದರೆ ಅಲ್ಲಿ 'ಲಿವಿಂಗ್‌ದ ರೋಲ್' ಹಾಗೂ 'ಆ್ಯಕ್ಟಿಂಗ್‌ದ ರೋಲ್' ಸಂಗಮವಿರುವುದನ್ನು ಕಂಡುಕೊಳ್ಳಬಹುದು.

## ವಾಚಿಕಾಭಿನಯ: ಸುವರ್ಣ ಕೊಡುಗೆ

ವಾಚಿಕಾಭಿನಯಕ್ಕೆ ಸುವರ್ಣರು ಪ್ರಧಾನ ಆದ್ಯತೆ ನೀಡುತ್ತಿದ್ದದರಿಂದ ಈ ನಿಟ್ಟಿನಲ್ಲಿ ಅವರೂ ಔಚಿತ್ಯಪೂರ್ಣ ಕೊಡುಗೆಗಳನ್ನು ನೀಡಿದ್ದಾರೆ. ಮುಂಬಯಿಯ ಆಕಾಶವಾಣಿಯಲ್ಲಿ ಕನ್ನಡ ವಿಭಾಗದ ಅಧಿಕಾರಿಯಾಗಿದ್ದ ಹಿರಿಯ ಕವಿ ಡಾ. ಬಿ.ಎ.ಸನದಿ ಅವರು ಸುವರ್ಣರನ್ನು ವಾಚಿಕಾಭಿನಯಕ್ಕೆ ಆಗಾಗ್ಗೆ ಆಹ್ವಾನಿಸಿದ್ದಾರೆ. ಸುವರ್ಣರ ಎರಡು ಏಕಾಂಕ ನಾಟಕಗಳನ್ನು ಬಾನುಲಿ ನಾಟಕವಾಗಿಸಿ ಪ್ರಸಾರ ಮಾಡಿಸಿದ್ದರು ಸನದಿಯವರು. ಡಾ. ಸನದಿಯವರ ಎರಡೇ ಪಾತ್ರಗಳಿರುವ 'ಗಂಡ ಹೆಂಡತಿ' ನಾಟಕವೊಂದನ್ನು ರೇಡಿಯೋ ಸರಣಿ ನಾಟಕವಾಗಿಸಿ ನಿರ್ದೇಶಿಸಿದ್ದರು ಸುವರ್ಣರು. ಸದಾನಂದ ಸುವರ್ಣರು ಹಾಗೂ ಕುಂದಾ ರೇಗೆ ಅವರು ದನಿ ನೀಡಿದ್ದರು. ಇಬ್ಬರ ವಾಚಿಕಾಭಿನಯವೂ ಅತ್ಯಂತ ಆಪ್ಯಾಯಮಾನವಾಗಿತ್ತು ಎಂದು ಮೆಚ್ಚಿಕೊಂಡವರೇ ಎಲ್ಲ. ಕೆಲವು ವಾರ ಪ್ರಸಾರವಾದ, ಲವಲವಿಕೆಯಿಂದ ಕೂಡಿದ್ದ ಈ ಕಾರ್ಯಕ್ರಮ ಅಚ್ಚುಮೆಚ್ಚಿನ ಕಾರ್ಯಕ್ರಮವಾದದ್ದರ ಬಗ್ಗೆ ಸುವರ್ಣರಿಗೂ ಖುಷಿಯಾಗಿದೆ. ವಿಜ್ಞಾನಿ ಸಾಹಿತಿ ಡಾ. ವ್ಯಾಸರಾವ್ ನಿಂಜೂರು ಅವರು ಬರೆದ 'ಪ್ರೇಮಾಂತರಿಕ್ಷ' ನಾಟಕವನ್ನೂ ಕೂಡ ಸುವರ್ಣರ ನೇತೃತ್ವದ ವಾಚಿಕಾಭಿನಯಕ್ಕೆ ಎಂ.ಎನ್.ರಾಮಚಂದ್ರ ರಾವ್, ಕೆ.ಬಿ.ವಾಮನ್, ಸದಾನಂದ ಸುವರ್ಣ, ದೇವದಾಸ್ ಮೇಗರವಳ್ಳಿ, ಕುಂದಾರೇಗೇ ಮತ್ತಿತರರು ಧ್ವನಿಯಾಗಿದ್ದರು. ಇದೂ ಕೂಡ ತನ್ನ ವಿಶಿಷ್ಟತೆಯಿಂದ ರೇಡಿಯೋಪ್ರಿಯರ ಪ್ರಶಂಸೆಗೆ ಪಾತ್ರವಾಯಿತು.

ವಾಚಿಕಾಭಿನಯವನ್ನು ರಂಗದ ಮೇಲೂ ಅಭಿವ್ಯಕ್ತಿಸುವ ನಿಟ್ಟಿನಲ್ಲಿ ಮನಸ್ಸು ಮಾಡಿದ ಸುವರ್ಣರು ವಾಚಿಕಾಭಿನಯಕ್ಕೆ ಸೀಮಿತವಾದ 'ಇತಿ ನಿನ್ನ ಅಮೃತಾ' ನಾಟಕದ ಪ್ರದರ್ಶನವನ್ನು ಮಂಗಳೂರು ಹಾಗೂ ಮುಂಬಯಿಯಲ್ಲಿ ಏರ್ಪಡಿಸಿದ್ದರು. ಆಕಾಶವಾಣಿಯಲ್ಲೂ ಬಿತ್ತರಗೊಂಡ ಈ ನಾಟಕ ಕೇಳುಗರನ್ನು ಹಾಗೂ ಪ್ರೇಕ್ಷಕರನ್ನು ಹಿಡಿದಿಡುವುದು ಕೇವಲ ಸಂಭಾಷಣೆಯಲ್ಲೇ. ಹಿಂದೂ ಹುಡುಗಿ, ಮುಸ್ಲಿಂ ಹುಡುಗ ನಲವತ್ತು ವರ್ಷಗಳಲ್ಲಿ ನಡೆಸಿದ ಪ್ರೇಮ ಪತ್ರಗಳನ್ನು ರಂಗದಲ್ಲಿ ಓದುವ ವಾಚಿಕಾಭಿನಯವಿದು. ಇದು ನಲವತ್ತು ವರ್ಷಗಳ ಅವರ ಜೀವನ, ಸಾಮಾಜಿಕ, ರಾಜಕೀಯದ ಆಗು ಹೋಗುಗಳೊಂದಿಗೆ ಅವರ ಸ್ಪಂದನ, ಅವರ ಚಿಂತನ, ನಡೆದ ಘಟನೆಗಳು ಎಲ್ಲವನ್ನೂ ಒಳಗೊಂಡ ಹೃದಯಸ್ಪರ್ಶಿ ನಾಟಕ. ಹಿಂದಿಯ ಈ ನಾಟಕವನ್ನು

ಕವಿ ಜಯಂತ ಕಾಯ್ಕಿಣಿ ಬಹಳ ಸುಂದರವಾಗಿ ಅನುವಾದಿಸಿದ್ದಾರೆ, ಕನ್ನಡಕ್ಕೆ ತಂದಿದ್ದಾರೆ. ರಂಗದಲ್ಲಿ ಆಂಗಿಕ ಅಭಿನಯ, ಚಲನವಲನಗಳಿಲ್ಲದೆ ವಾಚಿಕಾಭಿನಯದ ಮೂಲಕ ಒಂದೂವರೆ ಗಂಟೆ ಪ್ರೇಕ್ಷಕರನ್ನು ತಲ್ಲೀನರಾಗಿ ಹಿಡಿದಿಡುವಲ್ಲಿ ಈ ನಾಟಕ ಜಯಿಸಿದೆ. ಈ ಗೆಲುವಿನ ಹಿಂದೆ ಸುವರ್ಣರ ವಾಚಿಕದ ನಿಷ್ಠೆ ಹಾಗೂ ತಾಲೀಮು ಮುಖ್ಯ ಪಾತ್ರವಹಿಸಿದೆ. ನಿರ್ದೇಶಕ ಸುವರ್ಣರು ಒಂದು ಪಾತ್ರವನ್ನು ನಿರ್ವಹಿಸಿದರೆ ಅವರಿಗೆ ಜತೆಯಾದವರು ಅಭಿನೇತ್ರಿ ಅಹಲ್ಯಾ ಬಲ್ಲಾಳ್. ಡಾ. ವ್ಯಾಸರಾವ್ ನಿಂಜೂರರ ಕಥಾ ಸಂಕಲನ 'ಮಂಚ' ಬಿಡುಗಡೆ ಸಮಾರಂಭದಲ್ಲಿ ಪ್ರಸ್ತುತ ನಾಟಕ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅವರಿಬ್ಬರ ಬದುಕಿನ ಚಿತ್ರಣವನ್ನು ಮನಸ್ಸಿನ ವಿಶಾಲ ರಂಗ ಮಂಚದ ಮೇಲೆ ಹರಡಿಕೊಟ್ಟದ್ದು ಅದ್ಭುತವಾಗಿತ್ತು. ಮಂಗಳೂರಿನಲ್ಲಿ ಆಕಾಶವಾಣಿಗಾಗಿ ಕಲಾವಿದೆ ಶ್ರೀಕಲಾ ಅವರ ಜತೆ ಇದೇ ನಾಟಕವನ್ನು ಅಭಿವ್ಯಕ್ತಿಸಿದ್ದರು ಸುವರ್ಣರು. 'ಇತಿ ನಿನ್ನ ಅಮೃತಾ' ಹಾಗೂ 'ಮಳೆ ನಿಲ್ಲುವವರೆಗೆ...' ನಾಟಕಗಳಲ್ಲಿ ಅಭಿನಯಿಸಿದ ಶ್ರೀಕಲಾ 'ಸದಾನಂದ ಸುವರ್ಣ ಅವರದು ನಾಚಿಕೆ ಮುಳ್ಳಿನಂಥ ಸ್ವಭಾವ. ಸದಾ ಮೌನಿ. ತೂಕದ ಮಾತುಗಳು. ಮಂಗಳೂರಲ್ಲಿ  ನಾಟಕದ ಮಳೆ ನಿಂತರೂ ಮಳೆ ಹನಿ ನಿಲ್ಲದೆಂಬಂತೆ ಸದಾನಂದ ಸುವರ್ಣರಿಂದಾಗಿ ಗಂಭೀರ ನಾಟಕಗಳಿಗೆ ಮರು ಚಾಲನೆ ದೊರಕಿತು. ಗಂಭೀರ ನಾಟಕಗಳಲ್ಲಿ ಭಾಗವಹಿಸುವ ನನ್ನ ಆಶಯಕ್ಕೆ ಇಂಬು ದೊರೆತದ್ದು ಸುವರ್ಣರ ನಿರ್ದೇಶನದ "ಇತಿ ನಿನ್ನ ಅಮೃತಾ' ನಾಟಕದ ಮೂಲಕ. ಆಕಾಶವಾಣಿ, ರಂಗವೇದಿಕೆಗಳಲ್ಲಿ ಪ್ರಯೋಗಿಸಲಾಗಿದೆ ಇದನ್ನು. ಆಕಾಶವಾಣಿಯಲ್ಲಿ ಹಾಗೂ ರಂಗದಲ್ಲಿ ಅಭಿವ್ಯಕ್ತಿಸುವ ವಿಧಾನದ ವ್ಯತ್ಯಾಸವೇನೆಂದು ನಾನು ಇಲ್ಲಿ ಗಮನಿಸುವಂತಾಯಿತು. ಸುವರ್ಣರ ನಾಟಕಗಳಲ್ಲಿ ಪಾತ್ರ ವಹಿಸಬೇಕಾದರೆ ಒಂದು ವಾರ ಕಾಲ ಸ್ವರಭಾರ ಪರೀಕ್ಷೆ ಎದುರಿಸಬೇಕು. ಸಂಪೂರ್ಣ ತರಬೇತಿ ನೀಡಿದ ಬಳಿಕವೇ ಮುಂದುವರಿಯುವುದು ಪದ್ಧತಿ. ರಂಗ ಪೂರ್ವಸಿದ್ಧತೆ ಅನ್ನುವುದು ಎಷ್ಟು ಪ್ರಾಮುಖ್ಯದ್ದು ಎಂಬುದನ್ನು ಸದಾನಂದ ಸುವರ್ಣರ ಒಂದೇ ಒಂದು ನಾಟಕದಲ್ಲಿ ಅಭಿವ್ಯಕ್ತಿಸಿದ ನಟನಟಿಯರಿಗೆ ಮನವರಿಕೆ ಆಗುತ್ತದೆ. ಸರ್ವಶ್ರೇಷ್ಠ ನಿರ್ದೇಶಕರಾಗಿದ್ದರೂ, ತನ್ನದೇ ಆದ ದೃಷ್ಟಿಕೋನ ಇಟ್ಟುಕೊಂಡವರಾದರೂ ಇತರ ನಿರ್ದೇಶಕರ ಪ್ರದರ್ಶನಗಳನ್ನೂ ತಾಳ್ಮೆಯಿಂದ ಅವಲೋಕಿಸುವ ಉದಾತ್ತತೆ ಮೈಗೂಡಿಸಿಕೊಂಡವರು ಸುವರ್ಣರು. ಸ್ವಯಂಪೂರ್ಣ ನಟ, ಸಂಭಾಷಣೆಕಾರ, ದಿಗ್ದರ್ಶಕ ಎಲ್ಲವೂ ಆಗಿ ಸುವರ್ಣ ಪರಿಪೂರ್ಣತೆ ಸಾಧಿಸಿದ್ದಾರೆ' ಎಂದು ಸುವರ್ಣರನ್ನು ಸಾಕಾರಗೊಳಿಸುವಲ್ಲಿ  ಸಫಲರಾಗುತ್ತಾರೆ.

'ಓರ್ವ ರಂಗಕರ್ಮಿಗೆ ವಿವಿಧ ಬಗೆಯ ನಾಟಕದ ಕುರಿತು ತಿಳುವಳಿಕೆ ಇರಬೇಕು. ಕಾಲ ಕಾಲಕ್ಕೆ ರಂಗಭೂಮಿಯಲ್ಲಿ ಆಗುವ ಪರಿವರ್ತನೆ, ಆವಿಷ್ಕಾರಗಳನ್ನು ಗಮನಿಸುತ್ತಿರಬೇಕು. ಜೀವನದುದ್ದಕ್ಕೂ ಜ್ಞಾನವನ್ನು, ಅನುಭವವನ್ನು ವಿಸ್ತರಿಸುತ್ತ ಹೋಗಬೇಕು. ಜ್ಞಾನದಾಹಿಯಾದ ವಿದ್ಯಾರ್ಥಿಯಾಗಿಯೇ ಉಳಿಯಬೇಕು' ಎನ್ನುವ ನಿಲುವಿನ ಸುವರ್ಣರು ಈ ಕಾರಣಕ್ಕೇನೇ ವೈವಿಧ್ಯಮಯ ವಸ್ತು, ಶೈಲಿಯ ವಿಭಿನ್ನ ತರಹದ ನಾಟಕಗಳನ್ನು ಮುಂಬಯಿ ಹಾಗೂ ಮಂಗಳೂರಿನ ರಂಗಭೂಮಿಯಲ್ಲಿ ಪ್ರದರ್ಶಿಸಿ ಬೆರಗು ಹುಟ್ಟಿಸಿದ್ದಾರೆ.

ಸಾಮಾಜಿಕ, ಐತಿಹಾಸಿಕ, ದುರಂತ, ಸುಕುಮಾರ, ವಿಡಂಬನಾತ್ಮಕ, ಹಾಸ್ಯಾಸ್ಪದ, ಸರಳರಗಳೆ, ಮಕ್ಕಳ ನಾಟಕ, ಮೂಕನಾಟಕ, ಅಸಂಗತ, ಜಾನಪದ, ಬೀದಿ ನಾಟಕ ಹೀಗೆ ಎಲ್ಲ ಪ್ರಕಾರದ ನಾಟಕಗಳಲ್ಲೂ ಕೈಯಾಡಿಸಿ ಯಶಸ್ಸು ಹಾಗೂ ಜನಪ್ರೀತಿಯನ್ನು ಸಂಪಾದಿಸಿರುವುದು ಸುವರ್ಣರ ಅಸಾಮಾನ್ಯತೆಯನ್ನೇ ದರ್ಶಿಸುತ್ತದೆ. ಆಧುನಿಕ ರಂಗಭೂಮಿಯಲ್ಲಿ ಅನುಪಮ ಕಾಣ್ಕೆಗಳಾಗಿ ಇವು ಉಳಿದುಕೊಂಡಿವೆ.

****

ಅಧ್ಯಾಯ 5

# ಸಂಘಟನೆ : ಸಮರ್ಥ ನಾಯಕತ್ವ

ರಂಗಭೂಮಿಯನ್ನು ಕಟ್ಟುವ ಪ್ರಕ್ರಿಯೆಯಲ್ಲಿ ರಂಗಕರ್ಮಿ ಸದಾನಂದ ಸುವರ್ಣರು ಆರಂಭದಿಂದಲೇ ಕಠಿಣ ಶಿಸ್ತು ಪಾಲಿಸುತ್ತ ಬಂದಿದ್ದಾರೆ. ನಾಯಕತ್ವದ ಗುಣ ಹಾಗೂ ಪ್ರತಿಭೆ ಎರಡೂ ಹದವಾಗಿ ಬೆರೆತದ್ದರಿಂದ ಸುವರ್ಣರು ಕಲಾವಿದರನ್ನು ರೂಪಿಸುತ್ತಲೇ ರಂಗ ಸಂಸ್ಥೆಗಳನ್ನು ಇಂದಿನವರೆಗೂ ಬಹಳ ಚೆನ್ನಾಗಿ ಕಟ್ಟುತ್ತ ಬರುವುದಕ್ಕೆ ಸಾಧ್ಯವಾಗಿದೆ. ಹೊರನಾಡಿನ ನೆಲದೊಳಗೆ ನಾಟಕ ಸಂಸ್ಥೆಯನ್ನು ಕಟ್ಟುವ ಹರಸಾಹಸದಲ್ಲಿ ಯಶಸ್ವಿಯಾದದ್ದು ಸುವರ್ಣರ ಕಾರ್ಯವೈಖರಿಯಿಂದಲೇ.

ಹವ್ಯಾಸಿ ರಂಗಭೂಮಿಯ ಮುಂದಿದ್ದ ಇನ್ನೊಂದು ದೊಡ್ಡ ಸವಾಲು ಹಣಕಾಸಿನದ್ದು. ಬಡತನದ ನಡುವೆ ಸೊರಗಿದ್ದ ಮುಂಬಯಿ ಕನ್ನಡ ರಂಗಭೂಮಿಯನ್ನು ಚೇತರಿಸಿಕೊಳ್ಳುವಂತೆ ಮಾಡುವ ಕನಸೊಂದು ಸುವರ್ಣರ ಮುಂದೆ ಇತ್ತು. ಆದರೆ ಹೊಟ್ಟೆಪಾಡಿಗಾಗಿ ಮುಂಬಯಿ ಸೇರಿದ್ದ ಕನ್ನಡಿಗರು ದುಡಿದು ಗಳಿಸಿದ ಅಲ್ಪದ್ದರಲ್ಲೇ ಬಹುಪಾಲನ್ನು ಮನೆಗೆ, ಸ್ವಲ್ಪ ಮಾತ್ರ ಸ್ವಂತಕ್ಕೆ ಇಟ್ಟುಕೊಳ್ಳಬೇಕಾದ ಕಾಲಘಟ್ಟದಲ್ಲಿ ನಾಟಕದ ಪ್ರೀತಿಯನ್ನು ಬೆಳೆಸಿಕೊಂಡದ್ದು ಸಾಂಸ್ಕೃತಿಕ ಚಟುವಟಿಕೆಗಳನ್ನು ಉಳಿಸಿ ಬೆಳೆಸಬೇಕು ಅನ್ನುವ ಅದಮ್ಯ ಕಾಳಜಿಯಿಂದಲೇ. ಕೇವಲ 100 ರೂ.ನಲ್ಲಿ ನಾಟಕವನ್ನು ಆಡಿಸಬೇಕಾದ ಸವಾಲು ಆಗಿನದ್ದು. ಅರುವತ್ತರಿಂದ ಎಪ್ಪತ್ತು ರೂ. ಪರದೆಗೇ ವಿನಿಯೋಗವಾಗುತ್ತಿತ್ತು. ಎಂ.ಆರ್.ಆಚಾರ್ಯ ಹಾಗೂ ದೇವರಾಜರು ಉಚಿತವಾಗಿ ಮೇಕಪ್ ಮಾಡಿಕೊಟ್ಟು ಕಲಾ ಸೇವೆ ಮಾಡಿ ಉಪಕಾರ ಮಾಡುತ್ತಿದ್ದರು. ಕಾಸ್ಟ್ಯೂಮ್ಸ್ ಅವರವರೇ ನೋಡಿಕೊಳ್ಳಬೇಕಿತ್ತು. ಸಭಾ ಕಾರ್ಯಕ್ರಮದ ಲೈಟ್ಸ್ ಇವರ ನಾಟಕಗಳಿಗೂ ಬೆಳಕಾಗಿರುತ್ತಿದ್ದವು. ಸಂಗೀತದವರಿಗೆ ಚಹಾ ತಿಂಡಿ ವ್ಯವಸ್ಥೆ ಮಾಡಬೇಕಿತ್ತು. ಹೀಗೆ ನಲವತ್ತು-ಐವತ್ತರ ದಶಕದಲ್ಲಿ ಅತ್ಯಂತ ಬಡತನದಲ್ಲೇ ನಡೆದು ಬಂದ ರಂಗಭೂಮಿಯಲ್ಲಿ ಪ್ರಯೋಗ ಅನ್ನುವುದು ಹುಚ್ಚು ಸಾಹಸ, ಸಾಹಸದ ಹುಚ್ಚು ಎಂದರೂ ಸರಿಯೇ. ಆದರೂ ಸಾಕಷ್ಟು ಚಟುವಟಿಕೆಗಳಾಗುತ್ತಿದ್ದವು, ಸುವರ್ಣರೂ ಇಂಥ ಕಾಲಘಟ್ಟದಲ್ಲೂ ನಾಟಕವನ್ನು ನಿರ್ದೇಶಿಸಿ ಪ್ರದರ್ಶಿಸಿದ್ದಾರೆ ಎಂದರೆ ಅಲ್ಲಿದ್ದದ್ದು ಕಲೆಯನ್ನು ಶ್ರೀಮಂತಗೊಳಿಸುವ ಪ್ರಜ್ಞೆಯೇ.

ಐವತ್ತರ ದಶಕದ ಕೊನೆಯಲ್ಲಿ ಆರ್ಥಿಕ ಮಟ್ಟದಲ್ಲಿ ಹೌದೋ ಅಲ್ಲವೋ ಅನ್ನಿಸುವಷ್ಟು ಚೇತರಿಕೆ ಕಂಡುಬಂದಿದೆ. ವೇತನದಲ್ಲಿ ಏರಿಕೆ, ಬಡ್ತಿ ದೊರಕಿದೆ. ಪರಿಣಾಮವಾಗಿ ರಂಗಭೂಮಿಗೆ ತುಸು ಹೆಚ್ಚು ಹಣ ವಿನಿಯೋಗಿಸುವುದಕ್ಕೆ ಸಾಧ್ಯ ಆಗಿದೆ. ಇದರ ಜತೆಗೆ ಸೇರಿಕೊಂಡಿದ್ದ ಇನ್ನೊಂದು ದೊಡ್ಡ ಸಮಸ್ಯೆ ರಿಹರ್ಸಲ್‌ನ ಸ್ಥಳದ್ದು. ಹಾರ್ನಿಮಲ್ ಸರ್ಕಲ್‌ನ ದೇನಾ ಬ್ಯಾಂಕ್ ಕಟ್ಟಡದ ಪಕ್ಕ ಇರುವ ಕಚೇರಿಯಲ್ಲಿ, ಇನ್ನೊಂದಷ್ಟು ಕಾಲ ಬೋಟಾವಾಲ ಛೇಂಬರ್ಸ್‌ನಲ್ಲಿ ರಿಹರ್ಸಲ್ ಮಾಡುವುದಕ್ಕೆ ಅವಕಾಶ ದೊರೆಯಿತು. ಕಚೇರಿಯ ಪೀಠೋಪಕರಣಗಳನ್ನೆಲ್ಲ ಬದಿಗೆ ಸರಿಸಿ ತಾಲೀಮು ನಡೆಸುವುದು, ಮುಗಿದ ಬಳಿಕ ಮೊದಲಿನಂತೆಯೇ ಜೋಡಿಸಿಡುವುದು ದಿನದ ಕೆಲಸವಾಗಿತ್ತು. ನಾಟಕವೊಂದರ ಪ್ರದರ್ಶನದ ಉಮೇದಿ ಕಷ್ಟ-ನಷ್ಟಗಳನ್ನು ಲೆಕ್ಕಿಸಲು ಬಿಡುತ್ತಲೇ ಇರಲಿಲ್ಲ.

ಅರುವತ್ತು-ಎಪ್ಪತ್ತರ ದಶಕದ ಕಾಲಘಟ್ಟದಲ್ಲಿ ಪ್ರಯೋಗಗಳು ಹೆಚ್ಚುತ್ತ ಹೋಗಿವೆ, ಆದರೆ ಪ್ರದರ್ಶನಕ್ಕೆ ಸೂಕ್ತ ಸಭಾಗೃಹಗಳದೇ ಸಮಸ್ಯೆ. ಹಣಕಾಸಿನ ಸಮಸ್ಯೆಯ ಮುಂದೆ ಇದೂ ದೊಡ್ಡದಾಗಿ ಬೆಳೆಯುತ್ತ ಬಂತು. ಟಿಕೇಟು ಮಾರಾಟ ಸಮಸ್ಯೆಯ ಸವಾಲುಗಳೂ ತಂಡದ ನಟರ ಮುಂದೆ ಇದ್ದವು. ಟಿಕೇಟು ಮಾರಾಟವಾಗಿರದಿದ್ದರೆ ಮನೆ, ಮನೆಗಳಿಗೆ, ಆಫೀಸುಗಳಿಗೆಲ್ಲ ಭೇಟಿ ನೀಡಿ ಬಲವಂತವಾಗಿ ಟಿಕೇಟು ಕೊಟ್ಟು ಹಣ ಆಮೇಲೆ ಕೊಡಿ ಎಂದದ್ದೂ ಇದೆ. ಹೀಗೆ ಕೊಟ್ಟಾಗ ಹಣ ವಾಪಾಸು ಬಾರದೇ ಇದ್ದದ್ದೇ ಹೆಚ್ಚು. ನಾಟಕಕ್ಕೆ ಬೇಕಾದ ಮೇಜು, ಕುರ್ಚಿ ಮತ್ತಿತರ ಪರಿಕರಗಳನ್ನು ಮನೆ ಮನೆಗಳಿಂದ ಸಂಗ್ರಹಿಸುವ ಕೆಲಸವನ್ನು ಕಲಾವಿದರೇ ನಾಟಕದ ಮೇಲಿನ ಅಭಿಮಾನದಿಂದ ಇಷ್ಟಪಟ್ಟು ನಿರ್ವಹಿಸುತ್ತಿದ್ದರು. ಒಬ್ಬೊಬ್ಬ ಕಲಾವಿದರೂ ಪರಿಶ್ರಮವನ್ನು ಹೆಗಲಿಗೇರಿಸಿಕೊಂಡು ದುಡಿದದ್ದರ ಹಿಂದಿದ್ದದ್ದು ಒಂದೇ, ರಂಗ ಪ್ರೀತಿ. ಇರುವ ಕನಿಷ್ಠ ಸವಲತ್ತುಗಳ ನಡುವೆ ಹೊಸರೀತಿಯಲ್ಲಿ ರಂಗಭೂಮಿಯನ್ನು ಪೋಷಿಸುವ ಸವಾಲು ಸುವರ್ಣರ ಮುಂದೆ ಸದಾ ಇದ್ದೇ ಇತ್ತು. ಈ ನಡುವೆ ಅವರು ಅನೇಕ ಒಳನೋಟಗಳನ್ನು ರಂಗದ ಮೇಲೆ ಒಡ್ಡುವ ನಿಟ್ಟಿನಲ್ಲಿ ಯೋಚಿಸಿದರು. ಪರಿಣಾಮವಾಗಿ ರಂಗಾಸಕ್ತರಿಂದ ಸಭಾಂಗಣ ತುಂಬಿತುಳುಕುತ್ತಿದ್ದವು.

## ಉದಯಕಲಾ ನಿಕೇತನದ ರೂವಾರಿ

ಸದಾನಂದ ಸುವರ್ಣರು ಪರಿಪೂರ್ಣ ನಾಯಕತ್ವದ ಗುಣ, ಅನನ್ಯ ಪ್ರತಿಭೆ ಎರಡರಿಂದಲೂ ರಂಗಾಸಕ್ತರನ್ನು, ಕಲಾವಿದರನ್ನು, ನೇಪಥ್ಯದ ಕಲಾವಿದರನ್ನು ರೂಪುಗೊಳಿಸುತ್ತ ಬಂದರು. ಹೋರಾಟದ ನಡುವೆ ರಂಗಭೂಮಿಯನ್ನು ಕಟ್ಟುತ್ತ ಬೆಳೆಸುತ್ತ ಬಂದ ಹಾದಿಯನ್ನು ಗಮನಿಸಿದರೆ ಗ್ರೋಟೊವಸ್ಕಿಯ ಬಡ ರಂಗಭೂಮಿಯ ಪರಿಕಲ್ಪನೆಯನ್ನು ಸುವರ್ಣರು ಆತನ ಸಿದ್ಧಾಂತಗಳನ್ನು ಅರಿಯುವ ಮೊದಲೇ ಅನುಷ್ಠಾನಕ್ಕೆ ತಂದಿದ್ದರು ಎನ್ನುವುದು ಅರ್ಥವಾಗುತ್ತದೆ, ಸುವರ್ಣರ ಹಟಸಾಧನೆ ಎಂಥದ್ದು ಎನ್ನುವುದೂ ಅರಿವಿಗೆ ಬರುತ್ತದೆ. ಉದಯಕಲಾನಿಕೇತನವನ್ನು ಕಟ್ಟಿ ಬೆಳೆಸಿ ಹೆಮ್ಮರವಾಗಿಸಿದ್ದು, ಕನ್ನಡ

ಕಲಾ ಕೇಂದ್ರವೆಂಬ ರಂಗಸಂಸ್ಥೆಯನ್ನು ಮೇಲ್ಮಟ್ಟಕ್ಕೇರಿಸಿದ್ದು ನಾಟಕೋತ್ಸವಗಳಲ್ಲಿ ತಮ್ಮ ತಂಡದೊಂದಿಗೆ ಭಾಗವಹಿಸಿದ್ದು, ಉತ್ಸವವನ್ನು ಉನ್ನತ ಮಟ್ಟದಲ್ಲಿ ನಿಭಾಯಿಸಿದ್ದು ಸುವರ್ಣರ ವಿಶೇಷ ಶಕ್ತಿಯೇ.

ಸುವರ್ಣರ ನೇತೃತ್ವದಲ್ಲೇ ಉದಯ ಕಲಾ ನಿಕೇತನ ಸಂಸ್ಥೆ ದಶಮಾನೋತ್ಸವವನ್ನೂ ಸಂಭ್ರಮದಿಂದ ಆಚರಿಸಿದ್ದು ಸುಂದರ ನೆನಪು.

## ಕಹಿ ಘಟನೆ

ತಾನೇ ಹುಟ್ಟು ಹಾಕಿದ, ಹತ್ತು ವರ್ಷಗಳ ಕಾಲ ಪೋಷಿಸಿ ಒಂದು ಗಂಭೀರ ಹವ್ಯಾಸಿ ರಂಗಭೂಮಿಯ ಶ್ರೇಷ್ಠ ಸಂಸ್ಥೆಯನ್ನಾಗಿ ನಿರ್ವಹಿಸಿದ 'ಉದಯ ಕಲಾ ನಿಕೇತನ'ದಿಂದ ಅನಿವಾರ್ಯವಾಗಿ ಹೊರ ಬರುವಂಥ ಪ್ರಸಂಗ ಎದುರಾಯಿತು ಸುವರ್ಣರಿಗೆ. ಇಂಥದ್ದೊಂದು ಸನ್ನಿವೇಶ ಬರುತ್ತದೆ ಅನ್ನುವುದರ ಸಣ್ಣ ಕಲ್ಪನೆಯೂ ಇರದಿದ್ದ ಸುವರ್ಣರಿಗೆ ಒಂದು ರೀತಿಯಲ್ಲಿ ಆಘಾತವೇ ಆಗಿದೆ. ಒಳಗಿದ್ದ ಸ್ವಾಭಿಮಾನ ಅನವಶ್ಯಕವಾಗಿ ಕಾಲೆಳೆದದ್ದನ್ನು ಸಹಿಸದೆ ತಾವೇ ಹೊರಬರುವಂತೆ ಪ್ರೇರೇಪಿಸುತ್ತದೆ. ತಾವೇ ತಮ್ಮ ಸಂಸ್ಥೆಗೆ ಸೇರಿಸಿಕೊಂಡ ವ್ಯಕ್ತಿಯೊಬ್ಬರಿಂದ ಎದುರಾದ ಸಮಸ್ಯೆಗೆ ಅವರನ್ನೇ ಹೊರ ಕಳಿಸುವ ನಿರ್ಧಾರ ಮಾಡುವ ಬದಲಿಗೆ ತಾವೇ ಅಲ್ಲಿಂದ ಹೊರನಡೆದದ್ದು ತಾನು ಇನ್ನೊಂದು ಮತ್ತೊಂದು ತಂಡವನ್ನು ಕಟ್ಟಿ ಬೆಳೆಸಬಲ್ಲೆ ಅನ್ನುವ ವಿಶ್ವಾಸದೊಂದಿಗೇ.

ಉದಯ ಕಲಾ ನಿಕೇತನಕ್ಕೆ ದಶಮಾನದ ಸಂಭ್ರಮದ ಬಳಿಕ ತಂಡದಲ್ಲಿ ಕೆಲವು ಹೊಸ ಕಲಾವಿದರನ್ನು ಸೇರಿಸಿಕೊಳ್ಳಲಾಯಿತು. ತಾವಾಗಿಯೇ ಬಂದ ಇಬ್ಬರು ಲೇಖಕರನ್ನೂ ಮುಕ್ತ ಮನಸ್ಸಿನಿಂದ ಸ್ವಾಗತಿಸಿದರು. ಇಲ್ಲಿದ್ದುದು ತಂಡದಿಂದ ಇನ್ನಷ್ಟು ಶಕ್ತ ಕೊಡುಗೆಗಳನ್ನು ನೀಡಬೇಕು ಅನ್ನುವುದೇ ಆಗಿತ್ತು. ಹೊಸ ಬಗೆಯ ನಾಟಕಗಳನ್ನು ರಚಿಸುತ್ತ ವೈವಿಧ್ಯಮಯ ಕೊಡುಗೆಗಳನ್ನು ನೀಡಬೇಕು ಅನ್ನುವ ಕಲೆಯ ಮೇಲಿನ ಮಹತ್ವಾಕಾಂಕ್ಷೆಯಿಂದಲೇ ಆಗಿತ್ತು. ಆದರೆ ಸೇರಿಕೊಂಡ ಒಬ್ಬರು ಲೇಖಕರು ತಂಡದ ಏಕತೆಯನ್ನು ಮುರಿಯುವುದಕ್ಕೆ ತನ್ನ ದೇಣಿಗೆ ನೀಡಿದರು. ಒಡಕು ಸೃಷ್ಟಿಸಿದರು. ಸುವರ್ಣರೇ ಮೆಲುಕು ಹಾಕುವಂತೆ 'ಅದು ತನಕ ಅನ್ಯೋನ್ಯ ಹಾಗೂ ಪ್ರೀತಿಯಿಂದ, ರಂಗದ ಮೇಲಿನ ಬದ್ಧತೆಯಿಂದ ಒಂದು ಕುಟುಂಬದಂತೆ ಒಬ್ಬರಿಗೊಬ್ಬರು ನೆರವಾಗುತ್ತಿದ್ದ ಆದರ್ಶ ತಂಡ'ದಲ್ಲಿ ಬಿರುಕು ಕಾಣಿಸಿಕೊಂಡಿತು. ಯಾವುದೇ ನಾಟಕ ತಯಾರಿ ಸಂದರ್ಭ ಪಾತ್ರ ಹಂಚುವಿಕೆ ನಿರ್ದೇಶಕನದೇ ಜವಾಬ್ದಾರಿಯಾಗಿರುತ್ತದೆ. ಇಡೀ ನಾಟಕದ ಅಧ್ಯಯನ ಮಾಡಿದವರು, ಅದರ ಕುರಿತು ಪೂರ್ಣ ಅರಿವು ಇರುವ ನಿರ್ದೇಶಕನಿಗೆ ಯಾವ ಪಾತ್ರವನ್ನು ಯಾರು ಹೇಗೆ ನಿರ್ವಹಿಸಬಲ್ಲರು ಅನ್ನುವದರ ಬಗ್ಗೆ ಸ್ಪಷ್ಟತೆ ಇರುತ್ತದೆ. ಯಾವ ಪಾತ್ರಕ್ಕೆ ಯಾರು ಅರ್ಹರು ಅನ್ನುವುದನ್ನು ನಿರ್ದೇಶಕರೇ ನಿರ್ಧರಿಸಬೇಕು. ನಿರ್ದೇಶಕರ ಕಲ್ಪನೆಗೆ ಜೀವ ತುಂಬುವ ಬಗೆಯನ್ನು ಅವರು ಮನನ ಮಾಡಿಯೇ ಪಾತ್ರ ಹಂಚುತ್ತಾರೆ. ಸುವರ್ಣರಂತೂ ಈ ವಿಷಯದಲ್ಲಿ ಪಕ್ಕಾ ಅಂದರೆ ಪಕ್ಕಾ ಆಗಿರುವವವರು. ಇಂಥ ಪಾತ್ರವನ್ನು ಇಂಥವರು

ಹೀಗೇ ಮಾಡುತ್ತಾರೆ ಅನ್ನುವ ಅವರ ಖಚಿತತೆಯೇ ಅವರ ನಾಟಕಗಳು ಉನ್ನತ ಸ್ತರದಲ್ಲಿ ನಿಲ್ಲುವುದಕ್ಕೆ ಸಾಧ್ಯವಾಗಿದೆ. ನಿರ್ದೇಶಕನೇ ಪಾತ್ರ ಹಂಚುವುದು ಹೇಗೆ ನೋಡಿದರೂ ಸಮಂಜಸವಾದದ್ದು. ಆದರೆ ಹೊಸಬರೊಬ್ಬರು ಈ ವಿಷಯದಲ್ಲೇ ತಗಾದೆ ತೆಗೆದರು, ಇತರರೂ ಎತ್ತಿಕಟ್ಟಿದರು. ಮುಂದೆ ಪಾತ್ರ ಹಂಚುವಿಕೆಯನ್ನು ಕಾರ್ಯಕಾರಿ ಸಮಿತಿ ನಿರ್ವಹಿಸಬೇಕು ಅನ್ನುವ ಪ್ರಸ್ತಾಪವನ್ನು ಆತ ಸಮಿತಿಯ ಮುಂದಿಟ್ಟರು. ಕೆಲವು ಮಹತ್ವಾಕಾಂಕ್ಷೆಯ ನಟರು ಕಲೆಯ ಗಂಧ ಗಾಳಿ ಗೊತ್ತಿಲ್ಲದೆ ರಂಗಭೂಮಿಗೆ ಪ್ರವೇಶಿಸಿದ್ದು, ಸುವರ್ಣರು ತಿದ್ದಿ ತೀಡಿ ನಟರನ್ನಾಗಿ ಪರಿವರ್ತಿಸಿದ್ದು ಅವರಿಂದಾಗಿಯೇ ಹೀಗೆ ತಾವು ಬೆಳೆದು ಬಂದದ್ದು ಎಲ್ಲವನ್ನೂ ಮರೆತು ಹೊಸಬರ ದನಿಗೆ ದನಿಗೂಡಿಸಿದರು. 'ಹಾಗಾದರೆ ಇನ್ನು ಮುಂದೆ ಕಮಿಟಿಯೇ ನಿರ್ಧರಿಸಲಿ, ನಾನು ಇಲ್ಲಿರಲಾರೆ' ಎಂದು ಸುವರ್ಣರು ತಾವೇ ಹೆತ್ತ ಉದಯಕಲಾನಿಕೇತನವೆಂಬ ಕೂಸನ್ನು ಹತ್ತು ವರ್ಷಗಳ ಕಾಲ ಬಹಳ ಮುತುವರ್ಜಿಯಿಂದ ಪೋಷಿಸಿ ಮೌಲಿಕಕ್ಕೇರಿಸಿದ ಸವಿ ನೆನಪಿನೊಂದಿಗೆ ಭಾರವಾದ ಮನಸ್ಸಿನಿಂದ ರಾಜೀನಾಮೆಯನ್ನು ನೀಡಿ ಹೊರ ಬಂದರು.

ನಿರ್ದೇಶಕನೇ ಪಾತ್ರ ಹಂಚಿಕೆ ನಡೆಸಬೇಕು ಅನ್ನುವುದಕ್ಕೆ ಸುವರ್ಣರ ಸಮರ್ಪಕ ಸಮರ್ಥನೆ ಇದು: 'ಪಾತ್ರ ಹಂಚಿಕೆ–ನಾಟಕ ಪ್ರಯೋಗದ ಬಗ್ಗೆ ವಿಷುವಲೈಸ್ ಮಾಡ್ತಾ ಹೋಗ್ತಿರ್ತಾನೆ ನಿರ್ದೇಶಕ. ನಾನಂತೂ ರಂಗ ಪ್ರಯೋಗಕ್ಕಿಳಿಸಬಹುದಾದ ನಾಟಕವನ್ನು ಮೂರು ಬಾರಿ ಓದಿರ್ತೇನೆ. ಆಮೇಲೇ ಒಂದು ನಿರ್ಧಾರಕ್ಕೆ ಬಂದಿರ್ತೇನೆ. ಓದಿನ ಸಂದರ್ಭವೇ ನಾಟಕವನ್ನಾಗಿಸುವ ದೃಷ್ಟಿಕೋನದ ಬಗ್ಗೆ ಕಲ್ಪಿಸಿಕೊಂಡಿರ್ತೇನೆ. ಅದರ ಸಾಧ್ಯಾಸಾಧ್ಯತೆ ಬಗ್ಗೆ ನಿರ್ಧರಿಸಿರುತ್ತೇನೆ. ಹೀಗಿದ್ದಾಗ್ಯೂ ಕೆಲವೊಮ್ಮೆ ನಿರ್ದೇಶಕನ ಕಲ್ಪನೆಯನ್ನು, ಯೋಚನೆಯನ್ನು, ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳದೆ ನಾಟಕ ಚೆನ್ನಾಗಿ ಮೂಡದು ಎಂಬ ನಿರ್ಧಾರಕ್ಕೆ ಕಲಾವಿದರೇ ಬಂದು ಪ್ರಯೋಗದ ಪ್ರಯತ್ನವನ್ನೇ ತಟಸ್ಥವಾಗಿಸುವುದೂ ಇದೆ. ಇಂಥ ಪ್ರಕ್ರಿಯೆ ಹಿಂದೆಯೂ ಇತ್ತು. ಈಗಲೂ ಇದೆ. ಕಲಾವಿದರ ಕೆಪಾಸಿಟಿ ನಿರ್ದೇಶಕನಿಗೆ ಗೊತ್ತಿರುತ್ತದೆ. ಅದರ ಆಧಾರದ ಮೇಲೆಯೇ ಪಾತ್ರ ಹಂಚಿಕೆಯೂ ನಡೆಯುತ್ತದೆ. ಅಲ್ಲಿ ನಿರ್ದೇಶಕನ ಕಲ್ಪನೆ–ಅನುಭವ ಕೂಡ ಸಾಕಷ್ಟು ಕೆಲಸ ಮಾಡುತ್ತದೆ. ಒಂದೊಂದು ಪಾತ್ರವೂ ನಾಟಕಕ್ಕೆ ಮುಖ್ಯದ್ದೇ ಆಗಿರುತ್ತದೆ ಮತ್ತು ಆ ಪಾತ್ರದ ಔಚಿತ್ಯ ಅರಿತು ಅದರ ಚೌಕಟ್ಟಿನಲ್ಲಿ ಅಭಿವ್ಯಕ್ತಿಸಬೇಕು.'

ರಾಜೀನಾಮೆ ಹಿಂಪಡೆಯುವುದಕ್ಕೆ ಇನ್ನಿತರ ಆತ್ಮೀಯ ಕಲಾವಿದರ ಬಳಗ ಬಹಳವೇ ಒತ್ತಾಯಿಸಿದೆ. ಒಮ್ಮೆ ಹೊರಗೆ ಹೆಜ್ಜೆ ಇಟ್ಟಾಗಿದೆ. ಇನ್ನು ಒಳಗೆ ಬರುವ ಪ್ರಶ್ನೆಯೇ ಇಲ್ಲ ಎನ್ನುವ ಕಡಕ್ ನಿರ್ಧಾರಕ್ಕೆ ಬಂದಿದ್ದರು ಸುವರ್ಣರು. 'ನೀವೇ ಸ್ಥಾಪಿಸಿದವರು, ಇದು ನಿಮ್ಮ ಮಗು. ಅದನ್ನು ಬಿಟ್ಟು ಅನಾಥವನ್ನಾಗಿ ಮಾಡಿ ಹೋಗಬಾರದು, ಎಂದೆಲ್ಲ ಕಾಡಿಬೇಡಿದರು. 'ನಾಟಕದ ನಿರ್ದೇಶಕನಿಗೆ ಪಾತ್ರಧಾರಿಗಳನ್ನು ಆಯ್ಕೆ ಮಾಡುವ ಹಕ್ಕಿಲ್ಲದಿದ್ದರೆ ಅಲ್ಲಿ ಯಾಕಿರಬೇಕು? ನಾನು ಕಟ್ಟಿದ ಸಂಸ್ಥೆ ನಿಜ. ಆದರೆ ರಂಗಭೂಮಿಯಲ್ಲಿ ಆಸಕ್ತಿ ಇರುವ ಎಂಟು ಹತ್ತು ಜನ ಸಿಕ್ಕಿದರೆ ಇದರಂಥ ಹತ್ತು ಸಂಸ್ಥೆಗಳನ್ನು ಕಟ್ಟಬಲ್ಲೆ' ಎಂದೇ

ಸುವರ್ಣರು ಉತ್ತರಿಸಿ ವಾಪಸ್ ಕಳಿಸಿದ್ದರು. 'ನೀವೆಲ್ಲಿಗೆ ಹೋಗ್ತೀರೋ ನಾವು ಅಲ್ಲಿರುತ್ತೇವೆ. ಇನ್ನೊಂದು ಸಂಸ್ಥೆ ಕಟ್ಟಿ, ನಾವಿದ್ದೇವೆ' ಎಂದವರು ಹೆಚ್ಚಿನವರು. 'ನೀವೆಲ್ಲ ಹೊರಬಂದರೆ ಸಂಸ್ಥೆ ಬಿದ್ದು ಹೋಗುತ್ತದೆ. ನಾನು ನಾಟಕ ಮಾಡುವಾಗ ನಿಮಗೆ ತಕ್ಕ ಪಾತ್ರ ಇದ್ದರೆ ಕಂಡಿತ ಕರೆಯುತ್ತೇನೆ. ಬನ್ನಿ' ಎಂದು ಅವರನ್ನು ಸಮಾಧಾನಪಡಿಸಿ ಕಳುಹಿಸಿದ್ದರು ಸುವರ್ಣರು.

ಮೊದಲೆಲ್ಲ ಸಾಮಾಜಿಕ ನಾಟಕಗಳನ್ನು ಬರೆದು ಪ್ರದರ್ಶಿಸಿದ ಸುವರ್ಣರು ಬಳಿಕ ವಿವಿಧ ಶೈಲಿಯ ನಾಟಕಗಳನ್ನು ಆಯ್ದುಕೊಂಡರು. ದುರಂತ, ಸುಕುಮಾರ, ವಿಡಂಬನಾತ್ಮಕ ಹಾಸ್ಯ ನಾಟಕಗಳನ್ನು ಕನ್ನಡ ರಂಗಭೂಮಿಯಲ್ಲಿ ಪ್ರದರ್ಶಿಸಬೇಕೆನ್ನುವ ಆಶಯಕ್ಕೆ ಜೀವ ತುಂಬುತ್ತಲೇ ಬಂದರು. ಕನ್ನಡ ರಂಗಭೂಮಿಯನ್ನು ಇತರ ಭಾಷಿಕ ರಂಗಭೂಮಿಯವರು ಕುತೂಹಲದಿಂದ, ಇಷ್ಟಪಟ್ಟು ನೋಡುವ ಹಾಗೆ ಮಾಡಿದ್ದು ಇತಿಹಾಸವೇ ಸರಿ.

ಆದರೆ ಈ ಘಟನೆ ಅವರನ್ನು ಎಷ್ಟು ಘಾಸಿಗೊಳಿಸಿದೆ ಅನ್ನುವುದಕ್ಕೆ 'ಕದ್ದವನೆ ಕಳ್ಳ' ಕೃತಿಯ ಲೇಖಕನ ಮಾತುಗಳು ತೆರೆದಿಡುತ್ತವೆ. 'ಮುಂಬಯಿಯಲ್ಲಿರುವ ಕೆಲವೇ ಕನ್ನಡ ನಾಟ್ಯವಿಲಾಸಿ ಸಂಸ್ಥೆಗಳ ಅಸ್ತಿತ್ವಕ್ಕೆ ಕಾರಣ ಆ ಸಂಸ್ಥೆಗಳು ಹುಟ್ಟಿಕೊಳ್ಳಲು ಕಾರಣರಾದ ಕೆಲವಾರು ವ್ಯಕ್ತಿಗಳ ನಿರಂತರ ಪರಿಶ್ರಮ, ತ್ಯಾಗ ಬುದ್ಧಿ ಮತ್ತು ವೈಯಕ್ತಿಕ ಪ್ರತಿಭೆ, ಸಾಹಸಗಳೆನ್ನಬೇಕು. ಅದನ್ನರಿತು ಅನ್ಯೋನ್ಯವಾಗಿ ಸಹಕರಿಸುವ ನಿಸ್ವಾರ್ಥ ಮನೋಭಾವ ಕಾರ್ಯಕರ್ತರಲ್ಲಿರಲು ಆ ಸಂಸ್ಥೆ ಧ್ಯೇಯ ಸಾಧನೆಯಲ್ಲಿ ನಿರತವಾಗಿ ಬೆಳಗುತ್ತದೆ. ಅದಕ್ಕೆ ಬದಲು ಸ್ವಾರ್ಥ ಭಾವನೆ, ಅಧಿಕಾರ ಲಾಲಸೆ, ದ್ವೇಷಾಸೂಯೆಗಳ ಬೀಜವನ್ನು ಬಿತ್ತುವವರು ಆ ಸಂಸ್ಥೆಯಲ್ಲಿ ಹುಟ್ಟಿಕೊಂಡಾಗ ಧ್ಯೇಯ ಸಾಧನೆ ಕಣ್ಮರೆಯಾಗುತ್ತದೆ. ಆರ್ಟಿನ ಬದಲು ಡೆಮಾಕ್ರಸಿಯ ಕುರಿತು ಭಾಷಣ, ಚರ್ಚೆಗಳಾಗುತ್ತ ಅಲ್ಲಿ ಕಲೋಪಾಸನೆಗೆ ಎಡೆಯೆಲ್ಲಿ? ವ್ಯಕ್ತಿಗಿಂತ ಸಂಸ್ಥೆ ಹಿರಿದು. ಆದರೆ ಸಂಸ್ಥೆಗಿಂತ ಅದು ಹುಟ್ಟಿಕೊಳ್ಳಲು ಕಾರಣವಾದ ಮೂಲ ಧ್ಯೇಯ ಹಿರಿದು. ಅದನ್ನು ಮರೆತರೆ ಮತ್ತೆಲ್ಲ ಬರಿದು.

ಮುಂಬಯಿಯ ಯಾಂತ್ರಿಕ ಜೀವನದಲ್ಲಿ ಬಿಡುವಿದ್ದ ಸಮಯವನ್ನು ಕನ್ನಡ ರಂಗಭೂಮಿಯ ಸೇವೆಯಲ್ಲಿ ಮೀಸಲಾಗಿರುವ ಹುರುಪು ಹುಮ್ಮಸ್ಸು ಕೆಲವು ಗೆಳೆಯರಲ್ಲಿ ಒಡಮೂಡಿ, ಉದಯ ಕಲಾ ನಿಕೇತನವೆಂಬ ಸಂಸ್ಥೆ ಸುಮಾರು ಹತ್ತು ವರ್ಷಕ್ಕೆ ಹಿಂದೆ ಹುಟ್ಟಿಕೊಂಡಿತು. ಹತ್ತಾರು ಮುಗುದ ಕಲಾವಿದರು ತರಬೇತುಗೊಂಡು ರಂಗದಲ್ಲಿ ಕಾಣಿಸಿಕೊಂಡರು. ಸುಮಾರು ಮೂವತ್ತೈದಕ್ಕೂ ಮಿಕ್ಕಿ ನಾಟಕ ಪ್ರಯೋಗಗಳಿಂದ ಮುಂಬಯಿ ಕನ್ನಡ ರಂಗಭೂಮಿಯಲ್ಲಿ ಅಳಿಲ ಸೇವೆ ಸಲ್ಲಿಸಿದ್ದಾಯಿತು. ಈ ಹತ್ತು ವರ್ಷಗಳಲ್ಲಿ ನನ್ನೊಡನೆ ಸಹಕರಿಸಿದ ಅನೇಕ ರಸನಿಮಿಷಗಳನ್ನೊದಗಿಸಿದ ಉದಯ ಕಲಾ ನಿಕೇತನದ ಹಿರಿಯ ಕಿರಿಯ ಕಲಾವಿದರನ್ನೆಲ್ಲ ಮನಸಾರೆ ಸ್ಮರಿಸಿ ಈ ಕೃತಿಯನ್ನವರಿಗೆ ಅರ್ಪಿಸಿದ್ದೇನೆ'.

ಒಳಗಿನ ನೋವು, ವಿಷಾದ ಭಾವದ ಹಿಂದಿರುವುದು ತಾವೇ ಹುಟ್ಟು ಹಾಕಿದ ಸಂಸ್ಥೆಯ ಬಗೆಗಿನ ಪ್ರೀತಿ; ಅದಕ್ಕಿಂತಲೂ ಹೆಚ್ಚು ರಂಗದ ಮೇಲಿನ ಮಮತೆ, ವ್ಯಾಮೋಹ, ಕಾಳಜಿ.

ಉದಯಕಲಾ ನಿಕೇತನದಲ್ಲಿದ್ದುಕೊಂಡು ರಂಗಭೂಮಿಯನ್ನು ಎಷ್ಟೆಲ್ಲ ಎತ್ತರಕ್ಕೆ ಏರಿಸುತ್ತ ಹೋಗಬೇಕು ಅನ್ನುತ್ತ ಕನಸು ಕಾಣುತ್ತಿದ್ದ ಸುವರ್ಣರು ಅಲ್ಲೇ ಇರುತ್ತಿದ್ದರೆ ಹೇಗೆ ನಡೆಯುತ್ತಿತ್ತು ಅನ್ನುವುದನ್ನು ಕಲ್ಪಿಸಿಕೊಳ್ಳುವುದಕ್ಕಿಂತ ಪ್ರಾಯಶಃ ಅಲ್ಲಿಂದ ಹೊರಬಂದುದರಿಂದಲೇ ಅವರು ಇನ್ನಷ್ಟು ಹೊಸ ಬಗೆಯಲ್ಲಿ ಯೋಚಿಸುವುದಕ್ಕೆ, ಹೊಸ ಹೊಸ ತಂಡದೊಂದಿಗೆ ಹೊಸ ದಿಕ್ಕಿನಲ್ಲಿ ರಂಗಭೂಮಿಯನ್ನು ಎತ್ತರಕ್ಕೆ ಕೊಂಡೊಯ್ಯುವುದಕ್ಕೆ ಸಾಧ್ಯವಾಗಿದೆ ಎಂದು ವ್ಯಾಖ್ಯಾನಿಸಬಹುದು. ಉದಯ ಕಲಾನಿಕೇತನದಲ್ಲಾದ ಕಹಿ ಅನುಭವದ ಹಿನ್ನೆಲೆಯಲ್ಲಿ ಅವರು 'ಇನ್ನು ಸಂಸ್ಥೆ ಕಟ್ಟಲಾರೆ. ಕಟ್ಟಿದರೆ ಆರಂಭದಲ್ಲಿ ಕಾಲಿಗೆ ಬೀಳುವವರು ಕ್ರಮೇಣ ಕಾಲೆಳೆಯುತ್ತಾರೆ. ಇದ್ಯಾವುದೂ ಬೇಡ. ಆದ್ದರಿಂದ ಸ್ವತಂತ್ರವಾಗಿಯೇ ಇದ್ದುಕೊಂಡು ನಾಟಕ ಆಡಿಸುವ' ಬಗ್ಗೆ ತೀರ್ಮಾನಿಸುತ್ತಾರೆ. ಸಕ್ರಿಯರಾಗುತ್ತಾರೆ.

## ಕನ್ನಡ ಕಲಾ ಕೇಂದ್ರಕ್ಕೊಂದು ಸ್ವಂತ ಕಟ್ಟಡ

ರಂಗಭೂಮಿಯ ಉದ್ಧಾರದ ಬಗ್ಗೆಯೇ ಕ್ಷಣ ಕ್ಷಣವೂ ಯೋಚಿಸುವ ಸುವರ್ಣರಿಗೆ ನಾಟ್ಯ ಅಕಾಡೆಮಿಯಂಥ ರಂಗ ಶಿಕ್ಷಣ ಕೇಂದ್ರವೊಂದನ್ನು ಕನ್ನಡ ಕಲಾ ಕೇಂದ್ರಕ್ಕೆ ಮಂಜೂರುಗೊಳಿಸಿಕೊಳ್ಳುವುದು ಬಹುದೊಡ್ಡ ಕನಸಾಗಿತ್ತು. ಈ ಬಗ್ಗೆ ಕೇಂದ್ರದ ಕಾರ್ಯದರ್ಶಿ ಸೋಮೇಶ್ವರ ಅವರಿಗೆ ಮನವರಿಕೆ ಮಾಡಿಕೊಟ್ಟರು ಸುವರ್ಣರು. ಇದಕ್ಕೆ ಅವಶ್ಯವಾಗಿ ಬೇಕಿರುವ ಸ್ವಂತ ಕಟ್ಟಡದ ಹುಡುಕಾಟದಲ್ಲೂ ಸುವರ್ಣರು ತೊಡಗಿದ್ದರು. ಟೈಮ್ಸ್ ಪತ್ರಿಕೆಯೊಂದರಲ್ಲಿ ಪ್ರಕಟವಾದ ಜಾಹೀರಾತೊಂದನ್ನು ಗಮನಿಸಿ ಸಂಬಂಧಿತರನ್ನು ಭೇಟಿಯಾದರು. ವೈದ್ಯ ದಂಪತಿ ತಮ್ಮ ಕ್ಲಿನಿಕ್ ಅನ್ನು ಮಾರುವುದಕ್ಕೆ ನಿಶ್ಚಯಿಸಿದ್ದರು. ಸುವರ್ಣರು ಕನ್ನಡ ಕಲಾ ಕೇಂದ್ರಕ್ಕಾಗಿ ಈ ಜಾಗವನ್ನು ಖರೀದಿಸಿದರು ಕೂಡ. ಅದರ ಹಿಂದೆ ಇದ್ದ ಗ್ಯಾರೇಜ್ ಭಾಗವನ್ನೂ ಪಡೆದು ತಾಲೀಮಿಗಾಗಿ ಮೀಸಲಿಡಿಸಿದರು. ಅದಾದ ಕೆಲವೇ ದಿನಗಳಲ್ಲಿ ಸುವರ್ಣರು ಸಿನಿಮಾಕ್ಕಾಗಿ ಬೆಂಗಳೂರಿಗೆ ತೆರಳಬೇಕಾಯಿತು. ಸೋಮೇಶ್ವರರೂ ಸುವರ್ಣರಿಲ್ಲದೆ ಈ ಕಾರ್ಯದಲ್ಲಿ ಮುಂದುವರಿಯಲಿಲ್ಲ. ಯೋಜನೆ ಅರ್ಧಕ್ಕೆ ನಿಂತಿತು. ಆದರೆ ಕೇಂದ್ರಕ್ಕೆ ಸ್ವಂತದ್ದೊಂದು ಕಟ್ಟೋಣವನ್ನು ಒದಗಿಸಿದ್ದು ಮಹತ್ವದ ಕೊಡುಗೆಯಾಯಿತು.

## ನಾಟಕೋತ್ಸವ ಸಂಭ್ರಮ

ಮುಂಬಯಿಯಲ್ಲಿ ಮೊದಲು ವರ್ಷಕ್ಕೊಮ್ಮೆ ಎಲ್ಲ ಭಾಷೆಗಳ ನಾಟಕೋತ್ಸವವನ್ನು ಸರಕಾರ ಏರ್ಪಡಿಸುತ್ತಿತ್ತು. ಕನ್ನಡಕ್ಕೂ ಸ್ಥಾನವಿತ್ತು. ಆದರೆ 1973ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಕಟವಾದದ್ದೇ ತಡ ನಾಟಕೋತ್ಸವದಲ್ಲಿ ಕನ್ನಡಕ್ಕೆ ಅವಕಾಶ ಇಲ್ಲದಂತಾಯಿತು. ಕರ್ನಾಟಕ

ರಾಜ್ಯ ಸ್ಥಾಪನೆಯಾಗಿದೆ. ನೀವು ಅಲ್ಲಿ ನಾಟಕೋತ್ಸವ ಮಾಡಿ ಎನ್ನುವುದು ಸರಕಾರದ ತಾಕೀತಾಗಿತ್ತು. ಇದರಿಂದ ಕನ್ನಡ ರಂಗಭೂಮಿಯ ನಿರ್ದೇಶಕರಿಗಾದದ್ದು ದೊಡ್ಡ ನಿರಾಸೆ. ಆಗ ಕನ್ನಡ ಕಲಾಕೇಂದ್ರ ಈ ಬಗ್ಗೆ ಚರ್ಚಿಸುವುದಕ್ಕೇ ಸಭೆ ನಡೆಸಿತು. ಅಲ್ಲಿ ಸರಕಾರ ಆಶ್ರಯ ನೀಡದಿದ್ದರೇನಂತೆ? ಎಲ್ಲ ಹವ್ಯಾಸಿ ರಂಗಭೂಮಿ ಸಂಸ್ಥೆಗಳವರು ಜತೆಗೂಡಿ ಅದ್ಧೂರಿಯಾಗಿ ಪ್ರತಿ ವರ್ಷವೂ ಕನ್ನಡ ನಾಟಕೋತ್ಸವ ಏರ್ಪಡಿಸುವ ಬಗ್ಗೆ ಒಮ್ಮತಕ್ಕೆ ಬರುವುದೆಂದಾಯಿತು. ನಿರ್ಧಾರಕ್ಕೆ ಬರಲಾಯಿತು. ಮುಂಬಯಿಯ ಐದಾರು ಪ್ರಮುಖ ನಿರ್ದೇಶಕರು ಕನ್ನಡ ಕಲಾ ಕೇಂದ್ರದ ನೇತೃತ್ವದ ನಾಟಕೋತ್ಸವ ಸಂಘಟಿಸುವುದಕ್ಕೆ ತಮ್ಮ ಸಂಪೂರ್ಣ ಬೆಂಬಲ ನೀಡುವ ಆಶ್ವಾಸನೆ ನೀಡಿದರು. ಪರಿಣಾಮವಾಗಿ ಆ ವರ್ಷವೇ ಐದು ದಿನ ಐವರು ನಿರ್ದೇಶಕರ ತಂಡದ ಕಲಾವಿದರನ್ನೊಳಗೊಂಡ ನಾಟಕಗಳನ್ನು ಪ್ರದರ್ಶಿಸಲಾಯಿತು. ಇದನ್ನೊಂದು ಚಾಲೆಂಜ್ ಆಗಿ ತೆಗೆದುಕೊಂಡ ಕನ್ನಡ ನಿರ್ದೇಶಕರು, ನಟರು ಶಕ್ತಿ ಮೀರಿ ದುಡಿದು 5 ಉತ್ತಮ ನಾಟಕಗಳನ್ನು ಪ್ರದರ್ಶಿಸಿದರು. ಇದಕ್ಕೆ ದೊರೆತ ಅಪಾರ ಪ್ರೇಕ್ಷಕರ ಪ್ರೋತ್ಸಾಹ ಹೊಸ ಚೈತನ್ಯ ನೀಡಿತು. ಐದು ದಿನದ ಉತ್ಸವ ವೈಭವದಿಂದಲೇ ಜರುಗಿತು. ವಿಭಿನ್ನ ತಂಡಗಳವರು ಒಂದೇ ವೇದಿಕೆಯನ್ನು ಏರುವ, ಜತೆಗೂಡುವ ಅವಕಾಶ ದೊರೆಯಿತು. ಆಯಾ ತಂಡಗಳ ಅಭಿಮಾನಿಗಳು ಒಂದು ವೇದಿಕೆಯಲ್ಲಿ ನಾಟಕಗಳನ್ನು ನೋಡುವ ಅವಕಾಶ ದೊರೆಯಿತು.

ಮೊದಲ ನಾಟಕೋತ್ಸವ ಪ್ರಚಾರದಿಂದ ಉತ್ತಮ ಪ್ರತಿಕ್ರಿಯೆಯಿಂದಾಗಿ ಮುಂಬಯಿ ಎಲ್ಲೆಡೆಗಳಿಂದ ನಾಟಕಾಸಕ್ತರು ಬರತೊಡಗಿದರು. ಕನ್ನಡ ರಂಗಭೂಮಿಯ ಪ್ರೇಕ್ಷಕರ ಸಂಖ್ಯೆಯೂ ಹೆಚ್ಚಿತು. ಕನ್ನಡದ ಪ್ರಖ್ಯಾತ ನಿರ್ದೇಶಕರ ಉತ್ತಮ ನಾಟಕಗಳನ್ನು ಆಯ್ಕೆ ಮಾಡಿ ಪ್ರದರ್ಶಿಸುತ್ತಿದ್ದುದರಿಂದ ಗುಣಮಟ್ಟದ, ವಿಭಿನ್ನ ಶೈಲಿಯ ನಾಟಕಗಳು ನಾಟಕೋತ್ಸವದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಐದು ನಾಟಕಗಳಲ್ಲಿ ಬಹಳಷ್ಟು ಕಲಾವಿದರಿಗೆ ಅಭಿನಯಿಸುವ ಅವಕಾಶವೂ ದೊರೆಯಿತು ಕೂಡ. ಅನುಭವೀ ನಟರ ಜತೆಗೆ ಹೊಸಬರಿಗೂ ಅಭಿನಯಿಸುವ ಅವಕಾಶ ದೊರೆತದ್ದು ರಂಗಭೂಮಿಯ ಚಲನಶೀಲತೆಗೆ ಸೇತುವಾಯಿತು. ಕನ್ನಡ ಹಾಗೂ ಇಂಗ್ಲಿಷ್ ಪತ್ರಿಕೆಗಳೂ ಒಳ್ಳೆಯ ವಿಮರ್ಶೆ ಪ್ರಕಟಿಸಿ ಪ್ರಚಾರ ನೀಡಿವೆ. ಒಂದು ರೀತಿಯಲ್ಲಿ ಮುಂಬಯಿ ಕನ್ನಡ ರಂಗಭೂಮಿ ಹೊಸ ಚೈತನ್ಯದಿಂದ, ಇತರ ಭಾಷೆಗಳಿಗೆ ಪೈಪೋಟಿಯನ್ನು ನೀಡುತ್ತ ಸುವರ್ಣ ಯುಗಕ್ಕೆ ಕಾಲಿಟ್ಟಿತು. ಸುವರ್ಣರು ಹಾಗೂ ಕೆ.ಜೆ.ರಾಯರ ನೇತೃತ್ವದ ಕನ್ನಡ ಕಲಾ ಕೇಂದ್ರ ತನ್ನ ಪಾತ್ರವನ್ನು ಬಹಳ ಅಚ್ಚುಕಟ್ಟಾಗಿ, ಚೆನ್ನಾಗಿ ನಿಭಾಯಿಸಿತ್ತು. ನಾಟಕೋತ್ಸವದ ಹೊಣೆಯನ್ನು ಹೊತ್ತದ್ದರಿಂದ ಕನ್ನಡ ಕಲಾಕೇಂದ್ರದ ಇಬ್ಬರಲ್ಲಿ ಒಬ್ಬರು ನಿರ್ದೇಶಕರು ತಮ್ಮ ನಾಟಕಗಳನ್ನು ಪ್ರದರ್ಶಿಸಬಹುದಿತ್ತು. ಸುವರ್ಣರು 'ಧರ್ಮಚಕ್ರ', 'ಅಣ್ಣನಮದುವೆ' ನಾಟಕಗಳನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದರು. ಐದೂ ದಿನಗಳ ಪ್ರದರ್ಶನದ ಎಲ್ಲ ಮುಂಗಡ ಟಿಕೆಟ್ ಮಾರಾಟ ಆಗಿ ಹೌಸ್‌ಫುಲ್ ಆಗಿರುತ್ತಿತ್ತು. ಸೀಸನ್ ಟಿಕೆಟ್ ಪಡೆಯದಿದ್ದರೆ ಪ್ರತಿದಿನದ ಟಿಕೆಟ್‌ಗೆ ಅವಕಾಶ ಇಲ್ಲದೇ ಇದ್ದುದರಿಂದ ಬಹಳ ಜನರು ನಿರಾಶೆಯಿಂದ ವಾಪಸಾಗುತ್ತಿದ್ದರು.

ಈ ಗೊಂದಲ ತಪ್ಪಿಸುವುದಕ್ಕಾಗಿ ನಾಟಕಾಸಕ್ತರಿಗೆ ಎಲ್ಲ ಮುಂಗಡ ಟಿಕೆಟ್ ಮಾರಿಬಿಡುವ ಬದಲು ಪ್ರತಿದಿನದ ಶೋಗಾಗಿ ನೂರು ಟಿಕೆಟ್ ತೆಗೆದಿರಿಸಬೇಕು ಎನ್ನುವ ವ್ಯವಸ್ಥೆ ಮಾಡಿಕೊಳ್ಳಲಾಯಿತು. ಇದು ನಾಟಕೋತ್ಸವದ ವೈಭವದ ಹಾದಿಯನ್ನು ತೆರೆದಿಡುತ್ತದೆ. ಇದೆಲ್ಲ ನಡೆದದ್ದು ಎಪ್ಪತ್ತರ ದಶಕದಲ್ಲಿ. ಇದನ್ನೆಲ್ಲ ನೆನಪಿಸಿಕೊಳ್ಳುವ ಸುವರ್ಣರು 'ಈ ದಶಕ ಮುಂಬಯಿ ಕನ್ನಡ ರಂಗಭೂಮಿಯ ಸುವರ್ಣ ಯುಗ' ಎಂದು ಕೊಂಡಾಡುತ್ತಾರೆ.

ಆರೋಗ್ಯಕರ ಸ್ಪರ್ಧೆಗೆ ಪೂರಕವಾಗುವ, ರಂಗಭೂಮಿಯ ಚಲನಶೀಲತೆಗೆ ಸೇತುವಾಗುವ ನಾಟಕೋತ್ಸವವನ್ನು ಸಮರ್ಥಿಸುವ ಸುವರ್ಣರು ಈ ಮೂಲಕ ಆರೋಗ್ಯಕರ ಸ್ಪರ್ಧೆ ಏರ್ಪಡುತ್ತದೆ. ಪ್ರತಿಯೊಬ್ಬರೂ ಗುಣಮಟ್ಟದ ಸದಭಿರುಚಿಯ ನಾಟಕಗಳನ್ನೇ ಪ್ರದರ್ಶಿಸುವ ನಿಟ್ಟಿನಲ್ಲಿ ಶ್ರಮಿಸುತ್ತಾರೆ, ಸಶಕ್ತರಾಗುತ್ತಾರೆ ಎಂದು ಪ್ರತಿಪಾದಿಸುತ್ತಾರೆ.

ರಂಗಭೂಮಿಯಲ್ಲಿ ತೊಡಗಿಕೊಂಡ ದಿನಗಳಿಂದಲೂ ನಾಟಕೋತ್ಸವಗಳಲ್ಲಿ ಭಾಗಿಯಾಗುತ್ತ ಬಂದ ಸುವರ್ಣರು ಹೊಸ ತಲೆಮಾರು ಈ ಪರಂಪರೆಯನ್ನು ಅಚ್ಚುಕಟ್ಟಾಗಿ ಮುಂದುವರಿಸಲು ಪ್ರಚೋದಿಸುತ್ತಲೇ ಇದ್ದಾರೆ.

ಒಟ್ಟೂ ರಂಗ ಸಂಭ್ರಮವನ್ನು ಹುಟ್ಟುಹಾಕುತ್ತಿದ್ದ ನಾಟಕೋತ್ಸವಗಳು ಮೌಲಿಕ ಕೊಡುಗೆಗಳಿಗೆ ವೇದಿಕೆಯಾದವು. ಬಹುದೊಡ್ಡ ಪ್ರಮಾಣದಲ್ಲಿ ಸದಭಿರುಚಿಯ ಪ್ರೇಕ್ಷಕರನ್ನು ಸೃಷ್ಟಿಸಿದ ನಾಟಕೋತ್ಸವ ಮುಂಬಯಿಯ ಕನ್ನಡ ರಂಗಭೂಮಿಯ ಔನ್ನತ್ಯಕ್ಕೆ ಸಾಕ್ಷಿಯಾಗುತ್ತವೆ.

## ಕಾಲೇಜು ನಾಟಕೋತ್ಸವದಿಂದ ನೀಗಿತು ಸ್ತ್ರೀ ಪಾತ್ರ ಕೊರತೆ

ಐವತ್ತರ ದಶಕದಲ್ಲಿ ಸ್ತ್ರೀ ಪಾತ್ರಗಳನ್ನು ಪುರುಷರೇ ನಿರ್ವಹಿಸಬೇಕಿತ್ತು. ಕ್ರಮೇಣ ಸ್ತ್ರೀಯರು ತೆರೆದುಕೊಂಡರು. ಆದರೆ ರಿಹರ್ಸಲ್‌ಗೆ ಕರೆತರಬೇಕು, ಬಳಿಕ ಮನೆಗೆ ತಲುಪಿಸಬೇಕು ಅನ್ನುವ ಶರತ್ತುಗಳ ನಡುವೆ ಪಾತ್ರ ನಿರ್ವಹಿಸುತ್ತಿದ್ದರು. ಇಲ್ಲಿ ಸ್ತ್ರೀ ಪಾತ್ರಗಳಿಗಾಗಿ ಪ್ರತಿಭಾವಂತ ಕಲಾವಿದೆಯರನ್ನು ಸೇರಿಸಿಕೊಳ್ಳುವುದಕ್ಕೂ ಸಾಧ್ಯ ಆಯಿತು. ನಾಟಕೋತ್ಸವದಲ್ಲಿ ಪ್ರದರ್ಶಿಸುವುದಕ್ಕೆ 'ಧರ್ಮಚಕ್ರ' ಐತಿಹಾಸಿಕ ನಾಟಕವನ್ನು ಆಯ್ದುಕೊಂಡಾಗ ಅದರಲ್ಲಿ ಐವರು ಸ್ತ್ರೀ ಪಾತ್ರಧಾರಿಗಳ ಅಗತ್ಯವಿತ್ತು. ಸೂಕ್ತ ಕಲಾವಿದೆಯರೇ ಸಿಕ್ಕಿದ್ದರಿಂದ ಪ್ರದರ್ಶನವೂ ಚೆನ್ನಾಗಿ ಆಯಿತು. ಅವರು ಐವರನ್ನೂ ಬೇರೆ ಬೇರೆ ಪ್ರದೇಶಗಳಲ್ಲಿದ್ದ ಅವರವರ ಮನೆಗೆ ವಾಹನದಲ್ಲಿ ಬಿಟ್ಟು ಬರುವ ಜವಾಬ್ದಾರಿಯನ್ನೂ ಸುವರ್ಣರು ನಿಭಾಯಿಸಿದ್ದರು. ಸುವರ್ಣರು ಮನೆ ತಲುಪುವಾಗ ರಾತ್ರಿ ಎರಡು ಗಂಟೆ ಮೀರುತ್ತಿತ್ತು. ಕೇಂದ್ರದ ನಾಟಕೋತ್ಸವದ ಮೂಲಕವೇ ಹಲವಾರು ಕಲಾವಿದೆಯರು ಗಮನಾರ್ಹರಾದರು.

ಸ್ತ್ರೀ ಪಾತ್ರದ ಕೊರತೆ ಅನುಭವಿಸಿದ್ದ ಸುವರ್ಣರು ಅದು ಕ್ರಮೇಣ ಕರಗುತ್ತ ಬಂದ ಸಂದರ್ಭವನ್ನು ಮುಂದಿಡುತ್ತ ನಾಟಕೋತ್ಸವದ ಜರೂರನ್ನು, ಅವು ಹೆಣ್ಣು ಮಕ್ಕಳನ್ನು

ಕಲಾವಿದೆಯರನ್ನಾಗಿ ರೂಪಿಸುವ ಬಗೆಯನ್ನು ಹೀಗೆ ಮುಂದಿಡುತ್ತಾರೆ: ಕಾಲೇಜಿನ ಹುಡುಗಿಯರು ಪಾತ್ರ ನಿರ್ವಹಿಸಲು ಆರಂಭಿಸಿದಾಗಿನಿಂದ ಹವ್ಯಾಸಿ ರಂಗಭೂಮಿಯಲ್ಲೂ ಪಾತ್ರ ನಿರ್ವಹಿಸಿ ಸಹಕರಿಸತೊಡಗಿದರು. ಇದಕ್ಕೆ ಮುಖ್ಯ ಕಾರಣ ಎಂದರೆ ಮುಂಬಯಿಯಲ್ಲಿ ಆಗಾಗ ನಡೆಯುತ್ತಿದ್ದ ಕಾಲೇಜು ನಾಟಕೋತ್ಸವಗಳು. ಭಾರತೀಯ ವಿದ್ಯಾಭವನದಲ್ಲಿ ವರ್ಷಕ್ಕೊಮ್ಮೆ ಎಲ್ಲ ಭಾಷೆಗಳ ನಾಟಕಗಳನ್ನೊಳಗೊಂಡ ನಾಟಕೋತ್ಸವ ಏರ್ಪಡಿಸಲಾಗುತ್ತಿತ್ತು. ಇದರಲ್ಲಿ ಕಾಲೇಜು ವಿದ್ಯಾರ್ಥಿಗಳನ್ನು ತರಬೇತುಗೊಳಿಸಲು ಹೊರಗಿನಿಂದ ಹವ್ಯಾಸಿ ನಿರ್ದೇಶಕರನ್ನು ಕರೆಸುತ್ತಿದ್ದರು, ಕನ್ನಡ ನಾಟಕಗಳನ್ನು ಹವ್ಯಾಸಿ ರಂಗಭೂಮಿಯ ನಿರ್ದೇಶಕರಾದ ನಾವು ನಿರ್ದೇಶಿಸುತ್ತಿದ್ದೆವು. ನಾನು ಸಿದ್ಧಾರ್ಥ, ಜೈ ಹಿಂದ್ ಮತ್ತು ಲಾ ಕಾಲೇಜುಗಳ ನಾಟಕಗಳನ್ನು ನಿರ್ದೇಶಿಸುತ್ತಿದ್ದೆ. ಹಾಗಾಗಿ ಮುಂದೆ ನನ್ನ ನಾಟಕಗಳಲ್ಲಿ ಪಾತ್ರ ವಹಿಸಲು ಈ ಕಾಲೇಜು ವಿದ್ಯಾರ್ಥಿನಿಯರು ಉತ್ಸುಕರಾದರು. ಆ ಮೇಲೆ ಕನ್ನಡ ಕಲಾ ಕೇಂದ್ರ ವರ್ಷಕ್ಕೊಮ್ಮೆ ಏರ್ಪಡಿಸುವ ನಾಟಕೋತ್ಸವದಲ್ಲಿ ಬೇರೆ ಬೇರೆ ಸಂಸ್ಥೆಗಳು ಪ್ರಸಿದ್ಧ ನಿರ್ದೇಶಕರ ನಿರ್ದೇಶನದ ನಾಟಕಗಳೊಂದಿಗೆ ಭಾಗವಹಿಸುತ್ತಿದ್ದವು. ನಾಟಕೋತ್ಸವ ಪ್ರತಿಷ್ಠಿತ ಉತ್ಸವವಾದದ್ದರಿಂದ ಇದರಲ್ಲಿ ಪ್ರದರ್ಶಿತವಾಗುವ ನಾಟಕಗಳಿಗೆ ಅನಾಯಾಸವಾಗಿ ಹುಡುಗಿಯರು ಪಾತ್ರವಹಿಸಲು ಆಸಕ್ತಿ ತಳೆಯತೊಡಗಿದರು. ಹಾಗಾಗಿ ಮುಂಬಯಿ ಹವ್ಯಾಸಿ ರಂಗಭೂಮಿಯಲ್ಲಿ ಕಲಾವಿದೆಯರ ಕೊರತೆ ಕಡಿಮೆಯಾಗುತ್ತ ಬಂತು.

ಮಂಗಳೂರಿನಲ್ಲಿ ನಾನು ತೊಡಗಿಸಿಕೊಂಡಾಗ ಕಲಾವಿದರ ಕೊರತೆಯನ್ನು ಅನುಭವಿಸಬೇಕಾಯಿತು. ಕಾರಣ ಹಿಂದಿದ್ದ ಹವ್ಯಾಸಿ ಸಂಸ್ಥೆಗಳು ನಿಷ್ಕ್ರಿಯವಾಗಿ ಕಲಾವಿದೆಯರ ಕೊರತೆ ತಲೆ ಎತ್ತಿತ್ತು. ಈಗಲೂ ಇಲ್ಲಿರುವ ತುಳು ರಂಗಭೂಮಿಯಲ್ಲಿ ನಗೆ ನಾಟಕಗಳಲ್ಲಿ ಭಾಗವಹಿಸುವ ಕಲಾವಿದೆಯರಿದ್ದಾರೆ. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ಆ ಕೊರತೆ ಇದೆ. ಇದನ್ನು ನೀಗಿಸಲು ಮುಂಬಯಿಯಲ್ಲಿದ್ದಂತೆ ಇಲ್ಲಿನ ಕಾಲೇಜುಗಳಲ್ಲಿ ನಾಟಕಗಳು,ನಾಟಕೋತ್ಸವಗಳು ಜರುಗುತ್ತಿರಬೇಕು. ನಾಟಕದಲ್ಲಿ ಅವರಿಗೆ ಆಸಕ್ತಿ ಹುಟ್ಟುವ ಹಾಗೆ ಮಾಡಬೇಕು. ಪ್ರಾಯಶಃ ಆಗ ಒಳ್ಳೆಯ ನಾಟಕಗಳಲ್ಲಿ ಪಾತ್ರ ನಿರ್ವಹಿಸಲು ಕಾಲೇಜು ಹುಡುಗಿಯರು ಹವ್ಯಾಸಿ ರಂಗಭೂಮಿಗೆ ಕಾಲಿರಿಸಬಹುದೇನೋ?'(ಅ.15ರಂದು ನಡೆಸಿದ ಸಂದರ್ಶನದಲ್ಲಿ.)

## ಬಿ.ವಿ. ಕಾರಂತ ನಾಟಕೋತ್ಸವ ನಿರ್ವಹಣೆ

ಬೆಂಗಳೂರಿನಲ್ಲಿ ರಂಗದಿಗ್ಗಜ ಬಿ.ವಿ.ಕಾರಂತರ ನಿರ್ದೇಶನದ ಪ್ರಸಿದ್ಧ ನಾಟಕಗಳಾದ ಜೋಕುಮಾರ ಸ್ವಾಮಿ, ಹಯವದನ, ಸತ್ತವರ ನೆರಳು ನಾಟಕಗಳನ್ನು ನೋಡಿ ಮೆಚ್ಚಿಕೊಂಡಿದ್ದರು ಸುವರ್ಣರು. ಮುಂಬಯಿಯ ಕನ್ನಡ ರಂಗಭೂಮಿಯಲ್ಲಿ ವೈವಿಧ್ಯವನ್ನು ಕಟ್ಟಿ ಕಾಣಿಸುವ ಧ್ಯೇಯದ ಸುವರ್ಣರು ಈ ಮೂರೂ ನಾಟಕಗಳನ್ನು ಮುಂಬಯಿಗೆ ಕರೆದೊಯ್ದು ರಂಗ ಪ್ರಯೋಗದ ವಿವಿಧ ಮಜಲುಗಳನ್ನು ಪ್ರದರ್ಶಿಸಬೇಕು ಅನ್ನುವ ನಿರ್ಧಾರಕ್ಕೆ ಬಂದರು. ಆದರೆ ಲಕ್ಷ ರೂ. ಖರ್ಚು ಬಯಸುವ ಈ ನಾಟಕಗಳು ಇಲ್ಲಿಗೆ

ಬೇಕೆ? ಇಲ್ಲಿನವರದ್ದೇ ನಾಟಕಗಳನ್ನು ಪ್ರದರ್ಶಿಸುವುದು ಇಲ್ಲಿನ ನಾಟಕ ತಂಡಗಳ ಬೆಳವಣಿಗೆಗೆ ಅನುಕೂಲವಾಗುವುದಿಲ್ಲವೇ ? ಹೀಗೆ ನಾನಾ ಪ್ರಶ್ನೆಗಳು ಹುಟ್ಟಿಕೊಂಡವು. ಸುವರ್ಣರ ಆಲೋಚನೆ, ದೂರದರ್ಶಿತ್ವ ಒಂದಷ್ಟು ಮಟ್ಟಿಗೆ ಅರ್ಥವಾದದ್ದರಿಂದಲೋ ಏನೋ ಕೇಂದ್ರದ ಸದಸ್ಯರು ಹಣಕಾಸಿನ ಹೊರೆಯನ್ನು ನೀವು ನಿಭಾಯಿಸುತ್ತೀರಿ ಅಂತಾದರೆ ನಮ್ಮ ಅಭ್ಯಂತರವಿಲ್ಲ ಅಂದದ್ದೇ ತಡ ಸುವರ್ಣರ ರಂಗಚಿಂತನೆಯ ಮನಸ್ಸು ಸಮ್ಮತಿಸಿಬಿಟ್ಟಿತು, ಈ ಶರತ್ತಿಗೆ. ತನಗೆ ಬೆಂಬಲವಾದ ಕೇಂದ್ರದ ಕಾರ್ಯದರ್ಶಿ ಸೋಮೇಶ್ವರರ ನೆರವಿನೊಂದಿಗೆ ಈ ಕಾಯಕದಲ್ಲಿಯೂ ತೊಡಗಿಕೊಂಡ ಸುವರ್ಣರು ಬೇಕಷ್ಟು ಹಣವನ್ನು ಸಂಗ್ರಹಿಸಿಯೂಬಿಟ್ಟರು. ಹೇಗೋ ಏನೋ ಎಂದೆಲ್ಲ ಗೊಣಗಿದವರು ನಾಟಕಗಳನ್ನು ನೋಡಿದ ಬಳಿಕ ಆನಂದ ಅನುಭವಿಸಿದರು. ಸುವರ್ಣರನ್ನು ಮನಬಿಚ್ಚಿ ಅಭಿನಂದಿಸಿದರು, ಕೃತಜ್ಞತೆ ಸಲ್ಲಿಸಿದರು. ಸುವರ್ಣರೂ ಈ ಸಾಹಸವನ್ನು ಮುಂಬಯಿ ಕನ್ನಡ ರಂಗಭೂಮಿಯಲ್ಲಿ ಸಾಧ್ಯವಾಗಿಸಿದ್ದಕ್ಕೆ ಹೆಮ್ಮೆಪಟ್ಟರು.

## ಕೋರ್ಟ್ ತ್ರಿವಳಿ : ನಾಟಕೋತ್ಸವ

ಸುವರ್ಣರು ಕೋರ್ಟ್ ಹಂದರವನ್ನೊಳಗೊಂಡ ಮೂರು ನಾಟಕಗಳನ್ನು ಒಂದರ ಬೆನ್ನಿಗೆ ಒಂದರಂತೆ ಪ್ರದರ್ಶಿಸುತ್ತ ಬಂದದ್ದು ವಿಶೇಷ. ಉರುಳು, ಕೋರ್ಟ್ ಮಾರ್ಷಲ್, ಮಳೆ ನಿಲ್ಲುವವರೆಗೆ ಇವು ಕೋರ್ಟ್ ಆವರಣದೊಳಗೇ ನಡೆಯುವ ನಾಟಕಗಳು. ಇವು ಯಾವುದೂ ಉದ್ದೇಶಪೂರ್ವಕವಾಗಿ ಆಯ್ದುಕೊಂಡ ವಸ್ತುಗಳಲ್ಲ. ಪ್ರಯೋಗಕ್ಕೆ ಯೋಗ್ಯ ಅನ್ನಿಸಿದ್ದರಿಂದ ಇವನ್ನು ತಮ್ಮ ಪ್ರಯೋಗಗಳಿಗೆ ಆರಿಸಿಕೊಂಡಿದ್ದಾರೆ. ಇಲ್ಲಿನ ಸವಾಲುಗಳು ಸುವರ್ಣರನ್ನು ಆಕರ್ಷಿಸಿವೆ. ಕೋರ್ಟ್ ತ್ರಿವಳಿ ಅನ್ನುವ ಖ್ಯಾತಿಗೆ ಇವು ಪಕ್ಕಾಗಿವೆ. ಈ ಮೂರೂ ನಾಟಕಗಳು ಕಂಡ ಯಶಸ್ಸಿನಿಂದ ಹವ್ಯಾಸಿ ರಂಗಭೂಮಿಯ ಉತ್ತಮ ಪ್ರಯೋಗಗಳನ್ನು ಪ್ರೋತ್ಸಾಹಿಸುವ ಸದಭಿರುಚಿಯ ಪ್ರೇಕ್ಷಕರು ಇರುವುದರ ಬಗ್ಗೆ ಹೆಮ್ಮೆ ಪಟ್ಟಿದ್ದಾರೆ ಸುವರ್ಣರು.

ಈ ಮೂರೂ ನಾಟಕಗಳನ್ನಿಟ್ಟುಕೊಂಡು ಸದಾನಂದ ಸುವರ್ಣರು 2010ರಲ್ಲಿ ಮಂಗಳೂರಿನಲ್ಲಿ ಕೋರ್ಟ್ ತ್ರಿವಳಿ ನಾಟಕೋತ್ಸವವನ್ನು ಆಯೋಜಿಸಿದ್ದು ಇನ್ನೊಂದು ಚರಿತ್ರಾರ್ಹ ಘಟನೆಯಾಯಿತು. ತಮ್ಮದೇ ನಿರ್ದೇಶನದ, ಕೋರ್ಟ್ ಆವರಣವನ್ನುಳ್ಳ ಉರುಳು, ಕೋರ್ಟ್‌ಮಾರ್ಷಲ್ ಹಾಗೂ ಮಳೆ ನಿಲ್ಲುವವರೆಗೆ ನಾಟಕಗಳನ್ನು ನಿರಂತರ ಮೂರು ದಿನಗಳ ಕಾಲ ಪ್ರದರ್ಶಿಸಿದರು. ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ನಡೆದ ಈ ನಾಟಕೋತ್ಸವ ಸುವರ್ಣರ ನಿರ್ದೇಶನದ ಹಲವು ಮಜಲು, ವಿಶಿಷ್ಟತೆ, ಶ್ರೇಷ್ಠತೆ, ಅನನ್ಯತೆಗಳನ್ನೆಲ್ಲ ಮುಖಾಮುಖಿಯಾಗಿಸಿತು. ಮೂರೂ ನಾಟಕಗಳೂ ಬೇರೆ ಬೇರೆಯದೇ ಆದ ಚೌಕಟ್ಟು, ಬೆಳಕು, ಸಂಗೀತ, ಅಭಿನಯ ವೈಖರಿಯಿಂದ ಬೀಗುತ್ತಿದ್ದವು. ಮಂಗಳೂರಿನ ರಂಗಭೂಮಿಯಲ್ಲಿ ಹೊಸ ಇತಿಹಾಸವೊಂದನ್ನು ಕಡೆದಿಟ್ಟವು. ಒಂದೊಂದು ನಾಟಕವನ್ನೂ

ಭಿನ್ನ ಭಿನ್ನ ಕಾರಣಗಳಿಗಾಗಿ ಮೆಚ್ಚಿಕೊಂಡರು. ಕಥೆ, ವಸ್ತು, ಚೌಕಟ್ಟು ನಿರ್ದೇಶನ ಶೈಲಿ ಎಲ್ಲವೂ ವಿಭಿನ್ನ ಬಗೆಯದ್ದೇ ಆಗಿದ್ದುದರಿಂದ ಒಂದಕ್ಕಿಂತ ಒಂದು ಭಿನ್ನ ಹಾಗೂ ಒಂದಕ್ಕಿಂತ ಒಂದು ಹೆಚ್ಚು ಕಾಡುವ ನಾಟಕಗಳಾಗಿಯೂ ಮಹತ್ವ ಪಡೆದವು. ತಮ್ಮ 80ನೇ ವರ್ಷಾಚರಣೆಯನ್ನು ಸುವರ್ಣರು ನಾಟಕೋತ್ಸವವನ್ನು ಹಮ್ಮಿಕೊಳ್ಳುವ ಮೂಲಕ ಆಚರಿಸಿದರು. ಇದನ್ನು ಸುವರ್ಣರು ಹೇಳದೇ ಇದ್ದರೂ ಅವರ ಜನ್ಮ ದಿನಾಂಕ ತಿಳಿದಿದ್ದ ಶಿಷ್ಯ ಬಳಗ ನಾಕಟೋತ್ಸವದ ಕೊನೆಯ ಪ್ರದರ್ಶನ ದಿನ ರಂಗಾಸಕ್ತರ ಸಮ್ಮುಖವೇ ಸುವರ್ಣರನ್ನು ಸನ್ಮಾನಿಸಿ ರಂಗ ಬದುಕಿನ ಪಯಣಕ್ಕೆ ಶುಭ ಹಾರೈಸಿ ಗುರುವಂದನೆ ಸಲ್ಲಿಸಿದರು.

ಅಭಿನಂದನಾ ಸಮಾರಂಭದಂದು ಸುವರ್ಣರನ್ನು ಸನ್ಮಾನಿಸುವುದಕ್ಕಾಗಿ ಸುವರ್ಣರ ಆತ್ಮೀಯ ಸ್ನೇಹಿತ, ಹಿರಿಯ ಸಿನಿಮಾ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರನ್ನು ಆಹ್ವಾನಿಸಿದ್ದಾರೆ. ಸುವರ್ಣರ ನಾಟಕಗಳನ್ನೆಲ್ಲ ನೋಡಿ ವಿಮರ್ಶಿಸಿ ಆನಂದಿಸುತ್ತ ಬಂದ ಗಿರೀಶರು ಈ ನಾಟಕೋತ್ಸವದ ನಾಟಕಗಳನ್ನೂ ಕಂಡು ಸಂಭ್ರಮಿಸಿ ಪುನರಾವಲೋಕನ ನಡೆಸಿದ್ದಾರೆ. 'ಒಬ್ಬ ವ್ಯಕ್ತಿಯ ನಿಜ ಸ್ವರೂಪವನ್ನು ಹೊರ ಹಾಕುವ ಕೆಲಸವನ್ನು ಸದಾನಂದ ಸುವರ್ಣ ಅವರು ಪ್ರತಿ ನಾಟಕದಲ್ಲಿ ಮಾಡಿದ್ದಾರೆ. ಪತ್ತೇದಾರಿ ಮೂಲಕ ಅವರು ವ್ಯಕ್ತಿಯ ಅಂತರಾಳವನ್ನು ಹುಡುಕುವ ಕೆಲಸ ಮಾಡಿದ್ದಾರೆ. ಅನ್ವೇಷಣೆಯೇ ಅವರ ಮೂಲ ಧಾತು' (ವಿಜಯ ಕರ್ನಾಟಕ, ಡಿ. 24, 2010) ಎಂದು ಒಳಗಣ್ಣಾಗಿದ್ದಾರೆ.

'ಉರುಳು', 'ಮಳೆ ನಿಲ್ಲುವವರೆಗೆ' ಮತ್ತು 'ಕೋರ್ಟ್ ಮಾರ್ಷಲ್' ನಾಟಕಗಳಿಗೆ ಪುರಭವನದಲ್ಲಿ ಕಿಕ್ಕಿರಿದು ಸೇರಿದ್ದ ಕಲಾಪ್ರೇಮಿಗಳನ್ನು ಕಂಡು ಸದಾನಂದ ಸುವರ್ಣರೇ ನಿಬ್ಬೆರಗಾಗಿ ಹೋದರು. ಉತ್ತಮ ನಾಟಕಗಳಿಗೆ ಸದಭಿರುಚಿಯ ಪ್ರೇಕ್ಷಕರ ಕೊರತೆ ಇಲ್ಲ ಎನ್ನುವುದಕ್ಕೆ ತ್ರಿವಳಿ ನಾಟಕೋತ್ಸವಕ್ಕೆ ಬಂದ ಪ್ರೇಕ್ಷಕರೇ ಸಾಕ್ಷಿಯಾದರು.

ಸದಾನಂದ ಸುವರ್ಣರ ನಾಟಕಗಳೆಂದರೆ ಹಾಗೇನೇ. ಪ್ರೇಕ್ಷಕರನ್ನು ಸೂಜಿಕಲ್ಲಿನಂತೆ ಸೆಳೆಯಬಲ್ಲ, ಕಥೆಯೊಳಗೊಂದು ಕಥೆ ಹೆಣೆಯಬಲ್ಲ ನಾಟಕಗಳು...' (ಪು-18, ಕರ್ಮವೀರ, ಫೆ.27, 2011) ಎಂದು ಚಂದ್ರಶೇಖರ ಅರಿಬೈಲು ಕೊಂಡಾಡುತ್ತಾರೆ.

ಇದೇ ನಾಟಕೋತ್ಸವ ಮುಂಬಯಿಯ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಜರುಗಿದೆ. ಅಲ್ಲಿಯೂ ಅದೇ ರೀತಿಯ ಪ್ರೇಕ್ಷಕರ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಅವರು ಸಮಾರೋಪದಂದು ಸುವರ್ಣರನ್ನು ಸನ್ಮಾನಿಸಿ ಅವರ ಪ್ರಯೋಗಗಳನ್ನು ಮುಕ್ತ ಮನಸ್ಸಿನಿಂದ ಮೆಚ್ಚಿಕೊಂಡು 'ಕನ್ನಡ ರಂಗಭೂಮಿಯ ಕುರಿತ ಅಗಾಧ ಪ್ರೀತಿ, ತುಡಿತವೇ ಸುವರ್ಣರನ್ನು ಹೀಗೆ ಕ್ರಿಯಾಶೀಲರನ್ನಾಗಿಸಿದೆ. ಆರು ದಶಕಗಳಷ್ಟು ಸುದೀರ್ಘ ಕಾಲ ಕನ್ನಡ ರಂಗಭೂಮಿಗೆ ಮುಂಬಯಿಯಲ್ಲಿದ್ದುಕೊಂಡು ನೀಡಿದ ಕೊಡುಗೆ ಅಪಾರ ಹಾಗೂ ಗಮನಾರ್ಹ.

ಸುವರ್ಣರ ಸೃಷ್ಟಿಕ್ರಿಯೆಯ ನಿರಂತರತೆಗೆ ಮುಂಬಯಿ ಕನ್ನಡಿಗರ ಪ್ರೋತ್ಸಾಹವೂ ದೊರೆಯಬೇಕಿದೆ.

ಮುಂಬಯಿ ಕನ್ನಡಿಗರ ಹೆಮ್ಮೆಯ ಸದಾನಂದ ಸುವರ್ಣರು ಕಲೆಯ ಬಹು ಆಯಾಮಗಳಲ್ಲಿ ತೊಡಗಿಸಿಕೊಂಡು ಆಳ ಹಾಗೂ ವಿಸ್ತಾರವನ್ನು ಅಭ್ಯಸಿಸುತ್ತ ಯುವ ಕಲಾವಿದರನ್ನೂ ಮುನ್ನಡೆಯಿಸಿದರು, ರಂಗಭೂಮಿಯ ಚಲನಶೀಲತೆಗೆ ಹೊಸ ಭಾಷ್ಯ ಬರೆದರು' (ಕರ್ನಾಟಕ ಮಲ್ಲ ಮಾ. 31, 2011) ಎಂದು ಶ್ಲಾಘಿಸಿ ಅಭಿನಂದಿದ್ದಾರೆ.

'ಕೋರ್ಟ್ ಮಾರ್ಷಲ್', 'ಉರುಳು' ಮತ್ತು 'ಮಳೆ ನಿಲ್ಲುವವರೆಗೆ...' ಈ ಮೂರೂ ನಾಟಕಗಳಲ್ಲಿ ಕೋರ್ಟು ಇರುವುದಾದರೂ ಅವು ವಿಭಿನ್ನ ರೀತಿಯ ಕೋರ್ಟುಗಳು. ಕೋರ್ಟಿನ ಹಿನ್ನೆಲೆ ಹೊಂದಿದೆಯೆಂದು ಈ ನಾಟಕಗಳನ್ನು ಆಯ್ಕೆ ಮಾಡಿದ್ದಲ್ಲ. ಇದರ ವಸ್ತುಗಳು ವಿಭಿನ್ನ, ನಾಟಕದ ಶೈಲಿಗಳು ಭಿನ್ನ, ಪ್ರಯೋಗದ ದೃಷ್ಟಿಯಿಂದಲೂ ಭಿನ್ನವಾಗಿ ನನ್ನನ್ನು ಆಕರ್ಷಿಸಿದವು. ಈ ಕಥಾ ವಸ್ತುಗಳಿರುವ ನಾಟಕಗಳು ಕನ್ನಡದಲ್ಲಂತೂ ಬಂದಿಲ್ಲ. ಹೀಗಾಗಿ ಹಿಂದಿ ಮೂಲದ ಈ ನಾಟಕ ಕನ್ನಡ ರಂಗಭೂಮಿಗೆ ಹೊಸತು. 'ಉರುಳು' ನಾಟಕದ ಕಥಾ ವಸ್ತು ದಯಾಹತ್ಯೆಯ ಕುರಿತಾದದ್ದು. ಇದು ಕೂಡ ವಿಶಿಷ್ಟವಾದ ಹಿಂದಿ ಮೂಲದ ನಾಟಕ. ಕನ್ನಡದಲ್ಲಿ ಈ ಥರದ ನಾಟಕ ಬಂದಿಲ್ಲ. ವಿಭಿನ್ನ ರಂಗಾನುಭವಗಳನ್ನು ಸದಭಿರುಚಿಯ ಪ್ರೇಕ್ಷಕರಿಗೆ ಉಣಬಡಿಸುವುದು ಈ ನಾಟಕಗಳನ್ನು ಆಯ್ದ ಉದ್ದೇಶ. ಈ ಮೂರೂ ನಾಟಕಗಳನ್ನು ಒಟ್ಟಿಗೆ ಕೋರ್ಟ್ ತ್ರಿವಳಿ ನಾಟಕೋತ್ಸವವಾಗಿ ಮಂಗಳೂರು ಮತ್ತು ಮುಂಬಯಿಯಲ್ಲಿ ಆಯೋಜಿಸಿದಾಗ ದೊರೆತ ಪ್ರೇಕ್ಷಕರ ಪ್ರತಿಕ್ರಿಯೆಯಿಂದ ಆಯ್ಕೆ ಸಾರ್ಥಕವೆಂದು ಸಾಬೀತಾಗಿದೆ' ಎಂದು (ಅ. 15, 2015ರಂದು ನಡೆಸಿದ ಸಂದರ್ಶನದಲ್ಲಿ) ಸುವರ್ಣರು ಸಂತೋಷಿಸಿದ್ದಾರೆ ಧನ್ಯತೆ ಅನುಭವಿಸಿದ್ದಾರೆ.

## ರಂಗ ಶಿಕ್ಷಣದ ಕನಸು ನನಸು: 'ರಂಗಸ್ಥಳ'ದ ಸ್ಥಾಪನೆ

ರಂಗದೊಂದಿಗೆ ನಿಕಟವಾಗಿದ್ದ ಸುವರ್ಣರು ರಂಗ ಶಿಕ್ಷಣವನ್ನು ಯುವಜನತೆಗೆ ಒದಗಿಸುವ ನಿಟ್ಟಿನಿಂದಲೂ ಯೋಚಿಸತೊಡಗಿದರು. ತಮಗೆ ತಿಳಿದಿರುವುದನ್ನು ಇತರರಿಗೂ ತಿಳಿಸಬೇಕು ಎಂಬ ಆಕಾಂಕ್ಷೆ ಅವರದು. ಹಾಗಾಗಿ ರಂಗ ಶಿಕ್ಷಣ ಕೇಂದ್ರವನ್ನೂ ತೆರೆದರು, ಅಲ್ಲಿ ಅವರೇ ಅಧ್ಯಾಪಕರೂ ಆದರು. ಹಾಗೆ ನೋಡಿದರೆ ಇಲ್ಲಿ ಇವರೊಬ್ಬರೇ ಶ್ರಮಿಸಿದ ರೀತಿ ಗಮನಾರ್ಹ. ಒಬ್ಬರೇ ನಿಂತು ಅಂಥದ್ದೊಂದು ಉನ್ನತವಾದ ಕೇಂದ್ರವನ್ನು ತೆರೆದು ಮಾದರಿಯಾದವರು ಅವರು.

"ಸೈದ್ಧಾಂತಿಕ ನೆಲೆ'ಯಲ್ಲಿ ಯುವ ಕಲಾವಿದರಿಗೆ ನಾಟಕ ತರಬೇತಿ ನೀಡುವ ಉದ್ದೇಶದೊಂದಿಗೆ ಸುವರ್ಣರು ಮುಂಬಯಿಯ ಗೋರೆಗಾಂವ್ ಕರ್ನಾಟಕ ಸಂಘದ ಆಶ್ರಯದಲ್ಲಿ ರಂಗ ತರಬೇತಿ ಶಿಕ್ಷಣ ಕೇಂದ್ರ 'ರಂಗಸ್ಥಳ' ಸ್ಥಾಪಿಸಿದರು. ಇಲ್ಲಿ ಮೂರು ತಿಂಗಳ ಅವಧಿಯಲ್ಲಿ ನಾಟಕದ ವಿವಿಧ ಅಂಗಗಳ ಬಗ್ಗೆ ಉದಾ: ಸ್ಟೇಜ್, ಕಾಸ್ಟ್ಯೂಮ್,

ಬೆಳಕು, ರಂಗಸಜ್ಜಿಕೆಗಳ ಶಿಸ್ತುಬದ್ಧತೆಯ ಬಗ್ಗೆ ತರಬೇತಿ ನೀಡಿರುವುದು. ಇಲ್ಲಿನ ಒಂದು ವಿಶೇಷತೆ ಅಂದರೆ ನಾಟಕದ ಸೈದ್ಧಾಂತಿಕತೆಯನ್ನು ತಿಳಿಸುವುದರೊಂದಿಗೆ ಪ್ರಯೋಗಶೀಲತೆಗೂ ಒತ್ತು ಕೊಟ್ಟಿರುವುದು. ತಂತ್ರಗಳನ್ನು ತಿಳಿಸುತ್ತಲೇ ಪ್ರಯೋಗದ ಕಡೆಗೂ ವಿದ್ಯಾರ್ಥಿಗಳನ್ನು ಒಡ್ಡಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿತ್ತು. ಹೀಗೆ ತರಬೇತಿ ನೀಡುವುದರಿಂದ ವಿದ್ಯಾರ್ಥಿಗಳಿಂದ ಒಂದು ಉತ್ತಮ ನಾಟಕ ಸಿದ್ಧಗೊಳ್ಳುತ್ತಿತ್ತು, ಅವರ ತರಬೇತಿ ಅವಧಿ ಮುಗಿಯುವುದರೊಂದಿಗೆ. ತರಗತಿಯ ಎಲ್ಲ ವಿದ್ಯಾರ್ಥಿಗಳನ್ನೂ ಒಳಪಡಿಸಿಕೊಂಡು ನಾಟಕ ತರಬೇತಿಗೊಳಿಸುತ್ತಿದ್ದರು. ಎಲ್ಲರಿಗೂ ಅವಕಾಶ ದಕ್ಕಬೇಕು ಎಂಬುದು ಸುವರ್ಣರ ಸದಾಶಯ. ಅಭಿವ್ಯಕ್ತಿಯ ವಿಧಾನಕ್ಕೂ ಪಕ್ವತೆ, ಪ್ರಬುದ್ಧತೆಗೆ ಇಲ್ಲಿ ಪ್ರಾಧಾನ್ಯತೆ.

ನಾಟ್ಯ ಅಕಾಡೆಮಿಯಲ್ಲಿ ತಾವು ಕಲಿತ ರಂಗ ಪಾಠವನ್ನು, ತರಬೇತಿಯನ್ನು ಮುಂದಿನ ಪೀಳಿಗೆಗೆ ದಾಟಿಸಬೇಕು ಅನ್ನುವ ಕಾಳಜಿ ಹಾಗೂ ತುಡಿತ ತೀವ್ರವಾಗಿತ್ತು ಸುವರ್ಣರಲ್ಲಿ. ತನ್ನ ಸಹವರ್ತಿಗಳಿಗೆ ಈ ಶಿಕ್ಷಣ ದೊರೆತರೂ ಸಾಕು ಕನ್ನಡ ರಂಗಭೂಮಿ ಸುಧಾರಣೆಯನ್ನು ಕಾಣುತ್ತದೆ ಎನ್ನುವುದನ್ನು ಕಂಡುಕೊಂಡಿದ್ದರು. ಆದರೆ ನಾಟ್ಯ ಅಕಾಡೆಮಿ ಬಹಳ ಬೇಗ ಮುಂದಿನ ಮೂರೇ ವರ್ಷಗಳಲ್ಲಿ ಬಾಗಿಲು ಮುಚ್ಚಿತು. ಸುವರ್ಣರು ಕೊರಗಿದರು. ತಾವೇ ಒಂದು ರಂಗ ಶಿಕ್ಷಣ ಕೇಂದ್ರವನ್ನು ತೆರೆದು ರಂಗ ತರಬೇತಿಯನ್ನು ನೀಡಿದರೆ ಹೇಗೆ ಎಂದು ಯೋಚಿಸಿ 1995ರಲ್ಲಿ ಅದನ್ನು ಕಾರ್ಯಗತಗೊಳಿಸಿದರು.

ಲಘು ಹೃದಯಾಘಾತಕ್ಕೆ ಒಳಗಾಗಿ ವಿಶ್ರಾಂತಿಯಲ್ಲಿದ್ದ ದಿನಗಳಲ್ಲಿ ಸುವರ್ಣರಿಗೆ ವೈದ್ಯರು ಹೇಳಿದ ವಿಶ್ರಾಂತಿ ಸಮಯವನ್ನು ರಂಗಕ್ಕೆ ವಿನಿಯೋಗಿಸಬೇಕು ಎಂದು ಹೊಳೆದಿದೆ. ಒಂದು ವರ್ಷದ ಕೋರ್ಸ್‌ನ ಬದಲಿಗೆ ಮೂರು ತಿಂಗಳ ಕೋರ್ಸ್ ಸಂಯೋಜಿಸುವ ಬಗ್ಗೆ ಯೋಜನೆ ಹಾಕಿಕೊಂಡರು. ತಮ್ಮ ಘನ ಅನುಭವ ಹಾಗೂ ಕಲಿತ ಪಾಠಗಳನ್ನೆಲ್ಲ ಹೊಸಬರಿಗೆ, ಆಸಕ್ತರಿಗೆ ಧಾರೆ ಎರೆಯುವ ಶಿಕ್ಷಕ ವೃತ್ತಿ ಮುಂದುವರಿಸುವ ಇರಾದೆ ಅವರದಾಗಿತ್ತು. ಈ ಬಗ್ಗೆ ಅವರು ಗೋರೆಗಾಂವ್ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ, ಸಮರ್ಥ ಪ್ರತಿಭೆ, ನಾಯಕತ್ವಕ್ಕೆ ಇನ್ನೊಂದು ಹೆಸರು ಅನ್ನುವಂತಿದ್ದ ರವಿ ರಾ. ಅಂಚನ್ ಅವರನ್ನು ಸಂಪರ್ಕಿಸಿದರು. ಅಂಚನ್ ಅವರು ಸುವರ್ಣರ ಯೋಚನೆಗೆ ಪೂರಕವಾಗಿಯೇ ಸ್ಪಂದಿಸಿದರು. ರಂಗಸ್ಥಳಕ್ಕೆ ಯಾರೆಂದು ಕೇಳಿ ಬಲ್ಲಿರಿ ಎಂದು ಕೇಳಿದರೆ ಸುವರ್ಣರು ನಿರ್ದೇಶಕರು, ರವಿ ಅಂಚನ್ ಅಧ್ಯಕ್ಷರು ಎಂದಾಯಿತು. ನ.1ರಂದು ಕರ್ನಾಟಕ ರಾಜ್ಯೋತ್ಸವದ ಸುಮುಹೂರ್ತದಲ್ಲಿ ರಂಗ ಶಾಲೆ ಶುಭಾರಂಭಗೊಂಡಿತು. ಪ್ರತಿ ದಿನ ಸಂಜೆ 7 ರಿಂದ 8 ಗಂಟೆವರೆಗೆ ನಾಟ್ಯ ಅಕಾಡೆಮಿಯ ಮಾದರಿಯಲ್ಲೇ ಪಾಠ ಹೇಳಿದರು ಸುವರ್ಣರು. ಹಿಂದಿ, ಗುಜರಾತಿ, ಮರಾಠಿ ರಂಗಭೂಮಿಯ ಖ್ಯಾತ ನಿರ್ದೇಶಕರನ್ನೆಲ್ಲ ಉಪನ್ಯಾಸಕ್ಕೆ ಆಹ್ವಾನಿಸುತ್ತಿದ್ದರು. ಬೆಂಗಳೂರಿನಿಂದಲೂ ಕನ್ನಡ ರಂಗ ನಿರ್ದೇಶಕರನ್ನು ಆಹ್ವಾನಿಸಿ ಕಮ್ಮಟ ಆಯೋಜಿಸುತ್ತಿದ್ದರು. ರಂಗಭೂಮಿಯ ಪಲ್ಲಟ

ಹಾಗೂ ಚಲನಶೀಲತೆಗಳನ್ನು ಹೊಸ ತಲೆಮಾರಿಗೆ ಈ ಮೂಲಕ ಪರಿಚಯಿಸುತ್ತ ತರಬೇತಿ ನೀಡಿದರು. ಶಿಬಿರಾರ್ಥಿಗಳಿಂದಲೇ ಪ್ರಯೋಗಗಳನ್ನು ಪ್ರದರ್ಶಿಸುತ್ತ ಬಂದರು.

ಕಲಾವಿದರಿಗೆ ನಾಟಕದ ಸಿದ್ಧಾಂತಗಳು ಮತ್ತು ರಂಗಕೃತಿಯಾಗಿ ನಾಟಕ ರೂಪುಗೊಳ್ಳುವ ರೀತಿ ಮತ್ತು ರಂಗಕೃತಿಯನ್ನು ಶಿಸ್ತುಬದ್ಧವಾಗಿ ಪ್ರದರ್ಶಿಸುವಂಥ ತರಬೇತಿ ದೊರೆಯುವಂತೆ ಮಾಡಿದರು. ವಾಚನ ಕ್ರಮವೊಂದನ್ನು ಆರಂಭಿಸಿ ವಾಚಿಕಾಭಿನಯಕ್ಕೆ ಮಾರ್ಗವನ್ನೂ ತೆರೆದಿಟ್ಟರು. ರಂಗಶಿಕ್ಷಣ ಶಾಲೆ ಎನ್ನುವುದು ಮುಂಬಯಿ ಕನ್ನಡ ರಂಗಭೂಮಿಯಲ್ಲೇ ಪ್ರಪ್ರಥಮ ಪ್ರಯೋಗವೂ, ಕೊಡುಗೆಯೂ ಆಯಿತು ಎನ್ನುವುದು ಹೆಗ್ಗಳಿಕೆಯಾಯಿತು.

ಶಿಬಿರಾರ್ಥಿಗಳಲ್ಲಿ ಒಬ್ಬರಾದ ರಂಗಾಸಕ್ತ, ಕತೆಗಾರ ಗೋಪಾಲ ತ್ರಾಸಿ ಅವರು ಈ ತರಗತಿಯ ಅನುಭವವನ್ನು ಆದರದಿಂದ ಹೀಗೆ ಹಂಚಿಕೊಳ್ಳುತ್ತಾರೆ: 'ಮೂರು ತಿಂಗಳ ಅಲ್ಪಾವಧಿಯ ಸರ್ಟಿಫಿಕೇಟ್ ಕೋರ್ಸ್ ಮಾದರಿಯಲ್ಲಿ ಹಮ್ಮಿಕೊಂಡ ರಂಗ ತರಬೇತಿ ಶಿಬಿರ ರಂಗ ಶಿಕ್ಷಣದೊಂದಿಗೆ ಶಿಬಿರಾರ್ಥಿಗಳಾದ ನಮ್ಮೆಲ್ಲರ ಅರಿವಿನ ಸೀಮೆಯನ್ನು ಹಿಗ್ಗಿಸಿದೆ...ಸೃಜನಶೀಲತೆಯ ಯಶೋಗಾಥೆ ಮತ್ತು ಕ್ರಿಯಾಶೀಲತೆಯ ಉತ್ಕರ್ಷತೆಯನ್ನು ದಾಖಲಿಸಿದ ಸುವರ್ಣರು ತಮ್ಮ ಸಮಕಾಲೀನ ನಾಟಕಕಾರರನ್ನು ಗೌರವದಿಂದಲೇ ಸ್ಮರಿಸುವುದನ್ನು ನಾವು ಶಿಬಿರಾರ್ಥಿಗಳು ಮನಗಂಡೆವು. ಸ್ವತಃ ನಾಟಕಕಾರರಾಗಿ, ಕಲಾವಿದರಾಗಿ, ನಿರ್ದೇಶಕರಾಗಿ ಶ್ರೇಷ್ಠತೆಯ ಉತ್ತುಂಗಕ್ಕೇರಿ ನಾಲ್ಕೈದು ದಶಕಗಳ ಬೆಟ್ಟದಷ್ಟು ಅನುಭವವಿರುವ ಸುವರ್ಣರು ತಮ್ಮ ಹೃದಯಕ್ಕೆ ಹತ್ತಿರವಿರುವ ರಂಗಭೂಮಿಯ ಶಿಕ್ಷಕರಾಗಿ ಲವಲವಿಕೆಯಿಂದ ಜವಾಬ್ದಾರಿಯಿಂದ ನಿಭಾಯಿಸಿರುವುದು ಅವರ ವ್ಯಕ್ತಿತ್ವದ ಮಹತ್ತ್ವದ ಮಗ್ಗುಲಾಗಿದೆ. ರಂಗಭೂಮಿಯ ಜೀವಂತಿಕೆಗಾಗಿ ಹಂಬಲಿಸುವ ಅನನ್ಯ ಕಾಳಜಿಯೂ ಆಗಿದೆ. (ಉದಯವಾಣಿ ಜ. 5, 2008)

ವಾಚಿಕಾಭಿನಯದ ತರಬೇತಿ ಆರಂಭದ ಹಿನ್ನೆಲೆ ಹಾಗೂ ಅಗತ್ಯವನ್ನು ಸುವರ್ಣರು ಸಮರ್ಥಿಸುವುದು ಹೀಗೆ: 'ಇಂಗ್ಲಿಷ್,ಹಿಂದಿ, ಮರಾಠಿ ನಾಟಕಗಳ ವಾಚನ ಕಾರ್ಯಕ್ರಮ ಆಗಾಗ ಮುಂಬಯಿಯಲ್ಲಿ ನಡೆಯುತ್ತದೆ. ಥಿಯೇಟರ್ ಗ್ರೂಪ್‌ಎಂಬ ಆಂಗ್ಲ ನಾಟಕ ಸಂಸ್ಥೆ ಆಗಾಗ ಇಂಥ ಕಾರ್ಯಕ್ರಮಗಳನ್ನು ನಡೆಸುತ್ತದೆ. ಇದರಲ್ಲಿ ರಂಗಭೂಮಿಯ ಪ್ರಖ್ಯಾತ ಕಲಾವಿದರೂ ಭಾಗವಹಿಸುತ್ತಾರೆ. ಟಿಕೇಟು ಇಟ್ಟೂ ಪ್ರದರ್ಶನ ಜರುಗುತ್ತದೆ. ರಂಗ ಪ್ರಯೋಗದಲ್ಲಿ ಆಗುವ ಖರ್ಚು, ವೆಚ್ಚ, ಸಮಯ ಎಲ್ಲ ಇದಕ್ಕೆ ಬೇಕಾಗಿಲ್ಲ. ಇದರಲ್ಲಿ ನಾಟಕದ ಪಾತ್ರಗಳನ್ನು ಹಂಚುವಾಗ ಆ ಪಾತ್ರಗಳ ಪ್ರಾಯದ ನಿರ್ಬಂಧವೂ ಇರುವುದಿಲ್ಲ. ಅಲ್ಲದೆ ಒಂದು ನಾಟಕವನ್ನು ಅರಿಯಲು ಮತ್ತು ವಿಶ್ಲೇಷಿಸಲು ಇಂಥ ಪ್ರಯೋಗಗಳು ತುಂಬ ಸಹಕಾರಿಯಾಗಿರುತ್ತವೆ. ರಂಗ ಪ್ರಯೋಗದಲ್ಲಿ ಅದು ಹೇಗೆ ಬರಬಹುದು ಎಂಬುದನ್ನು ನಿರ್ಧರಿಸಲು ನೆರವಾಗುತ್ತದೆ. ಹಾಗಾಗಿ ನಾಟಕ ವಾಚನ ಮಾಡುತ್ತಲೇ ಮುಂದೆ ಅದನ್ನು ರಂಗ ಪ್ರಯೋಗಕ್ಕೂ ಪ್ರಯತ್ನಿಸಬಹುದಾಗಿದೆ.'

ಮಧ್ಯಾಹ್ನದ ವೇಳೆ ಬಿಡುವಾಗಿರುವ ಮಹಿಳೆಯರಿಗಾಗಿ ತರಗತಿಯನ್ನು ಆರಂಭಿಸಿದರು. ಮೂರು ವರ್ಷಗಳ ಕಾಲ ಬಹಳ ಚೆನ್ನಾಗಿಯೇ ತರಗತಿಯನ್ನು ನಡೆಯಿಸಿದ ಸುವರ್ಣರು ಈ ನಿಟ್ಟಿನಲ್ಲಿಯೂ ಕನಸು ನನಸಾದ ಹಾಗೂ ಸಮರ್ಥವಾಗಿ ನಿಭಾಯಿಸಿ ನಿರ್ದೇಶಕರನ್ನು, ಕಲಾವಿದರನ್ನು ತಯಾರು ಮಾಡಿದ, ಅಭಿನಯ ಕಲೆಯ ಶಿಸ್ತುಗಳನ್ನು ಹೊಸ ತಲೆಮಾರಿಗೆ ದಾಟಿಸುತ್ತ ರಂಗಭೂಮಿಯ ಚಲನಶೀಲತೆಗೆ ಕಾರಣರಾದ ಬಗ್ಗೆ ಧನ್ಯತೆ ಅನುಭವಿಸಿದರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ಸಮಯ ವ್ಯಯಿಸಬೇಕಾದ ಮುಂಬಯಿಯಲ್ಲಿ ಒಂದು ಸ್ಥಳದಲ್ಲಿ ಹಲವರನ್ನು ಒಟ್ಟುಗೂಡಿಸುವುದೇ ಹರಸಾಹಸ. ಅಂಥ ಸಾಹಸವನ್ನು ಸುವರ್ಣರು ಐವತ್ತರ ದಶಕದಿಂದಲೇ ಮಾಡುತ್ತ ಬಂದದ್ದು ರೋಮಾಂಚಕಾರಿಯಾದದ್ದು.

'ನಾನು ಮುಂಬಯಿಯಿಂದ ಮಂಗಳೂರಿಗೆ ವಾಸ್ತವ್ಯ ಬದಲಿಸಿದ ನಂತರವೂ 'ರಂಗಸ್ಥಳ' ತನ್ನ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬಂದಿದೆ. ನಾಟಕ ವಾಚನವೂ ಆಗಾಗ ನಡೆಯುತ್ತಿದೆ. ಸ್ಥಾಪಕ ದಿನವನ್ನು ಪ್ರತಿವರ್ಷ ಆಚರಿಸುತ್ತ ಬಂದಿದ್ದಾರೆ. ಆ ದಿನ ರಂಗಭೂಮಿಯ ಬಗ್ಗೆ ವಿಶೇಷ ಆಹ್ವಾನಿತರಿಂದ ಉಪನ್ಯಾಸ ಕಾರ್ಯಕ್ರಮ ಜರುಗುತ್ತಲಿದೆ. ಹಾಗಾಗಿ 'ರಂಗಸ್ಥಳ' ಇನ್ನೂ ಜೀವಂತವಾಗಿದೆ ಅನ್ನುವುದೇ ನನಗೆ ಸಮಾಧಾನದ ವಿಷಯ' (ಅ.16 2015ರಂದು ನಡೆಸಿದ ಸಂದರ್ಶನದಲ್ಲಿ) ಎಂದು ಆನಂದದಿಂದ ಹೇಳಿಕೊಳ್ಳುವಲ್ಲೇ ಅದರ ಮುಂದುವರಿಕೆಯ ಬಗ್ಗೆ ತುಂಬಿಕೊಂಡಿರುವ ವಿಶ್ವಾಸವೂ ದೀಪ ಹೊಳೆಯುವುದು ಮಾಡುತ್ತದೆ.

'ನಾಟಕ ಎಂದರೇ ಅನುಕರಣೆ. ಬದುಕೇ ಒಂದು ನಾಟಕವಾದರೂ ರಂಗದಲ್ಲಿ ನಾಟಕಿಯತೆಯನ್ನು ಪ್ರಸ್ತುತ ಪಡಿಸಲಾಗುತ್ತದೆ. ಇಲ್ಲಿ ಪ್ರತಿಭೆ ಒಂದೇ ಸಾಕಾಗುವುದಿಲ್ಲ. ಕಲಾ ಶಾಲೆಗಳು ನಾಟಕದ ಶಾಸ್ತ್ರೀಯ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡುತ್ತವೆ. ರಂಗಕೃತಿಯೊಂದು ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುವ ಪ್ರಕ್ರಿಯೆಯನ್ನು ಅರ್ಥ ಮಾಡಿಸುತ್ತವೆ. ಅವುಗಳ ಮೂಲಕ ನಾಟಕ ರಂಗದ ವಿಭಿನ್ನ ಆಯಾಮಗಳನ್ನು, ಸಿದ್ಧಾಂತಗಳನ್ನು, ತಾಂತ್ರಿಕ ಸಂಯೋಜನೆಯ ರೀತಿಯನ್ನು ಅರಿತುಕೊಳ್ಳುವುದರೊಂದಿಗೆ ಪಾತ್ರದ ಅನೇಕ ಒಳನೋಟಗಳನ್ನು ದಕ್ಕಿಸಿಕೊಳ್ಳಬಹುದಾಗಿದೆ. ಅವುಗಳನ್ನು ದುಡಿಸಿಕೊಳ್ಳೋದು ಹೇಗೆ ಎಂಬ ಅರಿವು ಅಭಿನಯಕ್ಕೆ ಅಗತ್ಯ. ಆಗ ಅಭಿವ್ಯಕ್ತಿಯ ವಿಧಾನಕ್ಕೂ ವಿಶೇಷತೆ ಬರುತ್ತದೆ, ಗಾಂಭೀರ್ಯ ಬರುತ್ತದೆ. ಹುಟ್ಟು ಕಲಾವಿದರೂ ಇನ್ನಷ್ಟು ಪಳಗುತ್ತಾರೆ. ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುತ್ತಾರೆ. ಆಗಲೇ ಅಭಿನಯಕ್ಕೊಂದು ಶಿಸ್ತು, ಕ್ರಮಬದ್ಧತೆ ಬರುತ್ತದೆ. ರಂಗಭೂಮಿಯ ಸಿದ್ಧಾಂತಗಳನ್ನು, ತಂತ್ರಗಳನ್ನು ಪರಿಚಯಿಸುತ್ತಲೇ ಒಂದು ಸೃಜನಶೀಲ ರಂಗಕೃತಿಯನ್ನು ಶಿಬಿರಾರ್ಥಿಗಳಿಂದ ಪ್ರಯೋಗಿಸುವ ಪ್ರಯತ್ನವನ್ನು ನಾನು ಮುಂಬಯಿಯಲ್ಲಿ 'ರಂಗಸ್ಥಳ' ರಂಗ ಶಿಕ್ಷಣ ಕೇಂದ್ರದಿಂದ ಮಾಡಿದ್ದೆ. ಇಲ್ಲಿ ವಾಚನವೂ ಒಂದು ಪ್ರಮುಖ ಅಂಗವಾಗಿತ್ತು. ಇದರಿಂದಲೂ ನಾಟಕವೊಂದನ್ನು ಪ್ರದರ್ಶಿಸಬಹುದೇ ಬೇಡವೇ ಎಂಬ ಬಗ್ಗೆ ಕೂಡ ನಿರ್ಧಾರಕ್ಕೆ

ಬರಲಾಗುತ್ತಿತ್ತು. ಕಲಾವಿದರು ಹಾಗೂ ಕಲಾಸಕ್ತರು ಇಲ್ಲಿಗೆ ಪ್ರವೇಶ ಪಡೆಯುತ್ತಿದ್ದರು' ('ಮುಕ್ತಮಾತು' ಜುಲೈ 16, 2006 ವಿಜಯ ಕರ್ನಾಟಕ)ಎಂದು ರಂಗಶಿಕ್ಷಣ ಸಂಸ್ಥೆಯನ್ನು ಸಮರ್ಥಿಸಿಕೊಂಡ ಸುವರ್ಣರು 'ರಂಗಸ್ಥಳ'ದ ವಿಶೇಷಗಳನ್ನು ಹೀಗೆಲ್ಲ ಆರಿಸಿಕೊಡುವುದು ಪಾಠದಾನವಾಗಿದೆ.

'ರಂಗ ತರಬೇತಿ, ರಂಗದಲ್ಲಿ ದುಡಿಯುವವರಿಗೆ ಅವಶ್ಯವಾಗಿದೆ. ಅದಿಲ್ಲದೆಯೂ ನಾಟಕ ಮಾಡಲು ಸಾಧ್ಯ. ಆದರೆ ಶಿಸ್ತುಬದ್ಧವಾಗಿ ನಾಟಕದ ಬೇರೆ ಬೇರೆ ಅಂಶಗಳನ್ನು ಸಮರ್ಥವಾಗಿ ದುಡಿಸಿಕೊಳ್ಳಲು ಅವುಗಳ ಪರಿಚಯವನ್ನು ಈ ರಂಗ ತರಬೇತಿಯಲ್ಲಿ ಪಡೆಯುವುದು ಸಾಧ್ಯವಿದೆ. ಅಲ್ಲದೆ ಪ್ರತಿಭೆಯ ಜತೆ ಕಲಾವಿದನಿಗೆ ತರಬೇತಿ ದೊರಕಿದರೆ ಅವನು ರಂಗದಲ್ಲಿ ಪರಿಣಾಮಕಾರಿಯಾಗಿ ತನ್ನ ಪಾತ್ರ ನಿರ್ವಹಿಸಲು ಸಾಧ್ಯವಾಗುತ್ತದೆ. ಜಗತ್ತಿನಲ್ಲಿ ಎಲ್ಲ ಕಡೆಯೂ ರಂಗ ತರಬೇತಿ ಕಾರ್ಯಕ್ರಮ ನಡೆಯುತ್ತಿರುತ್ತದೆ. ಇಂದು ಪ್ರಖ್ಯಾತರೆನಿಸಿದ ಜಗದ್ವಿಖ್ಯಾತ ರಂಗ ನಟರಾದವರು ತಮ್ಮ ಪ್ರತಿಭೆಗೆ ತರಬೇತಿಯ ಲೇಪ ಬಳಿದು ಮಿಂಚಿದ್ದಾರೆ' ಎಂದೆಲ್ಲ ಸೂಕ್ಷ್ಮತೆಗಳೊಂದಿಗೆ ತರಬೇತಿಗಳನ್ನು ಎದೆಯೊಳಗೆ ತುಂಬಿಸಿಡುವುದು ರಂಗಜ್ಞಾನದ ಪರಿಣಾಮವಾಗಿದೆ. ಅಲ್ಲದೇ, ಲಿಖಿತ ನಾಟಕ ರಂಗಕೃತಿಯಾಗಿ ಅಭ್ಯಾಸದ ವೇಳೆ ರೂಪುಗೊಂಡು ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುವ ಪ್ರಕ್ರಿಯೆಯನ್ನು ಅರಿಯಲು, ಅಭ್ಯಸಿಸಲು ರಂಗ ಶಿಕ್ಷಣ ಅಗತ್ಯ. ರಂಗ ಶಿಕ್ಷಣ ಕೇಂದ್ರಗಳು ಅನೇಕ ರಂಗ ಸಿದ್ಧಾಂತಗಳನ್ನು ತತ್ತ್ವಗಳನ್ನು ಪರಿಚಯಿಸುತ್ತವೆ. ನಾಟಕದ ರಂಗ ಕೃತಿಗೆ ವಿಭಿನ್ನ ಆಯಾಮಗಳನ್ನು ಒದಗಿಸುವುದು, ಒಳನೋಟಗಳನ್ನು ಕಂಡುಕೊಳ್ಳುವ ಪಾತ್ರಗಳನ್ನು ಪೋಷಿಸುವುದು, ಭಾಷೆಯನ್ನು ದುಡಿಸಿಕೊಳ್ಳುವ, ತಾಂತ್ರಿಕ ಸಂಯೋಜನೆಗೆ ಸಂಬಂಧಿಸಿ ಅನೇಕ ವಿಷಯಗಳನ್ನು ಕಲಿಸುವುದು ಇತ್ಯಾದಿಯನ್ನೂ ನಿರ್ವಹಿಸುತ್ತವೆ ಎನ್ನುವುದು ರಂಗ ತರಬೇತಿಯ ಕುರಿತ ಅವರ ಚಿಂತನೆ ಧ್ಯಾನದ ಅಸಲುತನವಾಗಿದೆ.

ಶಿಕ್ಷಣದಲ್ಲಿ ರಂಗ ಚಟುವಟಿಕೆ ಅನ್ನುವ ಪ್ರಯೋಗ ಪ್ರಯತ್ನವನ್ನು ಸ್ವಾಗತಿಸುವ ಸುವರ್ಣರು ಅದನ್ನು ಪ್ರತಿಪಾದಿಸುವುದು ಹೀಗೆ: ಶಿಕ್ಷಣದಲ್ಲಿ ರಂಗಭೂಮಿಯ ಸೇರ್ಪಡೆಯಾಗುವುದು ಬಹಳ ಅಗತ್ಯ. ಎಳವೆಯಿಂದಲೇ ಮಕ್ಕಳಲ್ಲಿ ರಂಗಭೂಮಿ ಕುರಿತು ಆಸಕ್ತಿ ಮೂಡಿಸಿ ಅವರನ್ನು ತೊಡಗಿಸಿಕೊಳ್ಳಬೇಕು. ಮಕ್ಕಳಲ್ಲಿರುವ ಪ್ರತಿಭೆಯ ವಿಕಸನಕ್ಕೆ ರಂಗಭೂಮಿಗಿಂತ ಉತ್ತಮ ಮಾಧ್ಯಮ ಬೇರೊಂದಿಲ್ಲ. ಮಕ್ಕಳ ನಾಟಕಗಳಲ್ಲಿ ತೊಡಗಿಸಿಕೊಂಡರೆ ಅವರು ಬೆಳೆಯುತ್ತ ಹೋಗುತ್ತಾರೆ. ರಂಗಭೂಮಿಯ ಕುರಿತೂ ಅವರ ಅನುಭವ ಹೆಚ್ಚುತ್ತ ಹೋಗುತ್ತದೆ. ಕಾಲೇಜು ಸೇರಿದಾಗ ಪ್ರೌಢ ನಾಟಕಗಳಲ್ಲಿ ತೊಡಗಿಸಿಕೊಳ್ಳಲು ಶಕ್ತರಾಗುತ್ತಾರೆ. ಶಿಕ್ಷಣದ ಜತೆ ಜೀವನಾನುಭವ, ಲೋಕಾನುಭವ ಪಡೆಯಲು ರಂಗಭೂಮಿ ಅವರಿಗೆ ನೆರವಾಗುತ್ತದೆ. ಮುಂಬಯಿಯಲ್ಲಿ ಅರುವತ್ತು ಎಪ್ಪತ್ತರ ದಶಕಗಳಲ್ಲಿ ಮುಂಬಯಿಯ ವರ್ಷಕ್ಕೆರಡು ನಾಟಕ ಸ್ಪರ್ಧೆಗಳು ಕಾಲೇಜು ಲೆವೆಲ್‌ನಲ್ಲಿ ಜರುಗುತ್ತಿದ್ದವು. ಒಂದು ಮುಂಬಯಿ ಯುನಿವರ್ಸಿಟಿ ಆಶ್ರಯದಲ್ಲಿ, ಇನ್ನೊಂದು

ಭಾರತೀಯ ವಿದ್ಯಾಭವನದ ಆಶ್ರಯದಲ್ಲಿ. ಯುನಿವರ್ಸಿಟಿಯ ನಾಟಕ ಸ್ಪರ್ಧೆಯ ಜಡ್ಜ್‌ಗಳಲ್ಲೊಬ್ಬನಾಗಿ ನಾನು ಕೆಲವು ವರ್ಷ ಭಾಗವಹಿಸಿದ್ದೆ. ಭಾರತೀಯ ವಿದ್ಯಾ ಭವನದ ಸ್ಪರ್ಧೆ ಸ್ಥಗಿತಗೊಂಡ ನಂತರ ಯುನಿವರ್ಸಿಟಿ ಆರಂಭಿಸಿರಬೇಕೆಂದು ನೆನಪು. ಈ ಸ್ಪರ್ಧೆಗಳಲ್ಲಿ ಇಂಗ್ಲಿಷ್, ಹಿಂದಿ ಅಲ್ಲದೆ ಪ್ರಾದೇಶಿಕ ಭಾಷೆಗಳ ನಾಟಕಗಳಿಗೂ ಅವಕಾಶವಿತ್ತು. ಭಾರತೀಯ ವಿದ್ಯಾ ಭವನದ ಸ್ಪರ್ಧೆಯಲ್ಲಿ ಭಾಗವಹಿಸುವ ಕೆ.ಸಿ.ಕಾಲೇಜು, ಜೈಹಿಂದ್ ಕಾಲೇಜು, ಸಿದ್ಧಾರ್ಥ ಕಾಲೇಜು ನಾಟಕ ತಂಡದ ನಿರ್ದೇಶಕನಾಗಿ ಸಹಕರಿಸಿದ್ದೆ. ಆಗ ಅಲ್ಲಿ ಪ್ರದರ್ಶಿತವಾಗುತ್ತಿದ್ದ ಉತ್ತಮ ರಂಗಕೃತಿಗಳು, ನಟ ನಟಿಯರ ಪ್ರಬುದ್ಧ ಅಭಿನಯ ನಮ್ಮನ್ನು ಬೆರಗುಗೊಳಿಸುತ್ತಿತ್ತು. ರಾಜೇಶ್ ಖನ್ನಾ, ಅಮ್ಜದ್ ಖಾನ್, ಸಂಜೀವಕುಮಾರ್ ಮುಂತಾದ ಬಾಲಿವುಡ್ ನಟರು ಈ ಸ್ಪರ್ಧೆಗಳಲ್ಲೇ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಮುಂದೆ ಚಲನಚಿತ್ರ ತಾರೆಯರಾಗಿ ಮೆರೆದವರು. ರಂಗಭೂಮಿ ಬೆಳೆಯಬೇಕಾದರೆ ಬೆಳಗಬೇಕಾದರೆ, ಶಾಲೆ ಕಾಲೇಜುಗಳಲ್ಲಿ ಶಿಕ್ಷಣದ ಜತೆ ರಂಗಭೂಮಿಯನ್ನು ಜೋಡಿಸಬೇಕು. ಇದರಿಂದಾಗಿ ಕೆಲವು ರಂಗಕರ್ಮಿಗಳಿಗೆ, ರಂಗ ತಜ್ಞರಿಗೆ ಉದ್ಯೋಗಾವಕಾಶಗಳೂ ತೆರೆದುಕೊಳ್ಳುತ್ತವೆ. (ಪು.230, ಸುವರ್ಣ ಸಂಪದ, ಲೇ:ಸೀತಾಲಕ್ಷ್ಮೀ ಕರ್ಕಿಕೋಡಿ)

'ಯುನಿವರ್ಸಿಟಿ ಮಟ್ಟದ ನಾಟಕೋತ್ಸವ ನಡೆಯುತ್ತಿರಬೇಕು. ಶಾಲೆ, ಕಾಲೇಜುಗಳಲ್ಲಿ ನಾಟಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರಬೇಕು. ವರ್ಷಕ್ಕೊಮ್ಮೆ ರಂಗ ತರಬೇತಿ ಶಿಬಿರಗಳು ಆಯೋಜನೆಗೊಳ್ಳಬೇಕು. ಪರಿಣಿತರನ್ನು, ನಾನಾ ರಂಗ ತಜ್ಞರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಿ ಉಪನ್ಯಾಸ ನೀಡಿಸಬೇಕು. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣಗೊಳಿಸುವುದಕ್ಕೆ ಉತ್ತಮ ನಿರ್ದೇಶಕರನ್ನು ಕರೆಯಿಸಿದರೆ ಒಂದೊಳ್ಳೆ ಪ್ರೊಡಕ್ಷನ್ ತರಬಹುದು. ಮಕ್ಕಳಿಂದ ಉತ್ತಮ ನಾಟಕವೊಂದನ್ನು ಸಿದ್ಧಪಡಿಸಬಹುದು. ಈ ಚಟುವಟಿಕೆಯಿಂದ ಮಕ್ಕಳಲ್ಲೂ ಒಂದು ಬಗೆಯ ಹೊಸ ಹುರುಪು ಬರುತ್ತದೆ. ಶಿಕ್ಷಣದ ಜತೆ ಜತೆಗೆ ಅವರನ್ನು ರಂಗಭೂಮಿಗೆ ಎಳೀಬೇಕು. ಈ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಅಕಾಡೆಮಿಗಳು ಪ್ರಯತ್ನಿಸಬೇಕು' (ಅ.15 ರಂದು ಸಂದರ್ಶನದಲ್ಲಿ) ಎನ್ನುವುದೂ ಸುವರ್ಣರ ಕಳಕಳಿಯ ಒತ್ತಾಸೆಯಾಗಿದೆ.

ಇಲ್ಲಿ ಮುಖ್ಯವಾಗಿ ಕಾಣುವುದು ಯುವಜನತೆಯನ್ನು ರಂಗಭೂಮಿಯತ್ತ ಸೆಳೆಯುವ ಪ್ರಯತ್ನ. ಈ ನಿಟ್ಟಿನಲ್ಲಿ ತಮ್ಮನ್ನು ಮನಃಪೂರ್ವಕ ಒಪ್ಪಿಸಿಕೊಂಡ ಪರಿಣಾಮವಾಗಿ ಅನೇಕರು ಸುವರ್ಣರಿಂದ ಪ್ರಭಾವಿತಗೊಂಡು ಮಾರ್ಗದರ್ಶನ ಪಡೆದಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಕಲಾವಿದರು, ತಂತ್ರಜ್ಞರು, ನಿರ್ದೇಶಕರು ರೂಪುಗೊಂಡಿದ್ದಾರೆ, ಬೆಳೆದಿದ್ದಾರೆ. ಸುವರ್ಣರು ಅವರಿಗೆಲ್ಲ ಗುರುವಾಗಿ ರಂಗಭೂಮಿಯನ್ನು ವಿಸ್ತರಿಸಿ ಶ್ರೀಮಂತಗೊಳಿಸುತ್ತ ಬಂದಿರುವುದು ಮಹತ್ಸಾಧನೆಯೇ ಸರಿ.

****

## ಅಧ್ಯಾಯ 6

# ಸುವರ್ಣ ರಂಗ ಚಿಂತನೆ

ಆರೇಳು ದಶಕಗಳಿಂದ ರಂಗಭೂಮಿಯ ಒಡನಾಡಿಯಾಗಿರುವ ಸದಾನಂದ ಸುವರ್ಣರು ಅನುಭವದ ನೆಲೆಗಟ್ಟಿನಿಂದ, ರಂಗಭೂಮಿಯ ಚಲನಶೀಲತೆಯ ಕುರಿತ ಕಾಳಜಿಯಿಂದ ತಮ್ಮದೇ ಆದ ನಿಲುವು, ಚಿಂತನೆಗಳನ್ನು ಹೊಂದಿದ್ದಾರೆ, ಮುಂದಿಡುತ್ತ ಬಂದಿದ್ದಾರೆ. ಸುವರ್ಣರ ರಂಗ ಚಿಂತನೆಗಳ ಸರಣಿ ಹೀಗಿವೆ.

## ಸಣ್ಣ ರಂಗ ಮಂದಿರವಿರಲಿ, ಪ್ರಯೋಗ ಹೆಚ್ಚಲಿ

ಮುಂಬಯಿಯ ಜುಹೂನಲ್ಲಿರುವ ಪೃಥ್ವಿ ಥಿಯೇಟರ್ಸ್‌ನ್ನು ಮಾದರಿ ಆಪ್ತ ರಂಗ ಮಂದಿರವಾಗಿ ಕಂಡಿರುವ ಸುವರ್ಣರು ಆ ಬಗೆಯ ರಂಗ ಮಂದಿರವನ್ನೇ ಬಯಸುತ್ತಾರೆ. ರಂಗ ಪ್ರಯೋಗಕ್ಕೆ ಸಣ್ಣ ರಂಗ ಮಂದಿರಗಳೇ ಹೆಚ್ಚು ಪರಿಣಾಮಕಾರಿ ಅನ್ನುವುದನ್ನು ಸುವರ್ಣರು ಸಮರ್ಥಿಸುತ್ತಾರೆ. 200ರಿಂದ 300 ಮಂದಿ ವೀಕ್ಷಕರು, ಆದರೆ ಸಾಕಷ್ಟು ದೊಡ್ಡ ಸ್ಟೇಜ್, ಸುಸಜ್ಜಿತ ಸಣ್ಣ ರಂಗ ಮಂದಿರಗಳು ಆಪ್ತವಾಗಿರುತ್ತವೆ.

ಇವು ಗ್ರಾಮ ಗ್ರಾಮಗಳಲ್ಲೂ ಇರಬೇಕು ಅನ್ನುವವರು ಸುವರ್ಣರು. ರಂಗದ ಮೇಲಿನ ಕಲಾವಿದರು ಪ್ರೇಕ್ಷಕರೊಂದಿಗೆ ಆಪ್ತವಾಗಿ ಸಂವಹನ ನಡೆಸುವಂತಿರಬೇಕು. ದೊಡ್ಡ ಸಭಾಂಗಣದಲ್ಲಿ ಅಷ್ಟು ಸಂಖ್ಯೆಯ ಪ್ರೇಕ್ಷಕರ ಸಮ್ಮುಖ ಪ್ರದರ್ಶನ ಮಾಡಿದ್ದೇವೆ ಅನ್ನುವುದಕ್ಕಿಂತ ಎಷ್ಟು ಜನರನ್ನು ತಲುಪಿದ್ದೇವೆ ಅನ್ನುವುದು ಮುಖ್ಯವಾಗುತ್ತದೆ. ಸಣ್ಣ ಮಂದಿರದಲ್ಲಿ ಶೋ ಸಂಖ್ಯೆಯನ್ನು ಹೆಚ್ಚಿಸಿ ಪ್ರದರ್ಶನವನ್ನು ತಟ್ಟುವ ಹಾಗೆ ಮಾಡಬಹುದು. ಪ್ರದರ್ಶನವೂ ಹೆಚ್ಚುತ್ತ ಹೋದ ಹಾಗೆ ಪ್ರಯೋಗದ ಗುಣ ಮಟ್ಟ ಪ್ರದರ್ಶನದಿಂದ ಪ್ರದರ್ಶನಕ್ಕೆ ಹೆಚ್ಚುತ್ತಾ ಹೋಗುತ್ತದೆ. ಆದ್ದರಿಂದ ದೊಡ್ಡ ಪ್ರೇಕ್ಷಕ ಗೃಹಕ್ಕಿಂತ ಸಣ್ಣ ರಂಗಮಂದಿರವೇ ಜನರನ್ನು ಹೆಚ್ಚು ತಲುಪುತ್ತದೆ. ಬಹಳ ದೊಡ್ಡ ಸಭಾಂಗಣ ರಂಗಕ್ಕೆ ಬೇಕಾದ ಧ್ವನಿ, ಬೆಳಕಿನ ಸಂಯೋಜನೆಗೆ ಪೂರಕವಾಗಿರುವುದಿಲ್ಲ. ಕಲಾವಿದರ ಮುಖಭಾವ, ಆಂಗಿಕ ಅಭಿನಯ ದೊಡ್ಡ ಸಭಾಂಗಣದ ಹಿಂದಿನ ಸಾಲಿನ ಪ್ರೇಕ್ಷಕರಿಗೆ ಕಾಣಿಸುವುದಿಲ್ಲ, ಹೀಗೆಂದರೆ, ನಾಟಕ ಅವರನ್ನು ತಲುಪುವುದಿಲ್ಲ ಎನ್ನುವುದು ಸುವರ್ಣರ ಅನುಭವದ ನುಡಿಯಾಗಿದೆ.

ಅಲ್ಕಾಜಿ ಅವರು ಸಣ್ಣ ರಂಗ ಮಂದಿರದ ಬಗ್ಗೆ ಮಂಡಿಸಿದ ವಿಚಾರಗಳು, ಪ್ರತಿಪಾದನೆ ಸುವರ್ಣರನ್ನು ತಟ್ಟಿದೆ. ಹೊರದೇಶಗಳಲ್ಲಿ ದೊಡ್ಡ ಸಭಾಂಗಣದ ಜತೆಗೇನೇ ಇನ್ನೊಂದು ಸಣ್ಣ ರಂಗ ಮಂದಿರ ನಿರ್ಮಾಣವಾಗುತ್ತಿದ್ದುದೂ ಇದೇ ಕಾರಣಕ್ಕೆ ಅನ್ನುವುದನ್ನು ಅರ್ಥೈಸಿಕೊಂಡ ಸುವರ್ಣರು ಇದನ್ನು ಕನ್ನಡ ರಂಗಭೂಮಿಯಲ್ಲೂ ಸಾಧ್ಯವಾಗಿಸಬೇಕು ಇಲ್ಲಿ ಪ್ರದರ್ಶನ ಪ್ರಯೋಗಗಳು ಒಂದರ ಮೇಲೊಂದರಂತೆ ನಡೆಯುತ್ತಿರಬೇಕು. ಆ ಮೂಲಕ ರಂಗ ಚಟುವಟಿಕೆಗಳು ನಿರಂತರ ಪ್ರವಹಿಸುತ್ತ ಹೊಸ ಸಾಧ್ಯತೆಗಳನ್ನು ಕಟ್ಟಿಕೊಡುತ್ತಿರಬೇಕು ಎಂದು ಆಶಿಸುತ್ತಾರೆ.

ಸುವರ್ಣರು 'ವಿಜಯ ಕರ್ನಾಟಕ' (ಜುಲೈ 16, 2008)ಕ್ಕೆ ನೀಡಿದ ಸಂದರ್ಶನದಲ್ಲಿ ಸಣ್ಣ ರಂಗ ಮಂದಿರದ ಕುರಿತು ತೆರೆದಿಟ್ಟ ಚಿಂತನೆಗಳು ಸಾರ್ವಕಾಲಿಕವಾಗಿವೆ. ಅವರ ಪ್ರತಿಪಾದನೆ, ಸಲಹೆ ಹೀಗಿದೆ: ' ಒಂದು ಒಳ್ಳೆ ನಾಟಕ ಸಿದ್ಧಗೊಳ್ಳಬೇಕಾದರೆ ಎಷ್ಟು ಹಣ ಬೇಡ? ರಿಹರ್ಸಲ್‌ಗೇ ಎಷ್ಟು ಬೇಕಾಗೋದಿಲ್ಲ? ಆಯಿತು. ಪ್ರದರ್ಶನ ಕಾಣಬೇಕು ಅಂತಾದರೆ ಮತ್ತೊಂದಿಷ್ಟು ಖರ್ಚು. ಸುಮಾರು 60ರಿಂದ 65ಸಾವಿರ ರೂ. ಖರ್ಚು ಮಾಡಿ ಪ್ರದರ್ಶಿಸುವ ನಾಟಕ ಟಿಕೇಟು ಇಟ್ಟು ಆಡಿದರೆ ಅದರ ಅರ್ಧದಷ್ಟೂ ಕಲೆಕ್ಷನ್ ಆಗುವುದಿಲ್ಲ. ಇದು ಹವ್ಯಾಸಿ ರಂಗಭೂಮಿಯ ಪರಿಸ್ಥಿತಿ. ಅದಕ್ಕೇನು ಮಾಡಬೇಕು? ಮುಖ್ಯವಾಗಿ ಈಗ ಆಪ್ತ ರಂಗಭೂಮಿಯಲ್ಲಿ ನಾಟಕ ಬೆಳೆಯಬೇಕು. ಇನ್ನೂರು ಮುನ್ನೂರು ಮಂದಿ ಕುಳಿತು ನೋಡುವ ಸಣ್ಣ ರಂಗ ಮಂದಿರಗಳಲ್ಲಿ ನಾಟಕ ಪ್ರದರ್ಶಿಸುವ ಕೆಲಸ ನಡೆಯಬೇಕು. ವೆಚ್ಚವೂ ಕಡಿಮೆ ಸಾಲುತ್ತದೆ. ಅಲ್ಲದೆ ಹೆಚ್ಚು ಹೆಚ್ಚು ಪ್ರದರ್ಶನ ನೀಡಬಹುದು. ಇದರಿಂದ ಗಳಿಕೆ ಕೊಂಚ ಸುಧಾರಿಸಬಹುದು. ಹೆಚ್ಚು ಪ್ರದರ್ಶನಗೊಂಡಂತೆಲ್ಲ ತಂಡ ಪಳಗುತ್ತದೆ, ಪ್ರಬುದ್ಧ ಅಭಿನಯವನ್ನು ಕೊಡುತ್ತ ಸಾಗುತ್ತದೆ. ಜನರೂ ಸ್ವೀಕರಿಸುತ್ತಾರೆ. ಅದು ನಿರಂತರ ಪ್ರಕ್ರಿಯೆಯಾಗಬೇಕು. ಇದನ್ನು ಸರಕಾರ, ಅಕಾಡೆಮಿ, ವಾರ್ತಾ ಇಲಾಖೆ ಆಗುಗೊಳಿಸಬೇಕು.'

## ಅಭಿನಯಕ್ಕಿಂತ ಗಿಮಿಕ್ ವೈಭವಿಸಿದರೆ ನಿರಾಸೆ

ಪ್ರಯೋಗಶೀಲತೆ ಹೆಸರಿನಲ್ಲಿ ಕಸರತ್ತು ನಡೆಸುವ ಮನಸ್ಸುಗಳ ಬಗ್ಗೆ ಪ್ರಸ್ತಾಪಿಸಿದರೆ ರಂಗಭೂಮಿಯ ನೈಜ ಕಾಳಜಿ ಮುಲಾಜಿಲ್ಲದೆ ಪ್ರತಿರೋಧಿಸುವುದು ಹೀಗೆ: 'ಆಧುನಿಕ ರಂಗ ಪ್ರಯೋಗಗಳ ಹೆಸರಲ್ಲಿ ಅಭಿನಯಕ್ಕಿಂತ ತಾಂತ್ರಿಕ ವಿನ್ಯಾಸ, ಗಿಮಿಕ್‌ಗಳನ್ನೇ ಪ್ರಧಾನವಾಗಿಸಿಕೊಂಡ ಕೆಲ ನಿರ್ದೇಶಕರು ತಮ್ಮ ನೂತನ ಪ್ರಯೋಗಗಳಿಂದ ಪ್ರೇಕ್ಷಕರಲ್ಲಿ ನಿರಾಸೆಯನ್ನು ಮೂಡಿಸುವುದರಲ್ಲಿ ಸಫಲರಾಗಿದ್ದಾರೆ. ಇನ್ನೇನಲ್ಲ'.

ರಂಗಭೂಮಿಯಲ್ಲಿ ನಟ ಮತ್ತು ಪ್ರೇಕ್ಷಕ ಎರಡು ಪ್ರಮುಖ ಘಟಕಗಳಾದ್ದರಿಂದ ನಟನ ಅಭಿನಯ ರಂಗಕೃತಿಯ ಜೀವಾಳ. ಮಿಕ್ಕಿದ್ದೆಲ್ಲ ಕೃತಿಗೆ ಪೂರಕವಷ್ಟೇ. ಹಿಂದೊಮ್ಮೆ ನಟನೇ ರಂಗಭೂಮಿಯಲ್ಲಿ ಪ್ರಧಾನವಾಗಿ ಮೆರೆದದ್ದಿದೆ. ಆಗ ನಿರ್ದೇಶಕನ ಪಾತ್ರ ತುಂಬ ಗೌಣವಾಗಿತ್ತು. ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಕಾಣಿಸಿಕೊಂಡ ನಿರ್ದೇಶಕ

ಇಪ್ಪತ್ತನೇ ಶತಮಾನದಲ್ಲಿ ಪ್ರಬಲನಾದ. ನಾಟಕ, ಲಿಖಿತ ಕೃತಿ ರಂಗಭೂಮಿಯಲ್ಲಿ ಪ್ರದರ್ಶಿಸಿದಾಗ ರಂಗಕೃತಿಯಾಗುತ್ತದೆ. ಲಿಖಿತ ನಾಟಕದ ಕರ್ತೃ ಲೇಖಕನಾದರೆ ಅದರ ರಂಗರೂಪದ ಕರ್ತೃ ನಿರ್ದೇಶಕ ಎಂದಾಯಿತು. ನಿರ್ದೇಶಕ ಲಿಖಿತ ನಾಟಕವನ್ನು ರಂಗರೂಪಕ್ಕಿಳಿಸುವಾಗ ನಟರ ಅಭಿನಯದ ಜತೆ ಸಂಗೀತ, ರಂಗಸಜ್ಜಿಕೆ, ವೇಷಭೂಷಣ, ಬಣ್ಣಾಲಂಕಾರ ಮುಂತಾದ ವಿವಿಧ ಪೂರಕ ಘಟಕಗಳನ್ನು ಸೃಜನಾತ್ಮಕವಾಗಿ ಸಂಯೋಜಿಸುವ ಮುಖ್ಯಸ್ಥನಾದ. ನಟನ ಸ್ಥಾನ ಪಲ್ಲಟವಾಯಿತು. ಇಪ್ಪತ್ತನೆ ಶತಮಾನದಲ್ಲಿ ಹುಟ್ಟಿಕೊಂಡ ನಾಟಕ ಶಿಕ್ಷಣ ಸಂಸ್ಥೆಗಳು, ತರಬೇತಿ ಶಿಬಿರಗಳು ಇದನ್ನು ಪ್ರತಿಪಾದಿಸಿದವು. ಬಿ.ವಿ.ಕಾರಂತ, ಹಬೀಬ್ ತನ್ವೀರ್, ಅಲ್ಕಾಜಿ, ಶಂಭುಮಿತ್ರ ಮುಂತಾದ ನಿರ್ದೇಶಕರು ಅನೇಕ ಸೃಜನಶೀಲ ರಂಗಕೃತಿಗಳನ್ನು ಅದೇ ಮಾದರಿಯಲ್ಲಿ ನಿರ್ಮಿಸಿ ಶ್ರೇಷ್ಠ ನಿರ್ದೇಶಕರೆಂದು ಪ್ರಖ್ಯಾತರಾದರು. ರಂಗಭೂಮಿಯನ್ನು ಬೆಳಗಿಸಿದರು. ಅವರು ನಟರನ್ನು ಸಮರ್ಥವಾಗಿ ಬಳಸುವುದರೊಂದಿಗೆ ತಾಂತ್ರಿಕತೆ ಮತ್ತಿತರ ರಂಗಭೂಮಿ ಘಟಕಗಳನ್ನು ಪೂರಕವಾಗಿ ಸಂಯೋಜಿಸಿ ರಂಗಕೃತಿ ನಿರ್ಮಾಣ ಮಾಡಿದರು. ಆದರೆ ಈಚೆಗೆ ಆಧುನಿಕತೆಯ ಹೆಸರಿನಲ್ಲಿ, ವಿಶಿಷ್ಟ ಪ್ರಯೋಗವೆನ್ನಿಸಬೇಕೆಂಬ ಹಂಬಲದಲ್ಲಿ ಅಭಿನಯ ಕಡೆಗಣಿಸಿ ವಿಭಿನ್ನ ರೀತಿಯ ಗಿಮಿಕ್ಸ್‌ಗಳಿಂದ ಪ್ರೇಕ್ಷಕರ ನಿರೀಕ್ಷೆಯನ್ನು ಹುಸಿಗೊಳಿಸಿದ ಪ್ರಯೋಗಗಳು ನಡೆದಿವೆ. ಕನ್ನಡ ರಂಗಭೂಮಿಯ ಇನ್ನೊಂದು ದುರಂತವೆಂದರೆ ರಂಗಭೂಮಿಯ ಹಿತದೃಷ್ಟಿಯಿಂದ ಪರಿಣಾಮಕಾರಿಯಾದ ನಾಟಕ ರಚನೆಕಾರರು ಇಂದು ವಿರಳವಾಗಿದ್ದಾರೆ. ಗಟ್ಟಿಯಾದ ವಸ್ತುವುಳ್ಳ ಚಿಂತನೆಗೆ ಹಚ್ಚುವಂಥ ಗಂಭೀರ ನಾಟಕಗಳು ಇಂದು ಬರುತ್ತಿಲ್ಲ. ಹಿಂದೆ ಯುನಿಟಿ ಆಫ್ ಟೈಮ್, ಪ್ಲೇಸ್ ಏಂಡ್ ಆ್ಯಕ್ಷನ್ ಈ ತತ್ವದಡಿ ನಾಟಕ ರಚನೆಯಾಗುತ್ತಿತ್ತು. ಇವತ್ತು ಅದ್ಯಾವುದೂ ಅಗತ್ಯವಿಲ್ಲ. ಸಣ್ಣ ಕಥೆ, ಕಾದಂಬರಿ, ಹರಟೆ, ವಚನ ಯಾವುದೂ ಆಗಬಹುದು ಅದನ್ನಾಧರಿಸಿ ಚಲನಚಿತ್ರಕ್ಕೆ ಬರೆಯುವ ಚಿತ್ರಕಥೆಯಂತೆ ಸಣ್ಣ ಸಣ್ಣ ಸನ್ನಿವೇಶಗಳನ್ನು ಕಲೆ ಹಾಕಿ ಪ್ರಯೋಗಿಸಿ ನಾಟಕವೆನ್ನಲಾಗುತ್ತಿದೆ. ಜೀವನ ಯಾಂತ್ರಿಕವಾಗುತ್ತಿದ್ದಂತೆ ಇಂದು ಎಲ್ಲವೂ ಯಾಂತ್ರಿಕವಾಗುತ್ತಿದೆ. ರಂಗಭೂಮಿ ಅದಕ್ಕೆ ಹೊರತಾಗಿಲ್ಲ. ಎಲ್ಲ ಶೀಘ್ರವಾಗಿ ಆಗಬೇಕು. ಹೆಚ್ಚು ದುಡಿಯಲು ಪುರುಸೊತ್ತೂ ಇಲ್ಲ, ಮನಸ್ಸೂ ಇಲ್ಲ. ಹಿಂದಿನಂತೆ ರಿಹರ್ಸಲ್ ನಡೆಸಲು ವ್ಯವಧಾನವಿಲ್ಲ. ಹಾಗಾಗಿ ಈಗ ದಿಢೀರ್ ನಾಟಕ–ಇದು ಇಂದಿನ ದುರಂತ.

## ನಾಟಕ ಕೃತಿ ಕೊಂಡು ಓದುವವರಿಲ್ಲ

ನಾಟಕ ಕೃತಿಗಳು ಕಡಿಮೆ ಪ್ರಮಾಣದಲ್ಲಿ ಪ್ರಕಟವಾಗಲು ಕಾರಣ ಪ್ರಕಟವಾದ ನಾಟಕ ಕೃತಿಗಳು ಮಾರಾಟವಾಗುವುದಿಲ್ಲ. ಕಥೆ, ಕಾದಂಬರಿಗಳಂತೆ ನಾಟಕವನ್ನು ಜನ ಓದುವುದಿಲ್ಲ. ಆಡಲು ಬಯಸುವವರು ಮಾತ್ರ ಮೂರ್‍ನಾಲ್ಕು ಪ್ರತಿಗಳನ್ನು ಖರೀದಿಸುತ್ತಾರೆ. ಕೆಲವರು ಒಂದೇ ಪ್ರತಿ ಖರೀದಿಸಿ ಝೆರಾಕ್ಸ್ ಮಾಡಿಕೊಳ್ಳುತ್ತಾರೆ. ನಾಟಕ ಬರೆಯುವವರೂ ಕಡಿಮೆಯಾಗುತ್ತಿದ್ದಾರೆ. ಕಥೆ, ಕಾದಂಬರಿಗಳನ್ನು ರೂಪಾಂತರಿಸಿ ನಾಟಕ ಮಾಡುವವರು ಹೆಚ್ಚಾಗಿದ್ದಾರೆ. ಬೇರೆ ಭಾಷೆಯ ನಾಟಗಳನ್ನು ರೂಪಾಂತರಿಸಿ ನಾಟಕ ಆಡುತ್ತಾರೆ.

ಒಂದಿಬ್ಬರು ಪ್ರಮುಖ ಕನ್ನಡ ನಾಟಕಕಾರರನ್ನು ಹೊರತುಪಡಿಸಿದರೆ ಈಗ ನಾಟಕದ ಬೆಳೆ ಚೆನ್ನಾಗಿಲ್ಲ ಅನ್ನಿಸುತ್ತದೆ. ನಾಟಕದ ವಸ್ತು ಪ್ರಸ್ತುತಿಯಲ್ಲಿ ಬದಲಾವಣೆಗಳಾಗುತ್ತಿವೆ. ಆದರೆ ಹಿಂದಿನ ಗಟ್ಟಿತನ, ಅನನ್ಯತೆ ಕಾಣೆಯಾಗಿದೆ. ಪ್ರಯೋಗಾತ್ಮಕವಾಗಿ ಮುನ್ನಡೆ, ಪರಿಣಾಮದಲ್ಲಿ ಹಿನ್ನಡೆ–ಇದು ಇಂದಿನ ಆಧುನಿಕ ನಾಟಕಗಳ ಪರಿಸ್ಥಿತಿಯಾಗಿದೆ. ಬೇರೆ ಕಲಾ ಪ್ರಕಾರಗಳ ಜತೆ ನಾಟಕವನ್ನು ಜೋಡಿಸುವ ಅಥವಾ ಅಳವಡಿಸುವ ಪ್ರಯೋಗಗಳೂ ನಡೆದಿವೆ. ಇವೆಲ್ಲ ಜರುಗುವುದು ಆಧುನಿಕತೆಯ ಹೆಸರಿನಲ್ಲಿ!

## ನಿರ್ದೇಶಕ–ನಟರದು ಗುರು–ಶಿಷ್ಯ ಸಂಬಂಧ

'ನಾಟಕದ ಯಶಸ್ಸಿಗೆ, ನಾಟಕ ತಂಡದ ಬಾಳಿಕೆಗೆ ನಿರ್ದೇಶಕ ಹಾಗೂ ನಟರ ನಡುವಣ ಸಂಬಂಧ ಗುರು ಶಿಷ್ಯರಂತಿರಬೇಕು ಎಂದು ನಂಬಿದವರು ಸುವರ್ಣರು. ನಟರಿಂದ ಪಾತ್ರಗಳನ್ನು ತನ್ನ ಕಲ್ಪನೆಯ ನೆಲೆಯಲ್ಲಿ ರಂಗಕ್ಕೊಪ್ಪಿಸುವ ನಿಟ್ಟಿನಲ್ಲಿ ನಿರ್ದೇಶಕರು ಪರಿಶ್ರಮಿಸುತ್ತಾರೆ. ಈ ಸಂದರ್ಭ ನಟರು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ತಿದ್ದಿ ತೀಡುವ ಗುರುವಾಗಿರುವ ನಿರ್ದೇಶಕನಿಗೆ ಸಂಪೂರ್ಣವಾಗಿ ಶರಣಾಗಿರಬೇಕಾಗುತ್ತದೆ. ಇಲ್ಲಿ ಪೂರ್ಣ ಮನಸ್ಸಿನ ವಿಧೇಯತೆ ಇದ್ದಾಗಲೇ ನಟರು ಮಾಗುತ್ತಾರೆ, ಪಕ್ವಗೊಳ್ಳುತ್ತಾರೆ' ಎನ್ನುವುದು ಸುವರ್ಣರ ಅನುಭವೋಕ್ತಿ. ಸುವರ್ಣರ ಸಲಹೆಗಳನ್ನು ನಟರು, ಶಿಷ್ಯಂದಿರು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡು ಪಾತ್ರ ಸೃಷ್ಟಿಯಲ್ಲಿ ತೊಡಗಿಕೊಂಡಿದ್ದರಿಂದಲೇ ಸುವರ್ಣರಿಗೆ ಉತ್ಕೃಷ್ಟ ಕೊಡುಗೆಗಳನ್ನು ನೀಡುವುದಕ್ಕೆ ಸಾಧ್ಯವಾಗಿದೆ.

'ನಾನು ಮೊಗವೀರ ಶಾಲೆಯಲ್ಲಿ ಅಧ್ಯಾಪಕನಾಗಿದ್ದುದರಿಂದ ಶಾಲೆ ವಿದ್ಯಾರ್ಥಿ ಮತ್ತು ಹಳೆ ವಿದ್ಯಾರ್ಥಿಗಳಾದ ಅವರೆಲ್ಲರಿಗೆ ನಾನು ಮೇಷ್ಟ್ರಾಗಿದ್ದೆ. ಆಮೇಲೆ ಕೂಡ ಕನ್ನಡ ಕಲಾಕೇಂದ್ರ, ರಂಸಗ್ಥಳ, ಸಾಂಸ್ಕೃತಿಕ ಪ್ರತಿಷ್ಠಾನ...ಮುಂತಾದ ಸಂಸ್ಥೆಗಳ ನೇತೃತ್ವದಲ್ಲಿ ನಾಟಕ ನಿರ್ದೇಶಿಸುವಾಗಲೂ ನಾನು ಮೇಷ್ಟ್ರಾಗಿಯೇ ಉಳಿದಿದ್ದೇನೆ. ಇಲ್ಲಿ, ಮಂಗಳೂರಲ್ಲೂ ಅದು ಮುಂದುವರಿದಿದೆ. ಒಂದು ರೀತಿಯಲ್ಲಿ ಅದು ನಟರನ್ನು ತರಬೇತುಗೊಳಿಸುವಾಗ ಸಹಕಾರಿಯಾಗಿದೆ' ಎಂದು ಸುವರ್ಣರು ಸತ್ಯದೆಡೆಗೆ ದೃಷ್ಟಿ ಒಯ್ಯುವುದು ಮನನೀಯವಾಗಿದೆ.

'ಪಾತ್ರವನ್ನು ಪ್ರೀತಿಸುವುದು ಬಿಡಿ, ಅದರ ಒಳಹೊಕ್ಕುವ, ಅನುಭವಿಸುವ ಕೆಲಸವೇ ಈಗ ನಡೆಯುತ್ತಿಲ್ಲ! ತ್ಯಾಗ, ಏಕಾಗ್ರತೆ, ನಿಷ್ಠೆ, ತಾಳ್ಮೆ, ಪ್ರಯೋಗಶೀಲತೆಗೊಡ್ಡಿಕೊಳ್ಳುವ ಉತ್ಸಾಹ ಈಗಿನ ಕಲಾವಿದರಲ್ಲಿ ಇಲ್ಲ. ಹೆಸರು ಬೇಕು. ಅದಕ್ಕಾಗಿ ನಾಟಕ ಬೇಕು. ಸಾಮಾನ್ಯವಾಗಿ ನಾಟಕದಿಂದ ನಾಟಕಕ್ಕೆ ತಂಡವೂ ಬದಲಾಗುವುದರಿಂದ ಕಲಾವಿದರಿಂದ ನಿರ್ದೇಶಕನ ನಿಯಂತ್ರಣ ತಪ್ಪುತ್ತದೆ ಎಂದು ಹೇಳುತ್ತಿದ್ದ, ಅಂತೆಯೇ ಹೊಸ ಹೊಸ ತಂಡ ಕಟ್ಟಿ ನಾಟಕವಾಡಿಸುತ್ತಿದ್ದ ಬಿ.ವಿ.ಕಾರಂತರ ನಿಲುವು ಸರಿಯಾದದ್ದೇ ಅಂತ ಎಷ್ಟೋ ಬಾರಿ ಅನ್ನಿಸುತ್ತದೆ' ಎಂದೂ ಸುವರ್ಣರು ವಾದಕ್ಕಿಳಿಯುತ್ತಾರೆ. ಹತಾಶೆಯನ್ನೇ ಹೊತ್ತು ಕೂತುಬಿಡುತ್ತಾನೆ.

ಸುವರ್ಣರ ದಿಗ್ದರ್ಶನದ ವೈಖರಿಯನ್ನು ಕಂಡು ಮೆಚ್ಚಿದ, 'ಗುಡ್ಡದಭೂತ' ಧಾರಾವಾಹಿಯಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ, ಸ್ವತಃ ರಂಗನಿರ್ದೇಶಕರೂ ಆಗಿರುವ ಶ್ರೇಷ್ಠ ಸಾಹಿತಿ, ಕವಿ, ಕಲಾವಿದ, ಪ್ರಾಧ್ಯಾಪಕ ಉದ್ಯಾವರ ಮಾಧವ ಆಚಾರ್ಯರು ಸುವರ್ಣರನ್ನು ಕಟ್ಟಿಕೊಡುವುದು ಹೀಗೆ: 'ಶ್ರೀ ಸದಾನಂದ ಸುವರ್ಣ ಅವರ ಕಲಾನಿಷ್ಠೆ, ಮಾಧ್ಯಮದ ಮೇಲಿನ ಹಿಡಿತ, ತನ್ನ ವಸ್ತುವನ್ನು ಒಂದು ರಂಗ ನೋಟವಾಗಿಸಿದ ಕಾಳಜಿ ನನಗೆ ಅನೇಕ ಪಾಠಗಳನ್ನು ಕಲಿಸಿದವು. ಮುಖ್ಯವಾಗಿ ನನ್ನ ನಟನೆಯಲ್ಲಿದ್ದ ಸಹಜತೆಯ ಕೊರತೆ ಅವರ ರಂಗನಿರ್ದೇಶನದಿಂದ ನನ್ನ ಅರಿವಿಗೆ ಬರುವುದು ಸಾಧ್ಯವಾಯಿತು. ನಾನು ಸುವರ್ಣರಿಂದ ಸಾಕಷ್ಟು ಕಲಿತೆ. ಇದಕ್ಕಿಂತ ಮಿಗಿಲಾಗಿ ಅವರ ಅಂತಃಕರಣ ನನ್ನ ಮನಸ್ಸನ್ನು ತುಂಬಿದೆ. ಕನ್ನಡ ಚಲನಚಿತ್ರ ಪ್ರಪಂಚದಲ್ಲಿ ಮತ್ತು ರಂಗಭೂಮಿಯಲ್ಲಿ ಶ್ರೀ ಸದಾನಂದ ಸುವರ್ಣ ಅವರು ಒಬ್ಬ ಕ್ರಿಯಾಶೀಲ ಸೃಷ್ಟಿಗಾರ. ಅವರನ್ನು ನಾಡಿನ ಕಲಾ ಪ್ರಪಂಚ ಇನ್ನಷ್ಟು ದುಡಿಸಿಕೊಳ್ಳಬೇಕು ಎಂಬುದು ನನ್ನ ಆಶಯ.' ಈ ರೀತಿ ಪ್ರತಿಕ್ರಿಯೆ ಅವರ ಸಂಪರ್ಕಕ್ಕೆ ಬಂದ ಎಲ್ಲ ಕಲಾವಿದರದ್ದೂ ಹೌದು.

## ನಾಟಕದ ಘಟಕ ಪ್ರೇಕ್ಷಕರು

'ಪ್ರೇಕ್ಷಕರು – ಬಹಳ ಮುಖ್ಯ. ನಾಟಕದ ಘಟಕ ಅವರು. ಪ್ರೇಕ್ಷಕ ವರ್ಗ ಕೂಡ ನಾಟಕದ ಪರ್ಫಾರ್ಮೆನ್ಸ್‌ನಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಒಂದು ನಾಟಕಕ್ಕೆ ಮಂಗಳೂರು ಟೌನ್ ಹಾಲ್‌ನಲ್ಲಿ ಏರ್ಪಡಿಸಿದ ನಾಟಕ ಪ್ರದರ್ಶನಕ್ಕೆ ದೊರೆತ ಪ್ರತಿಕ್ರಿಯೆ ಮುಂಬಯಿಯಲ್ಲಿ ಪ್ರದರ್ಶನವಾದಾಗ ದೊರೆಯುತ್ತದೆ ಎಂದು ಹೇಳುವಂತಿಲ್ಲ. ಕೆಲವೊಂದು ಕಡೆ ನಾಟಕದ ಡೈಲಾಗ್ ಪಂಚ್ ಆಗ್ತದೆ. ಇನ್ನೊಂದು ಕಡೆ ಆಗದೇ ಇರಬಹುದು. ಆದರೆ ನಟರು ಪ್ರತಿಕ್ರಿಯೆ ಬಗ್ಗೆ ಕಾನ್ಶಿಯಸ್ ಆಗಿರ್ತಾರೆ. ಅದರ ಬಗ್ಗೆ ಮಾತಾಡಿಕೊಳ್ತಾರೆ. ಅದೇ ಗುಂಗಿನಲ್ಲಿದ್ದರೆ ಪ್ರತಿಕ್ರಿಯೆ ದೊರೆಯದೇ ಇದ್ದ ಸಂದರ್ಭ ಭ್ರಮೆನಿರಸನವಾಗಬಹುದು. ಪ್ರೇಕ್ಷಕರ ರೆಸ್ಪಾನ್ಸ್ ಬೇರೆ ಬೇರೆ ಕಡೆ ಬೇರೆ ಬೇರೆ ಥರ. ಕೆಲವು ಸಂದರ್ಭದಲ್ಲಿ ಎಲ್ಲೆಡೆಯ ಅಭಿಪ್ರಾಯ ಒಂದೇ ಥರ ಇರ್ತದೆ. 'ಸತ್ಯಂ ವದ ಧರ್ಮಂ ಚರ' ಟೂರ್ ಮಾಡಿದಾಗ ಈ ಅನುಭವ ದೊರೆತಿದೆ. ಎಲ್ಲ ಕಡೆ ಲೈಕ್ ಮಾಡಿ ಜನ ಮುತ್ತುತ್ತಿದ್ದರು. 'ದರ್ಜಿ ಸೂಟ್ ಹೊಲಿದು ಕೊಡ್ತೇವೆ. ನಿಮ್ಮಂಥ ಪ್ರಿನ್ಸಿಪಾಲ್ ಇದ್ದರೆ ನನ್ನ ಮಗ ಉದ್ಧಾರವಾಗುತ್ತಿದ್ದ ಎಂದೆಲ್ಲ ಮೆಚ್ಚಿಗೆ ಸೂಚಿಸುತ್ತಿದ್ದರು. ಕಲಾವಿದರು ಪ್ರೇಕ್ಷಕರ ಮೇಲೆ ಜಾಸ್ತಿ ಗಮನ ಕೊಡಬಾರದು. ಒಂದು ಕಡೆಯ ಪ್ರತಿಕ್ರಿಯೆಯನ್ನು ತಲೆಯಲ್ಲಿಟ್ಟುಕೊಂಡು ಇನ್ನೊಂದು ಕಡೆ ನಿರೀಕ್ಷಿಸಿದರೆ ಅಲ್ಲಿ ಆ ರೀತಿಯ ಪ್ರತಿಕ್ರಿಯೆ ಬಾರದಿದ್ದಾಗ ಅವರು ಸಪ್ಪೆ ಆಗಿಬಿಡ್ತಾರೆ. ಸೈಕಾಲಜಿ ಕೆಲಸ ಮಾಡ್ತದೆ ಕಲಾವಿದರಿಗೆ. ಆದ್ದರಿಂದ ಪ್ರತಿಕ್ರಿಯೆಯನ್ನು ಗಮನಿಸದೆ, ಪ್ರತಿ ಪ್ರದರ್ಶನ ಕೂಡ ಹೊಸತೇ ಅನ್ನುವಂತೆ ಗಮನದಲ್ಲಿಟ್ಟುಕೊಂಡು ಅಭಿನಯಿಸುವುದು ಉಚಿತ ಮಾರ್ಗ'. ಇಷ್ಟಕ್ಕೇ ಆಚಾರ್ಯವಾಣಿ ನಿಲ್ಲುವುದಿಲ್ಲ. ಅದೇ ಕಾರ್ಯಗತಗೊಳ್ಳಬೇಕು ಎಂದು ಹಾರೈಸುತ್ತದೆ.

## ರಂಗಭೂಮಿ–ಸಿನೆಮಾ ನಟ ನಟಿಯರ ವಿಭಿನ್ನತೆ, ವಿಶೇಷತೆ

'ನಾಟಕವಾಗಲಿ, ಸಿನೆಮಾ ಆಗಲಿ, ಧಾರಾವಾಹಿ ಆಗಲಿ ಪಾತ್ರಕ್ಕೆ ಸೂಕ್ತ ನಟ ನಟಿಯರ ಆಯ್ಕೆ ಮುಖ್ಯ. ಪ್ರತಿಭಾವಂತರು ಸಿಕ್ಕರೆ ಒಳ್ಳೇದು. ಪಾತ್ರಕ್ಕೆ ಸರಿಯಾದ ಅಥವಾ ಒಪ್ಪುವ ರೂಪವೂ ಅಗತ್ಯ. ಅಂಥವರಿಗೆ ಅಭಿನಯ ಕಲಿಸಬಹುದು. ನಾಟಕದಲ್ಲಿ ನಟರು ರಂಗದಲ್ಲಿರುವಷ್ಟು ಹೊತ್ತು ಆಯಾ ಪಾತ್ರವಾಗಿಯೇ ಉಳಿಯಬೇಕಲ್ಲದೆ ಬೇರೆ ಪಾತ್ರಗಳ ಜತೆ ಸಂವಾದ ಮಾಡುತ್ತಿರಬೇಕಾದ್ದರಿಂದ ಅವರ ಶ್ರವಣ, ಸ್ಮರಣಶಕ್ತಿ ಚೆನ್ನಾಗಿರಬೇಕು. ರಂಗನಟರ ಧ್ವನಿ ಚೆನ್ನಾಗಿರಬೇಕು. ಯಾಕೆಂದರೆ ಅವರ ಮಾತುಗಳು ಸಭಾಗೃಹದಲ್ಲಿ ಹಿಂದಿನ ಸಾಲಿನಲ್ಲಿ ಕುಳಿತ ಪ್ರೇಕ್ಷಕರಿಗೂ ಕೇಳಬೇಕಾದ ಅವಶ್ಯಕತೆ ಇದೆ. ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ಅವರ ಧ್ವನಿ ಚೆನ್ನಾಗಿಲ್ಲವಾದರೆ ಬೇರೆಯವರಿಂದ ಡಬ್ ಮಾಡಲು ಅವಕಾಶವಿದೆ. ಅಲ್ಲದೆ ಸಿನಿಮಾ ಧಾರಾವಾಹಿಗಳಲ್ಲಿ ಸಣ್ಣ ಸಣ್ಣ ಚಿತ್ರಿಕೆಗಳಾಗಿ ಚಿತ್ರೀಕರಿಸಿ ನಂತರ ಜೋಡಿಸಿ ಸಂಕಲನ ಮಾಡುವುದರಿಂದ ನಟನಟಿಯರು ನಾಟಕದ ಹಾಗೆ ಸಂಭಾಷಣೆಗಳನ್ನು ಬಾಯಿ ಪಾಠ ಮಾಡುವ ಅಗತ್ಯವಿಲ್ಲ. ಆಯಾ ಶಾಟ್ಸ್‌ನ ಮಾತುಗಳನ್ನಷ್ಟೆ ಬಾಯಿಪಾಠ ಮಾಡಿ ಒಪ್ಪಿಸಿದರಾಯ್ತು. ಅಲ್ಲೂ ತಪ್ಪಾದರೆ ರಿಟೇಕ್ ಮಾಡಿ ಸರಿಪಡಿಸಬಹುದು. ಆದರೆ ನಾಟಕದಲ್ಲಿ ನಟನು ಸರಿಯಾಗಿಯೇ ಜಾಗ್ರತೆಯಿಂದ ಮಾತುಗಳನ್ನು ಆಡಬೇಕು. ತಪ್ಪಾದರೆ ರಿಟೇಕ್ ಇಲ್ಲ ! ಅಭಿನಯದಲ್ಲೂ ವ್ಯತ್ಯಾಸವಿದೆ. ನಾಟಕದಲ್ಲಿ ಅವನು ಅಭಿನಯಿಸುವುದು ಸ್ವಲ್ಪ ಲೌಡ್ (ಅತಿಯಾಗಿ) ಆಗಿರಬೇಕಾಗುತ್ತದೆ. ಸಭಾಗೃಹದ ಕೊನೇ ಸಾಲಿನ ಪ್ರೇಕ್ಷಕನಿಗೂ ಮುಖಭಾವ ಅಥವಾ ಅಭಿನಯ ಕಾಣುವಂತಿರಬೇಕು. ಆದರೆ ಚಲನಚಿತ್ರ ಮತ್ತು ಧಾರಾವಾಹಿಗಳಲ್ಲಿ ಅಭಿನಯ ಅತಿಯಾಗಿ ಮಾಡಬಾರದು. ಯಾಕೆಂದರೆ ಸಮೀಪ ಚಿತ್ರ ಕ್ಲೋಸ್ ಅಪ್‌ನಲ್ಲಿ ಚಿತ್ರೀಕರಿಸುವುದರಿಂದ ಮುಖ್ಯವಾಗಿ ಕಣ್ಣಿನ ಅಭಿನಯ ಸ್ವಲ್ಪ ಅತಿಯಾದರೂ ವಿಕಾರವಾಗಿ ಕಾಣುವ ಅಪಾಯವಿದೆ. ನಾಟಕದಲ್ಲಿ ಹೆಚ್ಚು ರಿಹರ್ಸಲ್, ತರಬೇತಿಯ ಅವಶ್ಯಕತೆ ಯಿರುವುದರಿಂದ ನಟನಟಿಯರನ್ನು ಆಯ್ಕೆ ಮಾಡುವಾಗ ಇದನ್ನವರಿಗೆ ಮನದಟ್ಟು ಮಾಡಿಸಬೇಕು. ಅದಕ್ಕೊಪ್ಪುವವರನ್ನು ಆಯ್ಕೆ ಮಾಡಿದರೆ ಒಳಿತು. ಇಲ್ಲವಾದರೆ ಸಾಕಷ್ಟು ರಿಹರ್ಸಲ್ ಮಾಡಲಾಗದೆ ನಿರ್ದೇಶಕನ ತಲೆ ಬಿಸಿಗೆ ಕಾರಣವಾಗುವುದಲ್ಲದೆ ನಾಟಕದ ಪ್ರಯೋಗವೂ ಕೆಟ್ಟು ಹೋಗುವ ಸಂಭವವಿದೆ'.

## ವಿಮರ್ಶೆಗೆ ಮುಕ್ತ ಮುಕ್ತ

ಸುವರ್ಣರು ಆರೋಗ್ಯಕರ ರಂಗ ವಿಮರ್ಶೆಯನ್ನು ಬಯಸುತ್ತಾರೆ. ಆದ್ದರಿಂದಲೇ ಅವರು ರಂಗ ಪ್ರಯೋಗದ ಬಳಿಕ ಕಲಾವಿದರನ್ನೆಲ್ಲ ಕರೆಯಿಸಿ ಒಂದು ಕಾರ್ಯಕ್ರಮ ಏರ್ಪಡಿಸುತ್ತಾರೆ, ಒಂದು ರೀತಿಯಲ್ಲಿ ನಾಟಕದ ಪೋಸ್ಟ್‌ಮಾರ್ಟಂ ನಡೆಸುತ್ತಾರೆ. ನಾಟಕ ನೋಡಿದ ಪ್ರೇಕ್ಷಕರಿಂದ ದೊರೆತ ಪ್ರತಿಕ್ರಿಯೆಗಳನ್ನು ಕಲಾವಿದರಿಂದ ಪಡೆಯುತ್ತಾರೆ. ಮತ್ತು ಆ ಪ್ರತಿಕ್ರಿಯೆಯಲ್ಲಿ ಯಾವುದು ಸೂಕ್ತ ಯಾವುದು ಅಲ್ಲ ಅನ್ನುವುದನ್ನು ನಿರ್ಧರಿಸುವ ಸುವರ್ಣರು ಸೂಕ್ತವೆನ್ನಿಸಿದ್ದು ಕಂಡರೆ ಮಾತ್ರ ಮುಂದಿನ ಪ್ರಯೋಗದಲ್ಲಿ

ಆ ಬದಲಾವಣೆಯನ್ನು ಮಾಡುತ್ತಾರೆ. ಪ್ರೇಕ್ಷಕರು ನಾಟಕವನ್ನು ನೋಡಿದ ಬಗೆ, ಅನುಭವದ ಹಿನ್ನೆಲೆಯಲ್ಲಿ ಅಭಿಪ್ರಾಯವನ್ನು ನೀಡುತ್ತಾರೆ. ತಂಡದ ಸದಸ್ಯರು ತಿಂಗಳುಗಟ್ಟಲೆ ನಾಟಕ ತಾಲೀಮು ನಡೆಸಿದ ಸಂದರ್ಭ ಆ ನಾಟಕದ ಬಗ್ಗೆ ಸ್ಪಷ್ಟವಾಗಿರುತ್ತಾರೆ. ಆದರೆ ಭಿನ್ನವಾಗಿ ಆಲೋಚಿಸಿ, ಹೊಸ ಹೊಳಹನ್ನು ಬಿತ್ತಿದರೆ ಅವನ್ನು ಮುಕ್ತವಾಗಿಯೇ ಸ್ವೀಕರಿಸುತ್ತಾರೆ. ಪ್ರಯೋಗವನ್ನು ಇನ್ನಷ್ಟು ಗಟ್ಟಿಗೊಳಿಸುವಲ್ಲಿ ಆ ಸಲಹೆಗಳನ್ನು ಸ್ವೀಕರಿಸುತ್ತಾರೆ. ನಾಟಕದ ನಂತರ ನಿರ್ದೇಶಕ ಹಾಗೂ ಕಲಾವಿದರ ಕೂಟ, ಚರ್ಚೆ ಅತ್ಯಗತ್ಯ ಎಂದೇ ಪ್ರತಿ ನಾಟಕ ಪ್ರದರ್ಶನವಾದ ಒಂದೆರಡು ದಿನಗಳಲ್ಲೇ ಸಭೆ ನಡೆಸುತ್ತಾರೆ.

'ಪತ್ರಿಕೆಗಳು ರಂಗಭೂಮಿಯ ಪ್ರಸಾರಕ್ಕೆ, ಪ್ರಚಾರಕ್ಕೆ, ಬೆಳವಣಿಗೆಗೆ ಪೂರಕವಾಗಿರುತ್ತವೆ. ಹವ್ಯಾಸಿ ರಂಗಭೂಮಿಯ ಜೀವಂತಿಕೆಗೆ, ಚಲನಶೀಲತೆಗೆ ಪತ್ರಿಕೆಗಳ ಅಗತ್ಯ ಇದ್ದೇ ಇದೆ. ನಾಟಕ ಹಾಗೂ ಪ್ರೇಕ್ಷಕರ ನಡುವಣ ಸೇತುವಾಗುವ ಬಗೆಯಲ್ಲಿ ಪತ್ರಿಕೆಗಳು ಇರಬೇಕಾಗುತ್ತದೆ. ಅಂದರೆ ನಾಟಕದ ವಿಮರ್ಶೆ ನಾಟಕದ ಬೆಳವಣಿಗೆಗೆ ಅಥವಾ ನಾಟಕದ ಸುಧಾರಣೆಗೆ ಪೂರಕವಾಗುವ ಹಾಗಿರಬೇಕು. ನಾಟಕದ ಒಳ್ಳೆ ಅಂಶಗಳನ್ನು ಪ್ರೇಕ್ಷಕರಿಗೆ ತಿಳಿಸುವ ಜವಾಬ್ದಾರಿ ವಿಮರ್ಶಕರಿಗೆ ಇರುತ್ತದೆ. ಅದಕ್ಕೆ ಅವರು ನಾಟಕಗಳನ್ನು ರಂಗಭೂಮಿಯ ವಿವಿಧ ಸಿದ್ಧಾಂತಗಳನ್ನು ಅರಿತಿದ್ದರೆ ಅದು ಸಹಾಯಕವಾಗುತ್ತದೆ. ಅದೇ ನಾಟಕವನ್ನು ಒಳ್ಳೆಯದಿದೆ ಅಥವಾ ಕೆಟ್ಟದಿದೆ, ಕೆಲವು ಪಾತ್ರಗಳು ಚೆನ್ನಾಗಿಲ್ಲ, ಕೆಲವು ಚೆನ್ನಾಗಿವೆ ಎಂದು ಬರೆದರೆ ಪ್ರಯೋಜನವಾಗುವುದಿಲ್ಲ. ಬರೇ ಹೊಗಳಿಕೆ, ತೆಗಳಿಕೆ ಅಭಿಪ್ರಾಯ ಬೇಕಿಲ್ಲ. ವಿಮರ್ಶೆ ವಸ್ತುನಿಷ್ಠವಾಗಿರಬೇಕು. ವಿಮರ್ಶೆ ಬರೆಯುವ ಮೊದಲು ನಾಟಕದ ಕೆಲವೊಂದು ವಿಷಯಗಳನ್ನು ನಿರ್ದೇಶಕರಿಂದ ತಿಳಿದುಕೊಂಡು ವಿಮರ್ಶಿಸಿದರೆ ರಂಗಭೂಮಿಯ ಹಿತದೃಷ್ಟಿಯಿಂದ ಶ್ರೇಯಸ್ಕರ' ಎನ್ನುವ ಸುವರ್ಣರು ನೀಡುವ ಸಲಹೆ ಇದು.

ಸುವರ್ಣರು ತಾವೂ ಅನ್ಯರನ್ನು ವೃಥಾ ಹೊಗಳುವುದಿಲ್ಲ. ಹಾಗಂತ ಕಟುವಾಗಿ ವಿಮರ್ಶಿಸುವುದೂ ಇಲ್ಲ. ಅವರು ವಾಸ್ತವವಾದಿ. ಇದ್ದದ್ದನ್ನು ಇದ್ದ ಹಾಗೆ ಹೇಳುವವರು. ಮೆಚ್ಚಿಸುವಿಕೆ, ಪೂಸಿ ಹೊಡೆಯುವಿಕೆ ಅವರಿಗೆ ಗೊತ್ತಿಲ್ಲ. ಕೆಲವೊಮ್ಮೆ ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಮೌನಕ್ಕೆ ಶರಣಾಗುವುದೂ ಇಲ್ಲದಿಲ್ಲ. ಕೆಲವರು ವಿಮರ್ಶೆಯನ್ನು, ಪ್ರತಿಕ್ರಿಯೆಯನ್ನು ಆರೋಗ್ಯಕರವಾಗಿ ಸ್ವೀಕರಿಸುವುದಿಲ್ಲ ಎನ್ನುವುದೂ ಅವರಿಗೆ ಚೆನ್ನಾಗಿ ಗೊತ್ತಿದೆ. ಮತ್ತೆ ಕೆಲವರಿಗೆ ವಿಮರ್ಶಿಸುವುದಕ್ಕೂ ಬರುವುದಿಲ್ಲ ಎಂಬುದೂ ತಿಳಿದಿದೆ. 'ಕೆಲವೊಮ್ಮೆ ವಿಮರ್ಶಕರು ಅನ್ನಿಸಿಕೊಂಡವರು ಏನು ಬರೆಯುತ್ತಾರೋ ಅದನ್ನೇ ಜನರು ಸತ್ಯ ಅಂತ ಭ್ರಮಿಸಿಬಿಡ್ತಾರೆ. ಅದು ಸಿನಿಮಾ ಇರಬಹುದು, ನಾಟಕ ಇರಬಹುದು. ಅವನ್ನು ವಿಮರ್ಶೆ ಮಾಡುವಾಗ ಅವುಗಳ ಹಿನ್ನೆಲೆಗಳ ಬಗ್ಗೆ ಬರೆಯುವವರು ಅರಿತಿರಲೇ ಬೇಕು. ಆಗಲೇ ವಸ್ತುನಿಷ್ಠವಾಗಿ ವಿಮರ್ಶಿಸುವುದಕ್ಕೆ ಸಾಧ್ಯ. ಅಲ್ಲದೇ ಹೋದರೆ ಅವರು ಬರೆದದ್ದೇ ಸತ್ಯ ಅಂತ ಸಿನಿಮಾ–ನಾಟಕ ನೋಡದ ಮಂದಿ ಭಾವಿಸಿಬಿಡ್ತಾರೆ. ಆದರೆ ನೋಡಿದ ಮಂದಿ ಅದಕ್ಕೆ ಸರಿಯಾದ ಉತ್ತರ ಕೊಟ್ಟೇ ಕೊಡ್ತಾರೆ'–ಎಂಬುದನ್ನು ಸುವರ್ಣರು ಆಗಾಗ್ಗೆ ಹೇಳುವುದಿದೆ.

'ಯಾವುದೇ ರಂಗದ ಬಗ್ಗೆ ಆಗಲಿ ವಿಮರ್ಶೆ ಅಗತ್ಯವೇ. ವಿಮರ್ಶಕ ತಜ್ಞನಾಗಿರಬೇಕು. ವಿಮರ್ಶಕನಿಗೆ ಆ ಮಾಧ್ಯಮದ ಬಗ್ಗೆ ತಿಳಿದಿರಬೇಕು. ಸಿನಿಮಾ ಅಥವಾ ರಂಗ ನಿರ್ದೇಶಕರ ಒಳ ನೋಟಗಳನ್ನು ಅರಿತಿರಬೇಕು. ಅಲ್ಲದೇ ಹೋದರೆ ನಿರ್ದೇಶಕರ ಜತೆ ಸಂವಾದಿಸಿ ಬರೆಯಬಹುದು. ರಂಗದ ವಿಭಿನ್ನ ಆಯಾಮಗಳು ಅವರಿಗೆ ಗೊತ್ತಿರಬೇಕು. ಅವರಿಗೊಂದು ಸಾಮಾಜಿಕ ಜವಾಬ್ದಾರಿ ಇರಬೇಕು. ಕೃತಿಗೆ ಹಾನಿ ಮಾಡದೆ ಸಾಮಾಜಿಕ ಬದ್ಧತೆಯೊಂದಿಗೆ ಬರೆಯಬೇಕು. ಅದೇ ರೀತಿಯಲ್ಲಿ ಕೃತಿಕಾರರೂ ಸಾಮಾಜಿಕ ಜವಾಬ್ದಾರಿಯೊಂದಿಗೇ ತಮ್ಮ ಕೃತಿಗಳನ್ನು ಲೋಕಕ್ಕೆ ಅರ್ಪಿಸಬೇಕು.' (ವಿಜಯ ಕರ್ನಾಟಕ, ಜ.15, 2010)

ಸುವರ್ಣರು ಮುಂದುವರಿಯುತ್ತಾರೆ; ಅಧ್ಯಯನಾಸಕ್ತರಿಗೆ ದಕ್ಕಿಸುತ್ತಾರೆ: 'ಸಮಕಾಲೀನ ನಿರ್ದೇಶಕರಾಗಿದ್ದ, ಸಹ್ಯಾದ್ರಿಯ ಸ್ವಾಭಿಮಾನ, ಹೃದಯ ದೇಗುಲ, ಹಿಮಾಚಲದ ಹಿಂದೆ, ಭೂತಗನ್ನಡಿಗಳಂಥ ಸುಂದರ ಪ್ರಯೋಗಗಳಿಗೆ ಹೆಸರಾದ ಆರ್.ಡಿ.ಕಾಮತ್, ಬೇರೆ ಬೇರೆ ನಾಟಕಗಳನ್ನು ನೋಡುತ್ತ ಉತ್ತಮ ರಂಗಕೃತಿ ಕೊಡಮಾಡಿದ ಕೆ.ಕೆ.ಸುವರ್ಣ, ನಿರ್ದೇಶನ, ನಟನೆ, ಸಂಘಟನೆಗಳನ್ನೆಲ್ಲ ಸಮರ್ಥವಾಗಿ ನಿಭಾಯಿಸಿದ ಕೆ.ಜೆ. ರಾವ್, ಸದಸ್ಯರಾಗಿದ್ದರು. ಕಲಾವಿದರಾದ ಶ್ರೀಪತಿ ಬಲ್ಲಾಳ್, ಕಿಶೋರಿ ಬಲ್ಲಾಳ್ ದಂಪತಿಗೆ ಮುದ್ದಣ ಮನೋರಮೆ ನಾಟಕ ನಿರ್ದೇಶಿಸಿ ಹೆಸರು ಗಳಿಸಿದ ವಸಂತ ಕವಲಿ, ಸುಬ್ಬ ನರಸಿಂಹ, ಅತ್ಯುತ್ತಮ ನಿರ್ದೇಶಕರಾಗಿಯೂ ಹೆಸರುಗಳಿಸಿದ ಸಿನಿಮಾ ಛಾಯಾಗ್ರಾಹಕ ವಿ.ಕೆ.ಮೂರ್ತಿ ವರ್ಣಾಂಧ ರೂಪಾಂತರಿಸಿ ಗಮನ ಸೆಳೆದವರು. ಕರ್ನಾಟಕ ಥಿಯೇಟರ್ಸ್‌ನ ಮುತಾಲಿಕ್ ದೇಶಪಾಂಡೆ, ವೆಂಕಟ್ರಾವ್ ತಲಗೇರಿ ಅವರೆಲ್ಲ ಒಂದಲ್ಲ ಒಂದು ಬಗೆಯಲ್ಲಿ ವಿಶಿಷ್ಟರಾಗಿ ಹೆಸರು ಗಳಿಸಿದವರೇ. ಅವರಂತೆ ನಾನೂ ಕೂಡ ನಾಟಕೋತ್ಸವದಲ್ಲಿ ಉತ್ತಮ ಪ್ರಯೋಗಗಳಿಗಾಗಿ ಪ್ರಯತ್ನಿಸುತ್ತಿದ್ದೆ. ಅವರಿಗಿಂತ ಪ್ರಯೋಗದಲ್ಲಿ ಭಿನ್ನತೆಯಿದ್ದರೆ ಅದು ನಾನು ನಾಟ್ಯ ಅಕಾಡೆಮಿಯಲ್ಲಿ ಕಲಿತ ಸಿದ್ಧಾಂತಗಳನ್ನು ಪ್ರದರ್ಶನದಲ್ಲಿ ಅಳವಡಿಸಿರುವುದರಿಂದ ಇರಬಹುದು'.

'ಸಮಾಧಾನ ಒಂದೇ. ನಾಟಕ ರಂಗದ ಬಗ್ಗೆ ಏನೂ ಗೊತ್ತಿಲ್ಲದೆ ನಾಟಕ ಮಾಡಲು ಹೊರಟೆ ನಾನು. ಬೇರೆ ಬೇರೆ ಭಾಷೆಯ ನಾಟಕಗಳನ್ನು ನೋಡುತ್ತಿದ್ದ ನಾನು ನನಗೇನು ಗೊತ್ತಿದೆ ಅದನ್ನು ನನ್ನ ಜತೆಗಿನ ಇತರ ಕಲಾವಿದರನ್ನು ತರಬೇತಿಗೊಳಿಸಿ ಅವರಿಂದ ನಾಟಕ ಆಡಿಸುತ್ತಿದ್ದೆ. ಆ ನಾಟಕಗಳು ಸಹೃದಯರ ಮೆಚ್ಚುಗೆಯನ್ನೂ ಕೂಡ ಗಳಿಸುತ್ತಿದ್ದವು. ನಾಟ್ಯ ಅಕಾಡೆಮಿಯಿಂದ ತಿಳಿದ ಅದೆಷ್ಟೋ ವಿಚಾರಗಳು, ನೋಡಿದ ವಿವಿಧ ಭಾಷೆಯ ಬಗೆ ಬಗೆಯ ನಾಟಕಗಳು ಅನುಭವವನ್ನು ವಿಸ್ತರಿಸಿದವು. ಇತರ ಹಿರಿಯ ಕಲಾವಿದರ, ನಿರ್ದೇಶಕರ ನಾಟಕಗಳನ್ನು ನೋಡುತ್ತ ನಾನೂ ಬೆಳೆಯುತ್ತ ಇತರರನ್ನೂ ಬೆಳೆಸುತ್ತ ಬಂದಿರುವುದು ನನ್ನ ಸೌಭಾಗ್ಯ. ರೂಪುಗೊಳಿಸಿದ್ದು ಕೇವಲ ಕಲಾವಿದರನ್ನು ಮಾತ್ರ ಅಲ್ಲ, ಸದಭಿರುಚಿಯ ಪ್ರೇಕ್ಷಕರನ್ನು ಕೂಡ ಅನ್ನುವುದು ಇನ್ನೊಂದು ಸಮಾಧಾನ. ಸಂಘ ಸಂಸ್ಥೆಗಳೂ ನನ್ನನ್ನು ಬೆಳೆಸಿದವು. ಕಲಾವಿದರು, ಅವರು ನೀಡಿದ ಸಹಕಾರ, ಪ್ರೋತ್ಸಾಹ ಕೂಡ ಸರಾಗವಾಗಿ ಭಿನ್ನ ಭಿನ್ನ ಪ್ರಯೋಗಗಳಿಗೆ ನನ್ನನ್ನು

ಒಡ್ಡಿಕೊಳ್ಳುವಂತೆ ಮಾಡಿತು. ಪ್ರೇಕ್ಷಕರು ಕೂಡ ಶ್ರೇಯಸ್ಸಿಗೆ ಕಾರಣರಾಗಿದ್ದಾರೆ'. ಸುವರ್ಣರು ಮುಚ್ಚುಮರೆಯಾಗುವುದೇ ಇಲ್ಲ. ಹಳಬರ ಗಾಂಭೀರ್ಯ, ಘನತೆ; ಈಗಿನವರ ಕುಬ್ಜತೆ, ಕೃಪಣತೆ ಬಗ್ಗೆ ಬರೆಯದೇ ಇರುವುದಿಲ್ಲ.

'ನಾವೆಲ್ಲ ರಂಗದೊಂದಿಗೇ ಬದುಕನ್ನು ಸಾಗಿಸಿದ್ದೆವು. ಆದರೆ ಈಗ ಯಾರೂ ಹಾಗಿಲ್ಲ. ಇಲ್ಲಿ ಸ್ವಾರ್ಥದ ಬದುಕಿಗೇ ಹೆಚ್ಚು ಆತುಕೊಂಡಂತೆ ಕಾಣುತ್ತದೆ. ರಂಗಕ್ಕಾಗಿ ನಿಷ್ಠೆ, ತ್ಯಾಗ ಮನೋಭಾವ ಈಗಿನವರಲ್ಲಿ ಕಾಣಿಸುತ್ತಿಲ್ಲ. ಪ್ರತಿಭೆ ಇರುವವರು ಇದ್ದಾರೆ. ಆದರೆ ರಂಗಭೂಮಿಯ ಸಿದ್ಧಾಂತಗಳ ಅರಿವು, ಬದ್ಧತೆ,ಅನುಭವಗಳ ಕೊರತೆ ಕಾಣುತ್ತದೆ. ಆರ್ಥಿಕ ಹಾಗೂ ಇನ್ನಿತರ ಸಂಕಷ್ಟದಲ್ಲಿ ಮುಳುಗಿದ್ದ ವಿದ್ಯಾರ್ಥಿಗಳಲ್ಲಿ ಕಷ್ಟದಲ್ಲಿ ಕಲಿಯುತ್ತಲೇ ಸಾಧನೆ ಮಾಡುವ ಹುರುಪು ಇತ್ತು. ಸಾಂಸ್ಕೃತಿಕ ರಂಗದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಆಸಕ್ತಿ ಇತ್ತು. ಭಾಷೆ, ಸಂಸ್ಕೃತಿ ಬಗ್ಗೆ ಕಾಳಜಿ, ಅಭಿಮಾನ ಎಲ್ಲ ಇತ್ತು. ಎಲ್ಲರೂ ಅನ್ಯೋನ್ಯತೆಯಿಂದ ಎಲ್ಲದಕ್ಕೂ ನೆರವಾಗುತ್ತಿದ್ದರು. ಆಗಿನ ಕಾಲ ಇದೆಲ್ಲದಕ್ಕೂ ನೆರವಾಗ್ತಾ ಇತ್ತು. ಈಗ ಬದಲಾಗಿದೆ. ಈಗ ಜೀವನ ಶೈಲಿ ಬದಲಾಗಿದೆ. ಇಲ್ಲಿ ಕಷ್ಟದ ಬದುಕು ಕಡಿಮೆಯಾಗುತ್ತಿದೆ. ಹಾಗಾಗಿ ಕಲೆಯ ಕುರಿತ ಆಸಕ್ತಿ ಕಮ್ಮಿಯಾಗಿದೆ. ಇಂಥ ವಾತಾವರಣದಲ್ಲಿ ನಾಟಕ ತಂಡವನ್ನು ಕಟ್ಟುವುದು ಕಷ್ಟ ಅನ್ನಿಸುತ್ತದೆ, ಹೀಗೆ ನಿಟ್ಟುಸಿರು ಬಿಡುತ್ತಾರೆ ಸುವರ್ಣರು.

ಹಳೆಯ ರಂಗ ವೈಭವವನ್ನು ಸದಾನಂದ ಸುವರ್ಣ ಅವರು ನೆನಪಿಸಿಕೊಳ್ಳುವುದು ಹೀಗೆ: 'ಮೊದಲೆಲ್ಲ ನಾಟಕ ಆಡೋದಿಕ್ಕೆ ಸ್ಟೇಜ್ ಸಿಕ್ಕೋದೇ ಕಷ್ಟ ಆಗ್ತಿತ್ತು. ಸಿಕ್ಕಲ್ಲಿ ನಾಟಕ ಆಡುತ್ತಿದ್ದೆವು. ಆದರೆ ಈಗ ದೊಡ್ಡ ದೊಡ್ಡ ಥಿಯೇಟರ್ ಇದೆ. ಆದರೆ ಅವು ಈಗ ತುಂಬ ದುಬಾರಿಯೂ ಆಗಿಬಿಟ್ಟಿವೆ. ಪ್ರದರ್ಶನ ಸುಲಭ ಸಾಧ್ಯವಲ್ಲ ಎಂಬಂತಾಗಿದೆ. ಇದು ತಂಡಕ್ಕೆ ದೊಡ್ಡ ಅನನುಕೂಲತೆಯಾಗಿಬಿಟ್ಟಿದೆ. 'ಕರ್ನಾಟಕ ಸಂಘ ಈಗ ದೊಡ್ಡ ಸಭಾಂಗಣ ಕಟ್ಟಿಸಿದೆ. ಆದರೆ ಈಗ ಪ್ರೇಕ್ಷಕರೇ ಬರುವವರಿಲ್ಲ ಎಂಬುದು ವಿಷಾದನೀಯ. ಕಳೆದ ರಂಗ ವೈಭವದ ದಿನಗಳನ್ನು ಸ್ಮರಿಸಿ ಸಂತೋಷಪಡುತ್ತಿರಬೇಕು ಅಷ್ಟೇ. ಯಾವೆಲ್ಲ ಬಗೆಯಲ್ಲಿ ಪ್ರೇರಣೆ, ಪ್ರೋತ್ಸಾಹವನ್ನು, ಸಹಕಾರವನ್ನು ಆಗಿನವರು ಕೊಡ್ತಾ ಇದ್ದರು ಎಂಬುದನ್ನು ಸ್ಮರಿಸುತ್ತ ದಿನ ಕಳೆಯಬೇಕು ಈಗ ಅಷ್ಟೇ'.

ಐವತ್ತಕ್ಕೂ ಹೆಚ್ಚು ಸಂವತ್ಸರ ಮುಂಬಯಿಯಲ್ಲಿ ಓರ್ವ ರಂಗಕರ್ಮಿಯಾಗಿ ಸುವರ್ಣ ಮೆರೆದಿದ್ದಾರೆ. ನಿತ್ಯ ಹೊಸ ಆಯಾಮವನ್ನು ಪಡೆದುಕೊಳ್ಳುತ್ತಿರುವ ರಂಗ ಭೂಮಿಯ ಬಗೆಗೆ ನಿಷ್ಠೆಯುಳ್ಳ ರಂಗಕರ್ಮಿ ಅಧ್ಯಯನ ಮಾಡುತ್ತಲೇ ಇರುತ್ತಾನೆ. ಹಾಗಾಗಿ ಆತ ಯಾವತ್ತೂ ವಿದ್ಯಾರ್ಥಿಯೇ ಆಗಿರುತ್ತಾನೆ. ನೂರಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿರುವ ಸುವರ್ಣರು ಪ್ರತೀ ನಾಟಕದ ಪ್ರದರ್ಶನದ ಬಳಿಕ 'ಇನ್ನೂ ಚೆನ್ನಾದ ಪ್ರಯೋಗ ಮಾಡಬಹುದಿತ್ತಲ್ಲ' ಎಂದು ಮಥಿಸುತ್ತಾರೆ.

ಅಂದುಕೊಂಡ ಅದೆಷ್ಟೋ ನಾಟಕಗಳು ಪ್ರಯೋಗ ಕಂಡಿಲ್ಲ. ಅದಕ್ಕೆ ಪ್ರತಿಭಾವಂತ ಕಲಾವಿದ, ಕಲಾವಿದೆಯರ ಪಕ್ವ ಅಭಿನಯ ಕೊರತೆ, ತಾಂತ್ರಿಕ ಕೊರತೆ, ನಿರಂತರ ಅಭ್ಯಾಸ ಮಾಡಲಾಗದ ಪರಿಸ್ಥಿತಿ....ಇನ್ನಿತರ ಕೆಲವು ಕಾರಣಗಳನ್ನು ಕೊಡಬಹುದು. ಒಂದು ನಾಟಕದ ಪ್ರದರ್ಶನಕ್ಕೆ ಎಷ್ಟೆಲ್ಲ ಬಗೆಯಲ್ಲಿ ಚಿಂತನೆ, ರಿಹರ್ಸಲ್ ನಡೆಸಿ ಪ್ರಯೋಗಿಸಿದಾಗಲೂ ಅಂದುಕೊಂಡಂತೆ ರಂಗದಲ್ಲಿ ಮೂಡದಾಗ ಖೇದ ಅನುಭವಿಸಿದ್ದಾರೆ. ರಿಹರ್ಸಲ್ನಲ್ಲಿ ಬಂದಂತೆಯೂ, ಕಲ್ಪಿಸಿಕೊಂಡದ್ದರ ಅರ್ಧಭಾಗದಷ್ಟೂ ಮೂಡದಿದ್ದಾಗ ವ್ಯಥಿಸಿದ್ದಾರೆ. ಎಷ್ಟೆಲ್ಲ ಸಾಧಿಸಿದ್ದರೂ ಇನ್ನೂ ಹೆಚ್ಚಿನದನ್ನು ಮುಂಬಯಿಯ ರಂಗ ಭೂಮಿಯಲ್ಲಿ ಸಾಧಿಸಬಹುದಿತ್ತು ಎಂದು ಪದೇ ಪದೇ ಹೇಳಿಕೊಳ್ಳುತ್ತಾರೆ.

ಈಗಿನವರಿಗೆ ರಂಗ ನಿರ್ದೇಶನದ ಬಗೆಗೆ ಶ್ರದ್ಧೆ, ಪರಿಶ್ರಮ, ತಾದಾತ್ಮದ ಅಧ್ಯಯನ ಇಲ್ಲದ್ದರ ಬಗ್ಗೆ ಸುವರ್ಣರಿಗೆ ಅತ್ಯಂತ ಖೇದವಿದೆ. ಪ್ರಯತ್ನವಿಲ್ಲದೆ ಹೆಸರಿಗೆ ಬರುವ ತವಕದ ಬಗೆಗೂ ಸಿಟ್ಟಾಗುತ್ತಾರೆ. ನಾಟಕವನ್ನು ಜನಪ್ರಿಯತೆಯ ಸಾಧನವಾಗಿಸಿಕೊಳ್ಳುವುದೂ ಅವರಿಗೆ ಹಿಡಿಸುವುದಿಲ್ಲ. ಕೆಳಮಟ್ಟದ ಹಾಸ್ಯ ರಂಜನೆಗೆ ರಂಗಭೂಮಿಯನ್ನು ಬಳಸಿಕೊಳ್ಳುವುದನ್ನೂ ಪ್ರಬಲವಾಗಿ ಆಕ್ಷೇಪಿಸುತ್ತಾರೆ. 'ಕಲಾತ್ಮಕತೆಯನ್ನು ಮೈಗೂಡಿಸಿಕೊಳ್ಳುತ್ತ ಕಾಲಕಾಲಕ್ಕೆ ರಂಗಭೂಮಿಯಲ್ಲಿ ಕಾಣಿಸಿಕೊಳ್ಳುವ ಹೊಸ ಆಯಾಮಗಳು, ಆವಿಷ್ಕಾರ, ಬದಲಾವಣೆ, ಹೊಸ ದೃಷ್ಟಿಕೋನಗಳು ಇವೆಲ್ಲವನ್ನೂ ಅರಿತುಕೊಳ್ಳುತ್ತಿರಬೇಕು ಮತ್ತು ತಾನು ಅದನ್ನು ರಂಗದಲ್ಲಿ ಅಳವಡಿಸಬಹುದಾದ ಸಾಧ್ಯತೆಯ ಬಗ್ಗೆ ನಿತ್ಯ ಚಿಂತನೆ ನಡೆಸುತ್ತಿರಬೇಕು. ಆಗಲೇ ಒಬ್ಬ ನಿರ್ದೇಶಕನಾಗಿ ಯಶಸ್ವಿಯಾಗಬಲ್ಲ' ಎನ್ನುವ ಸುವರ್ಣರು ರಂಗಕ್ಕೆ ಬದುಕನ್ನೇ ತ್ಯಾಗ ಮಾಡಿದವರು. ಸ್ವಾಭಿಮಾನದಿಂದಲೇ ಎತ್ತರಕ್ಕೇರುತ್ತ ಸಾಗಿದವರು. ಇಲ್ಲಿ ಬದ್ಧತೆ, ಪ್ರಾಮಾಣಿಕತೆಯಿಂದ ದುಡಿಯುತ್ತಿರಬೇಕಾಗುತ್ತದೆ. ದಕ್ಷತೆ, ನಿಷ್ಠೆಯೂ ಬೇಕು. ತ್ಯಾಗವೂ ಇಲ್ಲಿ ಅನಿವಾರ್ಯ. ಇಲ್ಲಿ ಗಳಿಸುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು ಎಂಬುದು ಕಲಾದಿಗ್ಗಜ ಸುವರ್ಣ ಅವರ ಪ್ರಬಲ ಪ್ರತಿಪಾದನೆ.

## ಚಲನಶೀಲತೆಗೆ ಹೊಸ ಆವಿಷ್ಕಾರ

'ಜಗತ್ತಿನ ರಂಗಭೂಮಿಯನ್ನು ಗಮನಿಸಿದರೆ ನಮ್ಮ ಗಮನಕ್ಕೆ ಬರುವುದು ಬದಲಾವಣೆ. ಅದು ಬದಲಾದ ಕಾಲದ, ಪರಿಸ್ಥಿತಿಯ ವಿದ್ಯಮಾನಗಳು ಅಥವಾ ಆಯಾ ಕಾಲದ ಸಾಹಿತ್ಯ, ಕಲೆ, ಇವುಗಳ ಪ್ರಭಾವದಿಂದ ಬದಲಾವಣೆ ಇರಬಹುದು. ಸಾಹಿತ್ಯ, ಚಿತ್ರಕಲೆ, ಜಾನಪದ, ಚಲನಚಿತ್ರ, ರಂಗಭೂಮಿ ಎಲ್ಲ ಕ್ಷೇತ್ರಗಳಲ್ಲೂ ನಿರಂತರ ಪ್ರಯೋಗಗಳು ನಡೆಯುತ್ತಲೇ ಇರುವುದರಿಂದ ಹೊಸ ಆವಿಷ್ಕಾರಗಳು ನಡೆಯುತ್ತವೆ. ರಂಗಭೂಮಿಯಲ್ಲಿ ಸುಮಾರು ಐವತ್ತು ವರ್ಷದ ನನ್ನ ಅನುಭವದಲ್ಲಿ ಬಹಳಷ್ಟು ಬದಲಾವಣೆಗಳನ್ನು ಗಮನಿಸಿದ್ದೇನೆ. ನಲವತ್ತರ ದಶಕದಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಂಡ ನಾನು ರಂಗಭೂಮಿ ಪ್ರಯೋಗಶೀಲತೆಯಿಂದ ಬೆಳೆಯುತ್ತ ಸಾಗುವುದನ್ನು ಕಂಡಿದ್ದೇನೆ ಜತೆಗೆ ನಾನೂ ಬೆಳೆದಿದ್ದೇನೆ. ಪ್ರೇಕ್ಷಕ ವರ್ಗವೂ ಬೆಳೆದಿದೆ' ಎಂದು ಸುವರ್ಣರು ಖಚಿತವನ್ನೇ ಕರಾರುವಾಕ್ಕಾಗಿಸುವುದಾಗಿದೆ.

ಅಧ್ಯಾಯ 7

# ಸಾಹಿತ್ಯ, ಬೆಳ್ಳಿ ತೆರೆ : ಹೊಸ ಜಾಡಿನ ಸಂವೇದನೆ ನಾಟಕಕಾರ

ಸುವರ್ಣರು ಸಾಹಿತಿಯೂ ಹೌದು. ಹಾಗೆ ನೋಡಿದರೆ ಸುವರ್ಣರು ಮೊದಲು ಸಂದದ್ದೇ ಅಕ್ಷರ ಪ್ರಪಂಚಕ್ಕೆ. ಅದೂ ಶಾಲಾ ದಿನದಲ್ಲೇ. ಸುವರ್ಣರು ಶಾಲೆಯಲ್ಲಿ ಹಸ್ತ ಪತ್ರಿಕೆಯ ಸಂಪಾದಕರೂ ಆಗಿದ್ದರು. ಪತ್ರಿಕೆಗಾಗಿ ಕವನಗಳನ್ನು ಬರೆದು ಕಳುಹಿಸುತ್ತಿದ್ದರು. ಅವರೊಳಗಿನ ಸೃಜನಶೀಲತೆಯ ಅನಾವರಣಕ್ಕೆ ಈ ಹಸ್ತಪತ್ರಿಕೆ ಪ್ರೇರಣೆಯಾಗಿದೆ. ಸಾಲಿ ರಾಮಚಂದ್ರ ರಾಯರ 'ಚಿತ್ರ ಸೃಷ್ಟಿ' ಕವನ ಸಂಕಲನದ ಬಗ್ಗೂ ಇದರಲ್ಲಿಯೇ ಸುವರ್ಣರು ಔಚಿತ್ಯಪೂರ್ಣವಾದ ವಿಮರ್ಶೆಯನ್ನೂ ಬರೆದಿದ್ದರು. ಅದೊಂದು ದಿನ ಮುಂಬಯಿಯ 'ಜೈಹಿಂದ್ ಕಾಲೇಜು' ಕನ್ನಡ ಸಂಘದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವುದಕ್ಕೆ ಸಾಲಿ ಅವರು ಆಗಮಿಸಿದ್ದರು. ಆಗ ಸಂಘದ ಕಾರ್ಯದರ್ಶಿ ಕೃಷ್ಣಪ್ಪ ಮಲ್ಪೆ ಅವರು ಅವರ ಕವನಗಳ ಕುರಿತು ಪ್ರಾಸ್ತಾವಿಕ ಮಾತುಗಳಲ್ಲಿ ವಿಶ್ಲೇಷಿಸಿದ್ದರು. ಅವರ ಮಾತುಗಳಿಗೆ ಸ್ವತಃ ಸಾಲಿಯವರು ಶ್ಲಾಘಿಸಿದಾಗ ಅದಕ್ಕೆ ಕಾರಣವೂ ಪೂರಕವೂ ಆದದ್ದು ಸುವರ್ಣರು ತಮ್ಮ ಕವನಗಳ ಬಗ್ಗೆ ಬರೆದ ಲೇಖನ ಎಂದು ಕೃಷ್ಣಪ್ಪ, ಸುವರ್ಣರು 'ಚಿತ್ರ ಸೃಷ್ಟಿ' ಕವನದ ಕುರಿತು ಬರೆದ ವಿಮರ್ಶೆಯನ್ನು ಅವರ ಮುಂದಿಟ್ಟಿದ್ದರು. ಆ ವಿಮರ್ಶೆ ಸಾಲಿಯವರನ್ನು ಬಹಳವಾಗಿ ತಟ್ಟಿತ್ತು ಕೂಡ. ಸುವರ್ಣರನ್ನು ತಾನು ನೋಡಲೇಬೇಕು ಎಂಬ ಅಭಿಲಾಷೆಯನ್ನು ಕೃಷ್ಣಪ್ಪನವರ ಮುಂದಿಟ್ಟಿದ್ದರು. ವಯೋವೃದ್ಧರಾದರೂ ಕಾವಸ್ಜಿ ಜಹಾಂಗೀರ್ ಹಾಲ್‌ನಲ್ಲಿ ನಡೆಯಲಿರುವ ಸದಾನಂದ ಸುವರ್ಣರ ಒಂದು ನಾಟಕವನ್ನು ನೋಡುವುದಕ್ಕಾಗಿ ಸಾಲಿ ಖುದ್ದಾಗಿ ಬಂದರು. ಸುವರ್ಣರನ್ನು ಭೇಟಿಯಾಗುವುದು ಮೊದಲ ಉದ್ದೇಶವಾಗಿತ್ತು. ಅವರು ಬಂದ ವೇಳೆ ಮಾಳಿಗೆಯಲ್ಲಿದ್ದ ಗ್ರೀನ್‌ರೂಂನಲ್ಲಿ ಸುವರ್ಣರು ಕಾರ್ಯನಿರತರಾಗಿದ್ದರು. ತಮ್ಮನ್ನು ನೋಡುವುದಕ್ಕೆ ಯಾರೋ ಬಂದಿದ್ದಾರೆ ಅಂದರೂ ಕೇಳಿಸಿಕೊಳ್ಳದಷ್ಟು ಬ್ಯುಸಿಯಾಗಿದ್ದರು ಅವರು. ಕೊನೆಗೂ ಸಾಲಿ ಅವರನ್ನು ಸುವರ್ಣರಿದ್ದಲ್ಲಿಗೇ ಕರೆ ತಂದು ಇವರು ಸಾಲಿ ರಾಮಚಂದ್ರ ರಾಯರು ಅಂತ ಪರಿಚಯ ಮಾಡಿಸಿದರು ಕೃಷ್ಣಪ್ಪ ಅವರು. ವೃದ್ಧ ಸಾಲಿಯವರು ಅತ್ಯಂತ ಕಷ್ಟ ಪಟ್ಟು ನಡೆದುಕೊಂಡು ತಮ್ಮ ಬಳಿಗೆ ಬಂದು ನಿಂತುಕೊಂಡಾಗ ಸುವರ್ಣರ ಕಣ್ಣಾಲಿಗಳು ತೇವಗೊಂಡವು;

ಹೃದಯ ಮನಸ್ಸು ಕರಗಿ ನೀರಾಗಿ ಹೋಗಿತ್ತು. ಸಾಲಿ ಅವರು ವ್ಯಕ್ತಪಡಿಸಿದ ಮೆಚ್ಚುಗೆ, ಸುವರ್ಣರಿಗೆ ಸಿಕ್ಕಿದ ದೊಡ್ಡ ಆಶೀರ್ವಾದವೂ ಆಗಿತ್ತು. ಅದು ಸುವರ್ಣರ ಪಾಲಿಗೆ ಸುವರ್ಣಗಳಿಗೆ.

ಸುವರ್ಣರು ಚೇತನ ಪತ್ರಿಕೆಗೆ ಕತೆ, ತಾಯಿನುಡಿಗಾಗಿ ಲೇಖನ, ಮೊಗವೀರಕ್ಕಾಗಿ ಕಾದಂಬರಿ ಬರೆದುಕೊಟ್ಟಿದ್ದಾರೆ.

## ನಾಟಕಕಾರ

ಮುಂಬಯಿಯಲ್ಲಿ ವೈವಿಧ್ಯಮಯ ಭಾಷೆಯ ನಾಟಕಗಳನ್ನು ನೋಡುತ್ತ ನೋಡುತ್ತ ಅವರೊಳಗಿನ ನಾಟಕಕಾರ ಹೊರಹೊಮ್ಮಿದ್ದ. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುತ್ತ, ಜನಪರ ನಿಲುವಿನ ನಾಟಕಗಳನ್ನು ರಚಿಸುತ್ತಿದ್ದ ಸುವರ್ಣರು ಅವನ್ನು ರಂಗಕ್ಕೆ ಅಳವಡಿಸುವಲ್ಲಿ ತಮ್ಮತನದ ಛಾಪು ಮೂಡಿಸುತ್ತ ಬಂದವರು. ಹೊಸ ಜಾಡಿನ ಸಂವೇದನಾಶೀಲ ಬರೆಹಗಾರರಾಗಿಯೂ ಅವರು ತೆರೆದುಕೊಳ್ಳುತ್ತ ಬಂದವರು.

'ನಾಟಕವೆಂಬುದು ರಂಗಭೂಮಿಯ ಸಲುವಾಗಿಯೇ ರಚಿಸಲ್ಪಟ್ಟಿದ್ದರೂ ಅದು ಸಾಹಿತ್ಯದ ಒಂದು ಪ್ರಕಾರವೂ ಆಗಿದೆ. ಪ್ರಾಚೀನ ಕಾಲದಿಂದಲೂ ಎಲ್ಲ ದೇಶಗಳಲ್ಲಿಯೂ ನಾಟಕವನ್ನು ಸಾಹಿತ್ಯದ ಅಂಗವಾಗಿಯೇ ಪರಿಗಣಿಸಿದ್ದಾರೆ. ಆದುದರಿಂದ ಸಾಹಿತ್ಯದ ನೆಲೆಯಿಂದಲೇ ನಾಟಕವನ್ನು ವಿವೇಚಿಸುವ ಅಧ್ಯಯನಗಳಿಗೂ ಮಹತ್ವವಿದೆ' (ಪು. 1 ಆಧುನಿಕ ಕನ್ನಡ ನಾಟಕ, ಪು. ಅಂಕಿತ ಪುಸ್ತಕ, ಬೆಂಗಳೂರು) ಎಂದು ಡಾ. ಕೆ. ಮರುಳಸಿದ್ದಪ್ಪ ವಿಶ್ಲೇಷಿಸುತ್ತಾರೆ.

'ಮೊದಲು ನಾಟಕವನ್ನು ಸಾಹಿತ್ಯ ಕೃತಿಯಾಗಿ ರಚಿಸುತ್ತಿದ್ದರು. ಈಗಲೂ ನಾಟಕದ ಕಥೆ ಸಾಹಿತ್ಯವೇ. ಆಗ ಲಿಖಿತ ನಾಟಕ ಬೇರೆ, ರಂಗಕೃತಿ ಬೇರೆ ಅನ್ನುವ ಪರಿಜ್ಞಾನ ಇರಲಿಲ್ಲ. ಹಾಗಾಗಿ ನಾಟಕಕಾರ ತಮ್ಮ ಕೃತಿ ರಂಗಕೃತಿಯಾಗುವಾಗ ಹೇಗಿರಬೇಕು ಅಂತ ಯೋಚಿಸಿ ಬರೆಯುತ್ತಿರಲಿಲ್ಲ. ಬಹಳ ಹಿಂದಿನ ನಾಟಕ ಕೃತಿಗಳನ್ನು ಈಗ ಪ್ರಯೋಗಕ್ಕೆ ಎತ್ತಿಕೊಳ್ಳಬೇಕಾದರೆ ತುಂಬ ಬದಲಾಯಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ ಇವತ್ತಿನ ನಾಟಕಕಾರ ನಾಟಕ ರಚಿಸುವಾಗ ರಂಗಕೃತಿಯ ಅರಿವಿದ್ದರೆ ತಾನು ರಂಗದ ಮೇಲೆ ಪ್ರಯೋಗಿಸಲು ಹೆಚ್ಚು ಸೂಕ್ತ ಆಗುವ ಹಾಗೆ ರಚಿಸಲು ಸಾಧ್ಯವಿದೆ. ಲಿಖಿತ ನಾಟಕ ಓದುಗನ ಕಲ್ಪನೆಯಲ್ಲಷ್ಟೇ ಜರುಗುತ್ತದೆ. ಆದರೆ ರಂಗಕೃತಿ ಪ್ರೇಕ್ಷಕನ ಎದುರಿಗೆ ದೃಶ್ಯವಾಗಿ ಕಾಣಿಸುವುದರಿಂದ ನಾಟಕ ರಚನಾಕಾರರಿಗೆ ರಂಗಕೃತಿಯ ಬಗ್ಗೆ ತಿಳಿವು ಇದ್ದರೆ ದೃಶ್ಯ ಮಾಧ್ಯಮವಾಗಿ ನಾಟಕವನ್ನು ರಚಿಸಲು ಉಪಕಾರವಾಗುತ್ತದೆ. ಮೊದಲನೆಯದು ಓದಿ ಸಂತೋಷ ಪಡ ಬಹುದಾದರೆ ಎರಡನೆಯದ್ದನ್ನು ನೋಡಿ ಅನುಭವಿಸಬಹುದಾಗಿದೆ. ನಾಟಕವು ದೃಶ್ಯಕಾವ್ಯವಾದದ್ದರಿಂದ ಅದರ ಕರ್ತೃವಿಗೆ ರಂಗಕೃತಿಯ ಬಗ್ಗೆ ಅರಿವು ಇರಬೇಕಾಗುತ್ತದೆ' (ಅ.15 ರಂದು ನಡೆಸಿದ ಸಂದರ್ಶನದಲ್ಲಿ) ಎಂದು ಸುವರ್ಣರು ಅನುಭವ ಪಾಠವಾಗುತ್ತಾರೆ.

ಸುವರ್ಣರ ನಾಟಕ ಕೃತಿಗಳು ಸಾಹಿತ್ಯ ಕೃತಿಗಳಾಗಿಯೂ, ರಂಗ ಪ್ರಯೋಗಕ್ಕೂ ಯೋಗ್ಯವಾದ ಕೃತಿಗಳಾಗಿಯೂ ಕನ್ನಡ ಸಾರಸ್ವತ ಲೋಕದಲ್ಲಿ ಉಳಿದುಕೊಳ್ಳುತ್ತವೆ.

ಮುಂಬಯಿಯಲ್ಲಿ ವಿವಿಧ ಭಾಷೆಯ ನಾಟಕಗಳನ್ನು ನೋಡುತ್ತ ನೋಡುತ್ತ ಅವರೊಳಗಿನ ನಾಟಕಕಾರ ಹೊರಹೊಮ್ಮಿದ್ದ. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುತ್ತ, ಜನಪರ ನಿಲುವಿನ ನಾಟಕಗಳನ್ನು ರಚಿಸುತ್ತಿದ್ದ ಸುವರ್ಣರು ಅವನ್ನು ರಂಗಕ್ಕೆ ಅಳವಡಿಸುವಲ್ಲಿ ತಮ್ಮತನದ ಛಾಪು ಮೂಡಿಸುತ್ತ ಬಂದವರು. ಹೊಸ ಜಾಡಿನ ಸಂವೇದನಾಶೀಲ ಬರೆಹಗಾರರಾಗಿಯೂ ಅವರು ತೆರೆದುಕೊಳ್ಳುತ್ತ ಬಂದವರು.

ವಸ್ತು, ಆಶಯ, ವೈಚಾರಿಕತೆ, ಮಾನವೀಯತೆ ಕೃತಿಗಳನ್ನು ಮೌಲಿಕವಾಗಿಸಿವೆ. ಸರಳ ಭಾಷೆ, ನವಿರು ಶೈಲಿ, ತಿಳಿ ಹಾಸ್ಯ, ಅಲ್ಲಿ ಅಡಗಿರುವ ವ್ಯಂಗ್ಯ ವಿಡಂಬನೆ ವಾಸ್ತವದ ಚಿತ್ರಣವನ್ನು ಕಟ್ಟಿಕೊಡುತ್ತವೆ. ದುರಂತ ನಾಟಕಗಳಿವೆ, ಹಾಸ್ಯ ಪ್ರಧಾನವಾದ ನಾಟಕಗಳೂ ಇವೆ. ಎಲ್ಲವುಗಳ ಉದ್ದೇಶ ಒಂದೇ – ಹೊಸ ಬೆಳಕು ನೀಡುವುದು!

## ನಾಟಕ ಕೃತಿಗಳಲ್ಲಿ ಆಧುನಿಕ ಚಿಂತನೆ

ನಾಟಕ ರಚನೆಯಲ್ಲೂ ಸುವರ್ಣರದು ಹಿರಿಯ ಕೊಡುಗೆ. ಕಿರು ಹರೆಯದಲ್ಲೇ ನಾಟಕ ರಚನಾಕಾರನಾಗಿಯೇ ನಾಟಕ ಪ್ರಪಂಚವನ್ನು ಪ್ರವೇಶಿಸಿದ್ದ ಸುವರ್ಣರು ಎಷ್ಟೆಲ್ಲ ನಾಟಕ ಕೃತಿಗಳನ್ನು ಸೃಜಿಸಿದ್ದಾರೆ! ಕುರುಡನ ಸಂಗೀತ, ಆಕಸ್ಮಿಕ, ರಜಪೂತ ಪವಾಡ (ಅಪ್ರಕಟಿತ), ವಿಷಮ ಘಳಿಗೆ, ಕಣ್ಣು ತೆರೆಯಿತು, ಕದ್ದವನೆ ಕಳ್ಳ, ಭಗ್ನ ಮಂದಿರ, ರೂಪದರ್ಶನ, ಅಭಾಗಿನಿ, ಹಳ್ಳದಿಂದ ಹಾದಿಗೆ, ಗುಡ್ಡದ ಭೂತ (ತುಳು). ರೂಪಾಂತರಿತ ನಾಟಕಗಳಲ್ಲಿ ಮುಖ್ಯವಾದವುಗಳು ಉರುಳು (ಹಿಂದಿ), ಕುಲ ಗೌರವ(ಕಾದಂಬರಿ ಆಧಾರಿತ), ಚಕ್ರವ್ಯೂಹ (ಇಂಗ್ಲಿಷ್), ಅಣ್ಣನ ಮದುವೆ (ಬಂಗಾಲಿ) (ಟೆಲಿ ಫಿಲ್ಮ್ ಕೂಡ ಸಿದ್ಧಪಡಿಸಿದ್ದಾರೆ), ಬಾಲೆ ಬಂಗಾರ್ (ಬಂಗಾಲಿ) ಎಲ್ಲವೂ ಪ್ರದರ್ಶನ ಕಂಡಿವೆ ಎಂಬುದು ಹೆಗ್ಗಳಿಕೆ! ಇಲ್ಲೆಲ್ಲ ನವೋದಯದ ಆದರ್ಶ ಪಾಲನೆ, ಸಂಪ್ರದಾಯ, ಆಧುನಿಕ ಚಿಂತನೆಗಳ ಸಂಘರ್ಷ ಅನಾವರಣಗೊಂಡಿದೆ.

ಒಂದು ಹಂತದಲ್ಲಿ ನಾಟಕ ರಚನೆಯಲ್ಲಿ ಅತ್ಯುತ್ಸಾಹ ತೋರುತ್ತಿದ್ದ ಸುವರ್ಣರು ಆ ಕಾರ್ಯವನ್ನು ಸ್ಥಗಿತಗೊಳಿಸಿಬಿಟ್ಟರು. 'ಕ್ರಮೇಣ ನಾಟ್ಯ ಅಕಾಡೆಮಿಗೆ ಸೇರಿದ ಬಳಿಕ, ನಾಟಕ ಎಂದರೆ ಏನು ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡ ಬಳಿಕ ನಾಟಕ ರಚನೆ ಸರಳ ಅಲ್ಲ ಎಂಬುದು ಅರ್ಥವಾಯಿತು. ಮೌಲ್ಯಯುತವಾದ್ದನ್ನು ಬರೀಬೇಕು ಅಂತ ಯೋಚಿಸುತ್ತಲೇ ನಿರ್ದೇಶನದಲ್ಲೇ ಹೆಚ್ಚು ಹೆಚ್ಚು ತೊಡಗಿಸಿಕೊಂಡೆ. ಖುಷಿ ದೊರೆಯಿತು. ಜ್ಞಾನ ಸಂಪಾದಿಸುತ್ತ ಹೋದಂತೆಲ್ಲ ನಮ್ಮ ಮೇಲಿನ ಜವಾಬ್ದಾರಿಯೂ ಹೆಚ್ಚಾಗ್ತಾ ಹೋಗ್ತದೆ. ಈ ನಾಟಕ ರಚನೆಯಲ್ಲೂ ಹಿಂದೆ ಬೀಳೋದಿಕ್ಕೆ ಇದೇ ಮುಖ್ಯ ಕಾರಣ' ಎಂದು ಅತ್ಯಂತ ಪ್ರಾಮಾಣಿಕವಾಗಿ ಒಪ್ಪಿಸುತ್ತಾರೆ.

ನಾಟಕ ಕೃತಿಗಳ ಪ್ರಕಟಣೆ ಕಡಿಮೆಯಾಗಿರುವುದರ ಬಗ್ಗೆ ಪ್ರಸ್ತಾಪಿಸಿದರೆ ಸುವರ್ಣರು ನಾಟಕ ಕೃತಿಗಳ ಖರೀದಿ ಕಡಿಮೆಯಾಗಿರುವುದೇ ಇದಕ್ಕೆ ಕಾರಣ ಎಂದು ಕಡಾ ಕಂಡಿತವಾಗಿ ಉತ್ತರಿಸುತ್ತಾರೆ. ಓದಿಗಾಗಿ ನಾಟಕವನ್ನು ಅಪೇಕ್ಷಿಸುವವರ ಪ್ರಮಾಣ ಚಿಕ್ಕದಿದೆ. ರಂಗಕೃತಿಯಾಗಿಸುವುದಿದ್ದರೆ ಅವರು ಮಾತ್ರ ಮೂರೋ ನಾಲ್ಕು ಕೃತಿಗಳನ್ನು ಕೊಂಡುಕೊಳ್ಳುವುದಿದೆ. ಇದಕ್ಕಿಂತ ಮುಖ್ಯವಾಗಿ ಸಣ್ಣ ಕಥೆಯನ್ನೋ, ಕಾದಂಬರಿಯನ್ನೋ ನಾಟಕವಾಗಿಸಿ ಪ್ರಯೋಗಿಸುವ ಟ್ರೆಂಡ್ ಕೂಡ ಬೆಳೆಯುತ್ತಿರುವುದರಿಂದಲೂ ನಾಟಕ ಕೃತಿ ರಚನೆ ಹಿಂದೆ ಬೀಳುತ್ತಿದೆ ಎನ್ನುವುದನ್ನೂ ಕಂಡುಕೊಂಡಿದ್ದಾರೆ. 'ನಾಟಕದ' ಕೃಷಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿಲ್ಲ ಎಂದೇ ಹೇಳಬಹುದು. ಒಂದಿಬ್ಬರು ಪ್ರಮುಖ ಕನ್ನಡ ನಾಟಕಕಾರರ ನಾಟಕ ಕೃತಿಗಳನ್ನು ಅಚ್ಚು ಹಾಕಿಸುತ್ತಿದ್ದಾರೆ. ಉಳಿದಂತೆ ನಾಟಕದ ವಸ್ತು ಪ್ರಯೋಗಕ್ಕೊಡ್ಡುವಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಪ್ರಯೋಗಗಳು ಭರ್ಜರಿಯಾಗಿ ನಡೆಯುತ್ತಿದೆ. ಆದರೆ ಅದರ ಗುಣಮಟ್ಟ, ಗಟ್ಟಿತನ, ವಿಶಿಷ್ಟತೆಗಳನ್ನು ತೂಗಿ ನೋಡಿದರೆ ತೃಪ್ತಿಕರವಾಗಿಲ್ಲ ಎಂದೇ ಹೇಳಬಹುದು. ಆಧುನಿಕತೆಯ ಹೆಸರಿನಲ್ಲಿ ನಾನಾ ಕಲಾ ಪ್ರಕಾರಗಳನ್ನು ಸಂಯೋಜಿಸುವ ಪ್ರಯತ್ನವೂ ನಡೆಯುತ್ತಿದೆ' (ಅ.16ರಂದು ನಡೆಸಿದ ಸಂದರ್ಶನದಲ್ಲಿ) ಎಂದು ವಿಷಾದಿಸುತ್ತಾರೆ.

ಲಘು ವ್ಯಂಗ್ಯ, ವಿನೋದ ಮೂಲಕ ಅವಾಂತರಗಳ ವಿಡಂಬನೆ ಸುವರ್ಣರ ನಾಟಕಗಳ ಹೂರಣವಾಗಿದೆ. 'ವಿಷಮಘಳಿಗೆ', 'ಕಣ್ಣು ತೆರೆಯಿತು', 'ಭಗ್ನ ಮಂದಿರ',' ರೂಪದರ್ಶನ', 'ಹಳ್ಳದಿಂದ ಹಾದಿಗೆ', 'ಗುಡ್ಡದ ಭೂತ' ಮೊದಲಾದವುಗಳಿಗೆ ಆ ಕಾರಣಕ್ಕೇನೇ ಮಹತ್ತ್ವ ಪ್ರಾಪ್ತವಾಗಿದೆ. 'ಉರುಳು', 'ಕುಲಗೌರವ', 'ಚಕ್ರವ್ಯೂಹ', 'ಅಣ್ಣ ಮದುವೆ', 'ಬಾಲೆ ಬಂಗಾರ್' ಇತ್ಯಾದಿ ಪರಿಣಾಮಕಾರಿ ರೂಪಾಂತರ ನಾಟಕ ಕೃತಿಗಳಾಗಿ ಕನ್ನಡಕ್ಕೆ ಸಂದಿವೆ.

## ವೈಚಾರಿಕ ಪ್ರಜ್ಞೆ :

ಸದಾನಂದ ಸುವರ್ಣರು ಬರೆದ ನಾಟಕಗಳಲ್ಲಿ ಸಮಾಜಮುಖಿಯಾದ ಚಿಂತನೆಗಳಿವೆ. ಪ್ರಗತಿಪರವಾಗಿ ಚಿಂತಿಸುವುದು ತಪ್ಪು ಕೆಲಸ ಅನ್ನುವ ಕಾಲದಲ್ಲಿ ಅವ್ಯವಸ್ಥೆಯನ್ನು, ಮೌಢ್ಯವನ್ನು, ಅಮಾನುಷತೆಯನ್ನು ಬೆಳಕಿಗೊಡ್ಡುವ ಛಾತಿ ತೋರಿಸಿದ್ದಾರೆ ಸುವರ್ಣರು. ಒಂದು ನಾಟಕದ ನಿಲುವು ಕೆಲ ಕಾಲದ ಬಳಿಕ ರಚಿಸಿದ ನಾಟಕಗಳಲ್ಲಿ ಬದಲಾಗಿರುತ್ತದೆ. ಅಲ್ಲಿ ಸಮಾಜವೂ ಬದಲಾವಣೆಗೆ ತೆರೆದುಕೊಳ್ಳುವ ಸುಳಿವಿನ ತಂಗಾಳಿಯೂ ಕಾರಣವಾಗಿರುತ್ತದೆ.

ಕೆಲವು ನಾಟಕಗಳಲ್ಲಿ ಹೆಣ್ಣಿನ ಕಪ್ಪು ಬಿಳುಪು ಮುಖಗಳು ಅನಾವರಣಗೊಳ್ಳುತ್ತವೆ. ಹೆಣ್ಣನ್ನು ಕಾಣುತ್ತಿರುವ ದೃಷ್ಟಿ, ಪರಿವರ್ತನೆಯಾಗಬೇಕಾದ ಮನಸ್ಥಿತಿಯನ್ನು ತೆರೆದಿಡುತ್ತವೆ. ತಾಯಿ, ಮಗಳು, ಸೊಸೆ, ಸೋದರಿ, ಪ್ರೇಯಸಿ, ಮದುವೆಗೆ ಸಿದ್ಧವಾಗಿರುವ ತರುಣಿಯರಿದ್ದಾರೆ. ಪುರುಷ ಪ್ರಧಾನ ಸಂಸ್ಕೃತಿಯೊಳಗೇ ಜೀವಿಸುವವರು ಕೆಲವರು ಇರುತ್ತಾರೆ. ಇನ್ನು

ಕೆಲವರು ಈ ಕಟ್ಟುಪಾಡುಗಳ ನಡುವೆಯೇ ಸ್ವತಂತ್ರವಾಗಿ ಆಲೋಚನೆಗೆ ತೆರೆದುಕೊಳ್ಳುವವರು ಆಗಿರುತ್ತಾರೆ. ವಿಧವೆಯ ಬದುಕಿನ ದಾರುಣತೆಯನ್ನು ಹೃದಯಸ್ಪರ್ಶಿಯಾಗಿ ಮುಂದಿಡುವ 'ಅಭಾಗಿನಿ' ನೊಂದವಳನ್ನು ಹಾಗೂ ನೋಯಿಸುವ ಹೆಣ್ಣನ್ನು ಪರಿಚಯಿಸುತ್ತದೆ.

ಸುವರ್ಣರು ವಿಧವೆಯನ್ನು ಅಸ್ಪೃಶ್ಯಳಂತೆ ಕಾಣುವ, ಮನೆಯ ಹೆಂಗಸರೇ ಕೀಳಾಗಿ ಕಾಣುವ ಮನಸ್ಥಿತಿಯ ಬಗ್ಗೆ ಗಟ್ಟಿ ದನಿಯಲ್ಲಿ ಪ್ರಶ್ನಿಸಿದ್ದು 'ಅಭಾಗಿನಿ' ನಾಟಕದಲ್ಲಿ – 1954ರ ಹೊತ್ತಲ್ಲಿ ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿಯುವ ಈ ನಾಟಕದಲ್ಲಿ "ಹೆಂಗಸು ವಿಧವೆಯೆಂದ ಮಾತ್ರಕ್ಕೆ ಅವಳಿಗೆ ಪ್ರಪಂಚದ ಸುಖಸಂತೋಷಗಳನ್ನು ಪಡೆಯುವ ಹಕ್ಕು ಇಲ್ಲದೆ ಹೋಗುವುದೇ? ವಿಧವೆಯಾದ್ದರಿಂದ ಅವಳನ್ನು ಅಭಾಗಿನಿ, ಅಮಂಗಲೆಯೆಂದು ತಿರಸ್ಕರಿಸುವುದೇ? ಅವಳು ವಿಧವೆಯಾದುದಕ್ಕೆ ಕಾರಣರು ಯಾರು? ಅವಳು ಮಾಡಿದ ತಪ್ಪು ಯಾವುದು? ಅವಳನ್ನು ಬಹಿಷ್ಕರಿಸುವುದರಿಂದ ಲಾಭವೇನು?...ಅಂಧಶ್ರದ್ಧರಾದ ಮಂದಮತಿಗಳು ವಿಧವೆಯನ್ನು ಅಭಾಗಿನಿ, ಅಮಂಗಲೆಯೆಂದು ತಿರಸ್ಕರಿಸುವರು. ದೇಶದ ಉನ್ನತಿ, ಜನಾಂಗದ ಏಳಿಗೆ, ಜನರ ಮೇಲ್ಮೆ ಇವುಗಳ ಅವನತಿಗೆ ಕಾರಣರು ಅಂಧಶ್ರದ್ಧರಾದ ಮೂಢ ಜನರು–ವಿಧವೆಯರಲ್ಲ' (ಪು–1 ಅಭಾಗಿನಿ,) ಎಂದಿತ್ಯಾದಿ ಮನೋಗತವಾಗಿಸುವಲ್ಲಿ ಸುವರ್ಣರು ಸಂಪೂರ್ಣವಾಗಿ ಯಶಸ್ವಿಯಾದದ್ದು ನಿಚ್ಚಳವಾಗುತ್ತದೆ. ಆದರೆ ವಿವಾಹವನ್ನು ಆಗಗೊಡದೆ ನಾಯಕಿ ಶಾಂತಾಳ ಬದುಕನ್ನು ಸಾವಿನಲ್ಲಿ ಅಂತ್ಯ ಮಾಡುವ ಚೌಕಟ್ಟಿನೊಳಗೆ ಅಡಗಿಸುವುದು ಮೂಢನಂಬಿಕೆಗಳನ್ನು ಸಮಾಧಿಗೊಳಿಸುವ ನಿಟ್ಟಿನಲ್ಲಿ ಜಾಗೃತಿ ತೋರಿದ್ದೇ ಆಗಿದೆ.

'ಭಗ್ನ ಮಂದಿರ' ನಾಟಕ ಜಾತೀಯತೆಯ ಕುರಿತಾಗಿದೆ. ಜಾತೀಯತೆ ಸಣ್ಣತನವಾಗಿದ್ದು ಸಂಘರ್ಷವನ್ನು ಪ್ರಚೋದಿಸುವುದಾಗಿದೆ. ಒಟ್ಟೂ ಜಾತಿ ಮೋಹವು ಮನುಷ್ಯ ಸಂಬಂಧವನ್ನು ವಿಘಟಿಸುವುದರ ಕುರಿತು ಮನವರಿಕೆ ಮಾಡಿಕೊಟ್ಟಿದೆ. ಜಾತಿಗಿಂತ ಮನುಷ್ಯ ಸಂಬಂಧವೇ ಮುಖ್ಯ ಅನ್ನುವುದನ್ನು ಆರಂಭದಿಂದಲೂ ಪ್ರತಿಪಾದಿಸುವ ನಾಟಕದಲ್ಲಿ ಸರಸಮ್ಮ ಗೃಹಿಣಿಯಾಗಿ ಚಿತ್ರಣಗೊಂಡರೆ ಹೇಮಾವತಿ ಹೊಸ ವಿಚಾರಧಾರೆಗೆ ತೆರೆದುಕೊಳ್ಳುತ್ತ ವಾಸ್ತವವಾದಿಯಾಗುತ್ತಾಳೆ. ಸ್ತ್ರೀ ಸ್ವಾತಂತ್ರ್ಯದ ಕುರಿತ ಅವಳ ನಿಖರ ನಿಲುವು ಪರಸ್ಪರ ಮೆಚ್ಚಿಕೊಂಡವರ ನಡುವೆ ವಿವಾಹ ನಡೆಯಬೇಕು ಅನ್ನುವುದನ್ನು ಒಪ್ಪಿಕೊಳ್ಳುವ ಹೊಸ ವ್ಯವಸ್ಥೆಯ ಪರವಾಗಿದೆ.

ಹತ್ತಿರ ಹತ್ತಿರ 'ಭಗ್ನ ಮಂದಿರ'ವೂ ದುರಂತದ ಛಾಯೆಯನ್ನೇ ಪ್ರತಿಬಿಂಬಿಸಿದೆ. ನಾಟಕ ಸಂಶಯ ಮನೋಭಾವದ, ಸೊಕ್ಕಿನ ವ್ಯಕ್ತಿತ್ವದ, ಅಳ್ಳೆಕೆಯ ಮನೋಭಾವದ ಎಲ್ಲ ನಡವಳಿಕೆಗಳನ್ನೂ ಸಾದ್ಯಂತವಾಗಿ ಮೂಡಿಸುತ್ತಲೇ ತಕ್ಕ ಪ್ರತಿಫಲವನ್ನು ಉಣಿಸುವ ಪ್ರಯತ್ನ ಮಾಡುತ್ತದೆ. ಹೆಣ್ಣು ತನ್ನ ಸ್ವಂತ ನಿಲುವಿನ ಮೇಲೇ ತನ್ನ ಬದುಕನ್ನು ಕಂಡುಕೊಳ್ಳುವ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕೆ ವಿಶೇಷ ಅವಕಾಶವನ್ನು ಕೊಡುತ್ತದೆ. ತನ್ನನ್ನು ಹೀನಾಯವಾಗಿ ಸಂಶಯಿಸುವ ರಾಜನನ್ನು ಹೇಮಲತಾ ಧೈರ್ಯದಿಂದ ಧಿಕ್ಕರಿಸುವ, ಅವನೆದುರೇ ಗೌರವಯುತವಾಗಿ ನಡೆದುಕೊಂಡ ಡಾ. ಮನೋಹರನನ್ನು ವರಿಸುವ

ಎದೆಗಾರಿಕೆ ತೋರುವುದನ್ನು ಸಮರ್ಥಿಸಿಕೊಳ್ಳಲಾಗಿದೆ. ಹಿಂಸ್ರಕ ಮನೋಭಾವದ ರಾಜ ಕೊನೆಗೆ ಪಾತಕ ಕೃತ್ಯ ಎಸೆಯುವುದಕ್ಕೆ ಹೋಗಿ ತಾನೇ ಬಲಿಯಾಗುವ ದುರಂತ 'ಅನ್ಯಾಯಕ್ಕೆ ತಕ್ಕ ಶಾಸ್ತಿ'ಯನ್ನು ಪ್ರತಿಪಾದಿಸುತ್ತದೆ. ಆ ದೃಶ್ಯವನ್ನು ಚಿತ್ರೀಕರಿಸುವುದು ಹೀಗೆ: ಸರಸಮ್ಮ:' ರಾಜೂ, ಏನು ಹುಚ್ಚಾಟವಿದು? ನಿನಗೆ ನನ್ನಾಣೆಯಿದೆ ?. ಎಂದು ಓಡಿ ಬಂದು ರಾಜನ ಕೈಹಿಡಿದೆಳೆಯುವಳು. ಹೆಜ್ಜೆ ತಪ್ಪಿದ ರಾಜನ ಕೈಯ ಎಸಿಡು ಅವನ ಮುಖಕ್ಕೇ ಬೀಳಲು ಅದರ ಉರಿಯನ್ನು ಸಹಿಸಲಾಗದೆ ಬೊಬ್ಬಿಡುತ್ತ ನೆಲಕ್ಕುರುಳುವನು. ಹೇಮ, ಭೀತಿಯೇ ಮೂರ್ತಿಮತ್ತಾಗಿ ಕಲ್ಲುಗೊಂಬೆಯಂತೆ ನಿಂತಿರುವಳು. ಮನೋಹರ ಮೊದಲು ಭಯಭೀತನಾಗಿದ್ದರೆ ಈಗ ದುಃಖಗೊಂಡು ರಾಜನ ಹತ್ತಿರ ಬರುತ್ತಾನೆ. ಸರಸಮ್ಮ ದಿಗ್ಭ್ರಾಂತಳಾಗಿ ರಾಜನ ಯಾತನೆಯನ್ನು ಕಂಡು ಮರುಗುವಳು. ಒಂದು ನಿಮಿಷದಲ್ಲಿ ನಡೆದ ಈ ಘಟನೆಗಳ ಭೀಭತ್ಸಕ್ಕೆ ಭೀತಿಗೊಂಡಂತೆ ಬೆಳಕು ಮಸುಕಾಗುತ್ತ ಬಂದೊಡನೆ–ಹೆದರಿದ ಪರದೆ ಒಮ್ಮೆಲೇ ಸರಿಯಲಾರಂಭಿಸುವುದು.' ಘಟನೆ ಕಣ್ಮುಂದೆ ಈಗತಾನೇ ಸಂಭವಿಸಿದೆ ಅನ್ನುವಷ್ಟು ಸಹಜವಾಗಿ ಕಟ್ಟಿಕೊಟ್ಟಿದ್ದಾರೆ.

ತಾನು ಬಯಸುವ ಹೆಣ್ಣು ಇನ್ನೊಬ್ಬನೊಂದಿಗೆ ಮಾತನಾಡುವುದನ್ನೂ ಕೂಡ ಸಹಿಸದ ಕ್ರೂರ, ವಿಕ್ಷಿಪ್ತ ಮನಸ್ಸನ್ನು ರೋಸುವಷ್ಟು ಪರಿಣಾಮಕಾರಿಯಾಗಿ ಕೃತಿ ತೆರೆದಿಡುತ್ತ ಹೋಗಿರುವಲ್ಲೇ ವ್ಯಕ್ತಿತ್ವವೊಂದು ಅರಳಿಕೊಳ್ಳಬೇಕಾದ ಮಾರ್ಗ ಪ್ರಸ್ತುತಗೊಂಡಿದೆ. ಮನೋವಿಶ್ಲೇಷಣಾತ್ಮಕ ನಾಟಕವಾಗಿ ಇದು ಪ್ರಾಮುಖ್ಯತೆಯನ್ನು ಉಳಿಸಿಕೊಳ್ಳುತ್ತದೆ. ಹೆಣ್ಣಿನ ಪೈಶಾಚಿಕ ಮುಖವನ್ನೂ ನರಹರಿ ಮೇಷ್ಟ್ರ ಹೆಂಡತಿಯ ಮೂಲಕ ಬೆತ್ತಲುಗೊಳಿಸಿದ್ದಾರೆ. 'ಅಯ್ಯೋ, ನೆನಸ್ಕೊಂಡ್ರೇ ಅಸಹ್ಯವಾಗುತ್ತೆ. ಹೆಣ್ಣು ಜಾತಿಗೇ ಅವಮಾನ ಅಂಥವಳು' ಎಂದು ಹೆಣ್ಣಿಂದಲೇ ಹೇಳಿಸುವಲ್ಲಿ ಅಂಥ ಸ್ವಭಾವದ ಅವಹೇಳನವಿದೆ. ಹಿಂದಿನವರ ಸಂಸ್ಕೃತಿ ಸಂಸ್ಕಾರ ಈಗಿನ ತಲೆಮಾರಿನಿಂದ ಮುಂದುವರಿಯದಿರುವ ಕುರಿತ ಬೇಸರ ಧ್ವನಿಪೂರ್ಣವಾಗಿ ಹೊರಹೊಮ್ಮಿದೆ. 'ಸುಮಾರು ಹತ್ತು ವರ್ಷಗಳ ಹಿಂದೆ ಬಿಲ್ಲವರ ಅಸೋಸಿಯೇಷನ್‌ನ ವಾರ್ಷಿಕೋತ್ಸವ ಸಂದರ್ಭ ಪ್ರಯೋಗಿಸಲೆಂದು ಕೆಲವೇ ದಿವಸಗಳಲ್ಲಿ ಇದನ್ನು ಬರೆದು ಮುಗಿಸಿದೆನು. ಇದಕ್ಕೆ ಪ್ರೋತ್ಸಾಹ ಪ್ರೇರಣೆಯಿತ್ತ ಗೆಳೆಯರು ಕೆ.ಕೆ.ಸುವರ್ಣ ಮತ್ತು ನಾಗೇಶ್ ಆರ್. ಕೋಟ್ಯಾನ್. ಅದಾಗಲೇ ಈ ನಾಟಕದ ಐದು ಪ್ರಯೋಗಗಳು ನಡೆದಿವೆ. ಇದನ್ನು ಬರೆಯುತ್ತಿರುವಾಗ ಆರನೇ ಪ್ರಯೋಗದ ಸಿದ್ಧತೆ ನಡೆದಿದೆಯೆಂದು ತಿಳಿದುಬಂತು. ನನ್ನ ಹಳೆಯ ನಾಟಕಗಳನ್ನು ಪ್ರದರ್ಶಿಸುವ ಹುಮ್ಮಸ್ಸು ನನ್ನಲ್ಲಿ ಕಡಿಮೆಯಾಗಿದೆ. ಆದರೆ ಗೆಳೆಯ ಬಿ.ಎಂ. ವಸಂತ ಬಹಳ ಆಸಕ್ತಿಯಿಂದಲೇ ನನ್ನ ನಾಟಕಗಳನ್ನು ಪದೇ ಪದೇ ರಂಗಕ್ಕೆ ತರುತ್ತಿದ್ದಾರೆ. ಅವರನ್ನೂ, ಅವರಿಗೆ ರೆಕ್ಕೆ ಕಟ್ಟುವ ಕಲಾವಿಲಾಸೀ ಗೆಳೆಯರ ಬಳಗವನ್ನೂ ನಾನು ಅಭಿನಂದಿಸಬೇಕಾಗಿದೆ' ಎಂದು ಸುವರ್ಣರು ಶ್ಲಾಘಿಸುವುದು ವಿಶೇಷವಾಗಿದೆ; ಈ ಬಗೆಯನ್ನು ನಾಳೆಗಳಿಗೆ ಒತ್ತಾಯಿಸುವುದಾಗಿದೆ.

ಹೆಣ್ಣು ರೂಪಕ್ಕೆ ತನಗೆ ತಾನೇ ಆದ್ಯತೆ ನೀಡಬಾರದು ಅನ್ನುವ ಪಾಠದ ಜತೆಗೆ ಪುರುಷರ ಮನಃಸ್ಥಿತಿ ಬದಲಾಗಬೇಕಿರುವುದನ್ನೇ ಧ್ವನಿಸುತ್ತದೆ 'ರೂಪದರ್ಶನ' ನಾಟಕ. ಹೆಣ್ಣಿನ ರೂಪದ ಕುರಿತ ನಿರೀಕ್ಷೆ ಹಾಗೂ ಅದಕ್ಕೆ ಪ್ರಾಮುಖ್ಯ ನೀಡುವ ಮನಸ್ಥಿತಿಗೆ ಮುಕ್ತಿ ನೀಡುವುದಕ್ಕೆ ಪ್ರಯತ್ನಿಸುವುದು 'ರೂಪದರ್ಶನ' ನಾಟಕ. ಹೆಣ್ಣು ಗಟ್ಟಿಗೊಳ್ಳಬೇಕು ಅನ್ನುವ ನಿಲುವು ಇಲ್ಲಿನದು.

ಐವತ್ತರ ದಶಕದಲ್ಲಿ ರಚಿಸಿದ ಈ ನಾಟಕದಲ್ಲಿ ಅಂತರ್ಜಾತಿ ವಿವಾಹವನ್ನು 'ಜಾತಿ ಬೇರೆಯಾದರೇನಾಯ್ತು? ನಾವು ಮನುಷ್ಯರಲ್ವೇ? ಒಂದು ಪ್ರಶ್ನೆಗೆ ಉತ್ತರ ಕೊಡುವಿಯಾ? ಎರಡು ವರ್ಷಗಳಿಂದ ನಿನ್ನ ತಂಗಿಗೆ ಗಂಡನ್ನು ಹುಡುಕ್ತಾ ಹಣ್ಣಾಗಿದ್ದೀ. ಯಾರಾದರೂ ದೊರೆತರೇ? ಯಾವನಾದರೂ ನಿನ್ನ ಜಾತಿಯ ಯುವಕ ಮುಂದಾಗೊಂಡು ನೆರವಾದನೆ?(ತುಸು ತಡೆದು) ಮನುಷ್ಯನಲ್ಲಿ ಜಾತಿಯ ಅಭಿಮಾನ ಇರಲೇಬಾರದೂಂತ ನನ್ನ ಮತವಲ್ಲ.. ಆದರೆ ಆ ಜಾತೀಯ ಭಾವನೆ ಓರ್ವ ಸ್ವಜಾತಿ ಬಂಧುವು ಸಂಕಷ್ಟದಲ್ಲಿರೋವಾಗ ನೆರವಾಗಲು ಪ್ರೇರೇಪಿಸದಲ್ಲಾ ಎಂದು ಬೇಸರ. ಅದೇ ಜಾತೀಯ ವಾತ್ಸಲ್ಯ ತನ್ನದೇ ಜಾತಿಯ ರೂಪವಿಲ್ಲದ ತರುಣಿಯೊಬ್ಬಳ ಜೀವನವನ್ನು ಬೆಳಗಿಸಲು ಮುಂದಾಗದಲ್ಲಾ ಎಂದು ವಿಷಾದ! ಈ ಸಮಸ್ಯೆ ಎಲ್ಲಾ ಜಾತಿಗಳಲ್ಲೂ ಇದೆ. ಇದು ಎಲ್ಲ ಜಾತಿ, ಸಮಾಜಗಳಿಗೂ ಅನ್ವಯಿಸೋ ಸಮಸ್ಯೆ. ಆವೇಶಭರದಲ್ಲಿ ಮಾತನಾಡಿದೆ. ನಾನೂ ಜಾತಿ ಬಿಟ್ಟಿಲ್ಲ. ಆದರೆ ನಿನ್ನ ಗೋಳು, ನಿನ್ನ ತಂಗಿಯ ಪರಿಸ್ಥಿತಿ ಕಂಡು 'ಜಾತಿಗಿಂತಲೂ ನೀತಿ ದೊಡ್ಡದು' ಎಂದು ಮನವರಿಕೆಯಾಯಿತು ಎನ್ನುವಲ್ಲಿ ಜಾತಿ ಹಾಗೂ ನೀತಿಯ ಕುರಿತ ಚರ್ಚೆ ಇದೆ, ನೀತಿಯೇ ಬಾಳಬೇಕಾದ ದೃಢ ನಿಲುವೂ ವ್ಯಕ್ತವಾಗಿದೆ.

ಇದು ಸುವರ್ಣರು ಬಿಲ್ಲವರ ಅಸೋಸಿಯೇಷನ್‌ನ ರಜತ ಮಹೋತ್ಸವ ಸಂಚಿಕೆಗಾಗಿ ಬರೆದ ನಾಟಕ. ಭಾರತೀಯ ವಿದ್ಯಾ ಭವನದ ಕಾಲೇಜು ನಾಟಕ ಸ್ಪರ್ಧೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ನೆರೆ ನಿರಾಶ್ರಿತರ ಸಹಾಯಕ್ಕೆ ಏರ್ಪಡಿಸಿದ ಕಾರ್ಯಕ್ರಮದಲ್ಲೂ ಈ ನಾಟಕ ಪ್ರದರ್ಶನಗೊಂಡು ಪ್ರಶಂಸೆಗಿಟ್ಟಿಸಿಕೊಂಡಿತು.

ಇವಿಷ್ಟೂ ನಾಟಕಗಳಲ್ಲಿ ಮದುವೆಯ ಕುರಿತ ಗಂಭೀರ ಚರ್ಚೆಯೇ ನಡೆಯುತ್ತದೆ. ಮದುವೆಯ ಕುರಿತಂತೆ ಹಿರಿಯರ ಮತ್ತು ಮದುವೆಯಾಗುವವರ ನಡುವಿನ ಭಿನ್ನಾಭಿಪ್ರಾಯಕ್ಕೆ ಸುವರ್ಣರು ಉತ್ತರಿಸಿದ ರೀತಿ ಗಮನಾರ್ಹವಾಗುತ್ತದೆ. ಮಕ್ಕಳಿಷ್ಟದಂತೆ ಮದುವೆ ಮಾಡಬೇಕಾದ ಅನಿವಾರ್ಯತೆ ಇರುವ ಸಂದರ್ಭವನ್ನು ಸುವರ್ಣರು ಇಲ್ಲಿ ಪರಿಚಯಿಸುತ್ತಾರೆ. ಈ ಕುರಿತ ಸಂಘರ್ಷ ಮುಂದುವರಿಯಬಾರದು ಎಂಬ ಇಂಗಿತ ಇರುವುದನ್ನೂ ಇಲ್ಲಿ ಅರ್ಥೈಸಿಕೊಳ್ಳಬಹುದು.

'ಮನುಷ್ಯನಲ್ಲಿ ಕುಲ, ಜಾತಿಯ ಬಗ್ಗೆ ಪ್ರೇಮವಿರಬಹುದು. ಆದರೆ ಮುಖ್ಯವಾಗಿ ಇರಬೇಕಾದ್ದು ಮನುಷ್ಯ ಜಾತಿಯ ಮೇಲೆ ಪ್ರೇಮ' ಎಂದು ಸಮರ್ಥಿಸಿದ ಸುವರ್ಣರು 1965ರಲ್ಲಿ 'ಕಣ್ಣು ತೆರೆಯಿತು' ನಾಟಕದಲ್ಲಿ ಮನುಷ್ಯತ್ವವನ್ನು ಕಾರ್ಯಗತಗೊಳಿಸುತ್ತಾರೆ.

'ನಾವೆಲ್ಲರೂ ಒಂದೇ. ನಮ್ಮ ಮನುಷ್ಯ ಜಾತಿ ಒಂದೇ. ಆದ್ರೂ ನಮ್ಗೆ ಹೊಂದ್ಕೊಂಡು ಅನ್ಯೋನ್ಯವಾಗಿ ಇರೋದು ಅಸಾಧ್ಯವಾಗುತ್ತೆ. ವೈಷಮ್ಯ, ಹೊಟ್ಟೆಕಿಚ್ಚು, ಜಗಳಾಂತ ಅದರಲ್ಲೇ ನಮ್ಮ ಆಯುಷ್ಯ ಕಳೆದು ಹೋಗುತ್ತೆ. ಕೊನೆಗಾದ್ರೂ ನಿನ್ನ ಕಣ್ಣು ತೆರೆಯಿತಲ್ಲ, ಸಂತೋಷ' ಎಂದು ನುಡಿಯುತ್ತಾರೆ. ಇಲ್ಲಿ ಮನುಷ್ಯ ಬದುಕಬೇಕಾದ ಕುರಿತ ಸುಂದರ ಹಿತವಚನವಿದೆ. ಮನುಷ್ಯ ಸಂಬಂಧದ ವಿಕಸನದ ಕುರಿತ ಕಾಳಜಿ ಇಲ್ಲಿದೆ.

'ಕಣ್ಣು ತೆರೆಯಿತು' ಸುಮಾರು ಐವತ್ತು ಪುಟಗಳ ನಾಟಕ, ನಗೆ ನಾಟಕ. ಆದರೆ ಇದು ಕೇವಲ ನಗೆನಾಟಕವಾಗಿರದೆ ಬಾಳಿನ ಒಂದು ಡೊಂಕನ್ನು ಕುರಿತು ತೀಕ್ಷ್ಣವಾದ ವಿಡಂಬನೆಯನ್ನು ಪ್ರದರ್ಶಿಸುವ ನಾಟಕ. ಇಲ್ಲಿ ಬರುವ ವ್ಯಕ್ತಿಗಳು ಇಂದು ನಮ್ಮೆದುರಿಗೆ ಕಾಣುವವರಿದ್ದಾರೆ. ಅಂತೆಯೇ ನಾಟಕಕ್ಕೆ ಹೆಚ್ಚು ಬೆಲೆ ಸಲ್ಲುತ್ತದೆ.

ನಾಟಕ ಪ್ರದರ್ಶನಕ್ಕೆ ಈಗಲೂ ಸ್ತ್ರೀ ಪಾತ್ರಧಾರಿಗಳು ಸಿಗುವುದು ಕಷ್ಟ. ಅಂಥ ತೊಂದರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ರಚಿತವಾದ, ಒಂದೇ ಸ್ತ್ರೀ ಪಾತ್ರ ಪ್ರಧಾನವಾಗಿರುವ ಈ ನಾಟಕ, ಪ್ರಯೋಗಕ್ಕೆ ಅನುಕೂಲ.

'ನಾಟಕದ ಭಾಷೆ, ಆಧುನಿಕ ವಿದ್ಯಾವಂತ ಸಮಾಜದ ಮಧ್ಯಮ ವರ್ಗದ ಜನರ ಭಾಷೆ. ಕಥೆ ಸರಳ....' ಎಂದು ಪ್ರೊ. ಜಿ.ವೆಂಕಟಸುಬ್ಬಯ್ಯ ಅವರು ಮುನ್ನುಡಿಯಲ್ಲಿ ಸತ್ಯವನ್ನೇಗಾಗಿಸಿದ್ದಾರೆ.

1965ರಲ್ಲಿ ಸುವರ್ಣರು ಪ್ರಕಟಿಸಿದ್ದು 'ವಿಷಮ ಘಳಿಗೆ' ನಾಟಕ. ಎರಡೇ ಎರಡು ದಿನಗಳಲ್ಲಿ ಬರೆದು ಮುಗಿಸಿದ ಈ ನಾಟಕ ಅತ್ಯಂತ ಪ್ರಬುದ್ಧವಾಗಿಯೂ ಮೈದಳೆದಿದೆ. ಪ್ರಚಲಿತ ವಿದ್ಯಮಾನಗಳನ್ನು ಹಾಸ್ಯ ಪ್ರಜ್ಞೆಯೊಂದಿಗೆ ತೆರೆದಿಡಲಾಗಿದೆ ಕೂಡ. ಯಾವ ಹಿರಿಯ ನಾಟಕಕಾರರಿಗೂ ಕಮ್ಮಿ ಅಲ್ಲದ ಹಾಗೆ ರೂಪುಗೊಂಡಿದೆ ಈ ಸೊಗಸಾದ ನಾಟಕ. ದಿನಕರ-ಶೀಲರ ಪ್ರೇಮ, ಸೂರಪ್ಪನ ಶೋಕಿತನ, ಆತನಿಗೆ ಮನೆಯವರು ಮಾಡ ಹೊರಟಿದ್ದ ವಿವಾಹವನ್ನು ತಪ್ಪಿಸಿದ ಸೋದರನ ಪತ್ತೇದಾರಿಕೆ ಹಾಗೂ ತುಂಟತನ, ಜ್ಯೋತಿಷಿಗಳ ಮೋಸ, ವಂಚನೆ, ಡಾಂಭಿಕತೆಗಳನ್ನೆಲ್ಲ ಬಟಾ ಬಯಲಾಗಿಸುವ ನಾಟಕ ಅಚ್ಚುಕಟ್ಟಾದ, ವೈಚಾರಿಕತೆಯ ಕಿರಣಗಳನ್ನೇ ಮನೋಜ್ಞವಾಗಿ ಬಿಂಬಿಸುತ್ತದೆ. ಸರಳತೆಯೇ ಈ ನಾಟಕದ ಯಶಸ್ಸಿನ ಮೈಲಿಗಲ್ಲು. ಚೇತೋಹಾರಿಯಾದ ನಿರೂಪಣೆ, ಮನಸ್ಸು ಅರಳಿಸುವ ಭಾಷೆ, ನಗು ಉಕ್ಕಿಸುವ ಸನ್ನಿವೇಶಗಳ ಪೋಣಿಸುವಿಕೆ ಒಪ್ಪವಾಗಿದೆ.

'ಹೌದೇನಯ್ಯ? ಬಳೆ ಇಟ್ಟ ಹೆಂಗಸರೇ ಅಡಿಗೆ ಮಾಡಬೇಕು, ಮೀಸೆ ಹೊತ್ತ ಗಂಡಸರು ಅವರಿಗೆ ನೆರವಾಗಬಾರದೆಂದು ವಿಧಿನಿಯಮವಿದೆಯೆ?' ಎಂಬ ದಿನಕರನ ಪ್ರಶ್ನೆಗೆ ಶಂಕರ 'ನೊ..ನೊ..ಒಬ್ಬರಿಗೊಬ್ಬರು ಸಹಾಯವಾಗಬೇಕು. ಕಾರಣ ಇದು-ಕೊ-ಎಕ್ಸಿಸ್ಟೆನ್ಸ್ ಯುಗ' (ಪು45-ವಿಷಮ ಘಳಿಗೆ) ಎಂದು ಉತ್ತರಿಸುತ್ತಾನೆ. ಆ ಕಾಲದಲ್ಲೇ ಸುವರ್ಣರ ವೈಚಾರಿಕತೆ, ಸಮಾನತಾ ಮನೋಭಾವದ ಚಿಂತನೆಗಳನ್ನು ಈ ಸಂಭಾಷಣೆ ದಾಲಿಸುತ್ತದೆ.

ಸುವರ್ಣರ 'ಅಭಾಗಿನಿ' ನಾಟಕದ ದುರಂತ ಕೂಡ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇಲ್ಲಿ ಆದ್ಯಂತವೂ ಬಾಲ ವಿಧವೆ 'ಶಾಂತಿ'ಗೆ ಅತ್ತೆ ನೀಡುವ ಘನಘೋರ ಹಿಂಸೆಯ ಹೃದಯವಿದ್ರಾವಕ ಚಿತ್ರಣವಿದೆ. ಇಂಥ ಅಮಾನವೀಯ ವರ್ತನೆ ಸಲ್ಲದು ಎಂಬ ಧ್ವನಿಯೇ ಪ್ರತೀ ಸಂದರ್ಭದಲ್ಲೂ ಹೊರಡುವುದಾಗಿದೆ. ಮೈದುನ, ವಿದ್ಯಾವಂತ ಮೈದುನ ಅನುಕಂಪದಿಂದ ಕಾಣುತ್ತಾನೆ, ತನ್ನ ತಾಯಿಯ ನಡವಳಿಕೆಯನ್ನೇ ಆತ ವಿರೋಧಿಸುತ್ತ ಬರುತ್ತಾನೆ. ಕ್ರೂರ ಅತ್ತೆಯೇ ಕೊನೆಗೆ ಮನಸ್ಸು ಬದಲಾಯಿಸುವುದು, ಸೊಸೆಯನ್ನು ಕರೆತರುವುದಕ್ಕೆ ಒತ್ತಾಯಿಸುವುದು, ಆಗಲೇ ಶಾಂತಿ ಹಿಂಸೆಯ ವೈಪರೀತ್ಯದಿಂದ ಸಾವನ್ನಪ್ಪುವುದು ಎಲ್ಲ ನಡೆದೇ ಬಿಡುತ್ತದೆ.

ಇಲ್ಲೂ ಮರುಮದುವೆಯ ಪ್ರಸ್ತಾಪ ಬರುತ್ತದೆ. ಈಡೇರುವ ಮುನ್ನ ಆಕೆ ಸಾಯುತ್ತಾಳೆ. ರಮೇಶನೇ ಆಕೆಯನ್ನು ಮದುವೆಯಾಗಲಿ ಎಂಬ ಸಲಹೆ ಆನಂದನಿಂದ ಮುಂದಿಡಲ್ಪಡುತ್ತದೆ. "ಶಾಂತಿಯಲ್ಲಿ ಭಗಿನಿ ಪ್ರೇಮವನ್ನಿಟ್ಟಿರುವೆನು. ಅಂತೆಯೇ ನಾನು ಅವಳಿಗೆ ಸೋದರನಂತೆ ಪ್ರಿಯನು. ಇಲ್ಲಿ ಪ್ರೇಯಸಿಯ ಪ್ರಣಯಕ್ಕಾಗಿ ಈ ಹೃದಯ ಬೇಯುತ್ತಲಿಲ್ಲ. – ಭಗಿನಿಯ ಸಂತೋಷಮಯ ಜೀವನವನ್ನು ಕಾಣಲು ಈ ಮನವು ಹಾತೊರೆಯುತ್ತಿದೆ' (86) ಎಂದಿರುವಲ್ಲಿ ಸಾಂಪ್ರದಾಯಿಕ ಮೌಲ್ಯವೊಂದನ್ನು ರಕ್ಷಿಸುವ ಕಾಳಜಿ ಇರುವುದು ಸ್ಪಷ್ಟ. ಆದರೆ ಸ್ವತಃ ಆನಂದನೇ 'ಶಾಂತಿಯು ನೀನೆಂದಂತೆ ಸುಗುಣ ಸಂಪನ್ನೆಯಾದ ದೀನ ಸ್ತ್ರೀಯಾಗಿದ್ದರೆ ನಾನು ಅವಳನ್ನು ವರಿಸುವೆನು' (87) ಎಂಬ ದೃಢ ನಿರ್ಧಾರವನ್ನು ಪ್ರಕಟಿಸಿಬಿಡುತ್ತಾನೆ. ಅದೇ ಕೊನೆಯ ನಿಲುವು ಎಂದೂ ಭರವಸೆ ನೀಡುತ್ತಾನೆ. ಭರವಸೆ ಈಡೇರುವ ಮೊದಲೇ ಶಾಂತಿ ಕೊನೆಯುಸಿರೆಳೆಯುತ್ತಾಳೆ. ಈ ಕೊಲ್ಲುವಿಕೆಯ ಹಿಂದೆ ಈಗಿರುವ ವ್ಯವಸ್ಥೆಯ ಉಲ್ಲಂಘನೆಯಾಗದಂತೆ ತಡೆಯುವ ಉದ್ದೇಶವಿದೆ. ವ್ಯವಸ್ಥೆಯ ಪ್ರಶ್ನೆ ಇದೆ, ಬದಲಾಗಬೇಕಾದ ಸಾಧ್ಯತೆಯ ಮಾರ್ಗಗಳಿವೆ, ಆದರೆ ಆಗುಗೊಳಿಸುವುದಿಲ್ಲ!

'ಗುಡ್ಡದಭೂತ' ನಾಟಕದ ರತ್ನ ಕೂಡ ವಿಚಾರವಾದಿಯಾಗಿ ಮೌಢ್ಯವನ್ನು ಬಯಲಿಗೆಳೆಯುವಲ್ಲಿ ಪ್ರಯತ್ನಿಸುತ್ತಾಳೆ.

ದುರಂತ ನಾಟಕಗಳಲ್ಲೇ ಹೆಚ್ಚು ತನ್ಮಯತೆಯಿಂದ ಬರೆಯುತ್ತಿದ್ದ ಸುವರ್ಣರು ಸುಕುಮಾರ ಭಾಷೆಯಲ್ಲಿ ನಾಟಕ ರಚಿಸುವುದಕ್ಕೆ ತಾವಾಗಿಯೇ ತೊಡಗಿಕೊಂಡವರಲ್ಲ. 'ಉದಯ ಕಲಾ ನಿಕೇತನ'ದ ಸಂತೋಷ ಕೂಟದ ಸಂದರ್ಭ ಗಂಭೀರ ನಾಟಕ 'ನಾಗರಿಕ' ಪ್ರದರ್ಶನದ ಸಂದರ್ಭ ನಗೆ ನಾಟಕವೊಂದನ್ನು ಪ್ರದರ್ಶಿಸಬೇಕು ಅನ್ನುವ ಅಭಿಪ್ರಾಯವೂ ವ್ಯಕ್ತವಾಯಿತು ಸದಸ್ಯರಿಂದ. ಆಗ ಸುವರ್ಣರು ಸ್ನೇಹಿತ ಆರ್.ಎಂ.ಕೋಟ್ಯಾನ್‌ರ ಪ್ರೀತಿಯ ಒತ್ತಾಯಕ್ಕೆ ಮಣಿದು ಅನಿವಾರ್ಯವಾಗಿ ಸೃಜಿಸಿದ್ದು 'ವಿಷಮ ಘಳಿಗೆ'.

ಕೃತಿಯ ಆರಂಭದಲ್ಲಿ ಹೇಳಿದಂತೆ 'ಸುಕುಮಾರ ಪ್ರಹಸನಗಳಲ್ಲಿ ಭಾಷೆಯ ವ್ಯವಹಾರ ಸರಳ ಹಾಗೂ ಸುಕುಮಾರವಿರಬೇಕಾದುದು ಅನಿವಾರ್ಯವೆಂಬುದು ನನ್ನ ಮತ' ಎಂದು ನಂಬಿದ ಸುವರ್ಣರು ಈ ನಿಲುವಿಗೆ ಯಾವತ್ತೂ ಬದ್ಧರಾದವರು ಅನ್ನುವುದನ್ನು ಅವರ ಎಲ್ಲ ಸುಕುಮಾರ ನಾಟಕಗಳೂ ಶ್ರುತಪಡಿಸಿವೆ.

'ವಿಷಮ ಘಳಿಗೆ' ನಗೆ ನಾಟಕ. ಮನಸ್ಸನ್ನು ಪ್ರಫುಲ್ಲಗೊಳಿಸುವ 'ಸುಕುಮಾರ' ಭಾಷೆ. ಮೋಸ, ನಯವಂಚನೆಯ ಲೇವಡಿ ಇದೆ. ಒಲ್ಲದ ಮದುವೆಯನ್ನು ತಡೆಯುವಲ್ಲಾಗುವ ಎಡವಟ್ಟು ಮತ್ತು ಆಪತ್ತು ನಿವಾರಣೆಯಾದ ಬಗೆಯನ್ನು ನಾಟಕವಾಗಿಸಿದ ರೀತಿಯಲ್ಲಿ ಸುವರ್ಣರು ಭಿನ್ನರಾಗುತ್ತಾರೆ. ಸ್ತ್ರೀಯರನ್ನೂ ಗೌರವಿಸುವ, ಅವರ ಅಭಿಪ್ರಾಯಕ್ಕೂ ಬೆಲೆ ಕೊಡುವ ಇಲ್ಲಿ, ಸ್ತ್ರೀಯೂ ಪುರುಷನಿಗೆ ಸಮಾನಳಾಗಿಯೇ ಕಾಣಿಸಿಕೊಳ್ಳುತ್ತಾಳೆ.

ದಿನಕರ: ನಡಿ..ಶೀಲ..ನಾವು ಇವರಿಗಿಂದು ಅಡುಗೆಯ ರುಚಿ ತೋರಿಸಿಯೇ ಬಿಡಬೇಕು.

ಶೀಲ: ನಾಚಿಕೆ ಆಗೋದಿಲ್ಲವೇ ನಿಮಗೆ? ಶಂಕರಣ್ಣ ನಿಮ್ಮ ಅವಸ್ಥೆ ನೋಡಿ ನಗುತ್ತಾರೆ.

ದಿನಕರ: (ಶಂಕರನಿಗೆ) ಹೌದೇನಯ್ಯ...ಬಳೆ ಇಟ್ಟ ಹೆಂಗಸರೇ ಅಡುಗೆ ಮಾಡಬೇಕು, ಮೀಸೆ ಹೊತ್ತ ಗಂಡಸರು ಅವರಿಗೆ ನೆರವಾಗಬಾರದೆಂದು ವಿಧಿ ನಿಯಮವಿದೆಯೇ

ಶಂಕರ: ನೋ...ನೋ...ಒಬ್ಬರಿಗೊಬ್ಬರು ಸಹಾಯವಾಗಬೇಕು. ಇದು ಕೋ-ಎಕ್ಸಿಸ್ಟೆನ್ಸ್ ಯುಗ. (ದಿನಕರ ಶೀಲ ಕೈ ಕೈ ಹಿಡಿದು ಒಳಸಾಗುವರು)

ಈ ಸಂಭಾಷಣೆ ಮೂಲಕ ಅಡುಗೆ ಕೆಲಸವನ್ನೂ ಸ್ತ್ರೀಪುರುಷರು ಸಮಾನವಾಗಿ ಹಂಚಿಕೊಂಡೇ ನಿಭಾಯಿಸಬೇಕೆಂಬ ವಾದವನ್ನು ಪ್ರಬಲವಾಗಿ ಮಂಡಿಸಿ ಅದನ್ನು ಪಾತ್ರಗಳಿಂದ ಆಗುಗೊಳಿಸಿರುವ ವಿಶಾಲ ದೃಷ್ಟಿಕೋನ ಮೆಚ್ಚುಗೆ ಪಡೆಯುತ್ತದೆ.

ಮದುವೆ ಎಂಬ ವಿಷಯದಲ್ಲಿ ಗಂಡು ಹೆಣ್ಣಿನ ಅದರಲ್ಲೂ ಹೆಣ್ಣಿನ ಅಭಿಪ್ರಾಯಕ್ಕೆ ಬೆಲೆಯೇ ಕೊಡದೆ ನಿರ್ಧಾರಕ್ಕೆ ಬಂದು ಬಿಡುವ ಪುರುಷಾಧಿಕ್ಯದ ಅಹಂ ಬಗೆಗಿನ ವ್ಯಂಗ್ಯ ಕೂಡ ಗಮನಾರ್ಹವಾದದ್ದೇ.

ವಯಸ್ಸಿಗೆ ಬಂದ ಮಗಳಿಗೆ ಯಾವ ವಿಷಯವನ್ನೂ ತಿಳಿಸದೆ ಗಂಡು ನೋಡಲು ಆಮಂತ್ರಿಸಿರುವಲ್ಲಿ, ತಂಗಿಗೆ ಆಕೆಯ ಮಗ ದಿನಕರ ಹಾಗೂ ತನ್ನ ಮಗಳು ಶೀಲಾರ ಮದುವೆ ನೆರವೇರಿಸುವ ಭರವಸೆ ಕೊಟ್ಟ ಮನಸ್ಸು ಇದ್ದಕ್ಕಿದ್ದಂತೆ ಬದಲಾಗುತ್ತದೆ. ಅದಕ್ಕೆ ಅವರು ಕೊಡುವ ಕಾರಣ ಆತ ನಾಟಕ ಕಲಾವಿದ ಎಂಬುದು. ಕಲಾವಿದರಿಗೆ ಹೆಣ್ಣು ಕೊಡದ ಸಂದರ್ಭ ಇಲ್ಲಿ ಅನಾವರಣಗೊಂಡಿದೆ. ಹಾಸ್ಯದ ನಡುವೆಯೂ ಪ್ರಧಾನವಾಗಿ ಮಿಂಚುವ ಕಾಳಜಿ, ವಹಿಸಬೇಕಾದ ಎಚ್ಚರಿಕೆಯ, ಪ್ರಗತಿಪರ ಕಾಳಜಿಯ ಸಂದೇಶ

ಮುಖ್ಯದ್ದಾಗುತ್ತದೆ.

ಹೀಗೇ ಪುಟ ತಿರುವಿ ಒಂದೊಂದು ಸಂಭಾಷಣೆ ಮೇಲೆ ಕಣ್ಣು ನೆಟ್ಟರೂ ಅಲ್ಲಿ ನಸು ನಗು ಉಕ್ಕಿಸುವ ಸಾಲುಗಳೇ ತಟ್ಟುತ್ತವೆ.

'ಶಂಕರ: ಯಾರು? ಸೂರಪ್ಪನೆ? ಅವನು ಕಾಲಿಗೆ ಬುದ್ಧಿ ಹೇಳಿದ.

ಶ್ಯಾಮಣ್ಣ: ನಿನ್ನ ತಮಾಷೆ ಇನ್ನೂ ಬಿಟ್ಟು ಹೋಗಿಲ್ಲ. ಎಲ್ಲಿ ಹೊರಗೆ ಹೋದರೆ?

ಶಂಕರ: ತಮಾಷೆಯಲ್ಲ ಶ್ಯಾಮಣ್ಣ, ನಿಜ ಹೇಳುತ್ತಲಿದ್ದೇನೆ. ಹೊರಗೆ ಓಡಿದ ಅವನ ನಾಗಾಲೋಟ ನೋಡಲಿಕ್ಕೆ ನಿಮಗೆ ಭಾಗ್ಯವಿಲ್ಲ. ಅವನು ಸೂರಪ್ಪನಲ್ಲ...ವಿಷಸರ್ಪ

ಶಂಕರ: ಬಂಗಾರದ ಚೈನು! ಅವನ ಕೊರಳಿಗೋ? ಯಾಕೆ ಎಲ್ಲಿಯಾದರೂ ಹುರಿ ಹಗ್ಗ ಸಿಗಲಿಲ್ಲವೇ ?

'ಕದ್ದವನೆ ಕಳ್ಳ' ಕೂಡ ಸುಕುಮಾರ ನಾಟಕ ಪ್ರದರ್ಶನಕ್ಕೆ ರಚನೆಯೇ ದೊರೆಯದಿದ್ದಾಗ ಅನಿವಾರ್ಯ ಪರಿಸ್ಥಿತಿಯಲ್ಲೇ ಸೃಷ್ಟಿಕಂಡ ಇನ್ನೊಂದು ಸುಕುಮಾರ ನಾಟಕ. ಮಿತ್ರ ಕೆ.ಎಸ್. ಬೋಳಾರರ ಒತ್ತಾಸೆಯ ಮೇರೆಗೆ ಕದ್ದವನೆ ಕಳ್ಳನನ್ನು ಒಂದೆರಡು ದಿನಗಳಲ್ಲಿ ಸೃಷ್ಟಿಸಿಬಿಡುತ್ತಾರೆ.

'ಕದ್ದವನೆ ಕಳ್ಳ' ಆದ್ಯಂತವೂ ಮನಃಪೂರ್ತಿ ನಕ್ಕುನಗಿಸುವ ಉನ್ನತ ಮಟ್ಟದ ಹಾಸ್ಯ ಮನಸ್ಸನ್ನು ತಿಳಿಗೊಳಿಸುತ್ತದೆ. ಒಂದು ವಸ್ತುವನ್ನು ಒಂದು ಕಡೆಯಲ್ಲಿ ಇಟ್ಟು ಮರೆತುಬಿಡುವ ಹಾಗೂ ಅದಕ್ಕಾಗಿ ಇಡೀ ಮನೆಯನ್ನು ಜಾಲಾಡುವ ರಸಮಯ ಸನ್ನಿವೇಶಗಳನ್ನು ಅತ್ಯಂತ ಸೊಗಸಾಗಿ ಕಡೆದಿಟ್ಟಿದ್ದಾರೆ. ಉದಯಕಲಾ ನಿಕೇತನದ ಸಂತೋಷ ಕೂಟಕ್ಕೆ ಅತ್ಯಗತ್ಯವಾಗಿ ರಚಿಸಲೇಕಾಗಿ ಬಂದ, ಒಂದೆರಡು ದಿನದಲ್ಲೇ ಸಿದ್ಧಗೊಂಡ ಸುಂದರ ನಾಟಕ. ಎಲ್ಲೂ ಸುವರ್ಣರ ಅವಸರ ಇಣುಕು ಹಾಕುವುದಿಲ್ಲ. ಲಯಬದ್ಧವಾಗಿ ಹಾಸ್ಯ ರಸಾಯನ ಉಣಬಡಿಸಿದ ಕೀರ್ತಿ ಸುವರ್ಣರಿಗೆ ಸಲ್ಲುತ್ತದೆ. ವಸ್ತುವನ್ನು ಎಲ್ಲೋ ಒಂದೆಡೆ ಇಟ್ಟು ಮರೆತು ಊರಿಡೀ ಹುಡುಕುವ, ಇತರರ ಮೇಲೆ ಸಂಶಯದ ಆರೋಪ ಹೊರಿಸುವ, ಇದರಿಂದಾಗುವ ವಿಪರೀತ ಪರಿಸ್ಥಿತಿಗೆ ಇದು ಕನ್ನಡಿ. ಈ ಕನ್ನಡ ನಾಟಕದಲ್ಲಿ ಅರ್ಧ ಭಾಗ ಇಂಗ್ಲಿಷೇ ಆವರಿಸಿಕೊಂಡಿದೆ. ಕನ್ನಡದೊಳಗೆ ಆಂಗ್ಲ ಬಾಷೆ ಎಷ್ಟರ ಮಟ್ಟಿಗೆ ಹಾಸು ಹೊಕ್ಕಾಗಿದೆ ಎಂಬುದನ್ನು ಕೃತಿಯು ಪುಟ ಪುಟವೂ ಸಾರುತ್ತಿದೆ. ರಂಗಪ್ಪಯ್ಯನಿಗಾದರೋ ಕನ್ನಡವನ್ನೇ ತರ್ಜುಮೆ ಮಾಡಿ ಇಂಗ್ಲಿಷ್ ಮಾತನಾಡುವ ತೆವಲು. ಸ್ವಂತ ಭಾಷೆಯಲ್ಲೂ ಹಿಡಿತವಿಲ್ಲದಿದ್ದರೂ, ಆಂಗ್ಲ ಭಾಷೆಯ ಬಗ್ಗೂ ಗೊತ್ತಿಲ್ಲದಿದ್ದರೂ ಅದರ ವ್ಯಾಮೋಹಕ್ಕೆ ಒಳಗಾಗಿ ಅಪಹಾಸ್ಯಕ್ಕೀಡಾಗುವ ಪ್ರಸಂಗವನ್ನು ಅರ್ಥಪೂರ್ಣವಾಗಿ ಧ್ವನಿಸಿದ್ದಾರೆ.

ಇವಿಷ್ಟು ಹಾಸ್ಯ ಪ್ರಧಾನ ಸಂಗತಿಗಳು ಸುವರ್ಣರ ಕೊಡುಗೆಗಳಾಗಿ ಬಾಳುತ್ತವೆ. ಹಾಸ್ಯದೊಂದಿಗೇನೇ ಜೀವನ ಸಂದೇಶ ನೀಡುವ ಉದಾತ್ತತೆಯನ್ನು ಮೆರೆದ ಸುವರ್ಣರು

ಎಲ್ಲೆಡೆ ಪ್ರತಿಪಾದಿಸಿದ್ದು ಮಾನವೀಯ ಚಿಂತನೆಗಳನ್ನೇ. ದುರಂತ ನಾಟಕಗಳ ಕಡೆಗೂ ಸುವರ್ಣರು ಆಕರ್ಷಿತರಾಗಿದ್ದಾರೆ. ಪ್ರಯೋಗಕ್ಕೂ ಇಳಿದು ಸಫಲತೆ ಕಂಡಿದ್ದಾರೆ.

'ನಿತ್ಯ ಜೀವನದ ಕಥೆ, ಸ್ವಾರಸ್ಯವಾದ ಪಾತ್ರ ರಚನೆ, ವೈವಿಧ್ಯತೆಯ ಸಂವಾದಗಳು– ಅದೂ ಸರಳ ಸುಂದರ ಶೈಲಿಯಲ್ಲಿ.

ಕನ್ನಡ ಅಧ್ಯಾಪಕರಾಗಿದ್ದ ಈ ನಾಟಕಕಾರರು ಪಾತ್ರಗಳ ಕೊರಳಿಗೆ ಹೊರಲಾರದ ಶಬ್ದಗಳ ಗಂಟೆ ಕಟ್ಟಲಿಲ್ಲ. ಸರಳ ರಗಳೆಯ ಸಂಕೋಲೆ ಹಾಕಲಿಲ್ಲ. ಹೃದಯದಲ್ಲಿ ಹೊರಹೊಮ್ಮುವ ಭಾವನೆಗೆ ದ್ರೋಹ ಮಾಡದೆ ಪಾತ್ರಗಳ ನಾಲಗೆಯಲ್ಲಿ ಮನಸ್ಸಿನ ಮಾತನ್ನೇ ನುಡಿಸಿದ್ದಾರೆ. ಒಂದೇ ಸನ್ನಿವೇಶದಲ್ಲಿ ಒಂದೂವರೆ ತಾಸುಗಳ ಮನರಂಜನೆ ತುಂಬಿದ್ದಾರೆ. ಕೆಲವೊಂದು ಸಾರಿ ಪ್ರೇಕ್ಷಕರ ಮನದಲ್ಲಿ ಮೂಡುವ ಮಾತನ್ನು ಪಾತ್ರಗಳು ಆಡುವಂಥ ಚಾಣಾಕ್ಷತನದಿಂದ ರಸನಿಮಿಷಗಳನ್ನು ಹೆಣೆದಿದ್ದಾರೆ. ರಂಗದ ಬದಲಾವಣೆಯಲ್ಲಿ ಬಣ್ಣ ಬಣ್ಣದ ದೀಪಗಳು ಹೊಯ್ದಾಡುವ ಗೊಂದಲವಿಲ್ಲ. ಹಿನ್ನೆಲೆಯ ಮೇಳ ಸಮ್ಮೇಳ ಸಂಗೀತಗಳ ಕೋಲಾಹಲವಿಲ್ಲ. ಸರಳ ಜೀವನದ ಕನ್ನಡಿಗನೊಬ್ಬನ ಸಂಸಾರದಲ್ಲಿ ಸಂಬಳ ಪಡೆದ ದಿನ, ಸಂಬಂಧಿಕರು ಬರುವ ದಿನ, ಗೆಳೆಯರು ಕೂಡುವ ದಿನ–ಇವೆಲ್ಲ ಗಡಿಬಿಡಿಗಳಲ್ಲಿ ನೂರು ರೂಪಾಯಿ ನೋಟೊಂದು ಕೋಲಾಹಲವೆಬ್ಬಿಸಿಬಿಡುತ್ತದೆ. ಒಬ್ಬನಿಗೆ ಮರೆವು, ಮತ್ತೊಬ್ಬನಿಗೆ ಅವಸರ, ಇನ್ನೊಬ್ಬನು ಮಹಾಚತುರ. ಇವರ ಗೊಂದಲದಲ್ಲಿ ಮಾನವ ಸಹಜವಾದ ಸರಳವೃತ್ತಿ ಸುಳಿಗೆ ಸಿಗುತ್ತದೆ. ಈ ಮಧ್ಯೆ ರಂಗಪ್ಪಯ್ಯನವರು ಹುಚ್ಚು ಮನಸ್ಸಿಗೆ ಹತ್ತು ಮುಖಗಳು ಕಂಡಂತೆ ತಬ್ಬಿಬ್ಬಾಗಿ ನಾಟಕದ ಹಾಸ್ಯ ಗೋಪುರಕ್ಕೆ ಕಳಶವನ್ನಿಡುತ್ತಾರೆ. ನಿರಾಭರಣ ಗರತಿಯಂತೆ ಸಾತ್ವಿಕ ಸೌಂದರ್ಯದಿಂದ ತುಂಬಿದೆ ಈ ನಾಟಕ!' ಅಧ್ಯಯನ ಹಾಗೂ ಚಿಂತನಶೀಲರಾದ ಆರ್.ಡಿ. ಕಾಮತ್ ಅವರು ಮುನ್ನುಡಿಯಲ್ಲಿ ಕೃತಿಯ ಬಗ್ಗೆ ಗಂಭೀರವಾಗಿ ಪರಾಮರ್ಶಿಸಿದ್ದು ಇದಾಗಿದೆ.

'ಗುಡ್ಡೆದ ಭೂತ' ತುಳು ಭಾಷೆಯಲ್ಲಿ ರಚಿತಗೊಂಡ ವಿಶಿಷ್ಟ ಹಾಗೂ ಸತ್ತ್ವಶಾಲಿ ನಾಟಕ. ಸುವರ್ಣರಿಗೆ ಇನ್ನಷ್ಟು ಖ್ಯಾತಿ ತಂದಿತ್ತ ಕೃತಿ ಇದು. ತುಳುನಾಡ ಶ್ರೀಮಂತ ಸಂಸ್ಕೃತಿಯನ್ನು, ನಂಬಿಕೆಯನ್ನು ಪರಿಚಯಿಸುತ್ತಲೇ ಮೂಢನಂಬಿಕೆಯನ್ನು ಚಿಕಿತ್ಸಕ ದೃಷ್ಟಿಕೋನದಿಂದ ನೋಡುವ ಕೃತಿಯಾಗಿ 'ಗುಡ್ಡೆದ ಭೂತ' ಪ್ರಧಾನವಾಗುತ್ತದೆ. ಮುಂಬಯಿಯಿಂದ ಬಂದ ತಂದೆ ಮಗಳು ಇಲ್ಲೇ ತುಳುನಾಡಿನ ಹಳ್ಳಿಯೊಂದರಲ್ಲಿನ ಬಂಗಲೆಯನ್ನೇ ಕೊಂಡು ವಾಸ ಮಾಡುವ ಸಂದರ್ಭ, ರಂಗಣ್ಣ ವಿವರಿಸುವ ಭೂತದ ಉಪಟಳದ ಕಥೆ, ನಂತರ ಸಾಕ್ಷಾತ್ ಎದುರಾಗುವ ವಿವಿಧ ಬಗೆಯ ಅನಾಹುತಗಳು, ಚಮತ್ಕಾರಗಳು ಇಬ್ಬರನ್ನೂ ಚಿಂತೆಗೊಡ್ಡುತ್ತವೆ. ಹಾಗಿದ್ದರೂ, ನಗರದಲ್ಲಿ ಬೆಳೆದ ಮಗಳು ರತ್ನ ಈ ಕುರಿತು ಕೊಂಚ ವಿಮರ್ಶಾತ್ಮಕವಾಗಿಯೇ ಯೋಚಿಸುತ್ತಾಳೆ, ಶ್ರೀನಿವಾಸನೂ ಬೇಟೆಗಿಳಿಯುತ್ತಾನೆ. ಭೂತಚೇಷ್ಟೆಯನ್ನು ಅಲ್ಲಗಳೆಯುವ, ಅದರ ಹೆಸರಲ್ಲಿ ಮನುಷ್ಯರೇ ಮಾಡುವ ಅನಾಚಾರಗಳನ್ನು, ಅದರ ಕಾರಣಗಳನ್ನು ಕಲೆ ಹಾಕಿ ತಪ್ಪಿತಸ್ಥರಿಂದಲೇ ನಿಜಾಂಶವನ್ನು ಬಯಲುಮಾಡಿಸುವಲ್ಲಿ ಕೃತಿ ಯಶ ಸಾಧಿಸುತ್ತದೆ. ಸಮಸ್ಯೆಯನ್ನು

ವೈಜ್ಞಾನಿಕ ದೃಷ್ಟಿಕೋನದಿಂದ ಕುತೂಹಲ ಹುಟ್ಟಿಸುವಂತೆ ಶೋಧಿಸುತ್ತ ಹಾಸ್ಯವನ್ನೂ ಜಿನುಗಿಸುವ, ಸಮಸ್ಯೆ ತಿಳಿಯಾಗಿಸುವ ಕುಸುರಿ ಸೊಗಸಾಗಿದೆ. ಮೂಢನಂಬಿಕೆಗೆ ಬಲಿಯಾಗಬಾರದ, ಆ ಹೆಸರಿನಲ್ಲಿ ಶೋಷಣೆ ಮಾಡಬಾರದ ಸಂದೇಶ ಇಲ್ಲಿ ದಟ್ಟವಾಗಿದೆ. ತುಳು ಭಾಷೆಯ ಬಗೆಗಿನ ಹಿಡಿತ, ಪ್ರೌಢಿಮೆ, ಚೆಲುವು ಮೋಡಿಮಾಡುತ್ತದೆ.

ಸುವರ್ಣರ ವಿಚಾರಶೀಲತೆಗೆ ಸತ್ವಯುತ ಸಂಭಾಷಣೆಯ ಕೆಲವು ಸಾಲುಗಳು ಇಲ್ಲಿವೆ. ತುಳು ನಾಟಕವಿದು. ಆದರೆ ಬೇರೆ ಜಿಲ್ಲೆಯಿಂದ ಬಂದ ಪೋಲೀಸ್ ನಂಜುಂಡಯ್ಯ ಬಂದಾಗ ಕನ್ನಡದಲ್ಲೇ ಸಂಭಾಷಣೆ ನಡೆಯುತ್ತದೆ. ಈ ಸಂದರ್ಭದ ಮಾತುಕತೆ:

ಶ್ರೀನಿವಾಸ: ಇಲ್ಲ ಕಲ್ಲಿನ್ಮೇಲೆ ನಿಂತು ಗೆಜ್ಜೆ ಅಲುಗಾಡಿಸಿ ಮೂರು ಮೂರು ಸಲ ಇವರ ಹೆಸರು ಹೇಳಿ ಕರೆಯಿತು. ಅದನ್ಕೇಳಿ ಇವರು ಹೊರಗ್ಬಂದ್ರು,

ರತ್ನ: ನಾನು ಅಂಗಳಕ್ಕೆ ಇಳಿಯೋವರ್ಗೂ ಕತ್ತಲೇಲಿ ನನಗೇನೂ ಕಾಣ್ಲಿಲ್ಲ. ಇಲ್ಲಿಗ್ಬಂದು ಆ ಕಡೆ ನೋಡಿದಾಗ ಕಲ್ಲಿನ ಮೇಲೆ ನಿಂತಿದೆ ಭೂತ! ನಾನು ಹೆದರಿ ಚೀರಿದೆ...

ನಂಜುಂಡಯ್ಯ: ಆಗ ಇವನು ಹೊರಗ್ಬಂದು ಟಾರ್ಚ್ ಹಾಕಿದ. ಭೂತ ಹೆದರಿ ಓಡಿತು. ಇವನು ಹಿಂಬಾಲಿಸಿದಾಗ ಗುಡ್ಡದಿಂದ ಕಲ್ಲಿನ ಮಳೆ ಬಿತ್ತು. ಅದನ್ನೆಲ್ಲ ಇವನು ಆಗಲೇ ರಿಪೋರ್ಟ್ ಮಾಡಿದ್ದಾನೆ...ನೀನು ಹೇಳಿದಿಯಲ್ಲಮ್ಮ ಹೆದರಿ ಚೀರ್ಕೊಂಡು ಬಿಟ್ಟೆಂತ...ಹಾಗಾದ್ರೆ ಭೂತವನ್ನು ಸರಿಯಾಗಿ ನೋಡಿದೋಳು ನೀನೊಬ್ಬೇ..ಹೇಗಿತ್ತದು ನೋಡೋಕೆ?

ರತ್ನ: ಹೇಗೇಂದ್ರೆ...ಅದನ್ನು ಹೇಳೋಕ್ಬರೋದಿಲ್ಲ. ಕತ್ತಲೇಲಿ ನಾನು ನೋಡಿದ್ದು, ಅಲ್ದೆ ತುಂಬ ಹೆದರಿದ್ದೆ. ಏನೋ ವಿಕಾರವಾಗಿ, ತುಂಬ ಭಯಾನಕವಾಗಿ ಕಂಡಿತು. ಆದರೆ ಮರುಕ್ಷಣದಲ್ಲಿ ಅಲ್ಲಿಲ್ಲ ಅದು!

ನಂಜುಂಡಯ್ಯ: ಹಾಗಾದ್ರೆ ನೀನೂ ಈ ಭೂತವನ್ನು ಸರಿಯಾಗಿ ನೋಡ್ಲೇ ಇಲ್ಲ. ಬಹಳ ನಾಚಿಕೆ ಈ ಭೂತಕ್ಕೆ...ಯಾರ್ಗೂ ಸರಿಯಾಗಿ ಮುಖ ತೋರ್ಸೋದಿಲ್ಲ. I Think somebody is plyaing mischief ! ಆ ಗುಡ್ಡದ ಕೆಳಗೆ ಹೋಗಿ ಮಾಯವಾಯ್ತು ಅಂತ ಹೇಳಿದಿಯಲ್ಲ ಅಲ್ಲಿ ನಾಲ್ಕು ಮನೆಗಳಿವೆ. ಆ ನಾಲ್ಕೂ ಮನೆಯವರನ್ನು ಬೆದರಿಸಿ ಬಾಯಿ ಬಿಡಿಸೋಕೆ ಪ್ರಯತ್ನಿಸ್ಬಹುದು. ಆದರೆ ಅದಕ್ಕೆ ಬದಲು ಈ ಭೂತವನ್ನು ಸ್ವಲ್ಪ Dramatic ಆಗಿ ಹಿಡಿಯೋಣ. ರಾತ್ರಿ ನಿಮ್ಮ ಹೆಸರು ಹೇಳಿ ಕೂಗ್ಬೇಕಿದ್ರೆ ಅವರು ಹಗಲು ಹೊತ್ನಲ್ಲಿ ಬಂದು ನಿಮ್ಮನ್ನು ಮಾತನಾಡಿಸಿ ಎಲ್ಲಾ ತಿಳ್ಕೊಂಡು ಹೋಗುತ್ತಿರಬೇಕು. ನಿಮಗೆ ಯಾರ್ಮೇಲಾದ್ರೂ ಸಂಶಯ ಇರ್ಬೇಕಲ್ಲ?..'

ಇಲ್ಲೆಲ್ಲ ಸಹಜತೆ ಖುಷಿಕೊಡುತ್ತದೆ. ಆಡು ಮಾತು, ಶೈಲಿ, ಪತ್ತೇದಾರಿ ತಂತ್ರ ಹಾಗೂ ಮುಖ್ಯವಾಗಿ ವೈಚಾರಿಕತೆ, ಮೂಢ ನಂಬಿಕೆಯ ಪರದೆ ಸರಿಸುವ ಕಾಳಜಿಯ

ಪ್ರಯತ್ನ ಇಲ್ಲಿ ಮಿಂಚುತ್ತದೆ. ಇಲ್ಲಿನ ಈ ನವಿರುತನ, ತಂತ್ರಗಳು ಓದಿಗೂ ಖುಷಿ ಕೊಡುತ್ತವೆ.

ಸುವರ್ಣರು ತಮ್ಮ ನಾಟಕಗಳಲ್ಲಿ ಪಶ್ಚಾತ್ತಾಪದ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತಾರೆ. ಕಪ್ಪು ಪಾತ್ರಗಳೆಲ್ಲ ತಮ್ಮ ತಪ್ಪಿನ ಅರಿವು ಮಾಡಿಕೊಳ್ಳುವುದರ ಜತೆಗೆ ತಿದ್ದಿಕೊಳ್ಳಬೇಕು ಅನ್ನುವುದನ್ನೇ ಮತ್ತೆ ಮತ್ತೆ ಹೇಳುತ್ತ ಶುಚಿಯಾದ ಬದುಕು ಕಟ್ಟಿಕೊಳ್ಳುವುದಕ್ಕೆ ಪ್ರೇರಣೆಯಾಗುತ್ತಾರೆ. 'ಕ್ಷಮೆ ಬೇಡೋದ್ರಿಂದ ಏನೂ ಉಪಯೋಗವಿಲ್ಲ. ಪಶ್ಚಾತ್ತಾಪ ಪಡಬೇಕು. ಪಶ್ಚಾತ್ತಾಪವೇ ಪ್ರಾಯಶ್ಚಿತ್ತ ಅಂದುಕೊ, ಮುಂದೆಂದೂ ಅಂಥ ತಪ್ಪು ಮಾಡೋದಿಲ್ಲಾಂತ ಪ್ರತಿಜ್ಞೆ ಮಾಡಬೇಕು' ಎಂದು ಒಳ್ಳೆಯತನದತ್ತಲೇ ಮನಸ್ಸು ತುಡಿಯುವಂತೆ ಕಟ್ಟಿಕೊಡುವುದು ಅವರ ಹೆಚ್ಚುಗಾರಿಕೆಯಾಗಿದೆ.

'ಹಳ್ಳದಿಂದ ಹಾದಿಗೆ' ಮಹಿಳಾ ಮಂಡಳಿಯಲ್ಲಿ ಹೆಣ್ಣು ಹೆಚ್ಚಾಗಿ ತೊಡಗಿ ಕುಟುಂಬ ಮರೆಯುವ ಸಂದರ್ಭವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಹೆಣ್ಣು ಅಡುಗೆ ಮನೆಗೇ ಸೀಮಿತವಾಗಿರಬೇಕು ಎಂಬ ಧ್ಯೇಯ ಸುವರ್ಣರದಲ್ಲ. ಆದರೆ ಕುಟುಂಬ ನಿರ್ಲಕ್ಷಿಸಿ ಅಲ್ಲಿ ತೊಡಗಿಕೊಳ್ಳಬಾರದು. ಮಹಿಳೆಯರು ಇಲ್ಲಿ ಬಿಡುವಿನ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಜ್ಞಾನಾಭಿವೃದ್ಧಿಯಾಗುವ ವಿಚಾರಗಳನ್ನು ಚರ್ಚಿಸಬೇಕು ಎಂಬ ಕಿವಿಮಾತನ್ನು ವಿಭಿನ್ನ ಧಾಟಿಯಲ್ಲಿ ಹೇಳುತ್ತಾರೆ. ಅದಿಲ್ಲದೇ ಹೋದರೆ ಸಂಸಾರವೇ ಮೂರಾಂಬಟ್ಟೆಯಾಗುವ ಅಪಾಯವನ್ನೂ ಕಣ್ಮುಂದೆ ತಂದು ನಿಲ್ಲಿಸಿ ಎಚ್ಚರಿಸಿದ್ದಾರೆ.

'ಮಹಿಳಾ ಸಮಾಜ ಕಟ್ಟೋದು ತಪ್ಪಲ್ಲ ಭಾವ...ಆದರೆ ಅದನ್ನು ಕಟ್ಟೋಕೇಂತ ಉಳಿದವನ್ನೆಲ್ಲ ಕೆಡವಿ ಹಾಕೋದು ತಪ್ಪು. ಮಹಿಳಾ ಸಮಾಜಗಳು ಸ್ತ್ರೀಯರ ಬಿಡುವಿನ ಸಮಯವನ್ನು ಸದುಪಯೋಗಗೊಳಿಸೋದಕ್ಕಾಗಿ ಸಹಕಾರಿಯಾಗ್ಬೇಕು.. ಜ್ಞಾನಾಭಿವೃದ್ಧಿಯಾಗೋ ವಿಚಾರಗಳು, ಸಂಸಾರದಲ್ಲಿ ಸುಖ ಸಂತೋಷ ಹೆಚ್ಚಿಸುವ ಸಾಧನಗಳ ಕುರಿತು ಹೆಂಗಸ್ರನ್ನು ತರಬೇತಿಗೊಳಿಸ್ಬೇಕು...' ಎಂದು ಮಹಿಳಾ ಮಂಡಳಗಳ ಜವಾಬ್ದಾರಿಯ ಬಗ್ಗೆ ಸುವರ್ಣರು ಜಯರಾಮ ಪಾತ್ರದ ಮೂಲಕ ನೆನಪಿಸಿಕೊಡುತ್ತಾರೆ.

ಈ ನಾಟಕವನ್ನು ಬರೆದದ್ದು 'ಕನ್ನಡ ಭವನ' ವಾರ್ಷಿಕೋತ್ಸವದಲ್ಲಿ ಪ್ರದರ್ಶಿಸುವುದಕ್ಕಾಗಿ. ನಂತರ 1971ರಲ್ಲಿ ಆಕಾಶವಾಣಿಯ ಕನ್ನಡ ಸಾಪ್ತಾಹಿಕದಲ್ಲಿ ರೇಡಿಯೋ ರೂಪಾಂತರ ಪ್ರಸಾರವಾಗಿದೆ.

ನವೋದಯದ ಆದರ್ಶ ಪಾಲನೆ, ವಿವಾಹ, ಕುಟುಂಬ ವ್ಯವಸ್ಥೆಗೆ ಹೆಣ್ಣನ್ನು ಬದ್ಧಗೊಳಿಸಲಾಗಿದೆ. ಸಂಪ್ರದಾಯ, ಆಧುನಿಕ ಚಿಂತನೆಗಳ ಸಂಘರ್ಷ, ಸಂಪ್ರದಾಯ ಬಿಡಲಾಗದ ಹೊಸತಕ್ಕೆ ಒಗ್ಗಲಾಗದ ಸಂದಿಗ್ಧತೆ ಅನಾವರಣಗೊಂಡಿದೆ.

ಸುವರ್ಣರ ನಾಟಕಗಳ ವಿಶೇಷತೆಗಳನ್ನು ಡಾ. ಭರತ್‌ಕುಮಾರ್ ಪೊಲಿಪು ಹೀಗೆ ಗುರುತಿಸುತ್ತಾರೆ:

1. ಸದಾನಂದ ಸುವರ್ಣರ ನಾಟಕಗಳು ರಂಗಯೋಗ್ಯವಾದ ರಂಗಕೃತಿಗಳು. ಅಲ್ಲಿ ಎಲ್ಲ ನಾಟಕೀಯ ಸಾಧ್ಯತೆಗಳಿದ್ದಾವೆ.

2. ಪಾತ್ರಧಾರಿಗಳಿಗೆ ಅಭಿನಯಕ್ಕೆ ವಿಪುಲ ಅವಕಾಶಗಳಿವೆ.

3. ಮುಂಬಯಿ ಬದುಕು, ತಾಯ್ನಾಡಿನ ಬದಕು ಇವೆರಡರ ಚಿತ್ರಣವೂ ಅವರ ನಾಟಕದಲ್ಲಿದೆ. ತಾಯ್ನಾಡಿನ ಬೇರಿನ ಸೆಳೆತ ಅವರ ಎಲ್ಲಾ ನಾಟಕಗಳಲ್ಲಿದೆ.

4. ನಗರ ಬದುಕಿನ ಚಿತ್ರಣವನ್ನು ನೀಡುತ್ತಲೇ ಮಾನವೀಯ ಮೌಲ್ಯಗಳನ್ನು ಗೌರವಿಸುವಂತೆ ಮಾಡುತ್ತದೆ.

5. ನಾಟಕಕಾರರಾಗಿ ಮಹತ್ವಾಕಾಂಕ್ಷೆ ಅವರ ನಾಟಕಗಳಲ್ಲಿ ಕಂಡು ಬರುವುದಿಲ್ಲವಾದರೂ ಆ ಕಾಲದ ರಂಗಭೂಮಿಯ ಅವಶ್ಯಕತೆಗಳನ್ನು ಅವರ ನಾಟಕಗಳು ಪೂರೈಸಿದವು. ಮತ್ತು ಮುಂಬಯಿ ಕನ್ನಡ ರಂಗಭೂಮಿ ಬೆಳೆದು ಬೆಳಗಲು ಕಾರಣವಾಯಿತು ಎಂಬುದೂ ಸತ್ಯ. (ಪು. 333 ಮುಂಬಯಿ ಕನ್ನಡ ರಂಗಭೂಮಿ, ಪು. ಕನ್ನಡ ಅಧ್ಯಯನ ವಿಭಾಗ ಮುಂಬಯಿ ವಿ.ವಿ.)

ನಾಟಕ ರಚನೆ ಮುಂದುವರಿಸದೇ ಇರುವುದಕ್ಕೆ ಸುವರ್ಣರು ನೀಡುವ ಕಾರಣ ಇದು: 'ನಾಟಕ ರಚನೆಯ ಬಗ್ಗೆ ಹೆಚ್ಚು ತಿಳಿಯದಿದ್ದಾಗ ನಾಟಕಗಳನ್ನು ಬರೆದು ಹಾಕುತ್ತಿದ್ದೆ. ಆದರೆ ನಾಟಕದ ಬಗ್ಗೆ ನಾಟ್ಯ ಅಕಾಡೆಮಿಯಲ್ಲಿ ಅಮೆರಿಕಾದ ಡಾ. ಜೋರ್ಡನ್ ಮಿಲ್ಲರ್ ನಡೆಸಿದ ಎರಡು ದಿನಗಳ ನಾಟಕ ರಚನಾ ಶಿಬಿರದಲ್ಲಿ ಭಾಗವಹಿಸಿದ ನಂತರ ನಾಟಕ ಬರೆಯುವುದು ಕಡಿಮೆ ಮಾಡಿದೆ. ನಾಟಕದ ರಚನೆ ಕುರಿತು ಅವರು ಕೆಲವು ಪ್ರಮುಖ ಆಂಗ್ಲ ನಾಟಕಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ವಿಶ್ಲೇಷಿಸಿದ ರೀತಿಯಿಂದ ನಾಟಕಕಾರನಾಗಿ ನನ್ನ ದೌರ್ಬಲ್ಯ ಮನವರಿಕೆಯಾಯಿತು. ಒಂದೆರಡು ಸಲ ಬರೆಯಲು ಪ್ರಾರಂಭಿಸಿ ಒಂದೆರಡು ದೃಶ್ಯಗಳನ್ನು ಬರೆದು ನಿಲ್ಲಿಸಿದ್ದಿದೆ. ಅಲ್ಲದೆ ಸಿದ್ಧ ನಾಟಕಗಳನ್ನು ಆರಿಸಿ ಅವುಗಳನ್ನು ಸೃಜನಾತ್ಮಕ ರಂಗಕೃತಿಗಳನ್ನಾಗಿ ಮಾಡುವುದು ಹೆಚ್ಚು ಇಷ್ಟವಾಯಿತು. ಆಗೊಮ್ಮೆ ಈಗೊಮ್ಮೆ ಒಂದೊಂದು ಸ್ವತಂತ್ರ ಕೃತಿ (ಆಕಸ್ಮಿಕ) ಮತ್ತು ಕೆಲವು ಅನ್ಯಭಾಷೆಯ ಭಾಷಾಂತರ, ರೂಪಾಂತರಗಳನ್ನು ಮಾಡುವುದರಲ್ಲಿ ತೃಪ್ತನಾದೆ.'

## ಅನುಭವ-ಅಧ್ಯಯನ ಸಂಗಮ: ರಂಗಾನುಭೂತಿ

ನಾಟಕಕಾರ, ಕತೆಗಾರರಾಗಿಯೂ ಗಮನಾರ್ಹ ಕಾಣ್ಕೆಗಳನ್ನು ನೀಡುತ್ತ ಬಂದ ಖ್ಯಾತ ರಂಗಕರ್ಮಿ ಸದಾನಂದ ಸುವರ್ಣ 'ರಂಗಾನುಭೂತಿ' ಎನ್ನುವ ಲೇಖನಗಳ ಸಂಕಲನವೊಂದನ್ನು ಮುಂದಿಟ್ಟಿದ್ದಾರೆ. ನಾನಾ ಸಂದರ್ಭಗಳಲ್ಲಿ ಬರೆದ ಲೇಖನಗಳಿವೆ ಇಲ್ಲಿ. ರಂಗಭೂಮಿ, ಕಿರುತೆರೆ, ಹಿರಿತೆರೆಯಲ್ಲಿ ಕಂಡುಂಡ ಸಾಕಷ್ಟು ಸಂಗತಿಗಳ, ಒಡನಾಟಕ್ಕೆ ಬಂದ ವ್ಯಕ್ತಿಗಳ ವೈಶಿಷ್ಟ್ಯ, ಪ್ರವಾಸಾನುಭವದ ಸೊಗಸಿನ ಸಂಗಮವಿದೆ ಇಲ್ಲಿ. ಸುವರ್ಣರ

ಅನುಭವ, ಅನುಭೂತಿ, ಅಧ್ಯಯನ ಘನತೆಯನ್ನು ಹರಳುಗಟ್ಟಿಸಿದ ಇಲ್ಲಿನ 13 ಬರೆಹಗಳು, ಅನೇಕಾನೇಕ ಮಹತ್ತ್ವದ ಮಾಹಿತಿಗಳು ಕೃತಿಯನ್ನು ಶ್ರೀಮಂತವಾಗಿಸಿವೆ.

ಇಲ್ಲಿ 'ಆಧುನಿಕ ರಂಗ ತಾಲೀಮು: ಒಂದು ಟಿಪ್ಪಣಿ' ಅನ್ನುವ ಮೊದಲ ಲೇಖನದಲ್ಲಿ ಸುವರ್ಣರು ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ರಂಗಕರ್ಮಿಯೊಬ್ಬ ಯಾವೆಲ್ಲ ಬಗೆಯಲ್ಲಿ ತಯಾರಿ ನಡೆಸುತ್ತಿರಬೇಕು ಅನ್ನುವುದನ್ನು ವಿಸ್ತಾರವಾಗಿ, ಸರಳವಾಗಿ ಹಾಗೂ ಮನೋಜ್ಞವಾಗಿ ವಿವರಿಸಿದ್ದಾರೆ. ರಂಗಕೃತಿಯೊಂದು ತಯಾರುಗೊಳ್ಳುವ ಹಂತಗಳ ಕುರಿತು ಇಲ್ಲಿ ಮೌಲಿಕ ಪಾಠವಿದೆ.

'ಪ್ರೇಕ್ಷಕ ವರ್ಗ ನಾಟಕದ ಒಂದು ಪ್ರಮುಖ ಅಂಗ. ಉತ್ತಮ ಪ್ರಯೋಗದ ನಿರೀಕ್ಷೆಯಲ್ಲೇ ಪ್ರೇಕ್ಷಕರು ನಾಟಕ ನೋಡಲು ಬಂದಿರುತ್ತಾರೆ. ಪ್ರದರ್ಶನದಂದು ನಟ ನಟಿಯರ ಉತ್ತಮ ಹೃದಯಸ್ಪರ್ಶಿ ಅಭಿನಯ, ರಂಗದ ಹಿಂದಿನ ಕಲಾವಿದರ ಸಮರ್ಥ ನಿರ್ಮಾಣ ನಿರ್ವಹಣೆಯಿಂದ ಒಂದು ಅದ್ಭುತ ರಂಗಕೃತಿ ಮೂಡಿ ಬಂದು, ನೆರೆದ ಪ್ರೇಕ್ಷಕರಿಂದ ಮುಕ್ತಕಂಠದ ಪ್ರಶಂಸೆಗೆ ಪಾತ್ರವಾಯಿತೆಂದರೆ ನಾಟಕ ತಂಡಕ್ಕೆ ಅದಕ್ಕಿಂತ ದೊಡ್ಡ ಪ್ರಶಸ್ತಿ ಬೇಕೆ? ನಿರ್ದೇಶಕನಿಗೆ, ಆರು ವಾರ ಕಷ್ಟ ಪಟ್ಟು ನಡೆಸಿದ ತಾಲೀಮು ಸಾರ್ಥಕವಾಯಿತೆಂಬ ಸಮಾಧಾನದೊಂದಿಗೆ ಆ ಅವಧಿಯಲ್ಲಿ ನಟ ನಟಿಯರನ್ನು ತಿದ್ದಿ ತೀಡಿ, ಪಾತ್ರಗಳಿಗೆ ಸಿದ್ಧಗೊಳಿಸಿ ಒಂದು ಲಿಖಿತ ನಾಟಕ ಕೃತಿಯನ್ನು ಜೀವಂತ ರಂಗಕೃತಿಯನ್ನಾಗಿ ಸೃಷ್ಟಿಸಿದ ಅನುಭವ ಅತ್ಯಂತ ಆಹ್ಲಾದಕರ' (ಪು.10 ರಂಗಾನುಭೂತಿ) ಎನ್ನುವಲ್ಲಿ ರಂಗಕರ್ಮಿಗೆ ಇರಬೇಕಾದ ರಂಗಭೂಮಿ ಕುರಿತ ಕಾಳಜಿ, ಬದ್ಧತೆ, ಸಮರ್ಪಣೆ ಮನೋಭಾವದಿಂದ ದೊರೆಯುವ ಸಂತೋಷ, ಆತ್ಮತೃಪ್ತಿ ಮನವರಿಕೆಯಾಗುತ್ತದೆ.

'ಪೃಥ್ವಿ ಥಿಯೇಟರ್ ಅಂದು ಇಂದು' ಲೇಖನ ಮುಂಬಯಿಯ ರಂಗಭೂಮಿಗೆ ಶಿಖರಪ್ರಾಯದಂತಿದ್ದ ಪೃಥ್ವಿ ಥೀಯೇಟರ್‌ನ ಅನನ್ಯತೆಯನ್ನು ಇಲ್ಲಿ ಹಿಡಿದಿಟ್ಟಿದ್ದಾರೆ. ಪೃಥ್ವಿರಾಜರು ರಂಗಭೂಮಿಗೆ ನೀಡಿದ ರೋಮಾಂಚನಕಾರಿಯಾದ ಪ್ರಯೋಗಗಳನ್ನು ಹಾಗೂ ರಂಗಭೂಮಿಯನ್ನೇ ಉಸಿರಾಗಿಸಿಕೊಂಡ ರೀತಿಗಳನ್ನೆಲ್ಲ ಅಕ್ಷರವಾಗಿಸಿದ್ದಾರೆ. ಪೃಥ್ವಿರಾಜರ ಕಾಲ ಹಾಗೂ ಅವರ ನಿಧನದ ಬಳಿಕ ಅವರ ಕನಸು ನನಸಾಗಿಸುವಲ್ಲಿ ಪುತ್ರ ಶಶಿಕಪೂರ್ ಹಾಗೂ ಅವರ ಪತ್ನಿ ಜೆನಿಫರ್ ಕಪೂರ್ ತೊಡಗಿಸಿಕೊಂಡ ರೀತಿಗಳೆಲ್ಲ ರಂಗಾಸಕ್ತರಿಗೆ ಪ್ರೇರಣೆಯಾಗುವ ರೀತಿಯಲ್ಲಿ ಇಲ್ಲಿ ಮುಖಾಮುಖಿಯಾಗಿವೆ.

'ರಂಗದ ಹಿಂದಿನ ಅಧ್ವಾನಗಳು' ಮನಬಿಚ್ಚಿ ನಗಿಸುವ ಬರೆಹ. ರಂಗದ ಮೇಲೆ ಹಾಗೂ ನೇಪಥ್ಯದಲ್ಲಿ ನಡೆಯುವ ಅಧ್ವಾನಗಳು ರಂಜನೀಯವಾಗಿ ಬಿತ್ತರಗೊಂಡಿವೆ. ಸುವರ್ಣರ ನವಿರು ಶೈಲಿ, ಹಾಸ್ಯ ಮನೋಭಾವವನ್ನು ಇದು ಸಾಕ್ಷಾತ್ ಮಾಡುತ್ತದೆ.

ಚಲನಚಿತ್ರ ರಂಗದ ಬಗ್ಗೂ ನಿರ್ದಿಷ್ಟವಾದ ನಿಲುವುಳ್ಳ ಸುವರ್ಣರು ಅಲ್ಲಿನ ಪರಂಪರೆಯ ಬಗ್ಗೆ ಮೌಲಿಕವಾದ ಸುದೀರ್ಘ ಅವಲೋಕನ ನಡೆಸಿದ್ದಾರೆ, ಅದರ

ಚರಿತ್ರೆ ಮತ್ತು ಚಲನಶೀಲತೆಯ ಬಗೆಯನ್ನು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಸ್ನೇಹಿತ ಗಿರೀಶ್ ಕಾಸರವಳ್ಳಿ ಅವರ ಸಿನಿಮಾ ಬದುಕನ್ನು ಒಡನಾಡಿದ ಕಣ್ಣುಗಳಿಂದಲೇ ಬಗೆದಿಡುತ್ತಾರೆ. ಅವರನ್ನು ಸಂದರ್ಶಿಸಿ ಅವರ ಅಂತರಂಗವನ್ನೂ ಕೆದಕುತ್ತ ಮೌಲಿಕ ವಿಚಾರಗಳನ್ನು ಹಿಡಿದುಕೊಡುತ್ತಾರೆ. ಸಿನಿ ರಂಗದ ಅನೇಕ ಮಜಲುಗಳನ್ನು ಗಂಭೀರವಾಗಿ ಪರಾಮರ್ಶೆ ನಡೆಸುತ್ತಾರೆ ಇಬ್ಬರೂ. ತಮ್ಮ ಪಾಲಿನ ರೋಲ್ ಮಾಡೆಲ್ ಆಗಿರುವ ಡಾ. ಶಿವರಾಮ ಕಾರಂತರ ಮುಂಬಯಿ ನಂಟಿನ ಬಗ್ಗೆಯೂ ಮಾತನಾಡುತ್ತ ಕಾರಂತರ ವೈಶಿಷ್ಟ್ಯ, ಉಚಿತ ಪ್ರತಿಭೆಗಳ ಬಗ್ಗೆ ಹಿಡಿದಿಡುತ್ತಾರೆ. ಬಿ.ವಿ.ಕಾರಂತರ ಸೃಜನಶೀಲತೆಯನ್ನು ಗೌರವದಿಂದ ಕಣ್ಮುಂದೆ ನಿಲ್ಲಿಸುತ್ತಾರೆ. ವ್ಯಾಸರಾಯ ಬಲ್ಲಾಳರು, ಸಂತೋಷ್‌ಕುಮಾರ್ ಗುಲ್ವಾಡಿ, ಆನಂದ ಗಾಣಿಗ, ವಾಮನ್‌ರಾಜ್ ಅವರ ಪ್ರತಿಭಾ ಲೋಕವನ್ನು ಒಪ್ಪ ಹಾಗೂ ಓರಣವಾಗಿ ಬೆಳಕಿಗೊಡ್ಡಿದ್ದಾರೆ. ನಾರಾಯಣ ಗುರುಗಳ ಸಮಾಜ ಸುಧಾರಣೆಯನ್ನು ಪರಿಣಾಮ-ಕಾರಿಯಾಗಿ ದರ್ಶಿಸುತ್ತಾರೆ. ಚೀನಾ ದೇಶದ ಪ್ರವಾಸದ ಸಾರ್ಥಕತೆಯನ್ನು ಚಿತ್ರಿಸುವಲ್ಲಿ ಸುವರ್ಣರು ಸುಂದರ ಪ್ರವಾಸ ಕಥನಕಾರರಾಗಿ ಕಾಣಿಸಿಕೊಳ್ಳುತ್ತಾರೆ.

'ಆರಾಮವಾಗಿ ಎಲ್ಲವನ್ನೂ ಹಿಡಿದುಕೊಡುವ ಶೈಲಿ ಮತ್ತು ಮನತಟ್ಟುವ ನಿರೂಪಣೆ ಸ್ನಿಗ್ಧ ಭಾವ ಕೃತಿಯನ್ನು ಹಿತವಾಗಿ ಆವರಿಸಿಕೊಳ್ಳುತ್ತದೆ. ಮನತುಂಬುವ ಆಪ್ತ ಹಾಗೂ ಪ್ರಾಮಾಣಿಕ ವಿಶ್ಲೇಷಣೆಯಿಂದಾಗಿಯೂ ಕೃತಿ ಇಷ್ಟವಾಗುತ್ತದೆ. ಖುಷಿಯನ್ನು ಅಚ್ಚುಕಟ್ಟಾಗಿ ಹೇಳುವ ಬಗೆಯೂ ಮುದ ನೀಡುತ್ತದೆ. ಸುವರ್ಣ ಸಂಗ್ರಹದ ಛಾಯಾಚಿತ್ರಗಳು ಕೃತಿಯಾದ್ಯಂತ ಆವರಿಸಿಕೊಂಡಿವೆ. ಪುಸ್ತಕಪ್ರಿಯರು, ಕಲಾಸಕ್ತರು ಓದಲೇಬೇಕಾದ ಸರಳ ಸುಂದರ, ರಂಗ ವಿದ್ಯಾರ್ಥಿಗಳ ಅಧ್ಯಯನ ಕೃತಿ ರಂಗಾನುಭೂತಿ' ಎಂದು ವಿದುಷ್ಮತಿ 'ವಿಜಯ ಕರ್ನಾಟಕ'ದಲ್ಲಿ ಅಭಿಮತಿಸಿದ್ದಾರೆ.

'ಸದಾನಂದ ಸುವರ್ಣ ಅವರು ನಮ್ಮ ನಾಡಿನ ಶ್ರೇಷ್ಠ ನಿರ್ದೇಶಕರಷ್ಟೇ ಅಲ್ಲದೆ ಅವರೊಬ್ಬ ಒಳ್ಳೆಯ ಸಾಹಿತ್ಯಾಸಕ್ತರು, ಮಾನವತಾವಾದಿಗಳು, ಪ್ರಗತಿಪರ ಚಿಂತಕರು ಹಾಗೂ ಸಂಗೀತ ಕಲೆಯನ್ನು ಒಳಗೊಂಡ ಸೌಂದರ್ಯೋಪಾಸಕರು ಎಂಬುದಕ್ಕೆ ಇಲ್ಲಿನ ಲೇಖನಗಳೇ ಸಾಕ್ಷಿ. ಈ ಕೃತಿಯ ಮುದ್ರಣ ವಿನ್ಯಾಸ ಅಪೂರ್ವವಾಗಿದೆ. ಇಲ್ಲಿಯೂ ಎದ್ದು ಕಾಣುವುದು ಅವರ ರಂಗ ಮೀಮಾಂಸೆಯೇ' (ಬಂಟರವಾಣಿ, ಜುಲೈ 2012) ಎಂದು ಡಾ. ಜಿ.ಎನ್. ಉಪಾಧ್ಯ ಅವರು ಮನೋಜ್ಞವಾಗಿ ವಿಮರ್ಶಿಸಿದ್ದಾರೆ.

## ರೂಪಾಂತರ: ಕನ್ನಡ ನಾಟಕ ಸಾಹಿತ್ಯಕ್ಕೆ ಸುವರ್ಣ ಲೇಪನ

ಸುವರ್ಣರು ಸ್ವತಃ ನಾಟಕ ರಚನಾಕಾರರಾಗಿ ಹೆಸರಾಗಿರುವುದು ಮಾತ್ರವಲ್ಲ ಪ್ರಮುಖ ನಾಟಕಕಾರರ ರಚನೆಗಳನ್ನೂ ಕನ್ನಡಕ್ಕೆ ಪರಿಚಯಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅಲ್ಲಿನ ವಸ್ತು ವೈವಿಧ್ಯವನ್ನು ಕನ್ನಡಿಗರಿಗೆ ಕಟ್ಟಿಕೊಡುವ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ ಎನ್ನುವುದು ಸಾಹಿತ್ಯ ಕ್ಷೇತ್ರಕ್ಕೆ ಹೆಮ್ಮೆಯ ಸಂಗತಿ. ಇಲ್ಲಿಯೂ ಸುಂದರ

ಭಾಷೆಯನ್ನು ಬಳಸಿಯೇ ಅವರು ರೂಪಾಂತರಿಸಿರುವುದು ಕಂಡಾಗ ಮನಸ್ಸಿಗೂ ಮುದವಾಗುತ್ತದೆ. ಮನಸ್ಸನ್ನು ವಿಚಾರ, ವಿಮರ್ಶೆಗೊಳಪಡಿಸುವ ನಿಟ್ಟಿನಲ್ಲಿ ಪ್ರಸಿದ್ಧಿ ಪಡೆದ ನಾಟಕವಾಗಿ 'ಉರುಳು' ನಿಲ್ಲುತ್ತದೆ. ಇದು ಡಾ. ಶಂಕರ ಶೇಷ್ ಅವರ ಹಿಂದಿ ನಾಟಕ 'ಫಂದಿ'ಯನ್ನು ಕನ್ನಡಕ್ಕೆ 'ಉರುಳಾ'ಗಿ ರೂಪಾಂತರಿಸಿದವರು ಸುವರ್ಣ. ಗಂಭೀರವಾಗಿಯೇ ಕೊನೆ ತನಕ ಸಾಗುವ ಈ ನಾಟಕದ ನೆನಪಿನಲ್ಲುಳಿಯುವ ಭಾಷೆ, ಬಿಗಿ ಬಂಧ ಎಲ್ಲವೂ ಮಹತ್ವ ಪಡೆಯುತ್ತದೆ. ತಂತ್ರವೂ ಬೆರಗುಗೊಳಿಸುತ್ತದೆ. ಮೂರೇ ಮೂರು ಪಾತ್ರಗಳು ಈ ನಾಟಕವನ್ನು ಯಶಸ್ವಿಯಾಗಿ ನಿರ್ವಹಿಸುವುದು ವಿಶೇಷ. ವಸ್ತು ದಯಾಮರಣದ ಕುರಿತ ತರ್ಕ.

ಇಲ್ಲಿ ಕೋರ್ಟ್ ಆವರಣದಲ್ಲಿ ನಡೆಯಬಹುದಾದ,ಅದಕ್ಕಿಂತ ಮುಖ್ಯವಾಗಿ ನಡೆಯಬೇಕಾದ ವಾದ ವೈಖರಿಯನ್ನು, ಸತ್ಯಾಸತ್ಯವನ್ನು ಹೊಸಬಗೆಯಲ್ಲಿ ಅನಾವರಣ ಮಾಡಿದ ಬಗೆಯಲ್ಲಿ ಹೊಸತನವಿದೆ, ರೋಚಕತೆ ಇದೆ. ಉಸಿರು ಬಿಗಿಹಿಡಿದು ಓದಿಸುವ ಈ ಕೃತಿ ಕುತೂಹಲಕಾರಿ ವಿಚಾರಗಳನ್ನು ಕೆದಕುತ್ತ ಹೋಗುತ್ತವೆ. ದಯಾಮರಣವನ್ನು ಸಮ್ಮತಿಸಲು ಬೇಕಾದ ಎಲ್ಲ ಮಹತ್ವದ ಕಾರಣಗಳನ್ನೂ ಊಹೆಗೆ ಮೀರಿದ ತೆರನಲ್ಲಿ ಇಲ್ಲಿ ಕಲೆಹಾಕಿರುವುದು ಬೆರಗುಗೊಳಿಸುತ್ತದೆ. ಕಾನೂನು ಕಟ್ಟಳೆಯ ಕುರುಡುತನದ ಲೇವಡಿಯೂ ಇಲ್ಲಿ ವ್ಯಕ್ತಗೊಂಡ ಬಗೆ ಮೆಚ್ಚುಗೆ ಪಡೆಯುತ್ತದೆ. ವ್ಯವಸ್ಥೆಯ ವಿರುದ್ಧ ವ್ಯಂಗ್ಯವಾಡುವ, ವಾಸ್ತವವನ್ನು ಬಗೆಯುವ, ಮಾನವೀಯತೆಯನ್ನು ಧ್ವನಿಸುವ, ಓದುಗರನ್ನು, ಪ್ರೇಕ್ಷಕರನ್ನು ಚಿಂತನೆಗೊಡ್ಡುವ 'ಉರುಳು' ಅತ್ಯಪೂರ್ವ ನಾಟಕವಾಗಿ ಉಳಿದುಕೊಂಡಿದೆ. ಸುವರ್ಣರ ಸಾಹಿತ್ಯಕ ಶಕ್ತಿ ಸಮರ್ಥವಾಗಿ ಅನುವಾದದಲ್ಲಿ ಅಭಿವ್ಯಕ್ತಗೊಂಡಿದೆ.

ಶರಶ್ಚಂದ್ರರ ಪ್ರಖ್ಯಾತ ಕಾದಂಬರಿ 'ಚಂದ್ರನಾಥ'ವನ್ನು ನಾಟಕವಾಗಿಸಿ 'ಕುಲಗೌರವ' ಎಂದು ಹೆಸರಿಸಿದ್ದಾರೆ. ಇದು ಅರುವತ್ತರ ದಶಕದಲ್ಲಿ ವಿಜೃಂಭಿಸಿದ ಮೂರಂಕದ ನಾಟಕ. ವಿಷ್ಣು ಪ್ರಭಾಕರ ಅವರ ಹಿಂದಿ ನಾಟಕ 'ಅಶೋಕ' ಸುವರ್ಣರ ಕೈಯ್ಯಲ್ಲಿ "ಧರ್ಮಚಕ್ರ' ಆಗಿದೆ. ಕಳಿಂಗ ಯುದ್ಧದ ಬಳಿಕ ಅಶೋಕ ಚಕ್ರವರ್ತಿಯ ಮನಃಪರಿವರ್ತನೆಗೆ ಕಾರಣಗಳಾದ ಸನ್ನಿವೇಶಗಳನ್ನು ಹಿಡಿದುಕೊಟ್ಟ ಅಪೂರ್ವ ನಾಟಕ ಇದು. ಅರುವತ್ತರ ದಶಕ ಕಂಡ ಅದ್ದೂರಿ ನಾಟಕವಾಗಿಯೂ ಗಮನಾರ್ಹವಾದುದಾಗುತ್ತದೆ. 'ಟ್ರಾಪ್ ಫಾರ್ ಎ ಲೋನ್ಲಿ ಮೆನ್' ಎಂಬ ಫ್ರೆಂಚ್ ನಾಟಕವನ್ನು ಎಪ್ಪತ್ತರ ದಶಕದಲ್ಲಿ 'ಚಕ್ರವ್ಯೂಹ' ಎಂಬ ಹೆಸರಿನೊಂದಿಗೆ ರೂಪಾಂತರಿಸಿದರು, ಸಫಲ ಪ್ರಯೋಗಗಳನ್ನು ಸಾದರಪಡಿಸಿದರು. 'ಅಣ್ಣನ ಮದುವೆ' 'ಚೌದಿರ್ ಬಿಯೆ' ಎಂಬ ಬಂಗಾಲಿ ನಾಟಕದ ರೂಪಾಂತರ. ಇದು ಒಂದು ಫಾರ್ಸ್ . ಕನ್ನಡದಲ್ಲಿ ಈ ಥರದ ನಾಟಕಗಳು ಕಡಿಮೆ ಎಂಬ ಕಾರಣಕ್ಕಾಗೇ ಸುವರ್ಣರು ಈ ನಾಟಕವನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಇದು ಹಲವು ಉತ್ತಮ ಪ್ರಯೋಗಗಳನ್ನು ಕಂಡಿರುವುದು ಸಂತಸದ ವಿಚಾರ. ಇದೇ ನಾಟಕವನ್ನು ಒಂದು ವಾರ ಕಾಲ ಚಿತ್ರೀಕರಿಸಿ ಟೆಲಿ ಫಿಲ್ಮನ್ನೂ ಸಿದ್ಧಗೊಳಿಸಿದ್ದಾರೆ. ಬಂಗಾಲಿಯ ಶಂಭು ಮಿತ್ರರ ಬಂಗಾಲಿ ನಾಟಕವನ್ನು ಸುವರ್ಣರು ತುಳು ಭಾಷೆಗೆ ಪರಿಚಯಿಸುವ ಕೆಲಸ ಮಾಡಿದರು. 'ಬಾಲೆ ಬಂಗಾರ'ವಾಗಿ

ಈ ನಾಟಕ ತುಳು ಜನ ಮಾನಸವನ್ನು ತಲುಪಿದ ಯಶಸ್ಸಿಗೆ ಪಾತ್ರವಾಗಿದೆ. ವಿಡಂಬನಾತ್ಮಕ ನಗೆ ನಾಟಕವಾದ ಇದು ತೊಂಬತ್ತರ ದಶಕದಲ್ಲಿ ಜನಪ್ರಿಯವಾಗಿತ್ತು.

ಅತ್ಯಂತ ರುಚಿ ಶುಚಿಯಾದ ಹಾಸ್ಯ ಪ್ರಜ್ಞೆ ಅವರ ಎಲ್ಲ ಕೃತಿಗಳಲ್ಲೂ ಹಾಸುಹೊಕ್ಕಾಗಿರುತ್ತದೆ. ಪ್ರಖರ ವೈಚಾರಿಕತೆಯನ್ನು ಅನಾವರಣಗೊಳಿಸುತ್ತಲೇ ಅದು ಬೋರ್ ಹೊಡೆಸಬಾರದು ಎನ್ನುವ ಎಚ್ಚರದಿಂದಲೂ ಅವರು ಹಾಸ್ಯವನ್ನು ಅನಾಯಾಸವಾಗಿ ಅಡಕ ಮಾಡುತ್ತಾರೆ. ಹಾಸ್ಯದ ಮೂಲಕವೂ ಜಾಗೃತಿ ಹುಟ್ಟಿಸುವ ಸನ್ನಿವೇಶವನ್ನೂ ಅವರು ಸೃಷ್ಟಿಸುತ್ತಾರೆ. ಗಂಭೀರ ಹಾಗೂ ತಿಳಿ ಹಾಸ್ಯದ ರಸಪಾಕ ಉಂಟು ಮಾಡುವ ಪರಿಣಾಮ ಗಂಭೀರವಾದದ್ದೇ.

## ಸಣ್ಣ ಕತೆಗಾರ

ಸಣ್ಣಕತಾ ಕ್ಷೇತ್ರಕ್ಕೆ 'ಚಿನ್ನದ ಗೊಂಬೆ' ಸಂಕಲನವನ್ನೂ ಸುವರ್ಣರು ಕೊಟ್ಟಿದ್ದಾರೆ. ಹೆಣ್ಣಿನ ವ್ಯಕ್ತಿತ್ವದ ವಿಭಿನ್ನ ಮುಖಗಳನ್ನು ಬಯಲುಗೊಳಿಸುವುದಕ್ಕಾಗೇ ಕೃತಿ ಪ್ರಕಟಣೆ ಕಂಡಿದೆ. ಮಾತೃ ಹೃದಯದ ಹೆಣ್ಣಿನೊಂದಿಗೇ ಮೋಸ–ಸಣ್ಣತನವನ್ನೂ ಆವಾಹಿಸಿಕೊಂಡ ವಿಭಿನ್ನ ಮುಖಗಳನ್ನು ಪರಿಚಯಿಸುವ ಉದ್ದೇಶವೂ ಇಲ್ಲಿ ಅಲ್ಲಲ್ಲಿ ಅಡಕವಾಗಿದೆ. ಎಪ್ಪತ್ತರ ದಶಕದಲ್ಲಿ ಉತ್ತಮ ಕತಾ ಸಂಕಲನವನ್ನು ಕೊಟ್ಟ ಹೆಗ್ಗಳಿಕೆ ಸುವರ್ಣರದು! ಮರುಮುದ್ರಣವೂ ಕಂಡಿದೆ. ಕಥನಗಾರಿಕೆಯ ಕಲೆ ಸುವರ್ಣರಿಗೆ ಧಾರಾಳವಾಗಿ ಸಿದ್ಧಿಸಿರುವುದನ್ನು ಇಲ್ಲಿನ ಕತೆಗಳು ಸಾಬೀತುಪಡಿಸುತ್ತವೆ. ಉತ್ತಮ ಕತೆ ಹೆಣೆಯುವ ಸಾಮರ್ಥ್ಯ ಇದ್ದರೂನೂ ಸಣ್ಣ ಕತೆ ಪ್ರಕಾರದಲ್ಲಿ ಮುಂದೆ ತೊಡಗಿಸಿಕೊಂಡಿಲ್ಲವೇಕೆ ಎಂದು ಪ್ರಶ್ನಿಸಿದರೆ ಸುವರ್ಣರು ಹೇಳುತ್ತಾರೆ – "ನಾಟಕವೇ ನನ್ನ ಕ್ಷೇತ್ರ, ನನ್ನ ಮಾಧ್ಯಮ ಅಂತ ಗೊತ್ತಾದ ಬಳಿಕ ಕತೆ ರಚನೆಗೆ ಕೈಹಾಕಲಿಲ್ಲ.' ಸಹಜವಾಗಿ ಬರೆಯುತ್ತ ಬಂದು ಯಶಸ್ಸು ಪಡೆದ ಸುವರ್ಣರು ಅಕ್ಷರ ಲೋಕಕ್ಕೆ ಇನ್ನಷ್ಟು ಕೊಡುಗೆ ಸಲ್ಲಿಸುವ ನಿಟ್ಟಿನಲ್ಲಿ ಯೋಚಿಸಬಹುದಿತ್ತು.

## ಬೆಳ್ಳಿ ತೆರೆಯಲ್ಲಿ ಸುವರ್ಣ ಛಾಪು

ವಾಸ್ತವವಾದದ ಸೈದ್ಧಾಂತಿಕತೆ ಹಾಗೂ ತಾತ್ವಿಕತೆಯನ್ನು ಒಪ್ಪಿಕೊಂಡ ಸುವರ್ಣರು ರಂಗಭೂಮಿಯ ಕೊಡುಗೆಗಳ ಜೊತೆ ಜೊತೆಗೆ ಹಿರಿತೆರೆ ಕಿರುತೆರೆಗೂ ಚಾರಿತ್ರಿಕ ಕೊಡುಗೆಗಳನ್ನು ನೀಡಿದ್ದಾರೆ. ರಂಗಭೂಮಿಯನ್ನೇ ಉಸಿರಾಗಿಸಿಕೊಂಡ ಸುವರ್ಣರು ಹಿರಿತೆರೆ, ಕಿರುತೆರೆ, ಸಾಕ್ಷ್ಯಚಿತ್ರ ಪ್ರಕಾರಗಳ ಬಗ್ಗೂ ಅಷ್ಟೇ ಆಸ್ಥೆ ಉಳ್ಳವರು.

ಮುಂಬಯಿಯಲ್ಲಿ ಕನ್ನಡೇತರ ಸಿನಿಮಾಗಳನ್ನು ನೋಡುತ್ತಲೇ ಬೆಳೆದ ಸುವರ್ಣರು ಕನ್ನಡ ಸಿನಿಮಾವನ್ನು ಬೆಳೆಸುವುದಕ್ಕೆ ತೊಡಗಿಸಿಕೊಂಡದ್ದು ವಿಶೇಷ. ಹೊಸ ಅಲೆಯ ಸಿನಿಮಾಗಳು ಸುವರ್ಣರ ಮೇಲೆ ಬಹಳ ಪರಿಣಾಮ ಬೀರಿದ್ದವು. ಅಂಥ ಸಿನಿಮಾವನ್ನು

ಅವರಿಗೂ ತಯಾರಿಸಿ ನಿರ್ದೇಶಿಸಲು ಪ್ರೇರೇಪಿಸಿದ್ದವು. ಅವರ ನಿರ್ಮಾಣ, ನಿರ್ದೇಶನದ ಸಿನಿಮಾಗಳನ್ನು ಅವಲೋಕಿಸಿದರೆ ಅಲ್ಲೂ ಹಣಕಿ ಹಾಕುವುದು ಸುವರ್ಣರ ವಾಸ್ತವವಾದೀ ಧೋರಣೆಯೇ. ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭೇಟಿಯಾದ ಗಿರೀಶ್ ಕಾಸರವಳ್ಳಿ ಮತ್ತು ಸದಾನಂದ ಸುವರ್ಣರು ಚಲನಚಿತ್ರ ಮಾಡುವ ಇರಾದೆಯನ್ನು ಪರಸ್ಪರ ತೋಡಿಕೊಂಡಿದ್ದರು. ಸುವರ್ಣರು 'ಗುಡ್ಡದಭೂತ'ದ ಸ್ಕ್ರಿಪ್ಟ್ ತೋರಿಸಿದರೆ ಗಿರೀಶ್ ಅವರು 'ಘಟಶ್ರಾದ್ಧ' ಕುರಿತು ಬರೆದ ಸ್ಕ್ರಿಪ್ಟ್ ತೋರಿಸಿದರು. ಓದುತ್ತ ಹೋದ ಹಾಗೆ ಪಕ್ವವಾಗಿದೆ ಅನ್ನಿಸಿದೆ. ಜೀವನಕ್ಕೆ ತೀರಾ ಹತ್ತಿರವಾದ ಚಿತ್ರ ಕಥೆ ಇದು ಅನ್ನುವುದು ಅರಿವಿಗೆ ಬಂತು. ಸುವರ್ಣರು ಅಂಥ ಕತೆಯನ್ನು ಬಹಳ ಇಷ್ಟಪಡುತ್ತಿದ್ದುದರಿಂದ ಈ ಸ್ಕ್ರಿಪ್ಟ್ ಅವರಿಗೆ ಬಹಳ ಹಿಡಿಸಿತು. 'ಗುಡ್ಡದಭೂತ'ದ ಬದಲಿಗೆ 'ಘಟಶ್ರಾದ್ಧ' ನಿರ್ಮಾಣಕ್ಕೆ ಮುಂದಾದರು. 1976ರಲ್ಲಿ ತೆರೆಕಂಡ ಈ ಚಿತ್ರ ಚಿತ್ರರಂಗಕ್ಕೇ ಐತಿಹಾಸಿಕ ತಿರುವನ್ನು ತಂದುಕೊಟ್ಟಿತು. ಹೊಸ ಸಾಧ್ಯತೆಯನ್ನು ಕನ್ನಡಕ್ಕೆ ಪರಿಚಯಿಸಿ ಚಿತ್ರರಂಗವನ್ನು ಊರ್ಧ್ವಮುಖಿಯಾಗಿಸಿತು. ಚಿತ್ರವೂ ಅದ್ಭುತ ಯಶಸ್ಸನ್ನು ಪಡೆಯಿತು. ಖ್ಯಾತಿ ಪಡೆಯಿತು. ಅತ್ಯುತ್ತಮ ಚಿತ್ರ ಎಂದು ದೇಶದ ಅತ್ಯಂತ ಶ್ರೇಷ್ಠ, ಗೌರವಯುತ 'ಸ್ವರ್ಣಕಮಲ', 'ರಾಷ್ಟ್ರ ಪ್ರಶಸ್ತಿ', 'ರಾಜ್ಯ ಪ್ರಶಸ್ತಿ', 'ಜರ್ಮನಿಯ ಅಂತಾರಾಷ್ಟ್ರೀಯ ಪ್ರಶಸ್ತಿ' ಮೊದಲಾದ 18 ಪ್ರಶಸ್ತಿಗಳನ್ನು ಪಡೆದ ಕೀರ್ತಿಗೆ ಪಾತ್ರವಾಯಿತು ಮತ್ತು ದಾಖಲಾರ್ಹ ಸಾಧನೆಯಾಗಿ ಶಾಶ್ವತವಾಯಿತು. ಸಂಗೀತಕ್ಕೂ ಪ್ರಶಸ್ತಿ ದಕ್ಕಿದೆ. ಬಾಲನಟ ಪ್ರಶಸ್ತಿಯೂ ಪ್ರಾಪ್ತವಾಗಿದೆ. ಇಲ್ಲಿ ಎಲ್ಲರಿಂದ ಪ್ರಶಂಸೆಗೆ ಪಾತ್ರವಾದದ್ದು ರಂಗ ನಟನಾಗಿ, ರಂಗ ನಿರ್ದೇಶಕನಾಗಿ ಹೆಸರು ಪಡೆದಿದ್ದರೂ ತಾವು ನಿರ್ಮಾಪಕರಾಗಿ ಮಾತ್ರ ಉಳಿದು ಗಿರೀಶ್ ಕಾಸರವಳ್ಳಿಯವರಿಗೇ ಎಲ್ಲ ಹೊಣೆಯನ್ನೂ ನೀಡಿದ್ದು.

'ಕುಬಿ ಮತ್ತು ಇಯಾಲಾ' ಸಿನಿಮಾದ ನಿರ್ದೇಶಕ ಹಾಗೂ ನಿರ್ಮಾಪಕರಾಗಿಯೂ ಅನನ್ಯರಾದರು. ಪರಿಣಾಮವಾಗಿ 'ರಾಜ್ಯ ಪ್ರಶಸ್ತಿ' ಹಾಗೂ 'ಅಂತಾರಾಷ್ಟ್ರೀಯ ಚಿತ್ರ ಪ್ರದರ್ಶನ ಮನೋರಮಾ'ಕ್ಕೂ ಆಯ್ಕೆ ಆದದ್ದು ವಿಶೇಷ. ಇವೆಲ್ಲ ಸುವರ್ಣರ ಶಿಸ್ತು, ಪರಿಶ್ರಮ, ಹೊಸತನದ ತುಡಿತಕ್ಕೆ ಶರಾ ಬರೆಯುತ್ತವೆ. ಸುವರ್ಣರ ರಂಗ ನಿರ್ದೇಶನದ ನೆರಳನ್ನು ಇಲ್ಲಿ ಕಾಣಬಹುದು. ಪರಿಣಾಮವಾಗಿ ಸಿನಿಮಾ ಶಕ್ತವಾಗಿ ಮೂಡಿ ಬಂದಿದೆ, ಹೃದಯಕ್ಕೆ ಆಪ್ತವಾಗುತ್ತದೆ. ಕುಬಿ ಮತ್ತು ಇಯಾಲದಲ್ಲಿ ಮನುಷ್ಯ ನಿರ್ಮಿತ ಮಿಥ್ಯೆಗಳನ್ನು ಜಾಹೀರು ಮಾಡುವಲ್ಲಿ ತೋರಿದ ಆಸಕ್ತಿ ಚಿಕಿತ್ಸಕ ದೃಷ್ಟಿಕೋನವನ್ನೇ ಅರ್ಥ ಮಾಡಿಸುವುದಾಗಿದೆ.

ಈ ಬಗ್ಗೆ ಸುವರ್ಣರು ನೆನಪಿನ ಸುರುಳಿ ಬಿಚ್ಚಿಡುವುದು ಹೀಗೆ: 'ತಬರನ ಕತೆಯ ಚಿತ್ರಕತೆಯನ್ನು ಗಿರೀಶ್ ಕಾಸರವಳ್ಳಿ ಅವರು ಮುಂಬಯಿಯ ನನ್ನ ಮನೆಯಲ್ಲಿ ಕುಳಿತು ರಚಿಸದಿರುತ್ತಿದ್ದರೆ 'ಕುಬಿ...' ಸಿನೇಮಾ ಆಗುವುದು ಸಾಧ್ಯವಿರಲಿಲ್ಲವೇನೋ ! ಗಿರೀಶರು ತಬರನ ಚಿತ್ರಕತೆ ರಚಿಸುತ್ತಿದ್ದಾಗ ತೇಜಸ್ವಿಯವರ ಕಥಾ ಸಂಕಲನದ ಕಥೆಗಳನ್ನು ಓದುತ್ತಿದ್ದೆ. ನನಗದರಲ್ಲಿ ತುಂಬ ಇಷ್ಟವಾದ ಕಥೆ 'ಕುಬಿ ಮತ್ತು ಇಯಾಲ'. ಗಿರೀಶರಿಗಿದನ್ನು

ಹೇಳಿದೆ. 'ನಾನು ಸಿನೇಮಾ ಮಾಡುವುದಿದ್ದರೆ ಇದನ್ನೇ' ಎಂದಾಗ 'ಹೌದಾ, ಮಾಡಿ ಚೆನ್ನಾಗಿದೆ' ಅಂದರು. 'ನೀವು ಚಿತ್ರಕತೆ ಮಾಡಿಕೊಡುವಿರಾದರೆ ಮಾಡುತ್ತೇನೆ' ಎಂದೆ 'ಕಂಡಿತ, ಡೈರೆಕ್ಷನ್ ನೀವೇ ಮಾಡಿ' ಎಂದರು. ಹಾಗೆ ಮಾತನಾಡಿಕೊಂಡವರು ಮೊದಲು ತಬರನ ಕಥೆಯನ್ನು ಸಿನೆಮಾ ಮಾಡಿದೆವು. ನಾನದರ ನಿರ್ವಾಹಕ ನಿರ್ಮಾಪಕನಾಗಿ ಸಹಕರಿಸಿದ್ದೆ. ಘಟಶ್ರಾದ್ಧ ಮತ್ತು ತಬರನ ಕಥೆಯ ನಿರ್ಮಾಣದಲ್ಲಿ ತೊಡಗಿಕೊಂಡು, ಪಡೆದ ಅನುಭವದಿಂದ 'ಕುಬಿ ಮತ್ತು ಇಯಾಲ' ನಿರ್ದೇಶಿಸಲು ಧೈರ್ಯ ಬಂತು. ಜತೆಗೆ ಗಿರೀಶರ ಚಿತ್ರಕಥೆ, ತಾಂತ್ರಿಕ ಸಲಹೆಗಳು ಚಿತ್ರದ ಯಶಸ್ವೀ ನಿರ್ಮಾಣಕ್ಕೆ ಕಾರಣವಾದವು. 'ಘಟಶ್ರಾದ್ಧ' ಚಿತ್ರ ನಿರ್ಮಾಣದಲ್ಲಿ ಗಿರೀಶರ ಜತೆಗೂಡಿದ ನಾನು ಮುಂದೆ 'ತಬರನ ಕಥೆ', 'ಮನೆ' 'ಕುಬಿ' ಮತ್ತು 'ಇಯಾಲ', 'ಕ್ರೌರ್ಯ' ಮುಂತಾದ ಚಿತ್ರ ನಿರ್ಮಾಣದಲ್ಲೂ ಜತೆಗಿದ್ದು ಸಹಕರಿಸುತ್ತ ಚಲನಚಿತ್ರ ನಿರ್ಮಾಣದ ವಿವಿಧ ಹಂತಗಳ ಕುರಿತು ಅನುಭವಗಳಿಸುವುದು ಸಾಧ್ಯವಾಯಿತು. 'ಕುಬಿ ಮತ್ತು ಇಯಾಲ'ಕ್ಕೆ 'ಉತ್ತಮ ಚಿತ್ರ' 'ಉತ್ತಮ ನಿರ್ದೇಶಕ', 'ಉತ್ತಮ ಕಥೆ' – ಹೀಗೆ ಮೂರು ರಾಜ್ಯ ಪ್ರಶಸ್ತಿ ಬಂತು. ಪ್ರಧಾನ ಪಾತ್ರವಹಿಸಿದ ಚಾರುಹಾಸನ್‌ರಿಗೆ 'ಫಿಲ್ಮ್ ಫೇರ್ ಶ್ರೇಷ್ಠ ನಟ ಪ್ರಶಸ್ತಿ ದೊರೆಯಿತು. ಇದರ ಛಾಯಾಗ್ರಹಣವನ್ನು ಜಿ.ಎಸ್.ಭಾಸ್ಕರ್ ಚೆನ್ನಾಗಿ ಮಾಡಿದ್ದರು.'

ಕಾಸರವಳ್ಳಿ ಅವರ ಮನೆ, ಕ್ರೌರ್ಯ, ತಬರನ ಕಥೆ ಸಿನಿಮಾಗಳಿಗೂ ಕಾರ್ಯನಿರ್ವಾಹಕ ನಿರ್ಮಾಪಕರಾಗಿ ದುಡಿದದ್ದು ಸುವರ್ಣರು–ಕಾಸರವಳ್ಳಿ ಅವರ ನಡುವಣ ಸ್ನೇಹ,ವಿಶ್ವಾಸದ ಜುಗಲ್‌ಬಂದಿಯಿಂದಲೇ, ಕಲೆಯ ಮೇಲಿನ ಪ್ರೀತಿಯಿಂದಲೇ.

## ದೃಷ್ಟಿ–ಸೃಷ್ಟಿ:

ಮುಂಬಯಿಯ ಕನ್ನಡ ಸಿನಿಮಾಸಕ್ತರಿಗೆ ಪ್ರಾದೇಶಿಕ ಸಿನಿಮಾಗಳನ್ನು ಪರಿಚಯಿಸುವ ಮತ್ತು ಚರ್ಚಿಸುವ ಉದ್ದೇಶ, ಕನ್ನಡ ಸಿನಿಮಾ ರಂಗವನ್ನು ಬೆಳೆಸುವ ನಿಟ್ಟಿನಲ್ಲಿ ಮುಂಬಯಿಯಲ್ಲಿದ್ದುಕೊಂಡು ದೃಷ್ಟಿ ಫಿಲ್ಮ್ ಸೊಸೈಟಿಯೊಂದನ್ನು ಹುಟ್ಟುಹಾಕಿದ್ದು, ಮುನ್ನಡೆಸಿದ್ದು ಸಾಹಸಗಾಥೆ. 'ದೃಷ್ಟಿ ಫಿಲ್ಮ್ ಸೊಸೈಟಿ'ಯನ್ನು 1978ರಲ್ಲಿ ಎನ್.ಬಿ.ಕಾಮತ್, ಅರುಣಾ ವಿಕಾಸ್, ಲೀಲಾ ರಾಜ್ ಕುಮಾರ್‌ರಂಥ ತಮ್ಮ ಮಿತ್ರರೊಡಗೂಡಿ ತೆರೆದ ಸುವರ್ಣರು ಅದರ ಮೂಲಕ ಪ್ರಾದೇಶಿಕ, ಕಲಾತ್ಮಕ ಚಿತ್ರಗಳನ್ನು ಕೊಟ್ಟರು. ಸದಭಿರುಚಿಯ ಚಿತ್ರಗಳನ್ನು ಪ್ರೇಕ್ಷಕರು ಕಾಣುವಂತೆ ಮಾಡಿದರು. ಅದರ ಕಾರ್ಯದರ್ಶಿಯಾಗಿ ದುಡಿಯುತ್ತ ಬಂದ ಅವರು ಸರ್ವಶಕ್ತಿಯೂ ಹೌದು. ಅತ್ಯುತ್ತಮ ಕಲಾತ್ಮಕ ಚಿತ್ರಗಳನ್ನು ನೀಡಿದ ಹೆಗ್ಗಳಿಕೆಗೆ ಈ ದೃಷ್ಟಿ ಫಿಲ್ಮ್ ಸೊಸೈಟಿ ಪಾತ್ರವಾಗಿದೆ. 'ಘಟಶ್ರಾದ್ಧ' ಚಿತ್ರವೇ ಇಲ್ಲಿ ಮೊದಲಾಗಿ ಪ್ರದರ್ಶನ ಕಂಡಿತು. ಪ್ರಖ್ಯಾತ ಚಲನಚಿತ್ರ ನೀಡಿದ ಯಶಸ್ಸು ಸೊಸೈಟಿಯದು. ಬಳಿಕ ಇದು ದೇಶಕ್ಕೆ ಹತ್ತು ಹಲವು ಉತ್ತಮ ಚಿತ್ರಗಳನ್ನು ನೀಡುತ್ತಲೇ ಮುನ್ನಡೆಯಿತು. ಆವುರ್, ಗ್ರೋವರ್ ಆಡಿಟೋರಿಯಂ, ತಾರಾಬಾಯಿ ಹಾಲ್, ಚಿತ್ರಾ ಮಿನಿ ಥಿಯೇಟರ್‌ಗಳಲ್ಲಿ ಇಲ್ಲಿನ ಚಿತ್ರಗಳು ಪ್ರದರ್ಶಿತಗೊಳ್ಳುತ್ತಿದ್ದವು. ಉತ್ಕೃಷ್ಟ ಹಾಗೂ ಕಲಾತ್ಮಕ ಚಿತ್ರಗಳಿಗೇ ಈ ಸೊಸೈಟಿ ಪ್ರಾಮುಖ್ಯ ನೀಡುತ್ತಿದ್ದುದು ವಿಶೇಷ.

## ಕಿರುತೆರೆಯಲ್ಲಿ ಅದ್ಭುತ ಕ್ರಾಂತಿ:

'ಗುಡ್ಡದಭೂತ' ಕಲಾತ್ಮಕತೆ ಹಾಗೂ ವಾಸ್ತವವಾದವನ್ನು ತೂಗಿದರೆ ತಕ್ಕಡಿಯ ಎರಡೂ ತಟ್ಟೆಗಳು ಏಕಕಾಲಕ್ಕೇ ಸಮಾನಾಂತರವಾಗಿ ನಿಂತುಬಿಡುತ್ತವೆ. ವಾಸ್ತವವನ್ನೇ ಜೀವಿಸುವ ಸುವರ್ಣರಿಂದ ಅಂಥ ಶಕ್ತ ಪ್ರಯೋಗಗಳಲ್ಲದೆ,ವಾಸ್ತವದ ಚಿತ್ರಣವಲ್ಲದೆ ಮಾಂತ್ರಿಕ ಲೋಕವೊಂದು ಸೃಷ್ಟಿಯಾಗಲಾರದು. ಇದರರ್ಥ ಫ್ಯಾಂಟಸಿಯನ್ನು ಸುವರ್ಣರು ನಿರಾಕರಿಸುತ್ತಾರೆ ಅಂತಲ್ಲ, ಇತರರ ಪ್ರಯೋಗಗಳನ್ನು ಕುತೂಹಲದಿಂದಲೇ ಗಮನಿಸುತ್ತಾರೆ, ತಮ್ಮ ಪ್ರಯೋಗಗಳಲ್ಲಿ ಅವರು ವಾಸ್ತವವನ್ನೇ ದರ್ಶಿಸುತ್ತಾರೆ. ಗುಡ್ಡದಭೂತದಂಥ ಧಾರಾವಾಹಿಯ ಮೂಲಕ ಕಿರುತೆರೆಯಲ್ಲಿ ಮಾಡಿದ ಅದ್ಭುತ ಕ್ರಾಂತಿಯೊಳಗೂ ವಾಸ್ತವವಾದವನ್ನು ಕಾಣುತ್ತೇವೆ. ಗುಡ್ಡದಭೂತ ಧಾರಾವಾಹಿ ಇವತ್ತಿಗೂ ಜನಮಾನಸದಲ್ಲಿ ಉಳಿದುಕೊಂಡಿದೆ. ಇಪ್ಪತ್ತು ವರ್ಷಗಳ ಬಳಿಕವೂ ಖಾಸಗಿ ಟಿವಿಚಾನೆಲ್‌ಗಳಾದ ಜನಶ್ರೀ, ಝೀ ಟಿವಿ ಬಿತ್ತರಿಸಿ ಮತ್ತೆ ನೆನಪು ಮಾಡಿಕೊಟ್ಟವು. ಹೊಸ ಪೀಳಿಗೆಯವರಿಗೂ ಈ ಧಾರಾವಾಹಿಯನ್ನು ನೋಡುವ ಅವಕಾಶ ಒದಗಿಸಿದವು. ಧಾರಾವಾಹಿ ಎನ್ನುವ ಪರಿಕಲ್ಪನೆಗೆ ಹೊಸತೊಂದು ಆಯಾಮ ನೀಡಿದ 'ಗುಡ್ಡದಭೂತ'ದಂಥ ಧಾರಾವಾಹಿ ಇದುವರೆಗೂ ಮತ್ತೊಂದು ಬಂದದ್ದು ಇಲ್ಲ. ಧಾರಾವಾಹಿಗಳ ಅಬ್ಬರವೇ ಇಲ್ಲದಿದ್ದ, ಚಾನೆಲ್‌ಗಳ ಪ್ರಮಾಣವೂ ಕಡಿಮೆ ಇದ್ದ ದಿನಗಳು ಆಗಿನದ್ದು. ಇದ್ದ ಒಂದೇ ಒಂದು ದೂರದರ್ಶನ ಚಾನೆಲ್‌ನಲ್ಲಿ ವಾರದಲ್ಲೆರಡು ದಿನ ಪ್ರಸಾರವಾಗುತ್ತಿದ್ದ ಧಾರಾವಾಹಿ ಕೌತುಕ ಹೆಚ್ಚಿಸುತ್ತ ಕಲಾತ್ಮಕತೆಯನ್ನೂ ಮೈಗೂಡಿಸಿಕೊಂಡು ವೈಚಾರಿಕತೆಯನ್ನು ಹಿಡಿದುಕೊಟ್ಟ ವಿಧಾನಗಳಿಂದ ಮುಖ್ಯವಾಗುತ್ತದೆ.

ರಂಗಭೂಮಿ ಮತ್ತು ಸಿನಿಮಾ ಎರಡೂ ಮಾಧ್ಯಮಗಳ ಬಗ್ಗೆ ಸೈದ್ಧಾಂತಿಕವಾಗಿ ಹಾಗೂ ಪ್ರಯೋಗಾತ್ಮಕವಾಗಿ ಸಾಕಷ್ಟು ಪರಿಣತಿ ಸಂಪಾದಿಸಿದ ಸುವರ್ಣರು ಈ ಎರಡೂ ಮಾಧ್ಯಮಗಳ ಸಾಮ್ಯತೆ ಮತ್ತು ಭಿನ್ನತೆಯ ಬಗ್ಗೂ ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾರೆ. ಈ ಎರಡರ ಕುರಿತ ಅನುಭವ ಸುವರ್ಣರ ನಿಟ್ಟಿನಲ್ಲಿ ಒಂದಕ್ಕೊಂದು ಪೂರಕವಾಗುತ್ತವೆ.

## ಕಾರಂತ ದರ್ಶನ – ವಿಶಿಷ್ಟ ಕೊಡುಗೆ:

ಡಾ. ಶಿವರಾಮ ಕಾರಂತರ ಕುರಿತಾದ ಸಾಕ್ಷ್ಯಚಿತ್ರ 'ಕಾರಂತ ದರ್ಶನ'ದಲ್ಲಿ ಕಾರಂತರ ಚಿಂತನೆಗಳನ್ನು, ಅವರ ನಿಲುವು, ಬದುಕನ್ನು ದರ್ಶಿಸಿದ್ದು ಇನ್ನೊಂದು ಮೈಲಿಗಲ್ಲು. ಕಾರಂತರು ತಮ್ಮ ಬದುಕು ಹಾಗೂ ಸಾಧನೆಗಳ ದಾಖಲೀಕರಣಕ್ಕೆ ಸುವರ್ಣರಿಗೆ ಸಮ್ಮತಿಸಿರುವುದಕ್ಕೆ ಸುವರ್ಣರ ಕರ್ತವ್ಯಪರತೆ, ಕಲಾತ್ಮಕತೆ, ಪ್ರಯೋಗಶೀಲತೆಗಳ ಬಗ್ಗೆ ತನ್ನೊಳಗಿದ್ದ ಗೌರವವೇ ಕಾರಣ. ಸುವರ್ಣರ ಎಲ್ಲ ಪ್ರಶ್ನೆಗಳಿಗೂ ಕಾರಂತರು ಹಾರ್ದಿಕವಾಗಿ ಉತ್ತರಿಸಿದ್ದಾರೆ. ಕಾರಂತರೆಂದರೆ ಏನು? ಅವರ ಚಿಂತನೆಯ ಲಹರಿ ಏನು ಅನ್ನುವುದನ್ನೆಲ್ಲ ಈ ಸಾಕ್ಷ್ಯಚಿತ್ರ ಕಟ್ಟಿಕೊಟ್ಟಿದೆ. ಕಾರಂತರ ಸಂದರ್ಶನವನ್ನು ಐದು ದಿನಗಳವರೆಗೆ ನಡೆಸಿ ಅದಕ್ಕೆ ಪೂರಕವಾಗಿ ಸುಮಾರು 15 ಮಂದಿ ಗಣ್ಯರನ್ನು ಅವರವರ ಊರುಗಳಿಗೇ ತೆರಳಿ

ಸಂದರ್ಶಿಸಿದ್ದಾರೆ. ಯಕ್ಷಗಾನ, ಕಂಬಳ, ನಾಗಮಂಡಲ, ಜಾತ್ರೆಗಳ ಕುರಿತು ಕಾರಂತರು ಸಂದರ್ಶನದಲ್ಲಿ ತಿಳಿಸಿದ್ದ ಸ್ಥಳಗಳನ್ನು ಚಿತ್ರೀಕರಿಸಿದ್ದಾರೆ. ಈ ಸಾಕ್ಷ್ಯಚಿತ್ರ ಪ್ರಸಾರಕ್ಕೆ ಅಡೆತಡೆ ಇದ್ದೇ ಇತ್ತು. ಸುಮಾರು ಎರಡು ವರ್ಷಗಳ ಬಳಿಕ ದೂರದರ್ಶನ ಪ್ರಸಾರ ಮಾಡಿದಾಗ ತುಂಬು ಮೆಚ್ಚುಗೆ ಗಳಿಸಿತು.

ಡಾ. ಕಾರಂತರದು ಬಹುಮುಖ ಪ್ರತಿಭೆ ಸಾಧನೆಗಳು. ಅವರದು ಆದರ್ಶ ಜೀವನ ಕ್ರಮ, ಮೇರು ವ್ಯಕ್ತಿತ್ವ. ಇವರನ್ನು ಮುಂದಿನ ಪೀಳಿಗೆಗೆ ಪ್ರೇರಣೆಯಾಗಿಸಲು ದಾಖಲೆ ಉಳಿಯುವಂತೆ ಅತ್ಯಂತ ಶ್ರದ್ಧೆಯಿಂದ ನಿರ್ಮಿಸಿದ ಸಾಕ್ಷ್ಯಚಿತ್ರ – 'ಕಾರಂತ ದರ್ಶನ'. ಪ್ರತಿವರ್ಷ ಕಾರಂತ ಜನ್ಮದಿನದಂದು ಈ ಸಾಕ್ಷ್ಯಚಿತ್ರವನ್ನು ವಾಹಿನಿ ಪ್ರಸಾರ ಮಾಡುವುದು ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗುತ್ತದೆ.

## ಶ್ರೀ ನಾರಾಯಣ ಗುರು ಸಾಕ್ಷ್ಯಚಿತ್ರ – ಪ್ರಗತಿಪರ ಕಾಳಜಿ

ಬ್ರಹ್ಮಶ್ರೀ ನಾರಾಯಣ ಗುರುಗಳ ಕುರಿತ ಮಲಯಾಳಂನ ಸಾಕ್ಷ್ಯಚಿತ್ರವನ್ನು ಕನ್ನಡೀಕರಿಸಿ ಕೊಡುಗೆಯಾಗಿ ನೀಡಿರುವಲ್ಲೂ ಸಾಬೀತಾಗುವುದು ಸುವರ್ಣರ ಪ್ರಗತಿಪರ ಕಾಳಜಿಯೇ. ಗುರುಗಳ ಭಾವಚಿತ್ರವನ್ನು ತಂದೆ ರುಕ್ಕ ಕೋಟ್ಯಾನರು ದೇವರ ಪೀಠದಲ್ಲಿಟ್ಟು ಪೂಜಿಸುತ್ತಿದ್ದಾಗ ಸುವರ್ಣರಿಗೆ ಮೂಡಿದ್ದು, ಯಾರಿವರು ಅನ್ನುವ ಪ್ರಶ್ನೆ. ಬಳಿಕ ಕೃತಿಗಳನ್ನು ಓದಿ ಅವರ ಬಗ್ಗೆ ತಿಳಿದುಕೊಂಡರು. ಅವರ ಕ್ರಾಂತಿಕಾರಿ ಹೆಜ್ಜೆ, ಮನುಷ್ಯಪರವಾದ ಚಿಂತನೆಗಳು, ಮಾಡಿದ ಸಮಾಜ ಸುಧಾರಣೆಗೆ ಗೌರವ ಸಲ್ಲಿಸುತ್ತ ಅವರ ವಿಚಾರಗಳನ್ನು ಸರ್ವರಿಗೂ ತಲುಪಿಸುವ ನಿಟ್ಟಿನಲ್ಲಿ ಮನಸಾರೆ ದುಡಿದಿದ್ದಾರೆ.

ಜಾಹೀರಾತು ಸಿನಿಮಾಗಳನ್ನು, 'ತುಳುನಾಡ ಇಣುಕು ನೋಟ' ಅನ್ನುವ ಕಿರು ಚಿತ್ರವನ್ನೂ ನೀಡಿರುವುದು ಸುವರ್ಣರ ವಿಶೇಷತೆಯಾಗಿದೆ. ಸಂಗೀತವೆಂದರೂ ಇಷ್ಟವೇ. ಜನ್ಮದತ್ತವಾಗಿಯೇ ಬಂದಿರುವ ಸಂಗೀತದಲ್ಲಿ ಪ್ರೌಢಿಮೆ ಸಾಧಿಸಲು ಕೆಲ ಕಾಲ ಪಾಠ ಹೇಳಿಸಿಕೊಂಡಿದ್ದಾರೆ. ತಮ್ಮ ನಾಟಕಗಳಿಗೆ ತಾವೇ ಹಾಡು ಹೇಳಿದ್ದಾರೆ, 'ಗುಡ್ಡೆದ ಭೂತದ' ಟೈಟಲ್ ಹಾಡಿಗೂ ಖ್ಯಾತ ಗಾಯಕಿ ಬಿ.ಆರ್.ಛಾಯಾ ಅವರ ಜತೆ ಡೆನ್ನಾ ಡೆನ್ನಾ ಡೆನ್ನಾನಾಕ್ಕೂ ದನಿಯಾಗಿದ್ದಾರೆ, ಗಮನ ಸೆಳೆದಿದ್ದಾರೆ.

**ಪತ್ರಿಕೆಯ ನಂಟು:** ಸುವರ್ಣರು ಪತ್ರಿಕೋದ್ಯಮದಲ್ಲೂ ಕೈಯಾಡಿಸಿ ಬಲ್ಲವರು. ಮುಂಬಯಿಯ ಮಾಸಿಕ 'ಅಕ್ಷಯ' ಸ್ಥಾಪಕ ಮಂಡಳಿಯಲ್ಲಿದ್ದು ಶ್ರಮಿಸಿದ್ದಾರೆ, ಸಲಹೆ ನೀಡಿದ್ದಾರೆ. ಅಕ್ಷಯ ಪತ್ರಿಕೆಯೊಂದಿಗಿನ ಸಂಬಂಧವನ್ನು ಅದರ ಸಂಪಾದಕ, ಪ್ರಸಿದ್ಧ ಲೇಖಕ ಡಾ. ಈಶ್ವರ ಅಲೆವೂರು ಹತ್ತಿರದಿಂದ ಕಂಡಿದ್ದಾರೆ. ಆ ಅನುಭವವನ್ನು ಅವರು ತೆರೆದಿಡುವುದು ಹೀಗೆ: 'ಮುಂಬಯಿಯ ಪ್ರತಿಷ್ಠಿತ ಸಂಸ್ಥೆ ಬಿಲ್ಲವರ ಅಸೋಸಿಯೇಶನ್ ಪತ್ರಿಕೆಯೊಂದನ್ನು ಪ್ರಕಟಿಸಲು ಮುಂದಾದಾಗ ಸದಾನಂದ ಸುವರ್ಣರು ತಮ್ಮ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದವರು. ಮಾತ್ರವಲ್ಲದೆ ಪತ್ರಿಕೆ ಪ್ರಕಟಣೆ 'ಅಕ್ಷಯ'ದ

ಹೆಸರಿನಿಂದ 1988ರಲ್ಲಿ ಆರಂಭವಾದಾಗ ಸುವರ್ಣರು ಸಂಪಾದಕ ಮಂಡಳಿ ಸೇರಿಕೊಂಡು ಅಂದಿನ ಸಂಪಾದಕ ಎಂ.ಎಸ್.ಕೋಟ್ಯಾನ್‌ರನ್ನು ನೈತಿಕವಾಗಿ ಬೆಂಬಲಿಸಿದರು. ಪತ್ರಿಕೆಯ ಆರಂಭದ ದಿನಗಳಲ್ಲಿ ಸದಾನಂದ ಸುವರ್ಣರು ನೀಡಿದ ಉತ್ತೇಜನ, ಮಾರ್ಗದರ್ಶನ ಅಮೂಲ್ಯವಾಗಿತ್ತು. ಸಪ್ಟೆಂಬರ್ 1988ರಿಂದ 1991ರ ನವೆಂಬರ್ ತನಕ ಮೂರು ವರ್ಷಗಳ ಕಾಲ (ಸದಾನಂದ ಸುವರ್ಣರು ತಮ್ಮ ನಾಟಕ ಸಿನೆಮಾ ಚಟುವಟಿಕೆಗಳ ನಡುವೆಯೂ) ಅಕ್ಷಯ ಸಂಪಾದಕ ಮಂಡಳಿಯಲ್ಲಿದ್ದುಕೊಂಡು ಅರ್ಥಪೂರ್ಣವಾಗಿ ಸೇವೆ ಸಲ್ಲಿಸಿದ್ದಾರೆ.'(ಪುಟ 68– ಗುಡ್ಡದಭೂತವನ್ನು ಸಾಕ್ಷಾತ್ಕರಿಸಿದ ಸದಾನಂದ ಸುವರ್ಣರ ಬದುಕು ಮತ್ತು ಸಾಧನೆ ಪ್ರ:ಕನ್ನಡ  ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ, ಮುಂಬಯಿ) ಖ್ಯಾತ ವಿದ್ವಾಂಸ ಡಾ. ಜಿ.ಎನ್.ಉಪಾಧ್ಯ ಅವರು ವಿಶ್ಲೇಷಿಸಿದಂತೆ, 'ಸದಾನಂದ ಸುವರ್ಣ ಅವರಲ್ಲಿ ಎದ್ದುಕಾಣುವ ಗುಣವೆಂದರೆ ಪ್ರಯೋಗಶೀಲತೆ. ಅವರ ಇಡೀ ಬದುಕು ಪ್ರಯೋಗಗಳಿಂದ ಕೂಡಿದೆ. ಮುಂಬಯಿಯ ದೈನಂದಿನ ತಾಪತ್ರಯಗಳಲ್ಲಿ ಕಳೆದು ಹೋಗದೆ ಯಶಸ್ಸು ಬಂದಾಗ ಹಿಗ್ಗದೆ ಸಮಚಿತ್ತವನ್ನು ಕಾಯ್ದುಕೊಂಡು ಬಂದ ಸಂವೇದನಶೀಲ ಮನಸ್ಸು ಅವರದು. ಸಾಹಿತ್ಯ, ಸಂಗೀತ, ಸಿನಿಮಾ, ರಂಗಭೂಮಿ ಹೀಗೆ ಬದುಕಿನ ಬೇರೆ ಬೇರೆ ಕ್ಷೇತ್ರಗಳಿಗೆ ಕ್ರಿಯಾಶೀಲವಾಗಿ ಸ್ಪಂದಿಸಿದ ಅವರಲ್ಲಿ ರಸಿಕತೆ ಹಾಗೂ ವಿದ್ವತ್ತು ಚೆನ್ನಾಗಿ ಮೇಳೈಸಿದೆ.' (ಪುಟ 19 ಕನ್ನಡ ಮನಸ್ಸುಗಳೊಂದಿಗೆ ಡಾ.ಜಿ.ಎನ್.ಉಪಾಧ್ಯ, ಸುವರ್ಣಗಿರಿ ಪ್ರಕಾಶನ, ಮಂಗಳೂರು)

'ನಮ್ಮಲ್ಲಿ ಹಲವರಿಗೆ ನಾಟಕ, ಚಲನಚಿತ್ರ, ಸಾಕ್ಷ್ಯಚಿತ್ರ ಇಲ್ಲವೇ ಧಾರಾವಾಹಿ– ಯಾವುದೇ ಆದರೂ ಬಲು ಸಲೀಸು. ಮೊದಲು ಮನಸಾಗಬೇಕು. ಅಷ್ಟಾದರೆ ವರ್ಷ, ತಿಂಗಳುಗಳೇಕೆ  ಬೇಕು? ಕೆಲವೇ ಕೆಲವು ದಿನಗಳು ಸಾಕು ಎಂಬ ಹುಂಬ ಧೈರ್ಯ. ಅಂಥವರ ಅತ್ಯವಸರದ ನಿರ್ಮಾಣಗಳಲ್ಲಿ ಅಕಾಲದಲ್ಲೇ ಕಾಲವಶವಾದಂಥವು, ಆಗುವಂಥವು ಅವೆಷ್ಟೋ. ಇದು ಕಣ್ಣ ಮುಂದಿನ ವಾಸ್ತವ. ಕಲೆಯ ಕುರಿತು ಉಡಾಫೆ ವರ್ತಿಸುವವರ ಬಗ್ಗೆ ಅಲ್ಲಲ್ಲಿ ಸಾತ್ವಿಕ ಕೋಪ. ಕಲೆಯ ಪಾವಿತ್ರ್ಯ, ಚಾರಿತ್ರ್ಯ ಕುಲಗೆಟ್ಟಿತು ಎಂಬುದು ತಾಪ. ಅದಕ್ಕೋಸುಗವೇ ಮೌಲಿಕ, ಕಲಾತ್ಮಕ ಚಿತ್ರ, ನಾಟಕಗಳನ್ನಿತ್ತು ಧನ್ಯತೆ ಅನುಭವಿಸುವವರದೂ ಒಂದು ಪುಟ್ಟ ಬಳಗ. ಅಂಥ ವಿರಳ, ಶಕ್ತ ತಂಡದಲ್ಲಿ ಸದಾನಂದ ಸುವರ್ಣ ಅವರದು ಅಗ್ರಗಣ್ಯ ಹೆಸರು' ಎಂದು ಖ್ಯಾತ ಸಾಹಿತಿ ವಿ.ಗ. ನಾಯಕ್ (ಪು–104–ಕರಿಕೆಯ ಕುಡಿ, ಸ್ಮೃತಿ ಪ್ರಕಾಶನ, ಮಂಗಳೂರು) ಸುವರ್ಣರ ಮೌಲಿಕ ಕೊಡುಗೆ ಹಾಗೂ ಪರಿಶ್ರಮವನ್ನು ಕಣ್ಮುಂದೆ ನಿಲ್ಲಿಸುತ್ತಾರೆ.

'ಸುವರ್ಣರ ಪ್ರವೃತ್ತಿ ಬಣ್ಣದ ಬದುಕಿನ ಕತ್ತಲು ಬೆಳಕಿನ ಜಾಡಿನಲ್ಲಿ ಓಡಿದೆ. ಈ ಬದುಕಿಗೆ ಬೆನ್ನು ತೋರಿಸಿದ್ದರೆ ಪ್ರಾಯಶಃ ಅವರೋರ್ವ ಉತ್ತಮ ಶಿಕ್ಷಕರಾಗುತ್ತಿದ್ದರು. ಶಿಕ್ಷಣ ಕ್ಷೇತ್ರಕ್ಕಾದ ಈ ನಷ್ಟ ನಾಟಕ–ಸಿನಿಮಾ ರಂಗಕ್ಕೆ ಲಾಭವಾಗಿ ಪರಿಣಮಿಸಿದೆ. ಎಳವೆಯಲ್ಲಿ ಈ ಗೀಳು ಇರಲಿಲ್ಲ. ಒಂದೆಡೆ ಹೊಟ್ಟೆಪಾಡು, ಮುಂಬಯಿಯ ಯಾಂತ್ರಿಕ ಬದುಕು, ರಾತ್ರಿ ಶಾಲಾ ವಿದ್ಯಾಭ್ಯಾಸದ ಏಕತಾನತೆಯಿಂದ ತಪ್ಪಿಸಿಕೊಳ್ಳಲು ನಾಟಕ

ಕ್ಷೇತ್ರವನ್ನು ಪ್ರವೇಶಿಸಿದರು. ಜೊತೆಗೆ ರಾತ್ರಿ ಶಾಲೆಯಲ್ಲಿ ಶಿಕ್ಷಕರೂ ಆಗಿದ್ದರು. ರಂಗಭೂಮಿಯ ನಂಟು ಅವರ ಬದುಕಿಗೆ ಹೊಸ ಆಯಾಮ ನೀಡಿತು. ನಂತರ ಜೀವನದ ಸಿಹಿ-ಕಹಿಗಳನ್ನು ನೋವು ದುಮ್ಮಾನಗಳನ್ನು ತನ್ನ ಮಣ್ಣಿನ ಸೊಗಡನ್ನು ನಾಟಕ ಮುಖಾಂತರ ನಿರಂತರ ಅಭಿವ್ಯಕ್ತಿಸುತ್ತ ಬಂದ ಅಭಿಜಾತ ಕಲಾವಿದರು' ಎಂದು ಹೆಸರಾಂತ ಲೇಖಕ, ಪತ್ರಕರ್ತ ಹರೀಶ್ ಕೆ. ಹೆಜ್ಮಾಡಿ ಅವರು ಸುವರ್ಣರನ್ನು ಮನೋಜ್ಞವಾಗಿ ಚಿತ್ರಿಸುತ್ತಾರೆ. (ಪುಟ 27 – ಗುಡ್ಡದ ಭೂತ ಸಾಕ್ಷಾತ್ಕರಿಸಿದ ಸದಾನಂದ ಸುವರ್ಣರ ಬದುಕು ಮತ್ತು ಸಾಧನೆ ಪ್ರ: ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟನ, ಮುಂಬಯಿ)

****

# ಸಮಾರೋಪ
# ರಂಗಭೂಮಿಯ ಜಂಗಮ

'ನನಗೆ ರಂಗಭೂಮಿ ಬಹಳ ಮೆಚ್ಚಿನ ಮಧ್ಯಮ. ಸಿನೆಮಾ, ಧಾರಾವಾಹಿಗಳಲ್ಲಿ ದುಡಿದಿದ್ದರೂ ರಂಗಭೂಮಿಯಲ್ಲಿ ದುಡಿಯುವುದು ನನಗೆ ಪ್ರಿಯವಾದ ಕಾಯಕ. ನನ್ನ ಜೀವಮಾನದಲ್ಲಿ ಅತ್ಯಂತ ಸಂತಸದ ಕ್ಷಣಗಳನ್ನು ಅನುಭವಿಸಿದ್ದು ರಂಗಭೂಮಿಯಲ್ಲೇ. ಜೀವನೋಪಾಯಕ್ಕಾಗಿ ನಾನು ಮೊದಲು ವಿವಿಧ ಕ್ಷೇತ್ರಗಳಲ್ಲಿ ನೌಕರಿ ಮಾಡುತ್ತಲಿದ್ದರೆ ಸಂಜೆ ನಾನು ತೊಡಗುತ್ತಿದ್ದುದು ರಂಗಭೂಮಿಯ ಕುರಿತಾದ ಚಟುವಟಿಕೆಗಳಲ್ಲಿ. ಮುಂದೆ ಪೈಂಟ್ ವ್ಯಾಪಾರ ಮಾಡುತ್ತಿದ್ದರೂ ಹೇರಳ ಹಣ ಗಳಿಸುವ ಇಚ್ಛೆ ನನಗಿರಲಿಲ್ಲ. ಸಾಮಾನ್ಯನಂತೆ ನೆಮ್ಮದಿಯಿಂದ ಜೀವನ ಸಾಗಿಸುವುದಕ್ಕೆ ಸಾಕಾಗುವಷ್ಟು ಸಂಪಾದಿಸಿ ತೃಪ್ತನಾಗಿರುತ್ತಿದ್ದೆ. ರಂಗಭೂಮಿ ನನ್ನ ಬದುಕಿನಲ್ಲಿ ಎಲ್ಲವನ್ನೂ ಕಲಿಸಿದೆ. ನನ್ನ ಜೀವನವನ್ನು ರೂಪಿಸಿದೆ. ನಾನು ರಂಗಭೂಮಿಯಲ್ಲಿ ಪಡೆದ ಅನುಭವಗಳನ್ನು ವಿವರಿಸಲು ಸಾಧ್ಯವಿಲ್ಲ. ರಂಗಭೂಮಿಯ ಕುರಿತು ವೇದಿಕೆಯಲ್ಲಿ ಭಾಷಣ ಮಾಡುವಾಗ ಕೆಲವೊಂದು ವಿಷಯಗಳನ್ನು ಹೇಳುತ್ತೇನೆ. ಆದರೆ ರಂಗಭೂಮಿಯಲ್ಲಿ ಕಲಿತುದೆಲ್ಲವನ್ನೂ ಅನುಭವಿಸಿದ ಅನುಭವವನ್ನೆಲ್ಲ ಶಬ್ದಗಳಿಂದ ವಿವರಿಸಲು ಸಾಧ್ಯವಿಲ್ಲ. ರಂಗಭೂಮಿಯಲ್ಲಿ ಬದ್ಧತೆಯಿಂದ ಬದುಕಿಯೇ ಅನುಭವಿಸಿ ತಿಳಿಯಬೇಕು, ಅದಕ್ಕಾಗಿ ಜೀವನವಿಡೀ ರಂಗಭೂಮಿಯಲ್ಲಿ ಬದುಕುತ್ತ ಬೆಳೆಯಬೇಕು. ನಾನು ನಲವತ್ತರ ದಶಕದಿಂದ ರಂಗಭೂಮಿಯಲ್ಲಿ ಬದುಕುತ್ತಿದ್ದೇನೆ. ರಂಗಭೂಮಿಯಿಂದ ಕಲಿಯುತ್ತಲಿದ್ದೇನೆ, ಅನುಭವಿಸುತ್ತಲಿದ್ದೇನೆ. ರಂಗಭೂಮಿ ಜೀವನದುದ್ದಕ್ಕೂ ಕಲಿಸುತ್ತಲೇ ಇರುತ್ತದೆ. ಆದ್ದರಿಂದ ಕೊನೆತನಕ ಕಲಿಯುತ್ತಲೇ ಕಳೆಯಬೇಕಾಗಿದೆ. ಇಂದಿನವರೆಗಿನ ನನ್ನ ರಂಗ ಪಯಣದ ಬಗ್ಗೆ ಮೆಲುಕು ಹಾಕತೊಡಗಿದರೆ ಆಗಿನ ಕನ್ನಡ ರಂಗಭೂಮಿಯ ಪರಿಸ್ಥಿತಿ, ಅದರೊಂದಿಗೆ ನನ್ನ ಒಡನಾಟ, ಅದು ಬೆಳೆಯುತ್ತ ಬಂದಂತೆ ನಾನೂ ಬೆಳೆದೆ. ಈ ಐವತ್ತು ಅರುವತ್ತು ವರ್ಷಗಳಲ್ಲಿ ನಾನು ರಂಗಭೂಮಿಯಲ್ಲಿ ಬೆಳೆಯುತ್ತ ಬಂದದ್ದರಿಂದಲೇ ಇಂದು ಕೂಡ ರಂಗಭೂಮಿಯಲ್ಲಿ ಬದುಕಿ ಉಳಿದಿದ್ದೇನೆ. ಅಂದು 'ಕುರುಡನ ಸಂಗೀತ'ದಿಂದ ಆರಂಭಿಸಿ ಇವತ್ತು 'ಉರುಳು, ಕೋರ್ಟ್ ಮಾರ್ಷಲ್, ಮಳೆ ನಿಲ್ಲುವವರೆಗೆ, ಕಲಂಕ್‌ದಿ ನೀರ್' ತನಕ ಬಂದಿದ್ದೇನೆ. ಸಿನಿಮಾ, ಧಾರಾವಾಹಿ, ಯಾವುದರಲ್ಲಿ ತೊಡಗಿಕೊಂಡರೂ ಮತ್ತೆ ರಂಗಭೂಮಿಗೆ

ಬಂದೇ ಬರುತ್ತೇನೆ. ಅದಕ್ಕೆ ಕಾರಣ ರಂಗಭೂಮಿಯ ಸೆಳೆತ' ಎನ್ನುವಲ್ಲಿ ಸುವರ್ಣರಿಗೆ ರಂಗಭೂಮಿಯ ಮೇಲಿರುವ ಅಪಾರ ಪ್ರೀತಿ, ಮಮತೆ, ಅಕ್ಕರೆ, ವಾತ್ಸಲ್ಯದ ವ್ಯಾಮೋಹವೇ ಅನಾವರಣಗೊಳ್ಳುತ್ತದೆ.

ಹೌದು, ರಂಗಭೂಮಿಯೇ ತನ್ನ ಸುಖದ ಬೀಡು, ಸಂತಸದ ನೆಲೆವೀಡು ಅನ್ನುವುದನ್ನು ಸದಾನಂದ ಸುವರ್ಣರು ಪದೇ ಪದೇ ಹೇಳಿಕೊಳ್ಳುತ್ತಾರೆ. ಸುವರ್ಣರು ನಿಷ್ಕಾಮ ಕರ್ಮಯೋಗಿ. ಕಾಯಕದಲ್ಲಿ ಸದಾನಂದವನ್ನು ಕಂಡುಕೊಳ್ಳುವ ಅವರಿಗೆ ಅದರಲ್ಲಿ ದೊರೆಯುವ ಯಶಸ್ಸೇ ಸುವರ್ಣ ಪುರಸ್ಕಾರ. ಸುವರ್ಣರನ್ನು, ಸಂತೆಯೊಳಗಿದ್ದೂ ಇಲ್ಲದಂತೆ ಬದುಕುವ ಸಂತ ಅನ್ನಬಹುದು, ಮಹಾ ಮೌನಿ, ಮಹಾ ಮುನಿ, ರಂಗ ಜ್ಞಾನಿ ಎಂದೂ ವ್ಯಾಖ್ಯಾನಿಸಬಹುದು. ತನ್ನ ಮನೆಯಲ್ಲಿ ತಾನೊಬ್ಬನೇ ಧ್ಯಾನಸ್ಥನಾಗಿರುವ ಸುವರ್ಣರು ಓದು, ಅಧ್ಯಯನ, ಬರಹದೊಂದಿಗೆ ಅರಿವಿನ ಮನೆಯಾಗಿ, ಬೆಳಕಾಗಿದ್ದಾರೆ.

ನಿರ್ಲಿಪ್ತತೆಯ, ನಿರ್ಮಮಕಾರದ ವ್ಯಕ್ತಿಗೆ ರಂಗ ಕ್ರಿಯೆಯೊಂದನ್ನು ಬಿಟ್ಟು ಬೇರೇನೂ ಬೇಕಿಲ್ಲ, ಆದರೆ ಎಲ್ಲವೂ ಅವರಿಗೆ ಪ್ರಾಪ್ತಿಯಾಗುತ್ತ ಬಂದಿದೆ. ಪ್ರಶಸ್ತಿ, ಗೌರವ ಸನ್ಮಾನಗಳೆಲ್ಲ ವಶೀಲಿಬಾಜಿಯ ಹಿಡಿತದಲ್ಲಿರುವ ಈ ದಿನಗಳಲ್ಲಿ ಅವುಗಳೆಲ್ಲ ತಾವಾಗಿಯೇ ನಿರ್ಲಿಪ್ತತೆ ಹಾಗೂ ನಿರ್ಮಮಕಾರದ ಪ್ರತೀಕವಾಗಿರುವ ರಂಗಭೂಮಿಯ ಮೇರು ಸಾಧಕ ಸುವರ್ಣರನ್ನು ಅರಸುತ್ತ ಬರುತ್ತಿವೆ, ಮೌಲ್ಯ ಹೆಚ್ಚಿಸಿಕೊಳ್ಳುತ್ತಿವೆ ಅನ್ನುವುದು ಸಂಭ್ರಮದ ಸಂಗತಿಯೇ.

ಕಾಂತಾವರ ಕನ್ನಡ ಸಂಘದ ನಾಡಿಗೆ ನಮಸ್ಕಾರ ಮಾಲಿಕೆಯ 'ರಂಗಕರ್ಮಿ ಸದಾನಂದ ಸುವರ್ಣ' ಕೃತಿಯ ಬೆನ್ನುಡಿಯಲ್ಲಿ ಖ್ಯಾತ ಸಾಹಿತಿ ಡಾ.ನಾ.ಮೊಗಸಾಲೆ ಅವರು ಬಣ್ಣಿಸಿದಂತೆ 'ಸಾಂಸ್ಕೃತಿಕವಾಗಿ ತೊಡಗಿಸಿಕೊಂಡಿರುವ ಸುವರ್ಣರದ್ದು ಅದಮ್ಯ ಚೇತನ, ಸರಳ ನಿರಾಡಂಬರ ಚೇತನ. ಈ ಇಳಿವಯಸ್ಸಿನಲ್ಲೂ ರಂಗಭೂಮಿಯ ಬಗ್ಗೆಯೇ ಕನಸು ಕಾಣುವ ಅವರು ರಂಗಭೂಮಿಯ ಜಂಗಮ.'

****

# ಆಕರ ಗ್ರಂಥಗಳು

ಅಕ್ಷರ ಕೆ.ವಿ. 'ರಂಗ ಪ್ರಯೋಗ' (ರಂಗ ಅಭಿನಯ ರಂಗತಂತ್ರಗಳು ಮತ್ತು ರಂಗ ಸಿದ್ಧತೆಯ ಪರಿಚಯ) ನೀನಾಸಂ ರಂಗ ಶಿಕ್ಷಣ ಕೇಂದ್ರದ ಪರವಾಗಿ ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ ಕರ್ನಾಟಕ, 1999

ಅಕ್ಷರ ಕೆ.ವಿ 'ರಂಗಭೂಮಿ ಮುಖಾಂತರ', ಲೇಖನ ಸಂಕಲನ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ ಕರ್ನಾಟಕ, 2009

ಉಪಾಧ್ಯ ಜಿ.ಎನ್.(ಡಾ.) 'ಕನ್ನಡ ಮನಸ್ಸುಗಳೊಂದಿಗೆ', ಪ್ರ: ಸುವರ್ಣಗಿರಿ ಪ್ರಕಾಶನ, ಮಂಗಳೂರು, 2003

ಉಪಾಧ್ಯ ಜಿ.ಎನ್.(ಡಾ.) 'ಮಹಾರಾಷ್ಟ್ರ-ಕರ್ನಾಟಕ ಆದಾನ ಪ್ರದಾನ', ಪ್ರ: ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾನಿಲಯ ಮುಂಬಯಿ, 2009

ನಾಗಭೂಷಣ ಎ.ಆರ್. 'ನಾಟಕ ಪ್ರವೇಶಿಕೆ', ಪ್ರ: ಅಕ್ಷರ ಪ್ರಕಾಶನ, ಸಾಗರ ಹೆಗ್ಗೋಡು, ಕರ್ನಾಟಕ, 1993

ನಾಯಕ ವಿ.ಗ. 'ಕರಿಕೆಯ ಕುಡಿ', ಪ್ರ: ಸ್ಮೃತಿ ಪ್ರಕಾಶನ, ಅಡ್ಯನಡ್ಕ 2009

ನಾಯಕ ವಿ.ಗ. ಪ್ರಧಾನ ಸಂ: 'ಅರ್ತಿ', ಪ್ರೊ. ವಿ.ಬಿ.ಅರ್ತಿಕಜೆ ಅಭಿನಂದನ ಗ್ರಂಥ, ಪ್ರ: ಸ್ಮೃತಿ ಪ್ರಕಾಶನ ಅಡ್ಯನಡ್ಕ, 2009

ಪ್ರಸನ್ನ ನಾಟಕ, 'ರಂಗಕೃತಿ' (ನಾಟಕ ವಿಮರ್ಶೆಯ ಕೆಲವು ವಿಚಾರಗಳು) ಪ್ರ: ಅಕ್ಷರ ಪ್ರಕಾಶನ ಸಾಗರ ಕರ್ನಾಟಕ, 1985

ಭರತ್‌ಕುಮಾರ್ ಪೊಲಿಪು (ಡಾ.) 'ಮುಂಬಯಿ ಕನ್ನಡ ರಂಗಭೂಮಿ ಮತ್ತು ಮರಾಠಿ ರಂಗಭೂಮಿ-ತೌಲನಿಕ ಅಧ್ಯಯನ', 2011 (ಅಪ್ರಕಟಿತ)

ಭರತ್‌ಕುಮಾರ್ ಪೊಲಿಪು (ಡಾ) ಪ್ರ.ಸಂ: 'ಗುಡ್ಡದಭೂತವನ್ನು ಸಾಕ್ಷಾತ್ಕರಿಸಿದ ಸದಾನಂದ ಸುವರ್ಣರ ಬದುಕು ಮತ್ತು ಸಾಧನೆ', ಕಸಾಪ ಮಹಾರಾಷ್ಟ್ರ ಘಟಕ, ಮುಂಬಯಿ, 2008

ಮರುಳಸಿದ್ದಪ್ಪ ಕೆ (ಡಾ) 'ಆಧುನಿಕ ಕನ್ನಡ ನಾಟಕ', ಪ್ರ: ಅಂಕಿತ ಪ್ರಕಾಶನ, #53 ಶ್ಯಾಮಸಿಂಗ್ ಕಾಂಪ್ಲೆಕ್ಸ್ ಗಾಂಧಿ ಬಜಾರ್, ಬೆಂಗಳೂರು-560004, 2009

ಮಾಲತಿ ಎಸ್ 'ಹೊಸದಿಕ್ಕು ರಂಗಭೂಮಿ ಕುರಿತ ಲೇಖನಗಳು', ಪ್ರ: ಲೋಹಿಯಾ ಪ್ರಕಾಶನ, ಕ್ಷತಿಜ ಕಪ್ಪಗಲ್ಲು ರಸ್ತೆ ಗಾಂಧಿ ನಗರ ಬಳ್ಳಾರಿ, 2010

ಲಿಂಗದೇವರು ಹಳೆಮನೆ 'ರಂಗರೂಪಕ', ನಿರಂತರ ಪ್ರಕಾಶನ, ಕಾಂತರಾಜೇ ಅರಸ್ ರಸ್ತೆ ಸರಸ್ವತಿಪುರಂ ಮೈಸೂರು-9, 2009

ವಿಶ್ವನಾಥ್ ಕಾರ್ನಾಡ್(ಡಾ) 'ಸಂಲಾಪ' ಪ್ರ:ಪಲ್ಲವಿ ಪ್ರಕಾಶನ, ಮುಂಬಯಿ, 2007

ವೆಂಕಟರಾಮ್ ಎನ್. ಎಸ್. 'ನವಕರ್ನಾಟಕ ಕೈಪಿಡಿ ರಂಗಭೂಮಿ',
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈಲಿ. ಎಂಬೆಸಿ ಸೆಂಟರ್,
ಕ್ರೆಸೆಂಟ್ ರಸ್ತೆ, ಬೆಂಗಳೂರು-5600001, 2009

ಸದಾನಂದ ಸುವರ್ಣ ಅಭಾಗಿನಿ ರಂಗರಶ್ಮಿ ಪ್ರಕಾಶನ, ಮುಂಬಯಿ
'ಭಗ್ನಮಂದಿರ'
'ಕಣ್ಣು ತೆರೆಯಿತು'
'ಕದ್ದವನೆ ಕಳ್ಳ'
'ಹಳ್ಳದಿಂದ ಹಾದಿಗೆ'
'ರೂಪದರ್ಶನ'
'ಗುಡ್ಡೆದ ಬೂತ'
'ವಿಷಮ ಘಳಿಗೆ'
'ಉರುಳು'
'ರಂಗಾನುಭೂತಿ'
'ಚೆನ್ನದ ಗೊಂಬೆ'

ಸೀತಾಲಕ್ಷ್ಮೀ ಕರ್ಕಿಕೋಡಿ 'ರಂಗಕರ್ಮಿ ಸದಾನಂದ ಸುವರ್ಣ' ಪ್ರ: ನಾಡಿಗೆ ನಮಸ್ಕಾರ ಮಾಲಿಕೆ, ಕಾಂತಾವರ ಕನ್ನಡ ಸಂಘ, 2007

ಸೀತಾಲಕ್ಷ್ಮೀ ಕರ್ಕಿಕೋಡಿ 'ಮುಕ್ತ ಮಾತು' ಪ್ರ: ಸ್ಮೃತಿ ಪ್ರಕಾಶನ, ಅಡ್ಯನಡ್ಕ, 2009

ಸೀತಾಲಕ್ಷ್ಮೀ ಕರ್ಕಿಕೋಡಿ 'ಆ ಕ್ಷಣದಲ್ಲಿ', ಪ್ರ: ಸ್ಮೃತಿ ಪ್ರಕಾಶನ, ಅಡ್ಯನಡ್ಕ, 2009

ಸುಬ್ಬಣ್ಣ ಕೆ.ವಿ. (ಅನುವಾದ) 'ಕೊನ್‌ಸ್ತಾಂತಿನ್ ಸ್ಲಾವಾವಸ್ಕಿ ರಂಗದಲ್ಲಿ ಅಂತರಂಗ', ಅಕ್ಷರ ಪ್ರಕಾಶನ, ಸಾಗರ, ಕರ್ನಾಟಕ, 2000 (ಎರಡನೇ ಮುದ್ರಣ)

ಶ್ರೀನಿವಾಸಮೂರ್ತಿ ಕಾ.ವೆಂ.(ಡಾ) 'ಕನ್ನಡ ರಂಗಭೂಮಿ', ಸುಮುಖ ಪ್ರಕಾಶನ, 1743/28 1ನೇ ಮಹಡಿ, 1ನೇ ಮುಖ್ಯ ರಸ್ತೆ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ, ಬೆಂಗಳೂರು 560 003, 2005

ಇತರ

1. 'ಜಾಗತಿಕ ರಂಗಭೂಮಿ' – ಎರಡು ವರ್ಷದ ಡಿಪ್ಲೊಮಾ ಕೋರ್ಸ್‌ನ ನಾಟಕ ಪಠ್ಯ ಪುಸ್ತಕ ಪ್ರಥಮ ವರ್ಷ, ಪಠ್ಯ ಪುಸ್ತಕ ನಿರ್ದೇಶನಾಲಯ, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು 560 004, 2001

2. 'ನಾಟಕ ಸ್ವರೂಪ' ಎರಡು ವರ್ಷದ ಡಿಪ್ಲೊಮಾ ಕೋರ್ಸ್‌ನ ನಾಟಕ ಪಠ್ಯ ಪುಸ್ತಕ – ದ್ವಿತೀಯ ವರ್ಷ ; ಪಠ್ಯ ಪುಸ್ತಕ ನಿರ್ದೇಶನಾಲಯ, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು 560 004, 2002

**ಪತ್ರಿಕೆಗಳು**

**ಅಕ್ಷಯ**

ಡಿಸೆಂಬರ್ 1991 (ರಾಜ್ಯಪ್ರಶಸ್ತಿ ಪಡೆದುದುರ ಗೌರವಾರ್ಥ ಸುವರ್ಣರ ಕುರಿತ ಕಿರು ವಿಶೇಷಾಂಕ)

ಮೇ 2012

**ಉದಯವಾಣಿ**

ಡಿಸೆಂಬರ್ 17, 2002
ಡಿಸೆಂಬರ್, 27, 2002
ಮಾರ್ಚ್ 23, 2009
ಡಿಸೆಂಬರ್, 4, 2009
ಮೇ 21, 2010
ನವೆಂಬರ್ 7, 2011
ಮೇ 9, 2012
ಮೇ 16, 2013

**ಕನ್ನಡ ಪ್ರಭ**

ಎಪ್ರಿಲ್ 8, 2012

**ಕರ್ನಾಟಕ ಮಲ್ಲ**

ಜನವರಿ 5, 2008
ಏಪ್ರಿಲ್ 26, 2008
ನವೆಂಬರ್ 9, 2008
ಜನವರಿ 28, 2011

**ಕರ್ಮವೀರ**

ಫೆಬ್ರವರಿ 27, 2011

**ಕರಾವಳಿ ಅಲೆ**

ಜನವರಿ, 2002

**ತರಂಗ**

ಆಗಸ್ಟ್ 11, 1991

**ಪ್ರಜಾಮತ**
ಜುಲೈ 26, 1970

**ಪ್ರಜಾವಾಣಿ**
ನವೆಂಬರ್ 30, 2000
ಅಕ್ಟೋಬರ್ 29, 2004
ಡಿಸೆಂಬರ್ 23, 2007
ಡಿಸೆಂಬರ್ 18, 2010
ಡಿಸೆಂಬರ್ 25, 2010

**ಬಂಟರವಾಣಿ**
ಜುಲೈ, 2012

**ಮುಂಗಾರು**
ಡಿಸೆಂಬರ್ 23, 1985
ಜುಲೈ 10, 1991

**ಮೊಗವೀರ**
ಸಪ್ಟೆಂಬರ್, 2011

**ವಾರ್ತಾಭಾರತಿ**
ಫೆಬ್ರವರಿ 9, 2011
ಅಕ್ಟೋಬರ್ 6, 2012

**ವಿಜಯ ಕರ್ನಾಟಕ**
12 ಸಪ್ಟೆಂಬರ್, 2002
16 ಜುಲೈ, 2006
ಮಾರ್ಚ್ 13, 2009
22 ಡಿಸೆಂಬರ್, 2010
ಜನವರಿ 6 2011
ಜನವರಿ 1, 2011
15 ಮಾರ್ಚ್, 2012
ಸಪ್ಟೆಂಬರ್ 15, 2012

**ವಿಜಯ ನೆಕ್ಸ್ಟ್**
ಮಾರ್ಚ್ 8, 2012

**ವಿಜಯ ವಾಣಿ**
ಎಪ್ರಿಲ್ 9, 2012

**ರೂಪತಾರಾ**
ಮಾರ್ಚ್, 1990
ಫೆಬ್ರವರಿ, 2011

**ಸಿಂಚನ**
ಸಪ್ಟೆಂಬರ್, 2005

**ಸಂಯುಕ್ತಕರ್ನಾಟಕ**
ಸೆಪ್ಟೆಂಬರ್ 6, 2005
ಡಿಸೆಂಬರ್ 30, 2010
ಜನವರಿ 11, 2011

**ಹೊಸದಿಗಂತ**
ಅಕ್ಟೋಬರ್ 11, 2002
ಮಾರ್ಚ್ 20, 2009
ಡಿಸೆಂಬರ್ 30, 2010

****

# ಸದಾನಂದ ಸುವರ್ಣ

## (ರಂಗ ಭೂಮಿ/ ಚಲನಚಿತ್ರ ನಿರ್ದೇಶಕ)

**ವಿಳಾಸ:** ಸುವರ್ಣಗಿರಿ, ಅಬ್ಬಕ್ಕನಗರ ಬಡಾವಣೆ, ಒಂದನೇ ಮುಖ್ಯರಸ್ತೆ, ಒಂದನೇ ತಿರುವು,ಕೊಟ್ಟಾರ, ಮಂಗಳೂರು 575 006

**ಜನನ:** 24-12-1931. ಮೂಲ್ಕಿ (ದ.ಕ.)

**ಶಿಕ್ಷಣ:**

ಪ್ರಾಥಮಿಕ - ಮಂಗಳೂರು.
ಹೈಸ್ಕೂಲು-ಮುಂಬಯಿ.

ಮುಂಬಯಿಯ ಪ್ರತಿಷ್ಠಿತ ರಂಗ ಶಿಕ್ಷಣ ಕೇಂದ್ರ, ನಾಟ್ಯ ಅಕಾಡೆಮಿ ಪದವೀಧರ.

ಭಾರತೀಯ ವಿದ್ಯಾಭವನದ ರಾಜೇಂದ್ರ ಪ್ರಸಾದ್ ಮಾಸ್ ಕಮ್ಯುನಿಕೇಷನ್ ಕಾಲೇಜಿನಿಂದ ಸಮೂಹ ಮಾಧ್ಯಮ (ಚಲನಚಿತ್ರ, ರೇಡಿಯೋ,ಟೆಲಿವಿಷನ್)ದಲ್ಲಿ ಡಿಪ್ಲೊಮಾ.

ಇಂಡೋ ಅಮೆರಿಕನ್ ಸೊಸೈಟಿಯಿಂದ ಛಾಯಾಗ್ರಹಣದಲ್ಲಿ ಡಿಪ್ಲೊಮಾ.

ಪುಣೆಯ ಫಿಲ್ಮ್ ಮತ್ತು ಟೆಲಿವಿಷನ್ ಸಂಸ್ಥೆಯಿಂದ ಚಲನಚಿತ್ರ ರಸ ಗ್ರಹಣ ಶಿಬಿರದ ಡಿಪ್ಲೊಮಾ.

**ಉದ್ಯೋಗ:**

ಮುಂಬಯಿಯ ರಾತ್ರಿ ಹೈಸ್ಕೂಲೊಂದರಲ್ಲಿ ಅಧ್ಯಾಪಕನಾಗಿ ಐದು ವರ್ಷ.
ಮುಂಬಯಿಯಲ್ಲಿ ಸ್ವಂತ ಬಣ್ಣದ ವ್ಯಾಪಾರಿಯಾಗಿ ಮೂವತ್ತು ವರ್ಷ.

**ಹವ್ಯಾಸ:**

ನಾಟಕ ರಚನೆ, ನಟನೆ, ನಿರ್ದೇಶನ- ಸುಮಾರು ಐವತ್ತು ವರ್ಷಗಳಲ್ಲಿ ಮುಂಬಯಿ ರಂಗಭೂಮಿಯಲ್ಲಿ ಉಲ್ಲೇಖನೀಯ ಚಟುವಟಿಕೆಗಳು.

**ಸ್ವತಂತ್ರ ನಾಟಕಗಳು :**

ಅಭಾಗಿನಿ, ವಿಷಮ ಘಳಿಗೆ, ಕುಲಗೌರವ, ಕದ್ದವನೆ ಕಳ್ಳ, ಕಣ್ಣು ತೆರೆಯಿತು, ಭಗ್ನ ಮಂದಿರ, ಹಳ್ಳದಿಂದ ಹಾದಿಗೆ, ರೂಪದರ್ಶನ, ಗುಡ್ಡದ ಭೂತ, ಕುರುಡನ ಸಂಗೀತ,ಧರ್ಮಚಕ್ರ, ರಜಪೂತ ಪವಾಡ, ಆಕಸ್ಮಿಕ.

**ರೂಪಾಂತರಿಸಿದ ನಾಟಕಗಳು :**

ಉರುಳು (ಹಿಂದಿ), ಚಕ್ರವ್ಯೂಹ (ಇಂಗ್ಲಿಷ್), ಅಣ್ಣನ ಮದುವೆ (ಬಂಗಾಲಿ), ಬಾಲೆ ಬಂಗಾರ್ (ಬಂಗಾಲಿ).

* ಐದು ದಶಕಗಳಲ್ಲಿ ಸ್ವರಚಿತ ನಾಟಕಗಳಲ್ಲದೆ ಇತರ ನೂರಾರು ವಿಭಿನ್ನ ರೀತಿಯ ನಾಟಕಗಳನ್ನು ಮೊದಲ ಹತ್ತು ವರ್ಷ 'ಉದಯ ಕಲಾ ನಿಕೇತನ', ನಂತರ 'ಕನ್ನಡ ಕಲಾ ಕೇಂದ್ರ'ದ ಆಶ್ರಯದಲ್ಲಿ ನಿರ್ದೇಶಿಸಿ ಪ್ರದರ್ಶಿಸಿದ್ದಲ್ಲದೆ ಮರಾಠಿಯ ಕೆಲವು ಉತ್ತಮ ನಾಟಕಗಳ ರೂಪಾಂತರಗಳನ್ನು ಕನ್ನಡ ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದ್ದಿದೆ. 'ರಂಗಸ್ಥಳ' ರಂಗ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಹಲವಾರು ಯುವ ಕಲಾವಿದರಿಗೆ ತರಬೇತಿ ನೀಡಿ ಪ್ರಯೋಗಾತ್ಮಕ ನಾಟಕ ಪ್ರದರ್ಶನಗಳಿಂದ ಅವರ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದ್ದಿದೆ.

ಬೆಂಗಳೂರು, ಮೈಸೂರು, ಮುಂಬಯಿ, ಧಾರವಾಡ ಮತ್ತು ದಕ್ಷಿಣ ಕನ್ನಡದ ಹಲವೆಡೆ ತಿರುಗಾಟ ನಡೆಸಿ ಗುಡ್ಡದ ಭೂತ, ಸುಳಿ, ಕೋರ್ಟ್‌ಮಾರ್ಷಲ್, ಉರುಳು ಮುಂತಾದ ಉತ್ತಮ ನಾಟಕಗಳನ್ನು ಪ್ರಯೋಗಿಸಿ ಜನಮನ್ನಣೆಗಳಿಸಿದ್ದಿದೆ.

**ಕಥಾ ಸಂಕಲನ :** ಮಾಸ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗಿದ್ದ ಕಥೆಗಳಲ್ಲಿ ಎಂಟನ್ನು ಆಯ್ದು ಪ್ರಕಟಿಸಿರುವ ಕಥಾ ಸಂಕಲನ 'ಚಿನ್ನದ ಗೊಂಬೆ'.

**ಕಾದಂಬರಿ :** ರಚಿಸಿದ ಏಕ ಮಾತ್ರ ಕಾದಂಬರಿ 'ಮನೆಬೆಳಕು' ಧಾರಾವಾಹಿಯಾಗಿ ಮುಂಬಯಿಯ 'ಮೊಗವೀರ' ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿದೆ.

**ಲೇಖನಗಳು:** ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮದ ಕುರಿತು ಬರೆದ ಕೆಲವು ಅಭ್ಯಾಸಪೂರ್ಣ ಮೌಲಿಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

**ಚಲನಚಿತ್ರ ಕ್ಷೇತ್ರದಲ್ಲಿ**

* 1975ರಲ್ಲಿ ಚಲನಚಿತ್ರ ರಂಗಕ್ಕೆ ಪ್ರವೇಶ. ಡಾ. ಯು.ಆರ್.ಅನಂತಮೂರ್ತಿಯವರ ಘಟಶ್ರಾದ್ಧ ಕತೆಯಾಧರಿಸಿ ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಆಗಷ್ಟೇ ತರಬೇತು ಪಡೆದು ಬಂದ ಗಿರೀಶ್ ಕಾಸರವಳ್ಳಿ ಅವರಿಗೆ ನಿರ್ದೇಶನದ ಜವಾಬ್ದಾರಿ ವಹಿಸಿ

ಚಲನಚಿತ್ರ ನಿರ್ಮಾಣ. ಇದಕ್ಕೆ ಅತ್ಯುತ್ತಮ ಚಲನಚಿತ್ರವೆಂದು 'ಸ್ವರ್ಣ ಕಮಲ' ರಾಷ್ಟ್ರ ಪ್ರಶಸ್ತಿ ! 'ಕರ್ನಾಟಕ ರಾಜ್ಯ ಪ್ರಶಸ್ತಿ', 'ದಾದಾ ಸಾಹೇಬ ಪಾಲ್ಕೆ', ಜರ್ಮನಿಯ 'ಡ್ಯುಕಾಡ್ಸ್ ಪ್ರಶಸ್ತಿ' ಮುಂತಾದ 18 ಪ್ರಶಸ್ತಿಗಳು.

* ಗಿರೀಶ್ ಕಾಸರವಳ್ಳಿ ನಿರ್ದೇಶನದಲ್ಲಿ ತಬರನ ಕತೆ, ಮನೆ, ಕ್ರೌರ್ಯ ಮುಂತಾದ ಚಿತ್ರಗಳ ನಿರ್ವಾಹಕ ನಿರ್ಮಾಪಕನಾಗಿ ಚಲನಚಿತ್ರ ನಿರ್ಮಾಣದ ವಿವಿಧ ಹಂತದಲ್ಲಿ ಅನುಭವ. ಈ ಎಲ್ಲ ಚಿತ್ರಗಳಿಗೂ ರಾಷ್ಟ್ರ ಪ್ರಶಸ್ತಿ.

* 1989ರಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಕಥೆ ಆಧರಿಸಿ ಚೊಚ್ಚಲ ನಿರ್ದೇಶನದ ಚಲನಚಿತ್ರ 'ಕುಬಿ ಮತ್ತು ಇಯಾಲ'ಕ್ಕೆ 'ಅತ್ಯುತ್ತಮ ಚಿತ್ರ;, 'ಉತ್ತಮ ನಿರ್ದೇಶಕ', 'ಉತ್ತಮ ಕತೆ' ಹೀಗೆ ಮೂರು ಕರ್ನಾಟಕ ರಾಜ್ಯ ಪ್ರಶಸ್ತಿಗಳು. ಕಲ್ಕತ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆ. ಸಿಡ್ನಿ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನ ಭಾಗ್ಯ.

* ಗುಣಮಟ್ಟದ ಪ್ರಶಸ್ತಿ ಪುರಸ್ಕೃತ ಪ್ರಾದೇಶಿಕ ಚಿತ್ರಗಳ ಪ್ರಸಾರಕ್ಕಾಗಿ ಮುಂಬಯಿಯಲ್ಲಿ ದೃಷ್ಟಿ ಫಿಲ್ಮ್ ಸೊಸೈಟಿಯ ಸ್ಥಾಪಕ ಸದಸ್ಯರಲ್ಲೊಬ್ಬನಾಗಿ ನಂತರ ಆರು ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ. ಅನೇಕ ಪ್ರಶಸ್ತಿ ವಿಜೇತ ಚಿತ್ರಗಳ ಪ್ರದರ್ಶನ, ವಿಚಾರ ಸಂಕಿರಣ, ಉಪನ್ಯಾಸ, ಸಂವಾದಗಳನ್ನು ಏರ್ಪಡಿಸಿ ಸದಭಿರುಚಿಯ ಪ್ರೇಕ್ಷಕ ವರ್ಗದ ನಿರ್ಮಾಣ.

**ಕಿರುತೆರೆ ಪ್ರವೇಶ**

ಸ್ವರಚಿತ 'ಗುಡ್ಡೆದ ಭೂತ' ತುಳು ನಾಟಕ ಆಧರಿಸಿ ಕೆಲವು ಬದಲಾವಣೆಗಳೊಂದಿಗೆ ಕನ್ನಡದಲ್ಲಿ ಚಿತ್ರಕತೆ ರಚಿಸಿ ನಿರ್ದೇಶಿಸಿದ ಟೆಲಿಚಿತ್ರ 'ಗುಡ್ಡದ ಭೂತ'. ಇದು ಆ ಕಾಲದ ಅತ್ಯಂತ ಜನಪ್ರಿಯ ಧಾರಾವಾಹಿಯಾಗಿ ಹದಿಮೂರು ಕಂತುಗಳಲ್ಲಿ ದೂರದರ್ಶನ ಬೆಂಗಳೂರು ಮತ್ತು ಮುಂಬಯಿಯಲ್ಲೂ ಪ್ರಸಾರವಾಗಿ ಅಪಾರ ಜನಮನ್ನಣೆ ಗಳಿಸಿತಲ್ಲದೆ ಉತ್ತಮ ಧಾರಾವಾಹಿಯೆಂದು 'ಆರ್ಯಭಟ' ಮತ್ತು 'ಸಂದೇಶ ಪ್ರತಿಷ್ಠಾನ' ಪ್ರಶಸ್ತಿಗಳನ್ನು ಪಡೆಯಿತು.

**ಸಾಕ್ಷ್ಯಚಿತ್ರಗಳು**

**ಕಾರಂತ ದರ್ಶನ :** ಡಾ. ಶಿವರಾಮ ಕಾರಂತರ ಆತ್ಮಕತೆ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಆಧರಿಸಿ 'ಕಾರಂತ ದರ್ಶನ' ಬೃಹತ್ ಸಾಕ್ಷ್ಯಚಿತ್ರ ನಿರ್ಮಾಣ. ಇದು ಹನ್ನೊಂದು ಕಂತುಗಳಲ್ಲಿ ಇತಿಯಾಗಿ ಕೈಗೆ ದೂರದರ್ಶನದಲ್ಲಿ ಮೂರು ಬಾರಿ ಪ್ರಸಾರವಾಗಿ ಜನಮೆಚ್ಚುಗೆ ಪಡೆದಿದೆ.

**ಶ್ರೀ ನಾರಾಯಣ ಗುರು :**

ಸಂತ, ದಾರ್ಶನಿಕ, ಪರಿವರ್ತನೆಯ ಹರಿಕಾರ 'ಶ್ರೀ ನಾರಾಯಣ ಗುರು', ಸಾಕ್ಷ್ಯಚಿತ್ರದ ಸಂಯೋಜನೆ ಮತ್ತು ನಿರ್ದೇಶನ. ಯುವವಾಹಿನಿ ಸಂಸ್ಥೆಗಳು ಸಿದ್ಧಪಡಿಸಿದ ಈ ಸಾಕ್ಷ್ಯಚಿತ್ರದ ಮೂರು ಸಾವಿರಕ್ಕೂ ಅಧಿಕ ಸಿಡಿ, ಡಿವಿಡಿಗಳು ಪ್ರಸಾರವಾಗಿವೆ.

**ತುಳುನಾಡು ಒಂದು ಇಣುಕು ನೋಟ:**

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಅವಲೋಕನ ಕಾರ್ಯಕ್ರಮಕ್ಕಾಗಿ ನಿರ್ಮಿಸಿದ 'ತುಳುನಾಡು ಒಂದು ಇಣುಕು ನೋಟ' ಸಾಕ್ಷ್ಯಚಿತ್ರ ದೂರದರ್ಶನದಲ್ಲಿ ಪ್ರಸಾರವಾಗಿ ಮೆಚ್ಚುಗೆ ಪಡೆದಿದೆ.

**ಪ್ರಶಸ್ತಿಗಳು**

'ಕದ್ದವನೆ ಕಳ್ಳ' ನಾಟಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ ಸ್ಪರ್ಧೆಯಲ್ಲಿ ಬಹುಮಾನ 1968.

ಕರ್ನಾಟಕ ಸರಕಾರದಿಂದ 'ರಾಜ್ಯೋತ್ಸವ ಪ್ರಶಸ್ತಿ' 1996.

'ಉರುಳು' ರಂಗಕೃತಿಗೆ ರಂಗಭೂಮಿ ಉಡುಪಿ ಏರ್ಪಡಿಸಿದ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಶ್ರೇಷ್ಠ ನಟ, ಶ್ರೇಷ್ಠ ಪೋಷಕ ನಟ ಪ್ರಶಸ್ತಿ 1998.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ಗೌರವ ಪ್ರಶಸ್ತಿ' 2000.

ಕರ್ನಾಟಕ ನಾಟಕ ಅಕಾಡೆಮಿಯಿಂದ 'ಗೌರವ ಪ್ರಶಸ್ತಿ' 2001.

'ಉರುಳು' ರೂಪಾಂತರಕ್ಕೆ ಅತ್ತಿಮಬ್ಬೆ ಪ್ರತಿಷ್ಠಾನದ 'ರನ್ನ ಪ್ರಶಸ್ತಿ' 2001.

'ಕೋರ್ಟ್ ಮಾರ್ಷಲ್' ರಂಗಕೃತಿಗೆ ರಂಗಭೂಮಿಯ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಶ್ರೇಷ್ಠ ನಾಟಕ, ಶ್ರೇಷ್ಠ ನಿರ್ದೇಶಕ, ಪೋಷಕ ನಟ, ಮುಂತಾದ 7 ಪ್ರಶಸ್ತಿಗಳು 2002.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ನೀಡಿದ 'ಕರ್ನಾಟಕ ಶ್ರೀ' ಪ್ರಶಸ್ತಿ 2003.

ಅಧೋಕ್ಷಜ ಮಠ, ಪೇಜಾವರದ ಶ್ರೀ ಶ್ರೀ ವಿಶ್ವೇಶತೀರ್ಥರು ನೀಡಿದ 'ಶ್ರೀರಾಮ ವಿಠಲ' ಪ್ರಶಸ್ತಿ 2003.

ಬಿಲ್ಲವರ ಅಸೋಸಿಯೇಶನ್, ಮುಂಬಯಿ ಕೊಡಮಾಡಿದ 'ಶ್ರೀ ನಾರಾಯಣ ಗುರು' ಸಾಹಿತ್ಯ ಪ್ರಶಸ್ತಿ 2004.

ಮಹಾರಾಷ್ಟ್ರ ರಾಜ್ಯ ಕನ್ನಡಿಗರ 6ನೇ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶದಲ್ಲಿ 'ಮಹಾರಾಷ್ಟ್ರದ ಶ್ರೇಷ್ಠ ಕನ್ನಡಿಗ' ಪ್ರಶಸ್ತಿ 2004.

ಯುವ ವಾಹಿನಿ ಮಂಗಳೂರು ನೀಡಿದ 'ವಿಶುಕುಮಾರ್' ಪ್ರಶಸ್ತಿ 2006.

ಉಡುಪಿಯ 'ರಂಗಭೂಮಿ' ಸಂಸ್ಥೆಯಿಂದ 'ಕಲಾತಪಸ್ವಿ' ಪ್ರಶಸ್ತಿ 2006.

ನವೋದಯ ಗ್ರಾಮ ವಿಕಾಸ ಟ್ರಸ್ಟ್ ವತಿಯಿಂದ 'ಸುವರ್ಣ ಕರ್ನಾಟಕ' ಪ್ರಶಸ್ತಿ, 2006.

ಆಳ್ವಾಸ್ ಶಿಕ್ಷಣ ಸಂಸ್ಥೆ ಕೊಡಮಾಡಿದ 'ಆಳ್ವಾಸ್ ನುಡಿಸಿರಿ ಪ್ರಶಸ್ತಿ' 2008.

ಮುಂಬಯಿ ಕರ್ನಾಟಕ ಸಂಘದಿಂದ ಜೀವಮಾನದ ಸಾಧನೆಗಾಗಿ 'ಸಾಧನಾ ಶಿಖರ ಪ್ರಶಸ್ತಿ' 2010.

ಮಂಗಳೂರಿನ ನಾರಾಯಣ ಗುರು ಯುವ ವೇದಿಕೆಯಿಂದ 'ಬ್ರಹ್ಮಶ್ರೀ' ಪ್ರಶಸ್ತಿ 2010.

ಮಂಗಳೂರಿನಲ್ಲಿ ಜರುಗುವ ಕರಾವಳಿ ಉತ್ಸವದಲ್ಲಿ 'ಕರಾವಳಿ ಉತ್ಸವ ಗೌರವ ಪ್ರಶಸ್ತಿ' 2015.

***



## ಲೇಖಕಿಯ ಸ್ವ ವಿವರ
## ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ (ಕೆ.ವಿ.)

ಜನನ: 1976

ವಾಸಸ್ಥಳ: ಕೊಟ್ಟಾರ, ಮಂಗಳೂರು

ವಿಳಾಸ: ಸುವರ್ಣಗಿರಿ ಮನೆ ಮಹಡಿ, ಅಬ್ಬಕ್ಕನಗರ ಬಡಾವಣೆ,
ಮೊದಲ ಮುಖ್ಯ ರಸ್ತೆ ಮತ್ತು ತಿರುವು, ಕೊಟ್ಟಾರ,
ಮಂಗಳೂರು ಸಂಚಾರಿ, ದೂರವಾಣಿ: 9986087345

ಪ್ರಾಥಮಿಕ / ಪ್ರೌಢ ವಿದ್ಯಾಭ್ಯಾಸ: ಜನತಾ ವಿದ್ಯಾಸಂಸ್ಥೆ, ಅಡ್ಯನಡ್ಕ

ಪಿಯುಸಿ / ಪದವಿ: ಬಿ.ಎ. (ಕನ್ನಡ ಐಚ್ಛಿಕ) ವಿವೇಕಾನಂದ ಕಾಲೇಜು, ಪುತ್ತೂರು

**ಸ್ನಾತಕೋತ್ತರ ಪದವಿ :**

1. ಕನ್ನಡ– ಮಂಗಳೂರು ವಿಶ್ವವಿದ್ಯಾನಿಲಯ (ಎಂ.ಎಸ್. ಪುಟ್ಟಣ್ಣ ದತ್ತಿನಿಧಿ ಬಹುಮಾನ)

2. ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ – ಮೈಸೂರು ಮುಕ್ತ ವಿಶ್ವವಿದ್ಯಾನಿಲಯ (ಏಳನೇ ರ್‍ಯಾಂಕ್)

**ಪಿಹೆಚ್‌ಡಿ:** 'ಮಾಸ್ತಿ ಅವರ ಕಥೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ' ಕನ್ನಡ ವಿಶ್ವವಿದ್ಯಾನಿಲಯ ಹಂಪಿ

ಎಂಫಿಲ್: 'ಸದಾನಂದ ಸುವರ್ಣರ ಬದುಕು-ಸಾಧನೆ'-ಮುಂಬಯಿ ವಿಶ್ವವಿದ್ಯಾಲಯ ಮುಂಬಯಿ

ಉದ್ಯೋಗ: 'ವಿಜಯ ಕರ್ನಾಟಕ' ಮಂಗಳೂರು ಆವೃತ್ತಿಯಲ್ಲಿ 'ಹಿರಿಯ ಉಪ ಸಂಪಾದಕಿ' (ವರದಿಗಾರಿಕೆ, ಸಾಹಿತ್ಯ ಸಮ್ಮೇಳನಗಳ ವಿಶೇಷ ವರದಿಗಾರಿಕೆ, ಸಾಧಕರ ಸಂದರ್ಶನ, ವ್ಯಕ್ತಿಚಿತ್ರ, ಪುಸ್ತಕ ಪರಿಚಯ, ಸಾಂಸ್ಕೃತಿಕ ಕಾರ್ಯಕ್ರಮಗಳ ವಿಮರ್ಶೆ, ಹಲವು ವೈಶಿಷ್ಟ್ಯಗಳ ಕುರಿತು ಲೇಖನ...)

**ಪ್ರಕಟಿತ ಕೃತಿಗಳು :**

1. 'ಪರಾಮರ್ಶೆ' ವಿಮರ್ಶೆಗಳು
2. 'ರಂಗಕರ್ಮಿ ಸದಾನಂದ ಸುವರ್ಣ' ವ್ಯಕ್ತಿಚಿತ್ರ
3. 'ಮುಕ್ತಮಾತು' ಸಾಧಕರ ಸಂದರ್ಶನಗಳು
4. 'ಆ ಕ್ಷಣದಲ್ಲಿ...' ಲೇಖನಗಳ ಸಂಕಲನ
5. 'ಹೋರಾಟಗಾರ್ತಿ ಕಮಲಾದೇವಿ ಚಟ್ಟೋಪಾಧ್ಯಾಯ' ವ್ಯಕ್ತಿಚಿತ್ರ
6. 'ಸುವರ್ಣ ಸಂಪದ' (ರಂಗಕರ್ಮಿ ಸದಾನಂದ ಸುವರ್ಣರ ಬದುಕು-ಬರೆಹದ ಬಗೆಗಿನ ಎಂಫಿಲ್ ಸಂಪ್ರಬಂಧ)
7. 'ಪುತ್ತೂರಿನ ವೃತ್ತಾಂತಕಾರ ಪ್ರೊ. ವಿ.ಬಿ.ಅರ್ತಿಕಜೆ' ವ್ಯಕ್ತಿ ಚಿತ್ರ

**ಸಂಪಾದನೆ :**

1. 'ಪತ್ರ ಪ್ರೀತಿ: ವಿ.ಗ.ನಾ ರೀತಿ'
2. 'ಆಶಯ-ಆಕೃತಿ' (ಡಾ. ಮೊಗಸಾಲೆ ಅವರ 'ಉಲ್ಲಂಘನೆ' ಕಾದಂಬರಿ ಕುರಿತ ವಿಮರ್ಶಾ ಬರೆಹಗಳು)


**ಸಹ ಸಂಪಾದನೆ :**

1. 'ಅರ್ತಿ' (ಪ್ರೊ. ವಿ.ಬಿ. ಅರ್ತಿಕಜೆ ಅಭಿನಂದನ ಗ್ರಂಥ)

**ಪ್ರಶಸ್ತಿ :** 'ಬನ್ನಂಜೆ ಶ್ರೀ ರಾಮಾಚಾರ್ಯ ಪತ್ರಿಕಾ ಪುರಸ್ಕಾರ 2012'

**ಹವ್ಯಾಸ :** ಸಾಹಿತ್ಯ-ಕಲೆ-ಸಾಂಸ್ಕೃತಿಕ ವಿಷಯಗಳ ಬಗ್ಗೆ ಸಮಾನವಾದ ಒಲವು.

ಕನ್ನಡ ಪತ್ರಿಕೆ / ಪತ್ರಿಕೋದ್ಯಮದಲ್ಲಿ ಮಹಿಳೆಯರ ತೊಡಗಿಸಿಕೊಳ್ಳುವಿಕೆ, ನೀಡಿದ ಕೊಡುಗೆಗಳ ಬಗೆಗಿನ ಅಧ್ಯಯನದಲ್ಲಿ ವಿಶೇಷ ಆಸಕ್ತಿ.



'ಕಾರಂತದರ್ಶನ' ಚಿತ್ರೀಕರಣ ಸಂದರ್ಭ.
ಡಾ. ಕಾರಂತರಿಂದ ನಾಟಕ ವಾಚನದ ಒಂದು ಭಂಗಿ




ಚಿತ್ರ ನಿರ್ದೇಶಕ ಜಿ.ವಿ. ಅಯ್ಯರ್‌ರಿಂದ ಸುವರ್ಣರಿಗೆ
'ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ' ಪ್ರದಾನ




ಕರ್ನಾಟಕ ಮುಖ್ಯಮಂತ್ರಿ ಜೆ.ಎಚ್. ಪಟೇಲ್. ಅವರಿಂದ ‘ರಾಜ್ಯೋತ್ಸವ ಪ್ರಶಸ್ತಿ’ ಪ್ರದಾನ



‘ಕುಬಿ ಮತ್ತು ಇಯಾಲ’ ಚಲನಚಿತ್ರಕ್ಕಾಗಿ ‘ರಾಜ್ಯ ಪ್ರಶಸ್ತಿ’ ಗಣ್ಯರೊಂದಿಗೆ
ಪ್ರಶಸ್ತಿ ಪುರಸ್ಕೃತರಾದ ಸುವರ್ಣರು



'ಕುರುಡನ ಸಂಗೀತ' ನಾಟಕದಲ್ಲಿ ಕುರುಡನಾಗಿ



ಐವತ್ತರ ದಶಕದ 'ಅಭಾಗಿನಿ' ನಾಟಕದ ಒಂದು ದೃಶ್ಯ. ಎನ್.ಸಿ. ಪಡುಬಿದ್ರಿ,
ಸಂಜೀವ ಕಾಂಬನ್ ಹಾಗೂ ಲೇಖಕ, ನಿರ್ದೇಶಕ, ನಟ ಸದಾನಂದ ಸುವರ್ಣರು



‘ಅಭಾಗಿನಿ’ಯಲ್ಲಿ ಎಸ್.ಟಿ. ಸುವರ್ಣ ಮತ್ತು ಸದಾನಂದ ಸುವರ್ಣರು



ರಂಗಪೂಜೆಯಲ್ಲಿ ಸುವರ್ಣರು




‘ಸತ್ಯಂ ವದ ಧರ್ಮಂ ಚರ’ದ ದೃಶ್ಯದ ಸುವರ್ಣರು
ಕೆ.ಜೆ. ರಾವ್, ಮತ್ತಿತರರು



‘ಸತ್ಯಂ ವದ ಧರ್ಮಂ ಚರ’ ನಾಟಕದಲ್ಲಿ ಸುವರ್ಣರ ‘ವಿದ್ಯಾನಂದ’ನ ಪಾತ್ರವನ್ನು
ಹಿರಿಯ ಹಿಂದಿ ನಟ ಅಶೋಕ್‌ಕುಮಾರ ಶ್ಲಾಘಿಸಿದಾಗ



'ರೂಪದರ್ಶನ' ನಾಟಕದ ದೃಶ್ಯ ರಾಜು. ಸಾಲಿಯಾನ್ ಮತ್ತು ಶ್ರೀಮತಿ ಮಡಿಮನೆ



'ಭಗ್ನ ಮಂದಿರ' ನಾಟಕದ ದೃಶ್ಯ



'ಕದ್ದವನೆ ಕಳ್ಳ' ನಾಟಕದ ದೃಶ್ಯ



'ಅಳಿಯ ದೇವರು' ನಾಟಕದ
ಒಂದು ದೃಶ್ಯ




'ಗುಡ್ಡೆದ ಭೂತ' ತುಳು ನಾಟಕದ ಒಂದು ದೃಶ್ಯ



'ಉದಯ ಕಲಾನಿಕೇತನದ ಕೋರಸ್ ಗ್ರೂಪ್ (ಐವತ್ತರ ದಶಕ)



ಅರವತ್ತರ ದಶಕದಲ್ಲಿ ಮುಂಬಯಿಯ ಪ್ರಖ್ಯಾತ ಕರ್ನಾಟಕ ನೂತನ ಸಂಗೀತ ಸಭೆಯ ರಜತ ಮಹೋತ್ಸವ ಸಂದರ್ಭ ಆಯೋಜಿಸಿದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಕವಿವರ್ಯ ಬೇಂದ್ರೆಯವರ ಜತೆ ಸುವರ್ಣರು.




ಸುಂದರ್ ಬ್ಾ ಸಭಾಗೃಹದಲ್ಲಿ ಸುವರ್ಣ ನಿರ್ದೇಶನದ 'ನಾಗರಿಕ' ಸರಳ ರಗಳೆ ನಾಟಕದ ಪ್ರದರ್ಶನದಂದು ಆಕಾಶವಾಣಿಯ ನಿಲಯ ನಿರ್ದೇಶಕ ಕುಲಕರ್ಣಿ ಅವರ ಉಪಸ್ಥಿತಿ



‘ನಾಗರಿಕ’ (ಸರಳ ರಗಳೆ) ನಾಟಕದಲ್ಲಿ



‘ನಾಗರಿಕ’ ನಾಟಕದ ಇನ್ನೊಂದು ದೃಶ್ಯ



'ರಜಪೂತ ಪವಾಡ' ಐತಿಹಾಸಿಕ ನಾಟಕದ ದೃಶ್ಯ



ಮೊಗವೀರ ರಾತ್ರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಸಮಾರಂಭ.
ನಾಟಕ ಅನುಭವಿಸುತ್ತಿರುವ ಪ್ರೇಕ್ಷಕ ವರ್ಗ



'ಕಣ್ಣು ತೆರೆಯಿತು' ನಾಟಕದ ಒಂದು ದೃಶ್ಯ




'ಕಣ್ಣು ತೆರೆಯಿತು' ನಾಟಕದಲ್ಲಿ



ಕನ್ನಡ ಕಲಾಕೇಂದ್ರದ ಕೆ.ಜೆ.ರಾವ್
ನಿರ್ದೇಶನದ
'ಸತ್ಯಂ ವದ ಧರ್ಮಂ ಚರ'ದ
ಪ್ರಧಾನ ಪಾತ್ರದಲ್ಲಿ



‘ಧರ್ಮಚಕ್ರ’ ನಾಟಕದಲ್ಲಿ ಸಾಮ್ರಾಟ್ ಅಶೋಕನಾಗಿ ಸುವರ್ಣರು



ಕಲಾಕೇಂದ್ರ ‘ಚಕ್ರವ್ಯೂಹ’ ನಾಟಕದಲ್ಲಿ ಕೆ.ಜೆ. ರಾವ್, ಲತಾ ಜುಕರ್
ಹಾಗೂ ರೂಪಾಂತರಕಾರ, ನಿರ್ದೇಶಕ, ನಟ ಸುವರ್ಣರು




‘ಯಾರು ನನ್ನವರು’ ನಾಟಕದಲ್ಲಿ ಸುಶೀಲ ಆಚಾರ್ಯ, ಲತಾ ಜುಕರ್
ಮತ್ತು ಶ್ರೀಮತಿ ರಾವ್



‘ಸುಳಿ, ನಾಟಕದಲ್ಲಿ ಕೆ.ಬಿ. ವಾಮನ್ ಮತ್ತು ದೇವದಾಸ್ ಮೇಗರವಳ್ಳಿ




'ಸೂತ್ರ'ದಲ್ಲಿ ಸದಾಶಿವ ಸಾಲಿಯಾನ್ ಮತ್ತು ಕೆ.ಬಿ. ವಾಮನ್



'ಡೊಂಕು ಬಾಲದ ನಾಯಕರು'
ನಾಟಕದಲ್ಲಿ ಬಾಲನಟ ಅಮೃತ,
ಡಾ. ನಿಂಜೂರು,
ಡಾ. ಎಂ.ಎನ್. ರಾಮಚಂದ್ರ



‘ಸೂತ್ರದಲ್ಲಿ ಕೆ.ಬಿ. ವಾಮನ್ ಮತ್ತು ರಾವ್ ದಂಪತಿ



‘ನಲ್ವತ್ತರ ನಲುಗು’ ನಾಟಕ



'ಸುಳಿ' ನಾಟಕ ತಂಡದೊಂದಿಗೆ ನಿರ್ದೇಶಕ ಸುವರ್ಣರು




'ಸೂತ್ರ' ನಾಟಕದ ರಿಹರ್ಸಲ್ ನಡೆಸುತ್ತಿರುವ ಸುವರ್ಣರು,
ಕೆ.ಬಿ. ವಾಮನ್ (ವಾಮನ್ ರಾಜ್) ಮತ್ತು ಸದಾಶಿವ ಸಾಲಿಯಾನ್
ಮತ್ತಿತರ ನಟನಟಿಯರು



'ನಲ್ವತ್ತರ ನಲುಗು' ನಾಟಕದ ಪ್ರೇಕ್ಷಕರು



'ಆಕಸ್ಮಿಕ' ನಾಟಕದಲ್ಲಿ ಎಸ್.ಎಂ. ಶೆಟ್ಟಿ ಎಂ.ಎನ್. ರಾಮಚಂದ್ರ ರಾವ್
ಮತ್ತು ಲೇಖಕ, ನಿರ್ದೇಶಕ, ನಟ ಸುವರ್ಣರು



'ಆಕಸ್ಮಿಕ' ನಾಟಕದಲ್ಲಿ ಸುವರ್ಣರು



'ಆಕಸ್ಮಿಕ' ನಾಟಕದ ದೃಶ್ಯ



'ಜಾಕ್ಸನ್' ಪಾತ್ರದಲ್ಲಿ ಸುವರ್ಣರು



ನಾಟಕೋತ್ಸವದ ಅತಿಥಿ, ಖ್ಯಾತ ಇಂಗ್ಲೀಷ್ ನಾಟಕ
ನಿರ್ದೇಶಕ ಎಲಿಕ್ ಪದಮ್‌ಸಿ ಜತೆ



ಪಾಡ್ದನ ಚೌಕಟ್ಟಿನಲ್ಲಿ ಸುವರ್ಣರು ನಿರ್ದೇಶಿಸಿದ 'ಗೋಂದೊಳು'
ನಾಟಕದ ದೃಶ್ಯ



'ಗೋಂದೊಳು' ನಾಟಕದ ಸಂಗೀತ ಸಂಯೋಜನೆ




'ರಂಗಸ್ಥಳ'ದಲ್ಲಿ ರಂಗಶಿಕ್ಷಣ




ಗೊರೆಗಾಂವ್ ಕರ್ನಾಟಕ ಸಂಘದಲ್ಲಿ 'ರಂಗಸ್ಥಳ' ರಂಗಶಿಕ್ಷಣ ಕೇಂದ್ರವನ್ನು ರಂಗಭೂಮಿ ಪ್ರತಿಕೃತಿ ಮೂಲಕ ನಿರ್ದೇಶಕ ಸುವರ್ಣರು ಉದ್ಘಾಟಿಸುತ್ತಿರುವುದು



'ರಂಗಸ್ಥಳ' ರಂಗಶಿಕ್ಷಣ ಕೇಂದ್ರದಲ್ಲಿ ನಿರ್ದೇಶಕ ಸುವರ್ಣರಿಂದ ತರಬೇತಿ



'ರಂಗಸ್ಥಳ' ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳೊಂದಿಗೆ ನಿರ್ದೇಶಕ ಸುವರ್ಣರು




‘ರಂಗಸ್ಥಳ’ ಕಾರ್ಯಕ್ರಮದಲ್ಲಿ ಜಯಂತ್ ಕಾಯ್ಕಿಣಿ ಜತೆ



‘ದೊರೆ ಈಡಿಪಸ್’ ನಾಟಕದ ದೃಶ್ಯ




‘ದೊರೆ ಈಡಿಪಸ್’ ನಾಟಕದಲ್ಲಿ ಅಂಧ ಪ್ರವಾದಿಯಾಗಿ ಸುವರ್ಣರು



‘ದೊರೆ ಈಡಿಪಸ್’ ನಾಟಕದಲ್ಲಿ ಎಂ.ಎಸ್. ರಾಮಚಂದ್ರ ಮತ್ತು ಕುಂದಾರೇಗೆ



'ದೊರೆ ಈಡಿಪಸ್' ನಾಟಕದ ಕಲಾವಿದರು




ಸುವರ್ಣರು ರೂಪಾಂತರಿಸಿ ನಿರ್ದೇಶಿಸಿದ ತುಳು ನಾಟಕ 'ಬಾಲೆ ಬಂಗಾರ್' ದೃಶ್ಯ



ಸುವರ್ಣರು ರೂಪಾಂತರಿಸಿ ನಿರ್ದೇಶಿಸಿದ ತುಳು ನಾಟಕ 'ಬಾಲೆ ಬಂಗಾರ್' ದೃಶ್ಯಗಳು



'ಬಾಲೆ ಬಂಗಾರ್' ನಾಟಕದ ದೃಶ್ಯ



ಸುವರ್ಣರ ನಿರ್ದೇಶನದ ಡಾ. ಶಿವರಾಮ ಕಾರಂತರ
'ನಿಮ್ಮ ಓಟು ಯಾರಿಗೆ" ಮಕ್ಕಳ ನಾಟಕದ ದೃಶ್ಯ




'ನಿಮ್ಮ ಓಟು ಯಾರಿಗೆ? ನಾಟಕದ ಇನ್ನೊಂದು ದೃಶ್ಯ





'ಉರುಳು' ನಾಟಕದಲ್ಲಿ ಲಕ್ಷ್ಮಣ್ ಕುಮಾರ್ ಮಲ್ಲೂರು,
ಸುಧಾಕರ್ ಮತ್ತು ಚಂದ್ರಹಾಸ್ ಉಳ್ಳಾಲ್



'ಮಳೆ ನಿಲ್ಲುವವರೆಗೆ' ನಾಟಕದಲ್ಲಿ ಬಾಬಣ್ಣ ರೈ, ಗೋಪಿನಾಥ್ ಭಟ್ ಮಲ್ಲೂರು
ಮತ್ತು ಡಾ. ನರಸಿಂಹಮೂರ್ತಿ



'ಮಳೆ ನಿಲ್ಲುವವರೆಗೆ' ನಾಟಕದಲ್ಲಿ ಗೋಪಿನಾಥ್ ಭಟ್ ಮಲ್ಲೂರು
ಮತ್ತು ಡಾ. ನರಸಿಂಹಮೂರ್ತಿ



ಸುವರ್ಣ ಪ್ರತಿಷ್ಠಾನದ 'ಕೋರ್ಟ್ ಮಾರ್ಷಲ್' ನಾಟಕದ ದೃಶ್ಯ



ಧಾರವಾಡದ ಉತ್ಸವದಲ್ಲಿ ಪ್ರದರ್ಶನಗೊಂಡ 'ಕೋರ್ಟ್ ಮಾರ್ಷಲ್' – ಪ್ರತಿಕ್ರಿಯೆ ನೀಡುತ್ತಿರುವ ನಿರ್ದೇಶಕ ಪ್ರಸನ್ನ



ಮಂಗಳೂರಿನಲ್ಲಿ ಸುವರ್ಣರ ತ್ರಿವಳ ನಾಟಕೋತ್ಸವ.
ನಾಟಕ ಅಕಾಡೆಮಿಯ ಅಧ್ಯಕ್ಷ ಜಯರಾಮ್ ಅವರಿಂದ ಉದ್ಘಾಟನೆ



ಮುಂಬಾಯಿಯಲ್ಲಿ 'ಕೋರ್ಟ್ ಮಾರ್ಷಲ್' ನಾಟಕದ ಸುವರ್ಣ
ಮಹೋತ್ಸವದ ಸಂದರ್ಭ, ಅನುವಾದಕ,
ಸಾಹಿತಿ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರಿಗೆ ಸನ್ಮಾನ



ಮಂಗಳೂರಿನಲ್ಲಿ ಸುವರ್ಣರ ನಾಟಕದ ಪ್ರೇಕ್ಷಕರು



ಮಂಗಳೂರಿನಲ್ಲಿ ಸುವರ್ಣರ ನಾಟಕದ ಪ್ರೇಕ್ಷಕರು



ಮಂಗಳೂರಿನಲ್ಲಿ ಸುವರ್ಣರ 'ತ್ರಿವಳಿ ನಾಟಕೋತ್ಸವ', ಶಿಷ್ಯರು ಹಾಗೂ ಅಭಿಮಾನಿ ಬಳಗದಿಂದ ಸನ್ಮಾನ